ಸಂವಾದ

ಸೆಪ್ಟೆಂಬರ್ ೨೦೧೦

ರೂ. ೨೦

ಕಿ.ರಂ ಎನ್ನುವ
ಕಿನ್ನರಿ
ಜೋಗಿ

ಬಳ್ಳಾರಿ ಗಣಿ ಲೂಟಿಯೂ
ಕಾಮನ್ ವೆಲ್ತ್
ಕ್ರೀಡಾ ಕೂಟವೂ

ಸಂವಾದ

ಮಾಸ ಪತ್ರಿಕೆ

ಸಂಪುಟ ೮ ಸಂಚಿಕೆ ೧೨

ಸೆಪ್ಟೆಂಬರ್ ೨೦೧೦

ಸಂಪಾದಕ :

ಇಂದೂಧರ ಹೊನ್ನಾಪುರ

ಸಂಪಾದಕೀಯ ಬಳಗ :

ಡಾ॥ ನಟರಾಜ್ ಹುಳಿಯಾರ್

ಪ್ರೊ॥ ರಹಮತ್ ತರೀಕೆರೆ

ಡಾ॥ ಕೆ. ಪುಟ್ಟಸ್ವಾಮಿ

ಡಾ॥ ಡಿ. ಡೊಮಿನಿಕ್

ಡಾ॥ ಬಿ.ಯು. ಸುಮಾ

ವಿಳಾಸ: ಸ್ಫೂರ್ತಿಧಾಮ,
ಅಂಜನಾನಗರ, ಮಾಗಡಿ ರಸ್ತೆ,
ವಿಶ್ವನೀಡಂ ಅಂಚೆ
ಬೆಂಗಳೂರು-೫೬೦ ೦೯೧

PRINTED AND PUBLISHED BY
S.R. GOVINDU
ON BEHALF OF SPOORTHIDHAMA
ANJANA NAGAR, MAGADI ROAD
VISHWANEEDAM POST
BANGALORE - 560 091

✆ Editorial: 9448048306
✆ Circulation: 080-23480278, 9945264687
e-mail : **samvaada@hotmail.com**
honnapura@yahoo.co.in

EDITOR :
INDUDHARA HONNAPURA

❑ ಪತ್ರಗಳು ೦೩
❑ ಸಂಪಾದಕರೊಂದಿಗೆ ಸಂವಾದ:
○ ಡಾ.ಕಿರಣ್ ಎಂ ಗಾಜನೂರು ೦೬
○ ರಹಮತ್ ತರೀಕೆರೆ ೦೮
○ ಡಿ.ಎಸ್ ನಾಗಭೂಷಣ ೧೦
○ ಆರ್.ಎಸ್ ಮಾಲಗತ್ತಿ ೧೧
❑ ಕಿರಂ ಎನ್ನುವ ಕಿನ್ನರಿ ಜೋಗಿ...
○ ಡಾ. ಶೈಲಜಾ ಹಿರೇಮಠ ೧೨
❑ ಟೆರರ್ ಅಲ್ಲ ಫ್ಯಾಸಿಸಂ
○ ನಾ ದಿವಾಕರ ೧೪
❑ ಮನುಷ್ಯ ಜಂತುಗಳು ನಿರ್ಮಿಸಿದ ಜಾತಿ ಕ್ರೌರ್ಯದ ಒಂದು ಮುಖ
○ ಕೆ.ಎಲ್ ಚಂದ್ರಶೇಖರ್ ಐಜೂರ್ ೧೬
❑ ಹೊಸ ಪುಸ್ತಕ ೧೯

❑ ಬಳ್ಳಾರಿ ಗಣಿ ಲೂಟಿಯೂ ಕಾಮನ್ ವೆಲ್ತ್ ಕ್ರೀಡಾಕೂಟವೂ...
○ ಡಿ.ಎಸ್ ನಾಗಭೂಷಣ ೨೦
❑ ತಾಲಿಬಾನೀಕರಣಕ್ಕೆ ಇಂಬುಗೊಡುವ ವ್ಯವಸ್ಥೆ
○ ಸುರೇಶ್ ಭಟ್ ೨೪
❑ ಕರ್ನಾಟಕ ಸಂಸ್ಕೃತಿ ಮತ್ತು ಲೋಹಿಯಾವಾದ
○ ರಹಮತ್ ತರೀಕೆರೆ ೨೬
❑ ಪ್ರಭುತ್ವದ ದಮನಕಾರಿ ನೀತಿ ಮತ್ತು ಪ್ರತಿಹಿಂಸೆ ಒಂದು ಪುನರ್ವಾಲೋಕನ
○ ಜಿ.ಎಸ್ ದಸ್ತಾಪೂರ ೩೦
❑ ಗೋಹತ್ಯೆ, ಸುಪ್ರೀಂಕೋರ್ಟು ಮತ್ತು ಸಂವಿಧಾನ
○ ಶಿವಸುಂದರ್ ೩೪
❑ ಹಿಂಸೆ ಪರ್ಯಾಯ ಮಾರ್ಗವಲ್ಲ
○ ಯು.ಎನ್ ಸಂಗನಾಳಮಠ ೩೮

❑ ಹೊಸ ಪಕ್ಷಿ ರಾಗ... ೩
○ ಜ್ಯೋತಿ ಗುರುಪ್ರಸಾದ್ ೪೦
❑ ಧರೆ ಹತ್ತಿ ಉರಿದರೆ... ೨೫
○ ಡಾ. ಟಿ.ಆರ್ ಚಂದ್ರಶೇಖರ್ ೪೨
❑ ದಲಿತ್ ಡೈರಿ
○ ಚಂದ್ರಭಾನ್ ಪ್ರಸಾದ್/ಸತ್ಯಪ್ರಕಾಶ್ ೪೬
❑ ಬುದ್ಧಾಯಣ
○ ಸಿ. ಎಚ್ ರಾಜಶೇಖರ್ ೫೦

ಕವನಗಳು : ❑ ಬೇಲಿಯ ಮೇಲಿನ ಹೂ ೩೩

ಮುಖಪುಟ ವಿನ್ಯಾಸ: ಮುರಳೀಧರ ರಾಠೋಡ್

(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು)

ಸಾಮಾಜಿಕ 'ದೊಂಬರಾಟ' ಕುರಿತ ರಾಜಕೀಯ 'ದೊಂಬರಾಟ'!

ಮಾನ್ಯ ಸಂಪಾದಕರೇ,

'ದೊಂಬರಾಟ' ಶಬ್ದ ಬಳಕೆ ಬಗ್ಗೆ ಪತ್ರಿಕೆಗಳಲ್ಲಿ ನಡೆದಿರುವ ಚರ್ಚೆಯನ್ನು ಗಮನಿಸಿ ಈ ಟಿಪ್ಪಣಿ. 'ದೊಂಬರಾಟ' ಶಬ್ದವನ್ನು ಬಿಜೆಪಿ ಮಾತ್ರವಲ್ಲ, ಎಲ್ಲ ಪಕ್ಷಗಳಷ್ಟೇ ಅಲ್ಲ; ಸಾರ್ವಜನಿಕರೆನಿಸಿಡ ನಾವೂ ನಮ್ಮ ನಿತ್ಯ ಜೀವನದಲ್ಲಿ, ವಿಷಯವನ್ನು 'ರೂಪಕ'ವಾಗಿ ಹೇಳಿ ಹೆಚ್ಚು ಪರಿಣಾಮಕಾರಿ ಮಾಡಲು ಬಳಸುತ್ತಿರುತ್ತೇವೆ. ಹೀಗಿರುವಾಗ ಬಿಜೆಪಿಯವರು ಬಳಸಿದಾಗ ಮಾತ್ರ ಅದು ಅವಮಾನಕಾರಿ ಎಂದು ಸಾರ್ವಜನಿಕ ಹುಯ್ಲೆಬ್ಬಿಸುವುದು ನಮ್ಮ ರಾಜಕೀಯ ಅಭಿಪ್ರಾಯವನ್ನು ಬಿಂಬಿಸಬಹುದೇ ಹೊರತು, ಅದರಲ್ಲಿ ಯಾವುದೇ ಸಾಮಾಜಿಕ ಸಭ್ಯತೆ ಅಥವಾ ಕಳಕಳಿಯ ಪ್ರಶ್ನೆ ಅಡಗಿದಂತೆ ಕಾಣುವುದಿಲ್ಲ.

ನಾವು ದೊಂಬರಾಟ ಎಂದಾಗ ಅದು ದೊಂಬ ಜಾತಿಯವರನ್ನು ಅವಮಾನಿಸಿದಂತೆ ಎನ್ನುವುದೇ ಒಂದು ಪಕ್ಷಪಾತಿ ಅರ್ಥೈಸುವಿಕೆ ಎನ್ನಿಸುತ್ತದೆ. ದೊಂಬರು ಆಡುತ್ತಿದ್ದ(ಅಥವಾ ಆಡುತ್ತಿರುವ) ಆಟಗಳು ದೇಹ ಕಸರತ್ತಿನ ನಾಜೂಕುತನ, ಪೂರಕ ಪರಿಕರಗಳ ತಂತ್ರ, ಜಾಣ್ಮೆ ಮತ್ತು ಕಣ್ಕಟ್ಟುಗಳು ಗಮನ ಸೆಳೆದು ನಮ್ಮನ್ನು ರಂಜಿಸುತ್ತಿದ್ದವು. ಇಂದು ಯಾರಾದರೂ ಯಾವುದನ್ನೇ ಆಗಲಿ, 'ದೊಂಬರಾಟ' ಎಂದು ಕರೆದರೆ, ಅದು ಬರೀ ತಂತ್ರ, ಜಾಣ್ಮೆ ಮತ್ತು ಕಣ್ಕಟ್ಟುಗಳಿಂದ ಕೂಡಿದ್ದು, ಅದರಲ್ಲಿ ಯಾವುದೇ 'ನಿಜ' ಇಲ್ಲ ಎಂಬುದಷ್ಟೇ ಅದರ ಅರ್ಥ. ತಮ್ಮ ಆಟದ ಈ ಗುಣವನ್ನು ದೊಂಬರೂ ಬಲ್ಲವರಾಗಿದ್ದರು. ಹಾಗಾಗಿಯೇ ಅದನ್ನು ಜನ ರಂಜನೆಗಾಗಿ ಮಾತ್ರ ಬಳಸಿ ಜೀವನೋಪಾಯ ಮಾಡಿಕೊಂಡಿದ್ದರು.

ಹಾಗೆ ನೋಡಿದರೆ, 'ದೊಂಬರಾಟ'ದ ಪದಪ್ರಯೋಗದಲ್ಲಿ 'ದೊಂಬ'ರ ಪ್ರತಿಭೆ ಬಗ್ಗೆ ಮೆಚ್ಚುಗೆ ಮತ್ತು ಅದರ ರಂಜನೀಯ ಆಯಾಮಗಳನ್ನು ಲಾಭೋದ್ದೇಶಗಳಿಗಾಗಿ ಬಳಸಿಕೊಳ್ಳುವವರ ಬಗ್ಗೆ ಟೀಕೆ

ಪತ್ರಗಳು

ಇದೆಯೇ ಹೊರತು, ಜಾತಿ ನಿಂದನೆಯ ಯಾವ ಅಂಶವೂ ಅದರಲ್ಲಿ ಕಾಣುವುದಿಲ್ಲ. ಹಿಂದುಳಿದ ವರ್ಗಗಳ ಆಯೋಗದ ಮಾಜಿ ಅಧ್ಯಕ್ಷ ಸಿ.ಎಸ್ ದ್ವಾರಕಾನಾಥ್ ಹೇಳಿರುವ ಹಾಗೆ('ಸಂಗತ'. ಪ್ರಜಾವಾಣಿ: 12.8.2010) ಆಧುನಿಕ ಜೀವನದ ಮುಖ್ಯವಾಹಿನಿಗೆ ಸೇರಿಕೊಳ್ಳಲು ತಮ್ಮ ಆಟಗಳನ್ನು ತೊರೆದು; ಆ ಮೂಲಕ ತಮ್ಮ 'ದೊಂಬತನ'ವನ್ನೂ ತೊರೆಯ ಹೊರಟಿರುವವರಿಗೆ, 'ದೊಂಬರಾಟ' ಎನ್ನುವುದು ಜಾತಿ ನಿಂದನೆ ಹೇಗಾಗುತ್ತದೆ ಎಂಬುದೂ ಹಲವು ನೆಲೆಗಳಲ್ಲಿ ಯೋಚಿಸಬೇಕಾದ ವಿಚಾರ. ಇದು ಜಾತಿ ಕಾಯಕ ಬಿಟ್ಟರೂ ಜಾತಿ ಬಿಡಲಾಗದ ನಮ್ಮ ಸಾಮಾಜಿಕ ದ್ವಂದ್ವ. ಇದು ನಮ್ಮನ್ನು ಜಾತಿ ಮತ್ತು ಜಾತಿ ಪದ್ಧತಿ ಹಾಗೂ ಅದರ 'ಶೋಷಣೆ' – 'ಪರಿಹಾರ'ಗಳ ಆಯಾಮಗಳನ್ನು ಕುರಿತ ಈವರೆಗಿನ ಅಧ್ಯಯನದ ಆಶಯ – ಮಾದರಿಗಳನ್ನು ಪುನರಾವಲೋಕಿಸಲು ಪ್ರೇರೇಪಿಸಬೇಕು.

ಹಾಗಾಗಿ, ನಮ್ಮ ಬುದ್ಧಿಜೀವಿಗಳೂ, ಸಾಮಾಜಿಕ ನ್ಯಾಯವಾದಿ ಚಿಂತಕರೂ ತಮ್ಮ ಚರ್ಚೆಗಳನ್ನು ರಾಜಕೀಯ ಹಿತಾಸಕ್ತಿಗಳಿಗೆ ಒತ್ತೆಯಿಟ್ಟು ಮಾಡುವ ಬದಲು, ಅದನ್ನು ದೊಂಬರಾದಿಯಾಗಿ ಎಲ್ಲ ಅವಕಾಶ ವಂಚಿತ ಜಾತಿಗಳ ನಿಜವಾದ ವಿಮೋಚನೆ(ಅದರ ಎಲ್ಲ ಅರ್ಥಗಳಲ್ಲಿ) ಹೇಗೆ ಎಂಬುದರ ಬಗ್ಗೆ ಮಾಡುವುದು ಒಳಿತು.

ಡಿ.ಎಸ್ ನಾಗಭೂಷಣ
ಶಿವಮೊಗ್ಗ

ವೈಚಾರಿಕ ರಂಗ: ಮಹಿಳೆಯರ ಪ್ರವೇಶ ತಂದ ಸಮಾಧಾನ

ಪ್ರಿಯ ಸಂಪಾದಕರೆ,

ಪತ್ರಿಕೆಯೊಂದರಲ್ಲಿ ಪ್ರಕಟವಾದ ಅವೈಜ್ಞಾನಿಕ ಮಾಹಿತಿಗಳಿಂದ ಕೂಡಿದ ಲೇಖನವೊಂದನ್ನು ಲೇಖಕಿ ಕೆ.ಬಿ.ಸರಸ್ವತಿಯವರು ತಮ್ಮ ವೈಚಾರಿಕ ಮೊನಚುಗಳಿಂದ ಜಾಲಾಡಿದ್ದಾರೆ. ಅವರ ಅಭಿಪ್ರಾಯಗಳು ಒಪ್ಪುವಂತಹವು, ವೈಚಾರಿಕ ರಂಗದಿಂದ ಮಹಿಳೆಯರು ದೂರವೇ ಉಳಿದಿದ್ದಾರೇನೋ ಎಂದುಕೊಳ್ಳುತ್ತಿರುವಾಗಲೇ ಇಂತಹ ಪ್ರವೇಶಗಳು ಸಮಾಧಾನ ತಂದಿವೆ. ಅವರ ಅಭಿಪ್ರಾಯಗಳಿಗೆ ಪೂರಕವಾಗಿ ಈ ನನ್ನ ಅನಿಸಿಕೆಗಳು;

ಇಂದಿಗಿಂತಲೂ ಹೆಚ್ಚು ಬಿಗಿವಿನ ಪುರುಷಪ್ರಧಾನ ಸಮಾಜ ವ್ಯವಸ್ಥೆಯಿದ್ದ ಆ ಕಾಲಘಟ್ಟದಲ್ಲಿ ಹಿಂದೂ ಪಂಗಡಗಳಲ್ಲೊಂದು ಶುದ್ಧ ಸಸ್ಯಹಾರವನ್ನು ರೂಢಿಸಿಕೊಳ್ಳಲು ಹೊರಟಾಗ ಸ್ತ್ರೀಯರಿಗೆ ಹೊಂದಿಕೆಯಾಗುವ, ಅಥವಾ ಹೊಂದಿಕೆಯಾಗಲಾರದ ಆಹಾರ ಪದ್ಧತಿಗಳ ಬಗ್ಗೆ ಯೋಚಿಸಿರಲು ಹೇಗೆ ಸಾಧ್ಯ?

ಅಂದಿನ ಕಾಲದಲ್ಲಿ ದೈಹಿಕ ಶ್ರಮದ ಅಗತ್ಯವಿರದ ಹಾಗೂ ಅಪಾಯಕಾರಿಯೂ ಅಲ್ಲದ ವೃತ್ತಿಯನ್ನಾಚರಿಸುತ್ತಿದ್ದ ಆ ಪಂಗಡದ ಪುರುಷರಿಗಂತೂ ಹೆಚ್ಚು ಶಕ್ತಿದಾಯಕವೂ, ರಕ್ತ ಪೋಶಕವೂ ಆದ ಮಾಂಸಾಹಾರದ ಅಗತ್ಯವಿರಲಿಲ್ಲ, ಆದರೆ ಸ್ತ್ರೀಯರು ಋತುಸ್ರಾವದಿಂದ ನಷ್ಟವಾದ ರಕ್ತದ ಮರು ನಿರ್ಮಾಣಕ್ಕಾಗಿ ಅಗತ್ಯವಾದ ಪ್ರೋಟಿನುಗಳ ಪ್ರಮುಖ ಆಗರವಾದ ಮಾಂಸಾಹಾರದಿಂದ ವಂಚಿತರಾಗಬೇಕಾಯಿತು.

ಅಲ್ಲದೆ ಇಂದಿನ ಸಂದರ್ಭದಲ್ಲಿ ಕೃಷಿ ಕೆಲಸಗಳೂ ಸೇರಿದಂತೆ ವಿವಿದ ದೈಹಿಕ ಶ್ರಮದ, ಅಂಗಾಗಗಳ ಸವಕಳಿಗಳಿಗೂ ಹಾಗೂ ಅಪಘಾತಗಳಿಗೂ ಒಳಗಾಗಬಹುದಾದ ವೃತ್ತಿಯನ್ನವಲಂಬಿಸಿರುವ ಅದೇ ಶುದ್ಧ ಸಸ್ಯಾಹಾರಿ ಪಂಗಡದ ಬಹುಪಾಲು ಜನರು ಜೀವಕೋಶಗಳ ಹಾಗೂ ರಕ್ತಕಣಗಳ ಮರುನಿರ್ಮಾಣ ಹಾಗೂ ಮರುಭರ್ತಿಗೆ ಅಗತ್ಯವಾದ ಪ್ರೋಟಿನುಗಳ ಸುಲಭ ಮೂಲವೊಂದರಿಂದ ವಂಚಿತರಾಗಿದ್ದಾರಲ್ಲ ಇದಕ್ಕೆ ಯಾರು ಹೊಣೆ?

ಪುರಾತನ ಪದ್ಧತಿಗಳನ್ನು ಧರ್ಮದ ಚೌಕಟ್ಟಿನೊಳಗೆ ಭದ್ರಪಡಿಸುತ್ತಿರುವ ಸನಾತನಿ ಪುರುಷರು ಹೇಗೆ ಸ್ತ್ರೀ-ಶ್ರಮಿಕ ಹಿತಾಸಕ್ತಿಗಳನ್ನು ಕಡೆಗಣಿಸಿದ್ದಾರೆ ಎಂಬುದಕ್ಕೆ ಇದೂ ಒಂದು ನಿದರ್ಶನ.

ಇಷ್ಟಕ್ಕೂ ಈ ಪ್ರಶ್ನೆ ಎತ್ತಿರುವ ನಾನು ಅದೇ ಶುದ್ಧ ಸಸ್ಯಾಹಾರಿ ಪಂಗಡದ ಕೃಷಿಕ ವೃತ್ತಿಯವನು.

ಕೆ. ಶ್ರೀನಿವಾಸಮೂರ್ತಿ
ಮುಂಡುಗೋಡು

ಪ್ರಕಟಣೆ: ಅನಿವಾರ್ಯ ಕಾರಣಗಳಿಂದಾಗಿ ಈ ಬಾರಿ ಮುಜಾಫ್ಫರ್ ಅಸ್ಸಾದಿ ಅವರ ಅಂಕಣ ಪ್ರಕಟವಾಗುತ್ತಿಲ್ಲ. ಮುಂದಿನ ತಿಂಗಳು ಎಂದಿನಂತೆ ಪ್ರಕಟವಾಗುವುದು – ಸಂ

ದಮನಿತರ ದನಿ

ಮಾನ್ಯ ಸಂಪಾದಕರೇ,

ಜಾಗತೀಕರಣದಿಂದುಟಾದ ಪಲ್ಲಟಗಳು ಹಾಗೂ ಸನಾತನವಾದಿಗಳ ಕಿರುಕುಳ ಈ ಎರಡೂ ಅಲಗುಗಳ ನಡುವೆ ಸಿಕ್ಕು ನರಳುತ್ತಿರುವ ದೀನ-ದಲಿತರು, ದೈತ್ಯ ಮಾರ್ಟ್‌ಗಳ ಹೊಡೆತದಿಂದ ತಮ್ಮ ಅಸ್ತಿತ್ವಕ್ಕಾಗಿ ಹೆಣಗುತ್ತಿರುವ ಸಣ್ಣಪುಟ್ಟ ವ್ಯಾಪಾರಿಗಳು ಹಾಗೂ ದಿನಗೂಲಿಗರನ್ನು ಅವರ ವಿರುದ್ಧ ಸಜ್ಜುಗೊಳಿಸಬೇಕಿದ್ದ ನಮ್ಮ ಹೋರಾಟಗಾರರು ಬೆನ್ನು ತಿರುಗಿಸಿರುವ ಈ ಹೊತ್ತಿನಲ್ಲಿ 'ಸಂವಾದ' ಪತ್ರಿಕೆ ದಮನಿತರ ದನಿಯಾಗಿರುವುದು ಪ್ರಶಂಸನೀಯ.

ನಿರಂತರ ಅಸಮಾನತೆ, ದಬ್ಬಾಳಿಕೆಗಳಿಂದ ಉಂಟಾದ ಕಂದಕ ಕೊನೆಗೊಂಡು ಸಾಮಾನ್ಯರ ನೆಮ್ಮದಿಯ ಬದುಕಿಗಾಗಿ ಹಂಬಲಿಸುವ ಆಶಯ 'ಸಂವಾದ'ದ್ದು. ಅದು ಒಂಟಿ ಕೂಗಾಗದಂತೆ ನೋಡಿಕೊಳ್ಳುವುದು ಸಮಾನತೆ ಬಯಸುವ ಎಲ್ಲರ ಜವಾಬ್ದಾರಿ.

ದೀಪಮಾಲ, ಬೆಂಗಳೂರು

ಚಂದಾ ವಿವರ

ಬಿಡಿ ಪ್ರತಿ ರೂ.೨೦/-

	೧ ವರ್ಷಕ್ಕೆ	೩ ವರ್ಷಕ್ಕೆ	೫ ವರ್ಷಕ್ಕೆ
ವ್ಯಕ್ತಿಗಳು, ನೌಕರರು ಮತ್ತು ವೃತ್ತಿಪರರಿಗೆ	ರೂ.೨೦೦/-	ರೂ.೫೫೦/-	ರೂ.೮೦೦/-
ಸಂಘ-ಸಂಸ್ಥೆಗಳು/ಉದ್ಯಮಿಗಳಿಗೆ	ರೂ.೨೫೦/-	ರೂ.೬೦೦/-	ರೂ.೧೦೦೦
ವಿಶೇಷ ಹಿತೈಷಿ ಚಂದದಾರರಿಗೆ	ರೂ.೫೦೦/-	ರೂ.೧೫೦೦/-	ರೂ.೨೫೦೦/-

ಆಜೀವ ಚಂದಾ ರೂ.೫,೦೦೦/-
ಪೋಷಕ ಚಂದಾ ರೂ.೧೦,೦೦೦/-

ವಿ.ಸೂ: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಎಂ.ಓ./ಡಿ.ಡಿ. ಮಾತ್ರ ಕಳುಹಿಸಬೇಕು. ಚೆಕ್ಕು-ಡಿಡಿಗಳು 'ಸಂವಾದ' ಹೆಸರಿನಲ್ಲಿರಲಿ.

ಸಂಪಾದಕರೊಡನೆ ಸಂವಾದ

ಜಾತಿ ಆಧಾರಿತ ಗಣತಿ: ನಿರ್ವಸಾಹತೀಕರಣ ಹಾಗೂ ಭಾರತ

ಡಾ. ಕಿರಣ್.ಎಂ ಗಾಜನೂರು

> ನಾವು ಜಾತಿವ್ಯವಸ್ಥೆಯೆಂದು ಯಾವುದನ್ನು ಅರ್ಥಮಾಡಿಕೊಂಡಿದ್ದೇವೋ, ಅದು ಒಂದು ಆಧುನಿಕ ವಿದ್ಯಮಾನ. ಇದು ಭಾರತ ಮತ್ತು ಪಶ್ಚಿಮದ ಘರ್ಷಣೆಯಿಂದ ನಿರ್ಮಿತವಾದದ್ದು. ಸಂಕ್ಷಿಪ್ತವಾಗಿ ಹೇಳುವುದಾದರೆ ಜಾತಿ ವ್ಯವಸ್ಥೆಯೆಂಬುದು ವಸಾಹತುಶಾಹಿಯ ನಿರ್ಮಾಣವಾಗಿದೆ.

ಮಾನ್ಯ ಸಂಪಾದಕರೇ,

ಕಳೆದ ತಿಂಗಳ ಸಂವಾದ ಪತ್ರಿಕೆಯಲ್ಲಿ ಪ್ರಕಟಗೊಂಡ ಮುಜಾಪ್ಪರ್ ಅಸ್ಸಾದಿರವರ "ಜಾತಿ ನಿರ್ವಸಾಹತೀಕರಣ ಹಾಗೂ ಜನಗಣತಿ" ಎಂಬ ಲೇಖನ ವಿದ್ವತ್ಪೂರ್ಣವಾಗಿದೆ ಡಾ.ಅಸ್ಸಾದಿರವರು ತಮ್ಮ ಇಡೀ ಲೇಖನದಲ್ಲಿ ಜಾತಿ ಆಧಾರಿತ ಜನಗಣತಿಯಿಂದ ಭಾರತದ ರಾಜಕೀಯ ಸಮಾಜ - ಜಾತಿಯ ಕುರಿತಂತೆ ಪ್ರಸ್ತುತ ಇರುವ ಗ್ರಹಿಕೆಗಳಲ್ಲಿ ಆಗುವ ಬದಲಾವಣೆಗಳನ್ನು ಅತ್ಯಂತ ವಿಸ್ತಾರವಾಗಿ ಚರ್ಚಿಸಿದ್ದಾರೆ ಮತ್ತು ವಸಾಹತೋತ್ತರ ಸನ್ನಿವೇಶದ ಜನಗಣತಿಗಳು ಜಾತಿಗಳನ್ನು ಗುರುತಿಸುವುದರಿಂದ ಆಗುವ ಪ್ರಯೋಜನಗಳನ್ನು ಕುರಿತು ವಿವರಿಸಿದ್ದಾರೆ. ಆದರೆ ಅವರ ವಿವರಣೆಗೆ ಬಳಸಿರುವ ಬಹುಪಾಲು ವಾದಗಳು ವಸಾಹತು ಕಾಲದಲ್ಲಿ ಯೂರೋಪಿಯನ್ ಚಿಂತಕರಿಂದ ಮಂಡಿಲ್ಪಟ್ಟವು ಎಂಬುದನ್ನ ನಾವು ಗಮನಿಸಬೇಕಾಗುತ್ತದೆ.

ಲೇಖಕರು ಹೇಳುವಂತೆ ವಸಾಹತುಶಾಹಿ ಕ್ಯಾಸ್ಟ್ ಅನ್ನು ತನ್ನ ವಸಾಹತುಗಳಲ್ಲಿ ನಿರ್ಮಿಸುವಾಗ ಕೆಲವು ಪೂರ್ವನಿರ್ಧಾರಿತ ಪರಿಕಲ್ಪನೆಗಳನ್ನು ಮುಂದಿಟ್ಟುಕೊಂಡು ಅಲ್ಲಿನ ಸಾಮಾಜಿಕ ಸಂರಚನೆಯನ್ನು ವಿಶ್ಲೇಷಿಸಿತು. ಅಂದರೆ ಕ್ಯಾಸ್ಟ್ ಎಂಬುದು ಒಂದು ಪೂರ್ವನಿರ್ಧಾರಿತ ಚೌಕಟ್ಟಾಗಿದ್ದು ಅದು ಭಾರತ ಸಮಾಜದ "ಜಾತಿ"ಗೆ ಸಮಾನವಾಗಿದ್ದ ಕಾರಣ "ಜಾತಿ" ಅಂತಿಮ ಹಂತದಲ್ಲಿ ಕ್ಯಾಸ್ಟ್ ಆಗಿ ಪರಿವರ್ತಿತವಾಯಿತು ಎಂದು ವಾದಿಸುತ್ತಾರೆ. ಮುಂದುವರಿದು ಭಾರತದಲ್ಲಿನ ಜಾತಿಗೆ ಸಂಬಂದಿಸಿದಂತೆ ವಸಾಹತುಶಾಹಿ ಏಕಕಾಲದಲ್ಲಿ ಮೂರು ಕಾರ್ಯಗಳನ್ನು ನಿರ್ವಹಿಸಿತು. ಅವು ಯಾವುವೆಂದರೆ.

1) ಜಾತಿ ಚೌಕಟ್ಟನ್ನು ಒಂದೆಡೆ ಗಟ್ಟಿಗೊಳಿಸುತ್ತಾ ಹೋಯಿತು.

2) ಇನ್ನೊಂದೆಡೆ ವ್ಯವಸ್ಥೆಯನ್ನು ಶಿಥಿಲಗೊಳಿಸಿತು.

3) ಬಹಳಷ್ಟು ಜಾತಿಗಳನ್ನು ವಸಾಹತುಶಾಹಿಯು ನಿರ್ಮಿಸಿತು. ಎಂಬುದಾಗಿ ವಿಶ್ಲೇಷಿಸುತ್ತಾರೆ.

ಮುಂದುವರಿದು ಜನಗಣತಿಯು ಮಾಡಿದ ಹಲವಾರು ಅವಾಂತರಗಳಲ್ಲಿ ಜಾತಿಗಳ ನಿರ್ಮಿತಿಯು ಒಂದು ಎಂದು ವಿವರಿಸುತ್ತಾ ಇದಕ್ಕೆ ಅಕ್ಷರ ಜ್ಞಾನವು ಒಂದು ಕಾರಣ ಎನ್ನುತ್ತಾರೆ. ಒಂದು ಕಡೆ ಅಕ್ಷರಜ್ಞಾನ ಆಧುನಿಕತೆಯನ್ನು ಅಳವಡಿಸಲು ಸಹಾಯಮಾಡಿದರೆ ಮತ್ತೊಂದೆಡೆ ಅದೇ ಅಕ್ಷರ ಜ್ಞಾನ ಸಮಾಜಿಕ ಸಂರಚನೆಯ ಮುಖಾಮುಖಿ ವಿರೋಧಗಳನ್ನು ಸೃಷ್ಟಿಸಲು ಅನುವು ಮಾಡಿಕೊಟ್ಟಿತು. ಎಂಬುದಾಗಿ ವಿವರಿಸುತ್ತಾರೆ

ಲೇಖಕರ ಈ ವಾದ ನಿಕೋಲಾಸ್ ಬಿ ಡರ್ಕ್ಸ‌ನ ಪ್ರಮುಖ ವಾದವಾಗಿದೆ, ಜಾತಿಯೆನ್ನುವುದು ಭಾರತೀಯ ಸಾಮಾಜಿಕ ರಚನೆಯ ಪ್ರಮುಖ ಲಕ್ಷಣ ಎಂದು ಗುರುತಿಸಲು ಕಾರಣವೇನು? ಎಂಬ ಪ್ರಶ್ನೆಯ ಸುತ್ತ ಈ ವಾದ ಹರಡಿದೆ. ಡರ್ಕ್ಸ‌ನ ವಾದ ಹೀಗಿದೆ: ನಾವು "ಜಾತಿ" ಎಂದು ಯಾವುದನ್ನು ವಿವರಿಸಿ ಗ್ರಹಿಸುತ್ತಿದ್ದೇವೆಯೋ, ಅದು ಪ್ರಾಚೀನ ಕಾಲದಿಂದಲೂ ಬದಲಾವಣೆ ಇಲ್ಲದೆ, ಒಂದೇ ಮಾದರಿಯಲ್ಲಿ ಬೆಳೆದು ಬಂದ ವ್ಯವಸ್ಥೆ ಎಂದು ಹೇಳಲು ಬರುವುದಿಲ್ಲ. ಅಲ್ಲದೇ ಜಾತಿ ವ್ಯವಸ್ಥೆಯು ಇಡೀ ಭಾರತೀಯ ನಾಗರಿಕತೆಯ ಸಂಸ್ಕೃತಿಯ ಕೇಂದ್ರವಾಗಿದೆಯೆಂದು ವಾದಿಸಲು ಸಹ ಸಾಧ್ಯವಿಲ್ಲ.

ಇಂದು ನಾವು ಜಾತಿವ್ಯವಸ್ಥೆಯೆಂದು ಯಾವುದನ್ನು ಅರ್ಥಮಾಡಿಕೊಂಡಿದ್ದೇವೋ, ಅದು ಒಂದು ಆಧುನಿಕ ವಿದ್ಯಮಾನ. ಇದು ಭಾರತ ಮತ್ತು ಪಶ್ಚಿಮದ ಘರ್ಷಣೆಯಿಂದ ನಿರ್ಮಿತವಾದದ್ದು. ಸಂಕ್ಷಿಪ್ತವಾಗಿ ಹೇಳುವುದಾದರೆ ಜಾತಿ ವ್ಯವಸ್ಥೆಯೆಂಬುದು ವಸಾಹತುಶಾಹಿಯ ನಿರ್ಮಾಣವಾಗಿದೆ. ಡರ್ಕ್ಸ್ ವಿವರಿಸುವಂತೆ ಜಾತಿ ವ್ಯವಸ್ಥೆಯೆಂಬುದು ಆಧುನಿಕ ವಿದ್ಯಮಾನವಾಗಿದ್ದು, ವಸಾಹತುಶಾಹಿಯ ಕೊಡುಗೆಯಾಗಿದೆ ಮತ್ತು ಜಾತಿವ್ಯವಸ್ಥೆಯಲ್ಲಿನ ಶ್ರೇಣೀಕರಣ ಭಾರತ ಸಮಾಜದ ವಸಾಹತೋತ್ತರ ಕಾಲದ ವಾಸ್ತವವಾಗಿದೆ ಎನ್ನುತ್ತಾನೆ. ಪ್ರಸ್ತುತ ಅಸ್ಸಾದಿ ಅವರು ಈ ನೆಲೆಯಲ್ಲಿಯೇ ತಮ್ಮ ವಾದವನ್ನು ಬೆಳೆಸಿರುವುದನ್ನು ಗುರುತಿಸಬಹುದಾಗಿದೆ.

ಇಲ್ಲಿ ಗಮನಿಸಬೇಕಾದ ಪ್ರಮುಖವಾದ ಅಂಶ ಎಂದರೆ, ಭಾರತದಲ್ಲಿನ ಜಾತಿಗಳ ಕುರಿತಾದ ಬಹುಪಾಲು ಸಮಕಾಲೀನ ಬೌದ್ಧಿಕ ವಿವರಣೆ ಮತ್ತು ವಿಶ್ಲೇಷಣೆಗಳು ವಸಾಹತು ಕಾಲದಲ್ಲಿ ಯೂರೋಪಿಯನ್ ಚಿಂತಕರಿಂದ ಮಂಡಿಸಲ್ಪಟ್ಟ ಜಾತಿಗಳ ಕುರಿತಾದ ವಾದಗಳನ್ನು ಬಳಸಿಕೊಂಡೇ ಮುಂದುವರಿಯಬೇಕಾದ ಅನಿವಾರ್ಯತೆಯನ್ನು ಎದುರಿಸುತ್ತಿವೆ. (ಇದಕ್ಕೆ ಅಸಾದಿಯವರು ಹೊರತಲ್ಲ) ಅದು ಜನಗಣತಿಯಿರಲಿ ಅಥವಾ ಭಾರತ ಸಮಾಜದಲ್ಲಿ ಜಾತಿಗೆ ಸಂಬಂಧಿಸಿದ ಯಾವುದೇ ಚರ್ಚೆಯಿರಲಿ ಉದಾ; ಭಾರತ ಸಮಾಜದ ಜಾತಿ ಸಂಬಂಧಿತ ರಾಜಕೀಯ, ಆರ್ಥಿಕ, ಸಾಂಸ್ಕೃತಿಕ ಅಂಶಗಳ ಕುರಿತಾದ ಚಿಂತನೆಗಳಲ್ಲಿ ವಿದ್ವಾಂಸರು ಜಾತಿವ್ಯವಸ್ಥೆಯ ಕುರಿತಾದ ಪಾಶ್ಚ್ಯಾತ್ಯ ಬುದ್ಧಿಜೀವಿಗಳ ಬರವಣಿಗೆ ಮತ್ತು ಚಿಂತನೇಗಳನ್ನೆ ಅಡಿಪಾಯವಾಗಿಸಿಕೊಂಡು ಮುಂದುವರಿಯಬೇಕಾಗುತ್ತದೆ - ಮುಂದುವರೆಯುತ್ತಿದ್ದಾರೆ. ಹಾಗೆ ನೋಡುವುದಾದರೆ 300 ವರ್ಷಗಳಿಂದ ಭಾರತದ ಸಂಸ್ಕೃತಿಯ ಸೈದ್ಧಾಂತಿಕತೆ ಮತ್ತು ಪಠ್ಯಾಧಾರಿತ ಅಧ್ಯಯನ ಬೆಳಕು ಕಂಡುಕೊಂಡಿರುವುದು ಬಹುಪಾಲು ಯೂರೋಪಿಯನ್ನರಿಂದಲೇ, ಅಲ್ಲದೆ ಭಾರತದ ಕುರಿತಾದ ಹೆಚ್ಚಿನ ಅಧ್ಯಯನಗಳು ಐರೋಪ್ಯರ ಸಾಂಸ್ಕೃತಿಕ ಚೌಕಟ್ಟಿನೊಳಗೆ ನಡೆದಿವೆ.

ಇಲ್ಲಿ ಪ್ರಮುಖವಾಗಿ ನಾವು ಕೇಳಿಕೊಳ್ಳಬೇಕಾದ ಪ್ರಶ್ನೆ ಒಂದಿದೆ, ಸುಮಾರು ಎರಡು ಸಾವಿರಕ್ಕೂ ಮೀಗಿಲಾದ ಇತಿಹಾಸವಿರುವ ಭಾರತದಂತ ಒಂದು ದೇಶದ ಸಮಾಜಿಕ ವಾಸ್ತವವಾದ ಜಾತಿಯ ಕುರಿತಾಗಿ ಭಾರತೀಯರದ್ದೆ ಆದಂತಹ ಒಂದು ಚಿಂತನೆಯನ್ನು ನಾವು ರೂಪಿಸಿಕೊಳ್ಳಲಿಲ್ಲವೇ? (ಇಲ್ಲಿ ನಾವು ಮನುಧರ್ಮಶಾಸ್ತ್ರ, ಪುರುಷ ಸೂಕ್ತದಂತಹ ಕೆಲವು ಪಠ್ಯಗಳನ್ನು ಉದಾಹರಣೆ ಕೊಡಬಹುದು. ಆದರೆ ಇದರಿಂದ ಯಾವ ಪ್ರಯೋಜನವೂ ಆಗುವುದಿಲ್ಲ ಏಕೆಂದರೆ ಅವುಗಳಲ್ಲಿರುವ ವಿವರಣೆಯ ಪ್ರಕಾರ ಸಮಾಜದ ರಚನೆ ಇರಲಿಲ್ಲ ಎನ್ನುವುದನ್ನು ಪಾಶ್ಚಾತ್ಯ ಚಿಂತಕರೆ ಗುರುತಿಸಿದ್ದಾರೆ ಮತ್ತು ಅದು ನಮ್ಮೆಲ್ಲರ ಅನುಭವ ಕೂಡ ಹೌದು) ಅದು ಅಲ್ಲದೇ ಏಕೆ ನಾವು ಭಾರತ ಸಮಾಜದ ಎಲ್ಲಾ ಸಮಸ್ಯೆಗಳಿಗೆ ಪಾಶ್ಚತ್ಯಾ ಉದಾರವಾದಿ ಪ್ರಜಾಸತ್ತಾತ್ಮಕ ರಾಜಕೀಯ ವ್ಯವಸ್ಥೆಯ ಚೌಕಟ್ಟಿನಲ್ಲಿಯೇ ಪರಿಹಾರ ಹುಡುಕುವ ಪ್ರವೃತ್ತಿಯನ್ನು ಬೆಳೆಸಿಕೊಂಡಿದ್ದೇವೆ.? ಏಕೆ ನಾವು ಈ ಎರಡು ಸಾವಿರ ವರ್ಷಗಳ ಸುದೀರ್ಘಕಾಲ ಬದುಕುಳಿದು ಮುಂದುವರೆಯುತ್ತಿರುವ ಸಮಾಜದಲ್ಲಿ ಪ್ರಜಾಸತ್ತಾತ್ಮಕ ರಾಜಕೀಯ ವ್ಯವಸ್ಥೆಯ ಚೌಕಟ್ಟಿಗಿಂತ ಭಿನ್ನವಾದ ಮತ್ತು ಮನುಕುಲಕ್ಕೆ ಮಾದರಿಯಾಗಬಲ್ಲ ಒಂದು ರಾಜಕೀಯ, ಸಮಾಜಿಕ ವ್ಯವಸ್ಥೆಯ ಅಸ್ಥಿತ್ವ, ಮತ್ತು ಅದರ ಶೋಧನೆಯನ್ನು ಕಡೆಗಣಿಸಿದ್ದೇವೆ? ಎಂಬ ಪ್ರಶ್ನೆಯನ್ನು ಕೇಳಿಕೊಳ್ಳಲೇಬೇಕಾಗುತ್ತದೆ.

ಮುಂದುವರಿದು ನಮ್ಮ ಸಮಾಜದ ಕುರಿತು ಕೆಲಸ ಮಾಡುತ್ತಿರುವ ಭಾರತೀಯ ಚಿಂತಕರು ಮತ್ತು ಬುದ್ಧಿಜೀವಿಗಳು ಈ 2000 ವರ್ಷಗಳಿಂದ ಏನು ಮಾಡುತ್ತಿದ್ದರು? ಎಂಬ ದ್ವಂದ್ವವು ನಮ್ಮನ್ನು ಕಾಡುತ್ತದೆ. ಇದಕ್ಕೆ ಉತ್ತರವಾಗಿ ಇಂದಿನ ಶಾಲಾ ಪುಸ್ತಕಗಳು ಭಾರತದ ಕುರಿ

ತಾದ ಒಂದು ಕಥೆಯನ್ನು ಹಲವು ತಲೆಮಾರುಗ ಳಿಂದ ಹೇಳುತ್ತಾ ಬಂದಿದೆ. ಆ ಕಥೆಯ ಕೆಲವು ಪ್ರಖ್ಯಾತ ಸಾಲುಗಳು ಈ ಕೆಳಗಿನಂತಿವೆ.

ಭಾರತದಲ್ಲಿ ಜಾತಿ ವ್ಯವಸ್ಥೆ ಪ್ರಬಲವಾಗಿದೆ. ಇಲ್ಲಿ ಮಹಿಳೆಯರು ಶೋಷಣೆಗೊಳಗಾಗಿದ್ದಾರೆ, ಸತಿಸಹಗಮನ ಪದ್ಧತಿ ಅಸ್ತಿತ್ವದಲ್ಲಿದೆ, ಭ್ರಷ್ಟಾಚಾರವು ಮಿತಿ ಮೀರಿದೆ, ಭಾರತದ ಬಹುಪಾಲು ಜನರು ಜೋತಿಷ್ಯಕರ್ಮ ಮತ್ತು ಪುನರ್‌ಜನ್ಮಗಳನ್ನು ನಂಬುತ್ತಾರೆ. . . ಇತ್ಯಾದಿ ಇತ್ಯಾದಿ. ಒಂದು ವೇಳೆ ಈ ಮೇಲಿನ ಸಾಲುಗಳು ಇಂದಿನ ಮತ್ತು ನೆನ್ನೆಯ ಭಾರತವನ್ನು ನಿರ್ಧರಿಸುತ್ತಿವೆ. ಎಂದಾದರೆ ನಮ್ಮ ಹಿಂದಿನ ತಲೆಮಾರಿನ ಭಾರತೀಯ ಚಿಂತಕರು ಯಾವ ಪ್ರಶ್ನೆಯೊಂದಿಗೆ ಸಂವಾದಿಸುತ್ತಿದ್ದರು ಎಂಬುದು ನಮಗೆ ಅರ್ಥವಾಗುತ್ತದೆ.

ಯಾವ ಕಾಲದಲ್ಲಿ ಒಂದು ಸಂಸ್ಕೃತಿಯ ಬುದ್ಧಿಜೀವಿಗಳು? ಉದಾ; ಯುರೋಪಿಯನ್ ಬುದ್ಧಿಜೀವಿಗಳು ಜಗತ್ತಿಗೆ ಸವಾಲೆಸೆದು, ಜಗತ್ತನ್ನು ಬದಲಾಯಿಸುವ ಕಾರ್ಯದಲ್ಲಿ ತೊಡಗಿದ್ದರೋ, ಮತ್ತೊಂದು ಸಂಸ್ಕೃತಿಯ ಬಹುಸಂಖ್ಯೆಯ ಚಿಂತಕರು ಉದಾಹರಣೆಗೆ "ಭಾರತದ ಬೌದ್ಧಿಕ ವಲಯ" ಇಲ್ಲಿನ ಅನುಚಿತವಾದ ಆಚರಣೆಗಳನ್ನು ಉಳಿಸಿಕೊಳ್ಳುವಲ್ಲಿ ಮತ್ತು ಸಮರ್ಥಿಸಿಕೊಳ್ಳುವ ಕಾರ್ಯದಲ್ಲಿ ನಿರತವಾಗಿದ್ದಿತು ಎಂದು ನಾವು ನಂಬಬೇಕಾಗುತ್ತದೆ. ಕೆಲವರು ವಾದಿಸಬಹುದು ಭಾರತೀಯರಿಗೆ ಬುದ್ಧ – ಗಾಂಧೀಯಂತಹ ಚಿಂತಕರಿದ್ದಾರೆ. ಅವರು ಜಗತ್ತಿಗೆ ನೀಡಿರುವ ಕೊಡುಗೆ ಅಪಾರ ಎಂದು ಹೇಳುತ್ತಾರೆ. ಆದರೆ ನನ್ನ ಪ್ರಕಾರ ನಮಗಿರುವವರು ಅವರಿಬ್ಬರೇ, ಒಬ್ಬ ಬುದ್ಧ ಮತ್ತು ಒಬ್ಬ ಗಾಂಧೀ ಮಾತ್ರ.

ಭಾರತದ ಬುದ್ಧಿಜೀವಿ ವಲಯಕ್ಕೆ ಕೇಳಬೇಕಾದ ಈ ಎಲ್ಲಾ ಪ್ರಮುಖವಾದ ಪ್ರಶ್ನೆಗಳಿದ್ದಾಗಿಯು ಅಸ್ಸಾದಿಯವರ ಲೇಖನ ಕೆಲವು ಪ್ರಮುಖವಾದ ಚರ್ಚೆಗೆ ಸೂಕ್ತವಾದ ವೇದಿಕೆಯನ್ನು ಒದಗಿಸುತ್ತದೆ. ಅದನ್ನು ನಾವು ಅವರ ಜಾತಿ ಆಧಾರಿತ ಜನಗಣತಿಯ ಸಮರ್ಥನೆಯಲ್ಲಿ ಗುರುತಿಸಬಹುದು ಅವರೇ ತಿಳಿಸುವಂತೆ ಜಾತಿ ಆಧಾರಿತ ಜನ ಗಣತಿ ಮೂರು ಪ್ರಮುಖವಾದ ಕಾರಣಗಳಿಗಾಗಿ ಅಗತ್ಯ ವಾಗುತ್ತದೆ. ಅವು ಯಾವುವೆಂದರೆ.

* ಅವು ಐಡೆಂಟಿಟಿಗಳಿಲ್ಲದ ಜಾತಿಗಳಿಗೆ ಹೊಸ ಐಡೆಂಟಿಗಳನ್ನು ಕಲ್ಪಿಸುತ್ತವೆ.

* ಪ್ರಜಾಪ್ರಭುತ್ವದ ತಳಹದಿಯನ್ನು ಇನ್ನಷ್ಟು ಗಟ್ಟಿಗೊಳಿಸುತ್ತವೆ. ಅಲ್ಲದೆ ಧರ್ಮಗಳನ್ನು ದೇಸಿಕರಣಗೊಳಿಸಿ ಹೊಸ ರಾಜಕಾರಣವನ್ನು ನಿರ್ಮಿಸಲು ಅನುವು ಮಾಡಿಕೊಡುತ್ತವೆ.

* ಈ ಸಂದರ್ಭದಲ್ಲಿ ವಸಾಹತುಶಾಹಿ ನಿರ್ಮಿಸಿದ ಕ್ಯಾಸ್ಟ್‌ಗೆ ಪರ್ಯಾಯವಾಗಿ "ಜಾತಿ" ಸಂಕಥನವನ್ನು ರೂಪಿಸಬಹುದು.

ಇಲ್ಲಿ ಅಸ್ಸಾದಿಯವರು ಪ್ರತಿಪಾದಿಸಿರುವ ಮೂರನೇಯ ಕಾರಣ ನನಗೆ ಬಹಳ ಪ್ರಮುಖ ಮತ್ತು ಪ್ರಸ್ತುತ ಎನ್ನಿಸುತ್ತದೆ. ಅಂದರೆ ಜಾತಿ ಆಧಾರಿತ ಜನಗಣತಿ ವಸಾಹತು ಸಂದರ್ಭದಲ್ಲಿ ನಿರ್ಮಿಸಿದ ಕ್ಯಾಸ್ಟ್‌ಗೆ ಪರ್ಯಾಯವಾಗಿ "ಜಾತಿ" ಸಂಕಥನವನ್ನು ರೂಪಿಸಬಹುದು ಎಂಬ ಅಸ್ಸಾದಿಯವರ ಚಿಂತನೆ ಅತ್ಯಂತ ಮಹತ್ವದ್ದಾಗಿದೆ. ಆದರೆ ಇಲ್ಲಿ ಒಂದು ಪ್ರಶ್ನೆಯನ್ನು ಎದುರಿಸಿಯೇ ನಾವು ಮುಂದುವರೆಯಬೇಕಾಗುತ್ತದೆ. ಅದು ಏನೆಂದರೆ ವಸಾಹತು ಸಂದರ್ಭದಲ್ಲಿ ಜಾತಿಗಳು ಸೃಷ್ಟಿಸಲ್ಪಟ್ಟವು ಎನ್ನುವದರ ಅರ್ಥ ಈಗ ನಮ್ಮ ಸಮಾಜದ ಬೌದ್ಧಿಕ ವಲಯ ಗುರುತಿಸುತ್ತಿರುವ ಲಿಂಗಾಯಿತ, ಒಕ್ಕಲಿಗ, ಕುರುಬ ಮುಂತಾದ ಜಾತಿಗಳನ್ನು ವಸಾಹತು ಸೃಷ್ಟಿಸಿತು ಎಂದಲ್ಲ, ಆ ರೀತಿಯ ಸೃಷ್ಟಿ ಈಗಲೂ ಆಗುತ್ತಿದೆ.

ಬದಲಾಗಿ ಈ ಎಲ್ಲಾ ಜಾತಿಗಳು ಸೇರಿ ಒಂದು ವ್ಯವಸ್ಥೆಯಾಗಿ, ಸಮಾಜಿಕ ರಚನೆಯಾಗಿ ಹೇಗೆ ಕಾರ್ಯನಿರ್ವಹಿಸುತ್ತವೆ. ಎಂಬ ವಿಶ್ಲೇಷಣೆಯನ್ನು ಪಾಶ್ಚಾತ್ಯರು ನೀಡಿದರು ಎಂಬುದಾಗಿದೆ. ಹಾಗಾದರೆ ಈ ವಿವರಣೆಗಳಿಗಿಂತ ಭಿನ್ನವಾಗಿ ನಮ್ಮ ಸಮಾಜದ ಜಾತಿಗಳನ್ನು ಜನಗಣತಿಯಲ್ಲಿ ಗುರುತಿಸಬೇಕಾಗುತ್ತದೆ. ನಮ್ಮ ಗಣತಿಗಳು ಗುರುತಿಸುವ ಜಾತಿಗಳ ಸ್ವರೂಪ ಹೇಗಿರಬೇಕೆಂದರೆ ಅವು ಪಾಶ್ಚಿಮಾತ್ಯರು ಈಗಾಗಲೇ ಜಾತಿಗಳ ಕುರಿತು ನೀಡಿರುವ ವಿಶ್ಲೇಷಣೆಗಳಿಗಿಂತ ಭಿನ್ನವಾಗಿರಬೇಕು. ಅಂದರೆ ಜಾತಿಗಣತಿ ಸಮಾಜದಲ್ಲಿ ಬದುಕುತ್ತಿರುವ ಜನರ ಸ್ವ–ಅನುಭವವನ್ನು ಗ್ರಹಿಸುವಂತಿರಬೇಕು. ಉದಾ: ಲಿಂಗಾಯಿತ ಎಂಬುದನ್ನು ಜಾತಿಯಾಗಿ ಗುರುತಿಸದೇ ಸಾದರು, ಬಣಜಿಗ, ಪಂಚಚಾರ್ಯ ಮುಂತಾದ ಹತ್ತು ಹಲವು ಸಮಾಜದ ವಾಸ್ತವ ಗುಂಪುಗಳನ್ನು ಜಾತಿ ಎಂದು ಗುರುತಿಸಬೇಕಾಗುತ್ತದೆ.

ಅಂತೆಯೇ ಕುರುಬರನ್ನು ಒಂದು ಜಾತಿಯಾಗಿ ಸದೇ ಅವರಲ್ಲಿನ ಕಾಡು ಕುರುಬ, ಊರು ಕುರುಬ, ಹತ್ತಿ ಕಂಕಣ, ಉಣ್ಣೆ ಕಂಕಣ ಎಂಬ ಸಮಾಜಿಕ ಗುರುತಿಸುವಿಕೆಯುಳ್ಳ ಜಾತಿಗಳನ್ನು ಗುರುತಿಸಬೇಕಾಗುತ್ತದೆ. ಏಕೆಂದರೆ, ವಾಸ್ತವದಲ್ಲಿ ಜನರು ಬದುಕುತ್ತಿರುವುದು ಸಾದರು, ಬಣಜಿಗರು, ಕಾಡು ಕುರುಬರು, ಊರು ಕುರುಬರು ಎಂದೇ ಹೊರತು ಲಿಂಗಾಯಿತರು, ಕುರುಬರು ಎಂದಲ್ಲ. ತಮ್ಮ ಜಾತಿಗಳ ಮೂಲಕ ಇಂದು ಗುರುತಿಸಿಕೊಳ್ಳುತ್ತಿರುವ ಸಮಾಜಿಕ ಗುಂಪುಗಳನ್ನು ಹೀಗೆ ಜನರ ಅನುಭವಕ್ಕೆ ಪೂರಕವಾಗಿಯೆ ಗುರುತಿಸಬೇಕಾಗುತ್ತದೆ.

ಹಾಗಾದಲ್ಲಿ ಮಾತ್ರ ನಾವು ನಿಜವಾದ ನಿರ್ವಸಾಹತು ಭಾರತ ಸಮಾಜದ ವೈಜ್ಞಾನಿಕ ನಿರೂಪಣೆಯನ್ನು ಸಾಧಿಸಬಹುದು. ಮತ್ತು ಭಾರತದಲ್ಲಿನ ಜಾತಿಗಳ ಕುರಿತಾದ ನಿಜವಾದ ವಿವರಣೆ ಆಗ ಮಾತ್ರ ಸಾಧ್ಯ. (ಲಿಂಗಾಯಿತ, ಒಕ್ಕಲಿಗ, ಕುರುಬ ಮುಂತಾದವುಗಳನ್ನು ಅವು ವಾಸ್ತವವಾಗಿಯೂ ಸಂಘಟಿತವಾದ ಜಾತಿಗಳು ಎಂದು ಗುರುತಿಸುವ ಪ್ರಕ್ರಿಯೆಯು ಜಾತಿಗಳ ಕುರಿತು ಪಾಶ್ಚಿಮಾತ್ಯರಿಂದ ಕಟ್ಟಲ್ಪಟ್ಟು ನಂತರ ಭಾರತೀಯ ವಿದ್ವಾಂಸರಿಂದ ಯಾವ ಮಹತ್ವದ ಸೈದ್ಧಾಂತಿಕ ಪ್ರಶ್ನೆಗೂ ಒಳಗಾಗದೆ ಉಳಿದು ಬಂದಿರುವ ಇಪ್ಪತ್ತನೆ ಶತಮಾನದ ಆಧುನಿಕ ರಾಜಕೀಯದ ವಿದ್ಯಮಾನ ಎನ್ನುವುದನ್ನು ಇಲ್ಲಿ ನಾವು ನೆನಪಿಡಬೇಕು.)

ಆದರೆ ಇದಕ್ಕೆ ಪಾಶ್ಚಾತ್ಯರು ವಿಶ್ಲೇಷಿಸಿದ ಭಾರತ ಸಮಾಜ, ಇಲ್ಲಿನ ಜಾತಿಗಳನ್ನು ನಂಬಿಕೊಂಡು ಮತ್ತು ನಂಬಿಸಿ ರಾಜಕಾರಣ ಮಾಡುತ್ತಿರುವ ನಾಯಕರು ಮತ್ತು ಅವರಿಗೆ ಜಾತಿಗಳ ಕುರಿತಾದ ಬೌದ್ಧಿಕ ವಿವರಣೆಗಳನ್ನು ನೀಡುತ್ತಿರುವ ವಿದ್ವಾಂಸರು ಒಪ್ಪುತ್ತಾರೆಯೇ ಎಂಬುದು ನಿಜವಾದ ಪ್ರಶ್ನೆ? ಏಕೆಂದರೆ ಭಾರತದ ಜಾತಿಗಳ ಕುರಿತಾದ ವಿವರಣೆ ಇಂದು ಸಮಾಜಿಕ ವಾಸ್ತವವನ್ನು ಪ್ರತಿನಿಧಿಸುತ್ತಿಲ್ಲ. ಬದಲಾಗಿ ಶಕ್ತಿ ರಾಜಕಾರಣದ ಸಂಪನ್ಮೂಲಗಳಾಗಿ ಬಳಸಲ್ಪಡುತ್ತಿವೆ. (ಉದಾ: ಜಾತಿಗಳ ನಾಯಕರು ಮೀಸಲಾತಿ ಸಂದರ್ಭದಲ್ಲಿ ತಮ್ಮನ್ನು ಹಿಂದುಳಿದ ವರ್ಗಗಳೆಂದು ಘೋಷಿಸುತ್ತಾರೆ. ಆದರೆ ಸಮಾಜಿಕ ಸಂದರ್ಭದಲ್ಲಿ ತಮ್ಮನ್ನು ಮುಂದುವರಿದ ಜಾತಿಗಳೆಂದು ಪ್ರತಿಪಾದಿಸುವುದನ್ನು ಕಾಣಬಹುದು.) ಈ ಹಿನ್ನೆಲೆಯಲ್ಲಿ ಭಾರತದಲ್ಲಿನ ಜಾತಿಗಳು ಸಮಾಜದಲ್ಲಿ ಹೇಗೆ ಸಂಘಟನೆಗೊಂಡವು ಮತ್ತು ಹೇಗೆ ಜನರಿಂದ ಗುರುತಿಸಲ್ಪಡುತ್ತವೆ. ಎನ್ನುವುದರ ಕುರಿತ ಅಧ್ಯಯನವು ಇಂದಿನ ಅಗತ್ಯವಾಗಿದೆ.

ಈ ರೀತಿಯ ಅಧ್ಯಯನಕ್ಕೆ ನಾವು ಜಾತಿಯನ್ನು ಭಿನ್ನ ದೃಷ್ಟಿಕೋನದಿಂದಲೇ ನೋಡಬೇಕಾಗುತ್ತದೆ. ಮತ್ತು ನಿಜವಾದ ಅರ್ಥದಲ್ಲಿ ಜಾತಿಯ ಕುರಿತ ನಮ್ಮ ಜ್ಞಾನದ ನಿರ್ವಸಾಹತೀಕರಣಕ್ಕೆ ನಾವು ಮಾಡಲೇಬೇಕಾದ ಕಾರ್ಯವೆಂದರೆ ಭಾರತ ಸಮಾಜದ ಕುರಿತು ನಾವು ಪಠ್ಯ ಪುಸ್ತಕಗಳಿಂದ ಕಲಿಯುತ್ತಿರುವುದಕ್ಕೂ ವಾಸ್ತವದಲ್ಲಿ ಜನರು ತಮ್ಮನ್ನು ತಾವು ಗುರುತಿಸಿಕೊಳ್ಳುತ್ತಿರುವುದಕ್ಕೂ ನಡುವಿನ ವ್ಯತ್ಯಾಸವನ್ನು ಮತ್ತು ಹಾಗಾಗುವುದಕ್ಕೆ ಕಾರಣವನ್ನು ಗುರುತಿಸುವುದು. ಹಾಗೆ ಮಾಡಿದಾಗ ಮಾತ್ರ ಜಾತಿ ರಾಜಕಾರಣವೆನ್ನುವುದು ಈಗಿರುವಂತೆ ಪಟ್ಟಬದ್ರ ಹಿತಾಸಕ್ತಿಗಳ ರಾಜಕಾರಣವಾಗದೆ ನಿಜವಾದ ಅರ್ಥದಲ್ಲಿ ಸಾಮಾಜಿಕ ನ್ಯಾಯದ ಪರಿಕಲ್ಪನೆಯನ್ನೊಳಗೊಂಡ ರಾಜಕಾರಣವಾಗಲು ಸಾಧ್ಯವಿದೆ.

ಇದನ್ನು ಬಿಟ್ಟು ಜಾತಿ ಆಧಾರಿತ ಜನಗಣತಿಯು ಜಾತಿಯನ್ನು ಇಪ್ಪತ್ತನೆ ಶತಮಾನದ ಆಧುನಿಕ ರಾಜಕೀಯದ ವಿದ್ಯಮಾನದಿಂದ ಸೃಷ್ಟಿಯಾದ ಲಿಂಗಾಯತ, ಒಕ್ಕಲಿಗ, ದಲಿತ, ಬ್ರಾಹ್ಮಣ, ಎಂಬುದಾಗಿ ಗುರುತಿಸಿದರೆ. ಆ ಜ್ಞಾನ ಪಟ್ಟಬದ್ರ ಹಿತಾಸಕ್ತಿಗಳ ರಾಜಕಾರಣಕ್ಕೆ ಪೂರಕವಾಗುತ್ತದೆಯೇ ಹೊರತು ನಿಜವಾದ ಭಾರತ ಸಮಾಜದ ಜಾತಿಗಳ ಸ್ಥಿತಿಯನ್ನು ತಿಳಿಯಲಿಕ್ಕಲ್ಲ ಎಂಬುದನ್ನು ನಮ್ಮ ಗಣತಿಗಳು ಜೊತೆಗೆ ಜಾತಿಗಣತಿಯನ್ನು ಬೆಂಬಲಿಸುತ್ತಿರುವ ಬುದ್ಧಿಜೀವಿಗಳು ಬಹಳ ಪ್ರಮುಖವಾಗಿ ಗುರುತಿಸಬೇಕಾಗುತ್ತದೆ. ಹೀಗಾದಾಗ ಮಾತ್ರವೇ ನಾವು ನಿಜವಾದ ಅರ್ಥದ ನಿರ್ವಸಾಹತೀಕರಣದ ಕಡೆ ಒಂದು ಹೆಜ್ಜೆ ಮುಂದಿಟ್ಟಂತಾಗುತ್ತದೆ. □

ಯಾವ ಕಾಲದಲ್ಲಿ ಒಂದು ಸಂಸ್ಕೃತಿಯ ಬುದ್ಧಿ ಜೀವಿಗಳು? ಉದಾ; ಯುರೋಪಿಯನ್ ಬುದ್ಧಿಜೀವಿಗಳು ಜಗತ್ತಿಗೆ ಸವಾಲೆಸೆದು, ಜಗತ್ತನ್ನು ಬದಲಾಯಿಸುವ ಕಾರ್ಯದಲ್ಲಿ ತೊಡಗಿದ್ದರೋ, ಮತ್ತೊಂದು ಸಂಸ್ಕೃತಿಯ ಬಹು ಸಂಖ್ಯೆಯ ಚಿಂತಕರು ಉದಾಹರಣೆಗೆ "ಭಾರತದ ಬೌದ್ಧಿಕವಲಯ" ಇಲ್ಲಿನ ಅನುಚಿತವಾದ ಆಚರಣೆಗಳನ್ನು ಉಳಿಸಿಕೊಳ್ಳುವಲ್ಲಿ ಮತ್ತು ಸಮರ್ಥಿಸಿಕೊಳ್ಳುವ ಕಾರ್ಯದಲ್ಲಿ ನಿರತವಾಗಿದ್ದಿತು ಎಂದು ನಾವು ನಂಬಬೇಕಾಗುತ್ತದೆ. ಕೆಲವರು ವಾದಿಸಬಹುದು ಭಾರತೀಯರಿಗೆ ಬುದ್ಧ – ಗಾಂಧೀಯಂತಹ ಚಿಂತಕರಿದ್ದಾರೆ. ಅವರು ಜಗತ್ತಿಗೆ ನೀಡಿರುವ ಕೊಡುಗೆ ಅಪಾರ ಎಂದು ಹೇಳುತ್ತಾರೆ.

ಸಂಪಾದಕರೊಡನೆ ಸಂವಾದ

ಹಣ, ಮೌಢ್ಯ, ಜನವಿರೋಧಿ ನೀತಿ...

ಡಿ.ಎಸ್ ನಾಗಭೂಷಣ

ಮಾನ್ಯ ಸಂಪಾದಕರೇ,

'ಸಂವಾದ'ದ ಆಗಸ್ಟ್ ಸಂಚಿಕೆಯಲ್ಲಿ ಪ್ರಕಟವಾಗಿರುವ ಮೂರು ಮುಖ್ಯ ಲೇಖನಗಳಿಗೆ ನಾನಿಲ್ಲಿ ಪ್ರತಿಕ್ರಿಯಿಸ ಬಯಸುವೆ:

1. 'ಜನಾದೇಶದಿಂದ ದೈವ ಕೃಪೆಯೆಡೆಗೆ' ಎಂಬ ಎಸ್. ಮರಿಸ್ವಾಮಿಯವರ ಲೇಖನ ತನ್ನ ಸರಳ ಭಾಷೆ ಮತ್ತು ನಿರುದ್ವಿಗ್ನ ಶೈಲಿಯೊಂದಿಗೆ, ಇಂದಿನ ರಾಜಕಾರಣದ ದುರಂತವನ್ನು ಬಹು ಪರಿಣಾಮಕಾರಿಯಾಗಿ ಚಿತ್ರಿಸುತ್ತದೆ. ಆದರೆ ಈ ದುರಂತಕ್ಕೆ ಮೂಲ ಕಾರಣವನ್ನು ಶೋಧಿಸುವಲ್ಲಿ ಲೇಖಕರು ಅಷ್ಟು ಆಳಕ್ಕಿಳಿಯದೆ, ಇದಕ್ಕೆ ಕಳಪೆ ನಾಯಕತ್ವವೇ ಕಾರಣವೆಂದು ಗುರುತಿಸುತ್ತಾರೆ. ಈ ಕಳಪೆ ನಾಯಕತ್ವ ಮೂಡಲು ಕಾರಣವೇನು ಎಂಬುದರ ಬಗ್ಗೆ ಅವರು ಇನ್ನಷ್ಟು ಯೋಚಿಸಬಲ್ಲವರಾಗಿದ್ದರೆ, ಅದು ಕಳೆದ ಇಪ್ಪತ್ತು ವರ್ಷಗಳಲ್ಲಿ ಸಾರ್ವಜನಿಕ ಜೀವನದಲ್ಲಿ ಚಲಾವಣೆಗೆ ಬಂದಿರುವ ಕೆಲವರ ಬಳಿಯ ವಿಪರೀತ ಹಣವೇ ಎಂದು ಗೊತ್ತಾಗುತ್ತಿತ್ತು ಎನಿಸುತ್ತದೆ. ಇದರ ಪರಿಣಾಮವಾಗಿಯೇ, ಮರಿಸ್ವಾಮಿಯವರು ಸರಿಯಾಗಿಯೇ ಗುರುತಿಸಿರುವಂತೆ ಜನ ಮಧ್ಯದಿಂದ ನಾಯಕರು ಮೂಡಲು ಅಸಾಧ್ಯವಾಗಿರುವುದು. ಹಣದಲ್ಲಿಯೇ ಹುಟ್ಟಿ, ಹಣದಲ್ಲೇ ಬೆಳೆದಿರುವ ಈ ಹೊಸ ನಾಯಕರು ತಮ್ಮ ಸಂಪತ್ತು ಮತ್ತು ಅಧಿಕಾರಗಳ ರೂಪದಲ್ಲಿರುವ ಹಣವನ್ನು ಕಾಪಾಡಿಕೊಳ್ಳಲಷ್ಟೇ ದೇವರು, ದೇವಸ್ಥಾನ, ಮಠ, ಮಠಾಧೀಶರುಗಳಿಗೆ ಮೊರೆ ಹೋಗುತ್ತಿರುವುದು.

ಅಗತ್ಯಕ್ಕಿಂತ ವಿಪರೀತ ಹೆಚ್ಚಿರುವ ಹಣಕ್ಕೂ, ಮೌಢ್ಯ ಮತ್ತು ಜನವಿರೋಧಿ ನೀತಿಗಳಿಗೂ ಆಳದ ಸಂಬಂಧವಿದೆ. ಹೀಗಾಗಿ ನಾವು ಸಾರ್ವಜನಿಕರೆಂದೆನಿಸಿಕೊಂಡಿರುವವರು ಮೂಲತಃ ಎದುರಿಸಬೇಕಾದದ್ದು, ಸಾರ್ವಜನಿಕ ಜೀವನದಲ್ಲಿ ವಿಪರೀತ (ಹಡಬೆ)ಹಣದ ಪ್ರವೇಶಕ್ಕೆ ಅವಕಾಶ ಮಾಡಿಕೊಟ್ಟಿರುವ ನಮ್ಮ ಸದ್ಯದ ಆರ್ಥಿಕ ನೀತಿಯನ್ನು ಎಂದು ನಾನು ಭಾವಿಸುವೆ. ಇತ್ತೀಚಿನ ಒಂದು ಸಣ್ಣ ಉದಾಹರಣೆ ಎಂದರೆ, ಈ ನೀತಿಯ ಫಲವಾಗಿ ಇಂದು ಕೇಂದ್ರ ಸರ್ಕಾರದ ಕೆಲವು ನೌಕರ ವರ್ಗದವರಿಗೆ ಮತ್ತು ನಮ್ಮ ಕಾಲೇಜು ಮೇಷ್ಟ್ರುಗಳಿಗೆ ಕೊಡಲಾರಂಭಿಸಿರುವ ಸಂಬಳ-ಭತ್ಯೆಗಳನ್ನು ಗಮನಿಸಿದರೆ, ನೀವು ಈ ಹುಚ್ಚಾಟದಿಂದ ತಲ್ಲಣಗೊಳ್ಳುತ್ತೀರಿ! ಜಾಗತೀಕರಣದಿಂದಾಗಿ ಒಂದು ಕಡೆ ಮಾಹಿತಿ ತಂತ್ರಜ್ಞಾನ ಇತ್ಯಾದಿ ನವೋದಿತ ಕ್ಷೇತ್ರಗಳ ನೌಕರರಿಗೆ ಸಿಗುತ್ತಿದ್ದ ಸಂಬಳಗಳನ್ನು ಮತ್ತು ಇನ್ನೊಂದು ಕಡೆ ಅಸಂಘಟಿತ ಕಾರ್ಮಿಕರಿಗೆ ದೊರೆಯುವ ದಿನಗೂಲಿಯ ಪ್ರಮಾಣವನ್ನು ಉದಾಹರಿಸುತ್ತಾ ಉದಾರ ಆರ್ಥಿಕ ನೀತಿಯನ್ನು ತಮ್ಮೆಲ್ಲ ಪಾಂಡಿತ್ಯದೊಂದಿಗೆ ಕಟುವಾಗಿ ಟೀಕಿಸುತ್ತಿದ್ದ ನಮ್ಮ ಕ್ರಾಂತಿಕಾರಿ ಅಧ್ಯಾಪಕ ಬುದ್ಧಿ ಜೀವಿಗಳು ಈಗ ಬಾಯಿ ಮುಚ್ಚಿಕೊಂಡು ಲಕ್ಷಗಟ್ಟಲೆ ಬಾಕಿಯನ್ನೂ, ಸಾವಿರಾರು ರೂಪಾಯಿಗಳ ಸಂಬಳವನ್ನೂ ಝಣ ಝಣ ಎಣಿಸಿಕೊಳ್ಳುತ್ತಾ (ಅಥವಾ ಅದರ ನಿರೀಕ್ಷೆಯಲ್ಲಿ) ಮೌನಕ್ಕೆ ಸಂದಿದ್ದಾರೆ.

2. ರಹಮತ್ ತರೀಕೆರೆ ಅವರು 'ಯಶೋಧರೆಯ ಕಷ್ಟಗಳು' ಎಂಬ ಲೇಖನದಲ್ಲಿ ಬೌದ್ಧ ಧರ್ಮ ಸ್ವೀಕಾರ ಮಾಡಿದ ಕುಟುಂಬಗಳಲ್ಲಿ ಆಗುತ್ತಿರುವ ಅಲ್ಲೋಲ ಕಲ್ಲೋಲವನ್ನು ಕುಟುಂಬದ ಯಜಮಾನತಿಯರು ವ್ಯಕ್ತಪಡಿಸುತ್ತಿರುವ ಕ್ರೋಧದಲ್ಲಿ ಗುರುತಿಸುವ ಪ್ರಯತ್ನ ಮಾಡುತ್ತಾರೆ. ಮೊದಲಾಗಿ ಅವರನ್ನು ಯಶೋಧರೆಯರು ಎಂದು ಗುರುತಿಸುವುದು ಎಷ್ಟು ಸರಿಯೋ ನನಗೆ ತಿಳಿಯದು. ಏಕೆಂದರೆ ಬುದ್ಧನ ಹೆಂಡತಿಯಾಗಿದ್ದ ಯಶೋಧರೆ ಸಿದ್ಧಾರ್ಥನ ಅನಿರೀಕ್ಷಿತ ಅಗಲಿಕೆಯಿಂದ ದುಃಖಿತಳಾಗಿದ್ದರೂ, ಅವಳೆಂದೂ ಬುದ್ಧನ ಮಾರ್ಗವನ್ನು ಖಂಡಿಸಿದ್ದಾಗಲೀ, ವಿರೋಧಿಸಿದ್ದಾಗಲೀ ಬೌದ್ಧ ಚರಿತ್ರೆಯಲ್ಲಿ ದಾಖಲಾದಂತಿಲ್ಲ. ನನಗೆ ತಿಳಿದಂತೆ, ಬುದ್ಧ ಜ್ಞಾನೋದಯದ ನಂತರ ಕಪಿಲವಸ್ತುವಿಗೆ ಭೇಟಿ ನೀಡಿ ತನ್ನ ಮನೆಯ ಮುಂದೆಯೇ ಭಿಕ್ಷೆಗೆ ನಿಂತ ಘಟನೆಯ ನಂತರ ಯಶೋಧರೆ ಮತ್ತು ರಾಹುಲ ಬೌದ್ಧ ಸಂಘಕ್ಕೆ ಸೇರುವ ಇಚ್ಛೆ ವ್ಯಕ್ತಪಡಿಸಿದರು. ಮತ್ತು ಸೇರಿದರು ಕೂಡ.

ಅದೇನೆ ಇರಲಿ, ತಮ್ಮ ಗಂಡಂದಿರು ಬೌದ್ಧ ಧರ್ಮಕ್ಕೆ ಸೇರಿದ ಕಾರಣದಿಂದ ದಿಗ್ಭ್ರಮೆಗೊಂಡು, ಕ್ರೋಧಿತರಾದ ಹೆಂಡಂದಿರ ಉದಾಹರಣೆ ಚರಿತ್ರೆಯಲ್ಲಿ ನಿನ್ನೆ ಮೊನ್ನೆಯದಲ್ಲ. ಇನ್ನು ನಮ್ಮ ಕಾಲದ ಮತಾಂತರದ ಚರಿತ್ರೆಗೇ ಬಂದರೆ, ಅಂಬೇಡ್ಕರ್ ಕಾಲದಲ್ಲಿಯೇ ಮಹಾರಾಷ್ಟ್ರದ ಅನೇಕ ಮಹರ್ ಕುಟುಂಬಗಳಲ್ಲಿ ಈ ಪ್ರವೃತ್ತಿ ಕಂಡುಬಂದಿತ್ತು. ಉದಾಹರಣೆಗೆ ನರೇಂದ್ರ ಜಾಧವ್ ತಮ್ಮ 'ಬಹಿಷ್ಕೃತ' ಎಂಬ ಆತ್ಮಕತೆಯಲ್ಲಿ ಅಂಬೇಡ್ಕರರ ಹತ್ತಿರದ ಸಂಪರ್ಕ ಪಡೆದಿದ್ದ ತಮ್ಮ ತಂದೆ ದಾಮು ಬೌದ್ಧ ಧರ್ಮಕ್ಕೆ ಸೇರಿ ಮನೆಯಲ್ಲಿದ್ದ ಹಿಂದೂ ದೇವರುಗಳನ್ನು ಉಚ್ಚಾಟಿಸಲು ಯತ್ನಿಸಿದಾಗ ಅಂಬೇಡ್ಕರರ ಅಭಿಮಾನಿಯಾಗಿ ನಾಸಿಕದ ಮಂದಿರ ಪ್ರವೇಶ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದ ತಮ್ಮ ತಾಯಿ ಹೇಗೆ ರುದ್ರಾವತಾರ ತಾಳಿ 'ನಮ್ಮನ್ನು ಕಷ್ಟಗಳಲ್ಲಿ ರಕ್ಷಿಸುವರಾರು' ಎಂದು ಕೇಳುತ್ತಾ ಅದನ್ನು ಪ್ರತಿಭಟಿಸಿದ ರೀತಿಯನ್ನು ದಾಖಲಿಸುತ್ತಾರೆ.

ಇಂದು ಬೌದ್ಧ ಧರ್ಮಕ್ಕೆ ಮತಾಂತರಗೊಳ್ಳುತ್ತಿರುವ ಕುಟುಂಬಗಳಲ್ಲಿ ಮನೆಯೊಡತಿಯರ ಕ್ರೋಧಕ್ಕೆ ಕಾರಣವಾಗಿರುವುದು ನಿಜವಾಗಿ ಬೌದ್ಧ ಧರ್ಮವಲ್ಲವೆನಿಸುತ್ತದೆ. ಕಟ್ಟಾ ಅಂಬೇಡ್ಕರ್‌ವಾದಿಗಳು ಕಹಿ ಮನಸ್ಸಿನಲ್ಲಿ ಬೌದ್ಧ ಧರ್ಮವನ್ನು ಹಿಂದೂ ಧರ್ಮಕ್ಕೆ ವಿರುದ್ಧವಾಗಿ ಪ್ರಸ್ತುತಗೊಳಿಸಿಕೊಂಡಿರುವ ರೀತಿಯಲ್ಲಿ ಅದು ಹುಟ್ಟಿಕೊಂಡಿದೆ ಎಂದೆನಿಸುತ್ತದೆ. ಬದಲಾಗಿ ಆ ಧರ್ಮವನ್ನು ಹಿಂದೂ ಧರ್ಮಕ್ಕೆ ಪರ್ಯಾಯವಾಗಿ ಪ್ರಸ್ತುತಗೊಳಿಸಿಕೊಳ್ಳುವ ಬೌದ್ಧ ಮಾರ್ಗವೊಂದನ್ನು ಕಂಡುಕೊಂಡರೆ ಈ ಘರ್ಷಣೆ-ಗೊಂದಲ ನಿವಾರಣೆಯಾದೀತೇನೋ!

3. ಬಾಪು ಹೆದ್ದೂರ ಶೆಟ್ಟಿಯವರು ಶಿವಸುಂದರ್ ಲೋಹಿಯಾವಾದಿಗಳ ಬಗ್ಗೆ ಬರೆದ ಲೇಖನಕ್ಕೆ ಪ್ರತಿಕ್ರಿಯಿಸಿದ್ದಾರೆ. ಇದರ ಬಹುಪಾಲನ್ನು ನಾನು ಒಪ್ಪುತ್ತೇನೆ ಆದರೆ, ಅವರು ಲೋಹಿಯಾವಾದಿಗಳು ಎಲ್ಲ ನೆಲೆಗಳಲ್ಲಿ ಅಥವಾ ಸಂದರ್ಭಗಳಲ್ಲಿ ಸಮಾಜವಾದಿಗಳಲ್ಲ ಎಂದು ಸೂಚಿಸುತ್ತಾ, ತಾವು ನಂಬಿರುವುದಾಗಿ ಹೇಳಿಕೊಂಡಿರುವ ಜನತಾಂತ್ರಿಕ ಸಮಾಜವಾದ(ಇದರ ಅನುಯಾಯಿಗಳನ್ನು ಜನಪ್ರಿಯ ಭಾಷೆಯಲ್ಲಿ ಪಿ.ಎಸ್.ಪಿ.ವಾಲಾಗಳೆಂದು ಕರೆಯಲಾಗುವುದು)ಮಾತ್ರ 24 ಕ್ಯಾರೆಟ್ ಅಪ್ಪಟ ಚಿನ್ನ ಎಂಬಂತೆ ವಾದ ಮಾಡಿರುವುದು ಹೆಚ್ಚೆಂದರೆ ತಮಾಷೆಯಾಗಿ ಮಾತ್ರ ಕಾಣಿಸುತ್ತದೆ. ಸಮಾಜವಾದವೆಂಬುದೇ, ಸಮಾಜವಾದಿಗಳೆಂಬುವವರೇ ಕಾಣೆಯಾಗುತ್ತಿರುವ ಈ ಸಂದರ್ಭದಲ್ಲಿ ಬಾಪು ಅವರು ಹುಟ್ಟುಹಾಕಲು ಯತ್ನಿಸುತ್ತಿರುವ ಈ ತಾಂತ್ರಿಕ ಗೊಂದಲ ಅವರು 'ಅಧಿಕೃತ'ವೆಂದು ನಂಬಿರುವ ಸಮಾಜವಾದಕ್ಕೂ ಒಳ್ಳೆಯದನ್ನು ಮಾಡಲಾರದು ಎಂದು ಈ ಮೂಲಕ ಹೇಳಬಯಸುವೆ.

ಭಾರತದಲ್ಲಿ ಇಂದು ಸಮಾಜವಾದವೆಂಬುದೇನದರೂ ಚರ್ಚೆಯಾಗುತ್ತಿದ್ದಲ್ಲಿ ಅದು ಲೋಹಿಯಾವಾದದ ನೆಲೆಯಲ್ಲಿಯೇ ಹೊರತು ಇವರು ಉಲ್ಲೇಖಿಸುವ ಗೋರೆ, ದಂಡವತೆ ಅಥವಾ ಕುಂಡುಗಳ ನೆಲೆಯಲ್ಲಿ ಅಲ್ಲ ಎಂಬುದನ್ನು ಬಾಪು ಅವರು ಸಮಾಜವಾದವನ್ನು ಬೆಳೆಸುವ, ವಿಸ್ತರಿಸುವ ದೃಷ್ಟಿಯಿಂದ ಆದಷ್ಟು ಬೇಗ ಅರಿತರೆ ಒಳ್ಳೆಯದು.(ನಾನು ಲೋಹಿಯಾವಾದ ಅಥವಾ ವಾದಿ ಎಂಬ ಪ್ರಯೋಗವನ್ನು ಬಳಸದಿರಲು ಬಯಸುವೆನಾದರೂ, ಬಾಪು ಅವರಂತಹವರು ಅದನ್ನು ನನಗೆ ಅನಿವಾರ್ಯ ಮಾಡುತ್ತಿದ್ದಾರೆ.) ಲೋಹಿಯಾವಾದಿಗಳು 'ರಾಜ'ಕಾರಣ ಮಾಡಿದರೆಂದು ಆಪಾದಿಸುವ ಬಾಪು ಅವರಿಗೆ ಈ 'ರಾಜ'ಕಾರಣ ಆರಂಭವಾದದ್ದೇ 60ರ ದಶಕದಲ್ಲಿ ಇವರ ನಾಯಕ ಅಶೋಕ ಮೆಹ್ತಾ ಅವರು ಮಂಡಿಸಿದ 'ಹಿಂದುಳಿದ ಆರ್ಥಿಕತೆಗಳ ಒತ್ತಾಯಗಳು' ಎಂಬ ಸಿದ್ಧಾಂತದ ಸ್ಫೂರ್ತಿಯಲ್ಲಿ ಎಂದು ನೆನಪಿಸುವ ಅಗತ್ಯವಿಲ್ಲವೆಂದು ನಾನು ಭಾವಿಸುವೆ. ಇಂದಿರಾಗಾಂಧಿ 70ರ ದಶಕದ ಆರಂಭದಲ್ಲಿ 'ಗರೀಬಿ ಹಟಾವೋ' ಘೋಷಣೆ ಕೂಗಿದೊಡನೆ ಇದಕ್ಕೇ ಕಾಯುತ್ತಿದ್ದಂತೆ ಕಾಂಗ್ರೆಸ್ಸಿಗೆ ಹಾರಿ ತಮ್ಮ ಪಕ್ಷವನ್ನೇ ಕಾಣೆ ಮಾಡಿದವರು ಪಿ.ಎಸ್.ಪಿಗಳೇ ಎಂದು ಇಲ್ಲಿ ಅವರಿಗೆ ನೆನಪಿಸಬಯಸುವೆ.

ಬಾಪು ಹೆದ್ದೂರ ಶೆಟ್ಟಿಯವರಂತಹ ಹಿರಿಯರು ಮತ್ತು ಸಮಾಜವಾದಿ ವಿದ್ವಾಂಸರು ಹೀಗೆ ಹಳೆಯ ಚರಿತ್ರೆಯನ್ನೆಲ್ಲ ಮತ್ತೆ ಕೆದಕಿ, ನಮ್ಮಂತಹವರನ್ನೂ ಕೆದಕಲು ಪ್ರಚೋದಿಸಿ, ಸಮಾಜವಾದಿ ಚರ್ಚೆಗಳನ್ನು ರಾಡಿ ಮಾಡುವ ಬದಲು ಸ್ವಲ್ಪ ರಚನಾತ್ಮಕವಾಗಿ ಯೋಚಿಸತೊಡಗುವಂತೆ ಕೇಳಿಕೊಳ್ಳುತ್ತೇನೆ.(ನಾನು ಇದನ್ನೆಲ್ಲ ಬರೆದಿರುವುದು, ನನ್ನ ಕೆಲವು ಲೋಹಿಯಾವಾದಿ ಸ್ನೇಹಿತರ ಒತ್ತಾಯದ ಮೇರೆಗೇ ಹೊರತು ಸ್ವಯಂಸ್ಫೂರ್ತಿಯಿಂದಲ್ಲ ಎಂಬುದನ್ನೂ ಇಲ್ಲಿ ಸ್ಪಷ್ಟಪಡಿಸಬಯಸುವೆ.) □

ಸಂಪಾದಕರೊಡನೆ ಸಂವಾದ

ಆರ್. ಎಸ್. ಮಾಲಗತ್ತಿ

ಮಾನ್ಯ ಸಂಪಾದಕರೇ,

ಪ್ರಪಂಚದಲ್ಲಿ ಎರಡು ಬಗೆಯ ಆಹಾರ ಪದ್ಧತಿಗಳು ಜಾರಿಯಲ್ಲಿವೆ. ಒಂದುಸಸ್ಯಹಾರವಾದರೆ ಇನ್ನೊಂದು ಮಾಂಸಹಾರ. ಮಾಂಸಹಾರವನ್ನೆ ತೆಗೆದುಕೊಂಡರೆ ಶೇ 80ರಷ್ಟು ಜನ ಈ ಆಹಾರವನ್ನು ಸೇವಿಸುತ್ತಿರುವುದು ಕಂಡುಬರುತ್ತಿದೆ. ಸಸ್ಯಹಾರ ಮಾಂಸಹಾರ ಎಂಬುವುದು ಅವರವರ ವೈಯಕ್ತಿಕ ವಿಚಾರವಾದರೂ ಇಂದಿನ ಸರ್ಕಾರಗಳು ಒಂದು ಸಮುದಾಯದ ಆಹಾರದ ಹಕ್ಕನ್ನು ಕಸಿದುಕೊಂಡು ಕಾನೂನು ಎಂಬ ಖಡ್ಗ ಝಳಪಿಸಿದ್ದು ನೋಡಿದರೆ ಇದು ಪ್ರಜಾಪ್ರಭುತ್ವ ರಾಷ್ಟ್ರವೋ ಅಥವಾ ಸರ್ವಾಧಿಕಾರವೋ? ಎಂಬ ಸಂಶಯ ಮೂಡಿಸುತ್ತದೆ.

ಭಾರತದೇಶದಲ್ಲಿ ಬಹುಸಂಖ್ಯಾತರು ಮಾಂಸವನ್ನು ತಮ್ಮ ಆಹಾರವನ್ನಾಗಿ ಮಾಡಿಕೊಂಡು ಜೀವಿಸುತ್ತಾ ಬಂದಿದ್ದಾರೆ. ಅವರ ಹಿತಾಸಕ್ತಿಗೆ ಧಕ್ಕೆ ತರುವಂತ ಮಸೂದೆಯ ಅಗತ್ಯವಿದೆಯೇ? ಒಂದು ಸಮುದಾಯದ ಆಹಾರ ಪದ್ಧತಿಯನ್ನು ನಿಷೇಧಿಸಲು ಇವರು ಯಾರು? ಸಂಸ್ಕೃತಿ ಬಗ್ಗೆ ಮಾತನಾಡುವ ಡಂಬಾಚಾರಿಗಳೇ ಈ ಕಾಯ್ದೆಯಿಂದ ಬಹುಸಂಖ್ಯಾತರ ಭಾವನೆಗಳಿಗೆ ಧಕ್ಕೆಯಾಗುವುದಿಲ್ಲವೇ? ಈ ಕಾಯಿದೆ ಜಾರಿಯಾದರೆ ಮಾಂಸಹಾರ ಸೇವಿಸುವುದು ಬಿಡುತ್ತಾರೆಯೇ? ಜಾರಿಯಾಗಿರುವ ಕಾಯ್ದೆಗಳು ಎಷ್ಟರ ಮಟ್ಟಿಗೆ ಸಫಲವಾಗಿವೆ ಎಂಬುವುದು ಬೇರೆ ಮಾತು. ಜನರ ವಿರೋಧದ ನಡುವೆ ಇಂಥಹ ಕಾನೂನುಗಳು ಜಾರಿಗೆ ತರುತ್ತಿರುವುದು ಯಾವ ಪುರುಷಾರ್ಥಕ್ಕಾಗಿ? ಒಂದು ವರ್ಗವನ್ನು ಓಲೈಸಿಕೊಳ್ಳಲು ಇಡೀ ಬಹು ಸಂಖ್ಯಾತ ಸಮುದಾಯದ ವಿರೋಧ ಕಟ್ಟಿಕೊಳ್ಳುವುದು ಸಮಂಜಸವೇ? ಗೋಹತ್ಯೆ, ಗೋ ಸಂರಕ್ಷಣೆ ನೆಪದಲ್ಲಿ ಅಲ್ಪ ಸಂಖ್ಯಾತರ ಮೇಲೆ ದಾಳಿ, ದಬ್ಬಾಳಿಕೆಗಳು ನಡೆಯುತ್ತಲೆ ಬಂದಿರುವುದು ಗೊತ್ತಿಲ್ಲವೇ? ಈ ಮಸೂದೆ ಅಂಗೀಕಾರವಾದರೆ ಶ್ರೀರಾಮ ಸೇನೆ, ಬಜರಂಗದಳ, ವಿಶ್ವ ಹಿಂದೂ ಪರಿಷತ್ ನಂಥಹ ಸಂಘಪರಿವಾರದ ಸಂಘಟನೆಗಳ ಕೃತ್ಯಗಳಿಗೆ ಕಾಯ್ದೆಯಿಂದ ಸಮರ್ಥನೆ ನೀಡಿದಂತಾಗುವುದಿಲ್ಲವೇ? ಇದು ಸಂಘ ಪರಿವಾರದ ಫ್ಯಾಸಿಷ್ಟ್ ಧೋರಣೆ ಅಲ್ಲದೆ ಮತ್ತೇನು? ರಾಜ್ಯದ ಒಂದು ಕೋಟಿಗೂ ಅಧಿಕ ರೈತರು ಉಪಯೋಗಕ್ಕೆ ಬಾರದ

> **ಗೋಹತ್ಯೆ ನಿಷೇಧಿಸುವುದರಿಂದ ಈ ದೇಶದ ಸಂಸ್ಕೃತಿ ಉಳಿಯುತ್ತದೆ ಎಂಬಂತೆ ಬಡಾಯಿ ಕೊಚ್ಚಿಕೊಳ್ಳುತ್ತಿರುವ ಮೂಲಭೂತವಾಗದಿಳು ದೇಶಿಯ ತಳಿಗಳಾದ 'ಕೃಷ್ಣವೇಣಿ' ಅಮೃತ ಮಹಲ್ ಪುಂಗನೂರು ದೇವಣಿ. ಒಂಗಲ್ ಮತ್ತು ಕಾಂಗಾಯಾಮ್‌ನಂಥಹ ಹಸುಗಳನ್ನು ಸಂರಕ್ಷಿಸುವಲ್ಲಿ ಸರಕಾರಗಳು –ಪರಸಂಘಟನೆಗಳು ಏಕೆ ಆಸಕ್ತಿ ವಹಿಸಿಲ್ಲ. ಅವುಗಳ ಅವನತಿಗೆ ಕಾರಣರು ಯಾರು? ಜಾಗತಿಕ ಕರಾಳ ಬಾಹುಗಳಿಗೆ ಸಿಲುಕಿ ಪ್ರಗತಿ ಸಾಧಿಸುವ ಹುಂಬತನಕ್ಕೆ ಮಾರುಹೋಗಿ ನಮ್ಮತನವನ್ನೆ ಗಾಳಿಗೆ ತೂರಿ ಅನ್ಯರ ಗೋವುಗಳನ್ನು ಸಂರಕ್ಷಣೆ ಮಾಡುವುದರಲ್ಲಿ ಏನು ಸಫಲತೆ ಕಾಣುತ್ತೇವೆ.**

ವಯಸ್ಸಾದ ಹಸು, ಎತ್ತು, ಎಮ್ಮೆ, ಕೋಣಗಳನ್ನು ಮಾರಾಟಮಾಡಿ ಇತರೆ ಜಾನುವಾರುಗಳನ್ನು ಖರೀದಿಸುತ್ತಿದ್ದಾರೆ.

ಸುಮಾರು 1.25ಕೋಟಿ ದಲಿತರು, ಅಲ್ಪಸಂಖ್ಯಾತರು, ಬುಡಕಟ್ಟು ಜನರು ಗೋಮಾಂಸವನ್ನು ಆಹಾರವಾಗಿ ಬಳಸುತ್ತಿದ್ದಾರೆ. ಕನಿಷ್ಠ 20ಲಕ್ಷ ಜನರು ಮಾಂಸದ ಮಾರಾಟದಲ್ಲಿ ತೊಡಗಿ ಜೀವನ ನಡೆಸುತ್ತಿದ್ದಾರೆ. ಇಷ್ಟೊಂದು ಜನರ ಮೇಲೆ ಇಲ್ಲಿನ ಆರ್ಥಿಕತೆಯ ಮೇಲೆ ದೂರಗಾಮಿ ಪರಿಣಾಮ ಬೀರುವ ಗೋಹತ್ಯೆ ನಿಷೇಧ ಮಸೂದೆ ಚರ್ಚೆ ಇಲ್ಲದೆ ಸದನದಲ್ಲಿ ಅಂಗೀಕಾರ ಮಾಡಿರುವುದು ಯಾವ ಪುರುಷಾರ್ಥಕ್ಕಾಗಿ ಈ ವೃತ್ತಿಯಿಂದ ಬೀದಿ ಪಾಲಾಗುವ ನಿರುದ್ಯೋಗಿಗಳಿಗೆ ಪರ್ಯಾಯ ಮಾರ್ಗ ತೋರಿಸಿದ್ದಿರಾ? ರೈತವಿರೋಧಿ, ದಲಿತ – ಅಲ್ಪಸಂಖ್ಯಾತರ ಆಹಾರದ ಹಕ್ಕನ್ನು ಕಸಿಯುವ, ಕೋಮು ಭಾವನೆ ಕೆರಳಿಸುವ ದುರುದ್ದೇಶದಿಂದ ಜಾರಿಗೆ ತರುತ್ತೀಲ್ಲವೇ? ಹಲವು ಕಡೆ ಜಾತ್ಯಾತೀತ ಪಕ್ಷಗಳು ಮೂಲಭೂತ ಅಸ್ತ್ರಗಳನ್ನು ವೋಟಿನ ರಾಜಕಾರಣಕ್ಕೆ ಬಳಸಲು ಯತ್ನಿಸುತ್ತಿರುವುದು ಸಹ ನಿರ್ಲಜ್ಜ ನಡವಳಿಕೆಯ ಪರಮಾವಧಿಯೆ ಆಗಿದೆ. ಗೋಹತ್ಯೆ ನಿಷೇಧಿಸುವ ಕೂಗಿನಲ್ಲಿ ಇತ್ತೀಚೆಗೆ ಗಾಂಧೀಜಿ ಮತ್ತು ಡಾ. ಅಂಬೇಡ್ಕರ್ ಅವರ ಹೆಸರನ್ನು ಎಳೆದು ತರುತ್ತಿದ್ದಾರೆ. ಗಾಂಧೀಜಿಯವರು ಹೇಳಿದ್ದೆಲ್ಲವು ಸಾಧುವೆ ಅಸಾಧುವೆ ಎಂದು ಕೂಲಂಕುಶವಾಗಿ ಚರ್ಚಿಸದೆ ಒಪ್ಪಿಕೊಳ್ಳುವುದು ಪ್ರಜ್ಞಾವಂತಿಕೆಯ ಲಕ್ಷಣವೇ? ಗಾಂಧೀಜಿಯನ್ನು ವಿರೋಧಿಸುವ ಆತನ ಹಂತಕರನ್ನು ಸಮರ್ಥಿಸಿಕೊಳ್ಳುವ ಈ ಮೂಲಭೂತವಾದಿಗಳು ಗೋವಿನ ವಿಷಯದಲ್ಲಿ ಗಾಂಧೀಜಿಯವರ ಹೆಸರು ಬಳಸುವುದು ಏಕೆ? ಹಾಗೆಯೇ ಅಂಬೇಡ್ಕರ್ ಅವರು ಸಂವಿಧಾನದ 48ನೇ ವಿಧಿಯಲ್ಲಿ ಹಾಲು ಕರಿಯುವ ಹಸು, ರೈತ, ಎತ್ತುಗಳ ಬಗ್ಗೆ ಹೇಳಿದ್ದಾರೆಯೇ ಹೊರತು ಮತ್ಯಾವ ಗೋಸಂರಕ್ಷಣೆ ಬಗ್ಗೆ ಮಾತನಾಡಿಲ್ಲ ಅದರೂ ಅವರ ಹೆಸರನ್ನು ಉದ್ದೇಶಪೂರ್ವಕವಾಗಿ ತರುತ್ತಿದ್ದಾರೆ. ಗೋಹತ್ಯೆ ನಿಷೇಧ ಮಾಡಬೇಕೆಂದು ಒತ್ತಾಯ ಮಾಡುವವರಲ್ಲಿ ಸುಪ್ರಿಂ ಕೋರ್ಟ್‌ನ ನ್ಯಾಯಮೂರ್ತಿ ವೆಂಕಟಾಚಲಯ್ಯ, ಸಂಶೋಧಕ ಚಿದಾನಂದಮೂರ್ತಿ,ರಾಜ್ಯಸಭಾ ಸದಸ್ಯ ರಾಮಾಜೋಯಿಸ್ ಅವರು ಒತ್ತಾಯ ಮಾಡುತಿದ್ದಾರೆ. ಇವರ್‍ಯಾರಾದರೂ ಒಂದು ಹಸುವನ್ನಾದರೂ ಸಾಕಿದ್ದಾರಾ? ಯಾರೋ ಸಾಕಿದ ಗೋವುಗಳ ಹತ್ಯೆ ನಿಷೇಧಿಸಿ ಎಂದು ಒತ್ತಾಯಿಸುವುದು ಯೋಚಿತ ನ್ಯಾಯವೇ?

ಅನ್ನದಲ್ಲಿ ವಿಷ ಬೆರೆಸುವ ತಂತ್ರ :

ಮಾಂಸಹಾರ ಸೇವಿಸುವವರು ಕನಿಷ್ಠವೆಂದು ಗೋವುಗಳನ್ನು ಪವಿತ್ರವೆಂದು ಹೇಳಲಾಗುತ್ತಿದೆ. ಗೋವು ಒಂದೇ ಅತ್ಯಮೂಲ್ಯ ಮತ್ತು ಆರಾಧ್ಯ ಪ್ರಾಣಿಯೇ? ಹಾಗಾದರೆ ಹಂದಿಯನ್ನು 'ವರಾಹ' ಎಂದು, ಕೋಣವನ್ನು ಯಮನ ವಾಹನವೆಂದು ನವಿಲನ್ನು ಸರಸ್ವತಿ ವಾಹನವೆಂದು ಪೂಜಿಸುತ್ತಿಲ್ಲವೇ? ರಾಷ್ಟ್ರೀಯ ಪ್ರಾಣಿಯೆಂದು ಬಿಂಬಿತವಾಗಿರುವ ನವಿಲು ಸಂತತಿಯ ಬಗ್ಗೆ ಯಾವ ಸರ್ಕಾರಗಳು ಚಕಾರ ಎತ್ತುವುದಿಲ್ಲ ಏಕೆ? ಗ್ರಾಮೀಣ ಜನರು ಹಸುಗಳನ್ನು ಸಾಕುವುದು ಅವುಗಳ ಮೇಲಿನ ಭಕ್ತಿಯಿಂದಲ್ಲ. ನಮ್ಮ ಧರ್ಮ ಗ್ರಂಥಗಳು ಹೇಳಿವೆ ಎಂಬ ಆದೇಶದಿಂದಂತು ಅಲ್ಲವೇ ಅಲ್ಲ, ಅವುಗಳಿಂದ ರೈತನ ಕೃಷಿ ನಡೆಯುತ್ತದೆ. ಹೈನುಗಾರಿಕೆ ಬೆಳೆಯುತ್ತದೆ, ಬಡವನ ಬದುಕು ಹಸನಾಗುತ್ತದೆ ಎಂಬ ಉದ್ದೇಶದಿಂದ. ಆದರೆ ಈಗ ಸ್ವಹಿತಾಸಕ್ತಿ ಶಕ್ತಿಗಳು ಪವಿತ್ರ ಅಪವಿತ್ರ ಎಂಬ ನೆಪವೊಡ್ಡಿ ಬಹುಸಂಖ್ಯಾತರ ಅನ್ನದಲ್ಲಿ ವಿಷ ಬೆರೆಸುವ ಯತ್ನ ನಡೆಸುತ್ತಿವೆ.

ಪೇಟೆಂಟ್‌ಗೆ ಲಾಭ :

ಗೋಹತ್ಯೆ ನಿಷೇಧಿಸುವುದರಿಂದ ಈ ದೇಶದ ಸಂಸ್ಕೃತಿ ಉಳಿಯುತ್ತದೆ ಎಂಬಂತೆ ಬಡಾಯಿ ಕೊಚ್ಚಿಕೊಳ್ಳುತ್ತಿರುವ ಮೂಲಭೂತವಾದಿಗಳು ದೇಶಿಯ ತಳಿಗಳಾದ 'ಕೃಷ್ಣವೇಣಿ' ಅಮೃತ ಮಹಲ್ ಪುಂಗನೂರು ದೇವಣಿ, ಒಂಗಲ್ ಮತ್ತು ಕಾಂಗಾಯಾಮ್‌ನಂಥಹ ಹಸುಗಳನ್ನು ಸಂರಕ್ಷಿಸುವಲ್ಲಿ ಸರಕಾರಗಳು ಮತ್ತು ಪರಸಂಘಟನೆಗಳು ಏಕೆ ಆಸಕ್ತಿ ವಹಿಸಿಲ್ಲ. ಅವುಗಳ ಅವನತಿಗೆ ಕಾರಣರು ಯಾರು? ಜಾಗತಿಕ ಕರಾಳ ಬಾಹುಗಳಿಗೆ ಸಿಲುಕಿ ಪ್ರಗತಿ ಸಾಧಿಸುವ ಹುಂಬತನಕ್ಕೆ ಮಾರುಹೋಗಿ ನಮ್ಮತನವನ್ನೆ ಗಾಳಿಗೆ ತೂರಿ ಅನ್ಯರ ಗೋವುಗಳನ್ನು ಸಂರಕ್ಷಣೆ ಮಾಡುವುದರಲ್ಲಿ ಏನು ಸಫಲತೆ ಕಾಣುತ್ತೇವೆ.

ಗೋವಿನ ಮೂತ್ರ ವೈದ್ಯಕೀಯ ಕ್ಷೇತ್ರಕ್ಕೆ ಬಳಕೆಯಾಗುತ್ತದೆ ಎಂಬ ಸಂತೋಷ ಒಂದೆಡೆಯಾದರೆ ಸಗಣಿಯಿಂದ ತಯಾರಿಸಲ್ಪಡುವ ವಿಭೂತಿ ಕೋಟ್ಯಂತರ ರೂಪಾಯಿ ವ್ಯವಹಾರ ಕುದುರಿಸಿ ತಮ್ಮ ಕಬಂದ ಬಾಹು ಮತ್ತು ಹಿಂದೂ ಸಂಸ್ಕೃತಿಯನ್ನು ಹೇರಲು ರೂಪಿಸಿರುವ ಷಡ್ಯಂತ್ರವಲ್ಲವೇ? ಇದರಿಂದ ಸರ್ಕಾರ ಮತ್ತು ಮಠಗಳಿಗೆ ಪೂರಕವೇ ಹೊರತು ಅಲ್ಲಾ ಮುಲ್ಲಗಳಿಗಲ್ಲ ಬೌದ್ಧ ಬಿಕ್ಕುಗಳಿಗಲ್ಲ, ಕ್ರೈಸ್ತ ಪಾದ್ರಿಗಳಿಗಲ್ಲ, ಜನಸಾಮಾನ್ಯರಿಗಂತು ಅಲ್ಲವೇ ಅಲ್ಲ. □

ಹಸಿವೆಂಬ ಹಕ್ಕಿ ಹಾರುತಿದೆ ನೋಡಿದಿರಾ?

ಚಿಂತನೆಯ ಪ್ರಖರತೆ: ಹೂಂಕರಿಸುವ ಪಾಂಡಿತ್ಯ

ಪ್ರತಿಕ್ರಿಯೆ

ರಹಮತ್ ತರೀಕೆರೆ

ಮಾನ್ಯ ಸಂಪಾದಕರೇ,

ಕನ್ನಡದ ಹಿರಿಯ ಚಿಂತಕರಲ್ಲಿ ಒಬ್ಬರಾದ ಡಿ.ಎಸ್. ನಾಗಭೂಷಣ ಅವರು 'ಕರ್ನಾಟಕ ಸಂಸ್ಕೃತಿ ಮತ್ತು ಲೋಹಿಯಾವಾದ' ಎಂಬ ನನ್ನ ಲೇಖನಕ್ಕೆ "ಕರ್ನಾಟಕದ ಲೋಹಿಯಾವಾದಿ ಸಾಂಸ್ಕೃತಿಕ ಪರಂಪರೆಯೂ, ರಹಮತ್ ತರೀಕೆರೆಯವರ ಮೆಳ್ಳೆಗಣ್ಣಿನ ನೋಟವೂ..." ಎಂಬ ಹೆಸರಲ್ಲಿ ಪ್ರತಿಕ್ರಿಯೆ ಬರೆದಿದ್ದಾರೆ (ಸಂವಾದ ಆಗಸ್ಟ್ 2010). ಸಮಸ್ಯೆಯೆಂದರೆ, ಅವರ ಪ್ರತಿಕ್ರಿಯೆಗೂ ಈಗಿನ ನನ್ನ ಈ ಪ್ರತಿಕ್ರಿಯೆಗೂ ಕಾರಣವಾಗಿರುವ ಮೂಲ ಲೇಖನವು, ಬೇರೊಂದು ಪುಸ್ತಕದಲ್ಲಿ ಪ್ರಕಟವಾಗಿದ್ದು, ಎಮ್ಮೆಯನ್ನು ನೀರಿನಲ್ಲಿ ಮಲಗಿಸಿ ವ್ಯಾಪಾರ ಮಾಡಿದ ಹಾಗೆ ಆಗಿದೆ. ಮೂಲ ಲೇಖನವು 'ಸಂವಾದ'ದಲ್ಲೇ ಪ್ರಕಟವಾಗಿತ್ತಾದರೆ ನಮ್ಮ ಚರ್ಚೆಗೆ ಒಂದು ರೆಫರೆನ್ಸ್ ಪಾಯಿಂಟ್ ಇರುತ್ತಿತ್ತು. ಓದುಗರಿಗೂ ಗ್ರಹಿಸಲು ಸುಲಭವಾಗುತ್ತಿತ್ತು. ಈ ಹಿನ್ನೆಲೆಯಲ್ಲಿ, ಸಂಪಾದಕರು ನನ್ನ ಮೂಲ ಲೇಖನವನ್ನು 'ಸಂವಾದ'ದ ಇದೇ ಸಂಚಿಕೆಯಲ್ಲಿ ಪ್ರಕಟಿಸಬೇಕೆಂದು ಕೋರುತ್ತೇನೆ.

ನಾಗಭೂಷಣ ತಮ್ಮ ಭಿನ್ನಾಭಿಪ್ರಾಯ ವ್ಯಕ್ತಪಡಿಸುವಾಗ –ಅದು ಬರೆಹದಲ್ಲಾಗಿರಲಿ ಮಾತಿನಲ್ಲಾಗಿರಲಿ– ಕಟುತ್ವ ಯಾವಾಗಲೂ ಇರುತ್ತದೆ. ಆದರೆ ಇಲ್ಲಿನ ಪ್ರತಿಕ್ರಿಯೆಯಲ್ಲಿ ಅದು ಹದ್ದುಮೀರಿ ಬೀದಿಬೈಗುಳದ ಸ್ತರಕ್ಕೆ ಏರಿಬಿಟ್ಟಿದೆ. ನನ್ನ ಮೇಲಿನ ಜನ್ಮಾಂತರದ ಕೋಪವನ್ನು ತೀರಿಸಿಕೊಳ್ಳುವಂತೆ ಅವರು ಬರೆದಿದ್ದಾರೆ. ನಾನಂತೂ ಅವರ ಕಣ್ಣಲ್ಲಿ ಬೇಜವಾಬ್ದಾರಿ, ಉಡಾಫೆಗಾರ, ಜಿಗುಪ್ಸೆಗಾರ, ಜಡ ಮಾರ್ಕ್ಸ್‌ವಾದಿ, ಮೆಳ್ಳೆಗಣ್ಣಿನವನು, ಪುಢಾರಿ, ಅಸಭ್ಯ, ಬುರ್ನಾಸು, ಕಿಡಿಗೇಡಿ ಇತ್ಯಾದಿ ಗುಣಭೂಷಿತನಾಗಿರುವುದು ಸರಿಯೇ ಸರಿ. ಆದರೆ ನನ್ನನ್ನು ಇಷ್ಟೊಂದು ವರ್ಣರಂಜಿತವಾಗಿ ನಿಂದಿಸಿ ಅವರಂತಹ ಹಿರಿಯರೂ ಚಿಕ್ಕವರಾದರಲ್ಲ ಎಂದು ಬೇಸರವೆನಿಸುತ್ತಿದೆ. ಅವರ ಈ ಓವರ್ ರಿಯಾಕ್ಷನ್‌ಗೆ ಮತ್ತಿನ್ನೇನು ಕಾರಣಗಳಿವೆಯೊ ನಾನರಿಯೆ. ಆದರೆ ಕಾಗುಣಿತ ದೋಷ ಮಾಡಿದ ವಿದ್ಯಾರ್ಥಿಗೆ ಕಣ್ಣುಗುಡ್ಡೆ ಹಾರಿಹೋಗುವಂತೆ, ಕೈಮೂಳೆ ಮುರಿಯುವಂತೆ ಬಡಿಯುವ ಶಾಲಾ ಶಿಕ್ಷಕರಂತೆ ಅವರು ಬರೆದಿದ್ದಾರೆ.

ಎರಡು–ಮೂರು ವರ್ಷಗಳ ಹಿಂದೆ ಬರೆದ ನನ್ನ ಲೇಖನವನ್ನು ನಾಗಭೂಷಣ ಅವರ ಪ್ರತಿಕ್ರಿಯೆ ಬಂದ ನಂತರ ತೆಗೆದು ಓದಿದೆ. ಅದರಲ್ಲಿ ಕೆಲವು ಮಾಹಿತಿ ಕೊರತೆ – ದೋಷಗಳಿರುವುದು ನಿಜ. ಕೆಲವರ ಹೆಸರು ಕೊಟ್ಟು "ಇವರಲ್ಲದೆ ಅಷ್ಟೊಂದು ಪ್ರಸಿದ್ಧಿಗೆ ಬಾರದೆ ಅಜ್ಞಾತವಾಗಿ ಬದುಕುತ್ತಿರುವ ನೂರಾರು ಲೋಹಿಯಾವಾದಿಗಳಿದ್ದಾರೆ" ಎಂಬ ಮಾತು ನನ್ನ ಲೇಖನದಲ್ಲಿದೆ.

ನಾನು ನನ್ನ ಲೇಖನದಲ್ಲಿ ಲೋಹಿಯಾವಾದದಿಂದ ಕರ್ನಾಟಕದ ಸಾಂಸ್ಕೃತಿಕ ಜಗತ್ತಿನಲ್ಲಿ ಆಗಿರುವ ಅನೇಕ ಧನಾತ್ಮಕ ಪರಿಣಾಮಗಳನ್ನು ವಿಶ್ಲೇಷಿಸಿದ್ದೇನೆ. ಸಮಾಜವಾದಿಗಳು ತಮ್ಮ "ಪರಸ್ಪರ ತಾತ್ವಿಕ ಭಿನ್ನಮತಗಳ ಮೂಲಕ ಒಂದು ಉಜ್ವಲವಾದ ವಾಗ್ವಾದದ ವಾತಾವರಣವನ್ನು ಅವರು ಸೃಷ್ಟಿಸಿದ್ದರು" ಮುಂತಾದ ಹೇಳಿಕೆಗಳಿವೆ. ಆದರೆ ನನ್ನಂತೆ ಮೆಳ್ಳೆಗಣ್ಣಿನ ಸಮಸ್ಯೆಯಿಲ್ಲದ ನಾಗಭೂಷಣ ಅವರು ಅವನ್ನೆಲ್ಲ ಬದಿಗೆ ಸರಿಸಿದ್ದಾರೆ.

ಅವರು ಕರ್ನಾಟಕದ ಲೋಹಿಯಾವಾದಿಗಳ ಪಟ್ಟಿಗೆ ಮತ್ತಷ್ಟು ಮತ್ತಷ್ಟು ಹೆಸರುಗಳನ್ನು ಸೇರಿಸಿದ್ದಾರೆ. ಅವರು ಕೊಟ್ಟಿರುವ ಪಟ್ಟಿಯಲ್ಲೂ ಕೆಲವು ಹೆಸರು ಬಿಟ್ಟುಹೋಗಿರುವ ಸಾಧ್ಯತೆಯಿದೆ. ಇದಕ್ಕೆ ಒಂದು ಕಾರಣ, ಅವರೇ ಹೇಳಿರುವಂತೆ "ಕರ್ನಾಟಕದಲ್ಲಿ ಸಮಾಜವಾದಿ ಪಕ್ಷ ಅಥವಾ ಆಂದೋಲನದ ಚರಿತ್ರೆಯೇ ಸಾಕ್ಷ್ಯಗಳೊಂದಿಗೆ ವ್ಯವಸ್ಥಿತವಾಗಿ ದಾಖಲಾಗದೆ ಅಸ್ಪಷ್ಟವಾಗಿ"ರುವುದು.

ಆದರೆ ನನ್ನ ಲೇಖನದ ಉದ್ದೇಶ ಅಂತಹ ಕರ್ನಾಟಕದ ಸಮಾಜವಾದಿ ಚಳುವಳಿಯ ಚರಿತ್ರೆಯನ್ನು ಬರೆಯುವುದಾಗಿರಲಿಲ್ಲ. ಆ ಚರಿತ್ರೆಯ ಸ್ಥೂಲಭಿತ್ತಿ ಇಟ್ಟುಕೊಂಡು, ಅದರ ಭಾಗವಾಗಿ ಕರ್ನಾಟಕ ಸಂಸ್ಕೃತಿಯಲ್ಲಿ ಕಾಣಿಸಿಕೊಂಡ ಕೆಲವು ಪ್ರವೃತ್ತಿಗಳನ್ನು ಸೂಚಿಸುತ್ತ ಟಿಪ್ಪಣಿಗಳನ್ನು ಮಾಡುವುದಾಗಿತ್ತು. (ನನ್ನ ಲೇಖನವು ದಿನ್ನಿಯವರು ಸಂಪಾದಿಸಿದ 'ಲೋಹಿಯಾ: ಸಾಂಸ್ಕೃತಿಕ ಅನುಸಂಧಾನ' ಪುಸ್ತಕದಲ್ಲಿ (2008) 'ಕರ್ನಾಟಕ ಸಂಸ್ಕೃತಿ ಮತ್ತು ಲೋಹಿಯಾವಾದ: ಕೆಲವು ಟಿಪ್ಪಣಿಗಳು' ಎಂಬ ಹೆಸರಲ್ಲೇ ಪ್ರಕಟವಾಗಿತ್ತು. ಅದನ್ನು ಅವರು ಇನ್ನೊಂದು ಪುಸ್ತಕದಲ್ಲಿ ಲೇಖನವನ್ನು ಅದರ ತಲೆಬರೆಹದಲ್ಲಿದ್ದ 'ಟಿಪ್ಪಣಿಗಳು' ಎಂಬ ಪದ ಕೈಬಿಟ್ಟು ಪ್ರಕಟಿಸಿಕೊಂಡಿದ್ದಾರೆ.)

ಡಿ.ಎಸ್ ನಾಗಭೂಷಣ ಅವರ ಪ್ರತಿಕ್ರಿಯೆಗೆ ಕಾರಣವಾದ ರಹಮತ್ ಅವರ ಮೂಲ ಲೇಖನ ಇದೇ ಸಂಚಿಕೆಯ 26ನೇ ಪುಟದಲ್ಲಿದೆ. –ಸಂ

ಏನೇ ಇರಲಿ, ನಾನು ನನ್ನ ಲೇಖನದೊಳಗಿನ ಹೇಳಿಕೆಗಳಿಗೆ ಬದ್ಧನೂ ಹೊಣೆಗಾರನೂ ಆಗಿದ್ದೇನೆ.

ನಾಗಭೂಷಣ ಅವರ ಇಡೀ ಪ್ರತಿಕ್ರಿಯೆಯು ನಾನೊಬ್ಬ ಮಾರ್ಕ್ಸ್‌ವಾದಿಯಾಗಿದ್ದು ಲೋಹಿಯಾ ಸಮಾಜವಾದದ ಮೇಲೆ ಅಪಪ್ರಚಾರ ಮಾಡುವ ಉದ್ದೇಶದಲ್ಲಿ ಬರೆದಿರುವೆನೆಂಬ ಪೂರ್ವಗ್ರಹಿಕೆಯ ಮೇಲೆ ಹುಟ್ಟಿದೆ. ಇದರಿಂದ ಅವರಿಗೆ ಮಾರ್ಕ್ಸ್‌ವಾದಿಗಳ ಮೇಲಿದ್ದ ಲಾಗಾಯ್ತಿನ ಸಿಟ್ಟೆಲ್ಲವನ್ನೂ ನನ್ನ ಮೇಲೆ ಕಾರಿಕೊಳ್ಳಲು ಅವಕಾಶವಾಗಿದೆ. ದಲಿತ ಸಂಘರ್ಷ ಸಮಿತಿಯವರು, ಮಾರ್ಕ್ಸ್‌ವಾದಿಗಳು, ಲೋಹಿಯಾವಾದಿಗಳು ಮತ್ತು ಎಲ್ಲ ಬಗೆಯ ಪ್ರಗತಿಪರರು ಏರ್ಪಡಿಸುವ ಕಾರ್ಯಕ್ರಮ ಚಳುವಳಿಗಳಿಗೆ ಹೋಗಿ ಬರುತ್ತ, ಈ ಎಲ್ಲ ಸಂಘಟನೆ – ಸಿದ್ಧಾಂತಗಳಿಂದ ಕಲಿಯುತ್ತ ಬಂದಿರುವ ನನಗೆ, ಅವರ ನಾನೊಬ್ಬ ಮಾರ್ಕ್ಸ್‌ವಾದಿ ಎಂಬ ಆಪಾದನೆ ಅರ್ಥವಾಗಲಿಲ್ಲ.

ನಾನು ನನ್ನ ಲೇಖನದಲ್ಲಿ ಲೋಹಿಯಾವಾದದಿಂದ ಕರ್ನಾಟಕದ ಸಾಂಸ್ಕೃತಿಕ ಜಗತ್ತಿನಲ್ಲಿ ಆಗಿರುವ ಅನೇಕ ಧನಾತ್ಮಕ ಪರಿಣಾಮಗಳನ್ನು ವಿಶ್ಲೇಷಿಸಿದ್ದೇನೆ. ಸಮಾಜವಾದಿಗಳು ತಮ್ಮ "ಪರಸ್ಪರ ತಾತ್ವಿಕ ಭಿನ್ನಮತಗಳ ಮೂಲಕ ಒಂದು ಉಜ್ವಲವಾದ ವಾಗ್ವಾದದ ವಾತಾವರಣವನ್ನು ಅವರು ಸೃಷ್ಟಿಸಿದ್ದರು" ಮುಂತಾದ ಹೇಳಿಕೆಗಳಿವೆ. ಆದರೆ ನನ್ನಂತೆ ಮೆಳ್ಳೆಗಣ್ಣಿನ ಸಮಸ್ಯೆಯಿಲ್ಲದ ನಾಗಭೂಷಣ ಅವರು ಅವನ್ನೆಲ್ಲ ಬದಿಗೆ ಸರಿಸಿದ್ದಾರೆ. ಆದರೆ ಒಂದೆಡೆ ಮಾತ್ರ "ಬಸವಣ್ಣ, ಕುವೆಂಪು ಮಾದರಿಯ ಸಮಾಜವಾದಿ ಚಿಂತಕರಿಗೆ ಲೋಹಿಯಾರ ಸಮಾಜವಾದಿ ಚಿಂತನೆಗೆ ಹೊರಳಿಕೊಳ್ಳುವುದು ಕಷ್ಟವಾಗಲಿಲ್ಲ" ಎಂಬ ನನ್ನ ಹೇಳಿಕೆಯನ್ನು ಹೇಗೊ ಒಪ್ಪಿಕೊಂಡಿದ್ದಾರೆ.

ಪ್ರಶ್ನೆಯೆಂದರೆ, ಇಂತಹ ಹೇಳಿಕೆಯನ್ನು ಯಾರಾದರೂ ಅಪಪ್ರಚಾರಕರು ಮಾಡುತ್ತಾರೆಯೇ? ಕಡಿದಾಳು ಶಾಮಣ್ಣ, ನೀಲಗಂಗಯ್ಯ ಪೂಜಾರ, ಎಂ. ನಂಜುಂಡಸ್ವಾಮಿ, ದೇವನೂರ ಮಹಾದೇವ ಮುಂತಾದ ಸಮಾಜವಾದಿಗಳ ಸಂದರ್ಶನಗಳನ್ನು ಮಾಡಿ ಪ್ರಕಟಿಸುವುದಾಗಲಿ, ಹಸನ್ ನಯೀಮ ಸುರಕೋಡ, ಪೊನ್ನಮ್ಮಾಳ್ ಅವರ ಬಗ್ಗೆ ಲೇಖನ ಬರೆಯುವುದಾಗಲಿ, ಎಂ. ನಂಜುಂಡಸ್ವಾಮಿ ಅವರಿಗೆ ಪುಸ್ತಕ ಅರ್ಪಣೆ ಮಾಡುವುದಾಗಲಿ ಅಪಪ್ರಚಾರಿಗರು ಮಾಡುವ ಕೃತ್ಯಗಳೇ? ಇಷ್ಟಕ್ಕೂ ನಾನು ಲೋಹಿಯಾ ಸಮಾಜವಾದದ ಪ್ರಚಾರಕನೂ ಅಲ್ಲ. ಅಪಪ್ರಚಾರಕನೂ ಅಲ್ಲ. ಕರ್ನಾಟಕ ಅಧ್ಯಯನಗಳ ಒಬ್ಬ ವಿದ್ಯಾರ್ಥಿ. ಮೇಲ್ಕಾಣಿಸಿದ ಮಹನೀಯರ ಜತೆ ಹಲವು ಚಳುವಳಿಗಳಲ್ಲಿ ನಾನು ಭಾಗವಹಿಸಿರುವುದುಂಟು. ಇದಕ್ಕೆ ಕಾರಣವಾದರೂ ಅವರು ಲೋಹಿಯಾವಾದಿಗಳೆಂಬುದಲ್ಲ. ಕರ್ನಾಟಕದ ಒಳ್ಳೆಯ ಮನಸ್ಸುಗಳೆಂಬುದು. ಅವರಿದ್ದ ಕೂಡು ಚಳುವಳಿಗಳು ಜನಪರ ಚಳುವಳಿಗಳಾಗಿದ್ದವು ಎಂಬುದು. ಮೇಲ್ಕಾಣಿಸಿದ ವ್ಯಕ್ತಿಗಳ ಬಗ್ಗೆ ಬರೆಯುವಾಗ ವಿಮರ್ಶೆಯ ಮಾತುಗಳಾಡಿರಬಹುದು. ಆದರೆ ಅವರ

ಬಗ್ಗೆ ಅಗೌರವದ ಮಾತುಗಳಾಡಲಾರೆ.

ಇಂತಹ ಆದರ್ಶವಾದಿ ಹೋರಾಟಗಾರ ಹಾಗೂ ನೈತಿಕ ವ್ಯಕ್ತಿತ್ವವುಳ್ಳವರ ಪರೋಕ್ಷ ಒಡನಾಟವಿರುವ ಕಾರಣ ದಿಂದಲೇ ಅಥವಾ ಲೋಹಿಯಾ ಅವರಂತಹ ಸಂವೇದನಾ ಶೀಲ ಚಿಂತಕರನ್ನು ಓದಿರುವ ಕಾರಣದಿಂದಲೇ, ಜೆ.ಎಚ್. ಪಟೇಲರಂತಹ ಕೆಲವು ಸಮಾಜವಾದಿಗಳ ನಿಲುವುಗಳನ್ನು ಟೀಕಿಸಲು ನನಗೆ ಒತ್ತಾಸೆ ಬಂದಿದೆ. ಪಟೇಲರ ಬಗ್ಗೆ ಹೇಳುವುದಾದರೆ, ಅವರೊಬ್ಬ ಜಾತ್ಯತೀತ ವ್ಯಕ್ತಿಯಾಗಿದ್ದರು. ಅವರ ಸಾಹಿತ್ಯದ ಓದು, ಚಿಂತನಾ ಸೂಕ್ಷ್ಮತೆ, ವಾಕ್ಪಟುತ್ವ, ಹಾಸ್ಯಪ್ರಜ್ಞೆ ಎಲ್ಲವೂ ಮೆಚ್ಚುವಂತಹವಾಗಿದ್ದವು. ಆದರೆ ಸೈದ್ಧಾಂತಿಕವಾಗಿ ಚಿಂತಿಸಿ ಕ್ರಿಯಾಶೀಲರಾಗಬೇಕಾದ ಸನ್ನಿವೇಶಗಳಲ್ಲಿ, ಅವರು ಉಡಾಫೆಯಿಂದ ವರ್ತಿಸುತ್ತಿದ್ದರು. ಅದರಲ್ಲೂ ಸಾರ್ವಜನಿಕ ವ್ಯಕ್ತಿಯಾಗಿ – ನಮ್ಮ ನಾಡಿನ ಮುಖ್ಯಮಂತ್ರಿಯಾಗಿ ಅಮಿತಾಬ್ ಬಚ್ಚನ್, ಕಾಸ್ಮೆಟಿಕ್ ಕಂಪನಿಗಳ ಪರವಾಗಿ ಸೌಂದರ್ಯ ಸ್ಪರ್ಧೆ ಏರ್ಪಡಿಸಿದಾಗ, ಅವನ ಬೆಂಬಲಕ್ಕೆ ಅವರು ನಿಂತರು.

ಸ್ಪರ್ಧೆಯನ್ನು ವಿರೋಧಿಸಿದ ಪ್ರತಿಭಟನಕಾರರನ್ನು ಜೈಲಿಗೆ ಹಾಕಿಸಿ, 'ಸೌಂದರ್ಯ ಇದ್ದವರು ತೋರಿಸುತ್ತಾರೆ. ರಸಿಕತೆ ಇದ್ದವರು ನೋಡುತ್ತಾರೆ. ನಿಮಗೇಕೆ ಹೊಟ್ಟೆ ಕಿಚ್ಚು?' ಎಂಬರ್ಥದ ಮಾತಾಡಿ ಗೇಲಿಮಾಡಿದರು. ಇದು ತಪ್ಪೆಂದೂ ಜೈಲಿಗೆ ಹಾಕಿದ ಪ್ರತಿಭಟನಕಾರರನ್ನು ಬಿಡುಗಡೆ ಮಾಡಬೇಕೆಂದೂ ನಾವು ಕೆಲವು ಗೆಳೆಯರು ಕೂಡಿ ಅವರಿಗೆ ಸಾರ್ವಜನಿಕ ಪತ್ರ ಬರೆದಿದ್ದೆವು. ಆಗ ನಾಗಭೂಷಣ ದೆಹಲಿಯಲ್ಲಿದ್ದರೊ ಕರ್ನಾಟಕದಲ್ಲಿದ್ದರೊ ಅಥವಾ ಅವರು ಯಾವ ಬಗೆಯಲ್ಲಿ ಪ್ರತಿಕ್ರಿಯಿಸಿದರೊ ತಿಳಿಯೆ. ಇಷ್ಟೇ, 'ಸೌಂದರ್ಯ– ಮೈಬಣ್ಣ' ಎಂಬ ಲೋಹಿಯಾ ಅವರ ಎದೆಕಲಕುವ ಪ್ರಬಂಧ ಓದಿರುವ, ಸಮಾಜವಾದಿ ಗರಡಿಯಲ್ಲಿ ಪಳಗಿರುವ ಒಬ್ಬ ವ್ಯಕ್ತಿ ಹೀಗೆ ವರ್ತಿಸುವುದು ಸಾಧ್ಯವೇ ಎಂದು ನಮಗೆಲ್ಲ ವಿಷಾದವೂ ಸೋಜಿಗವೂ ಆಗಿತ್ತು. "ಜೆ.ಎಚ್.ಪಟೇಲ್ ಹೆಣ್ಣಿನ ಹುಚ್ಚನಂತೆ" ಎಂಬ ಸಾಲನ್ನು ನಾಗಭೂಷಣ ಬರೆದಿದ್ದಾರೆ.ಅವರು ಯಾಕೆ ಈ ಏಕವಚನವನ್ನು ಬಳಸಿದರೊ ತಿಳಿಯದು. ನನ್ನ ಲೇಖನದಲ್ಲಿ ನಾನು ಪಟೇಲರ ಬಗ್ಗೆ ಬಹುವಚನ ಬಳಸಿದ್ದೇನೆ.

ಆದರೆ ಮಹಿಳೆಯರನ್ನು ಕುರಿತ ಲೋಹಿಯಾರ ಘನತೆಯಿಂದ ಕೂಡಿದ ಸೌಂದರ್ಯ ಪ್ರಜ್ಞೆಗೂ ಹೆಣ್ಣನ್ನು ಭೋಗದ ವಸ್ತುವಾಗಿ ಕಾಣುವ 'ರಸಿಕ' ದೃಷ್ಟಿಕೋನಕ್ಕೂ ಫರಕಿದೆ ಎಂದು ಹೇಳುವುದಕ್ಕೆ ಮಾತ್ರ ಪಟೇಲರ ನಿದರ್ಶನವನ್ನು ತೆಗೆಯಬೇಕಾಯಿತು. ಪರಂತು ಅವರ ವೈಯಕ್ತಿಕ ಬಾಳಿನ ಬಗ್ಗೆ ಬರೆಯುವುದು ನನ್ನ ಉದ್ದೇಶವೇ ಅಲ್ಲ. ಸ್ತ್ರೀಲೋಲುಪತೆಯನ್ನು ಕದ್ದುಮುಚ್ಚಿ ಮಾಡುವವರಿಗೆ ಹೋಲಿಸಿದರೆ ಹೆಣ್ಣಿನ "ಹುಚ್ಚನ್ನು ಸಾರ್ವಜನಿಕವಾಗಿ ಪ್ರಕಟಪಡಿಸಿದ ಪಟೇಲ್‌ಗೆ ನನ್ನ ನಮನ ಸಲ್ಲುತ್ತದೆ" ಎಂದು ನಾಗಭೂಷಣ ಘೋಷಿಸಿದ್ದಾರೆ.

ನಾನು ಒಂದು ಹೇಳಿದರೆ ಅವರು ಮಾರ್ಕ್ಸ್‌ವಾದಿಗಳಲ್ಲಿ ಇಂತಹ ಹತ್ತು ನಿದರ್ಶನಗಳನ್ನು ಹೇಳುತ್ತೇನೆಂದು ಹೇಳಿದ್ದಾರೆ. "ಸಮಾಜವಾದಿ ಆಂದೋಲನದೊಂದಿಗೆ ಗುರುತಿಸಿಕೊಂಡಿದ್ದ ನಿತೀಶ್ ಕುಮಾರ್ ಈಗ ಬಿಹಾರದಲ್ಲಿ ಬಿಜೆಪಿ ಸಹಯೋಗದಲ್ಲಿ ಮುಖ್ಯಮಂತ್ರಿಯಾಗಿ ಒಳ್ಳೆಯ ಆಡಳಿತಕ್ಕೆ ಹೆಸರುವಾಸಿಯಾಗಿದ್ದಾರೆ. ಬಿಜೆಪಿ ಕೋಮುವಾದಿ ಬಾಲ ಬಿಚ್ಚದಂತೆ ಎಲ್ಲ ಎಚ್ಚರ ಮತ್ತು ಧೈರ್ಯಗಳನ್ನು ತೋರಿಸುತ್ತಿದ್ದಾರೆ" ಎಂದು ಸಮರ್ಥನೆ ಮಾಡಿದ್ದಾರೆ. ಈ ಘೋಷಣೆ ಮತ್ತು ಸಮರ್ಥನೆಗಳ ಬಗ್ಗೆ ಏನು ತಾನೇ ಹೇಳಬಹುದು? ಆದರೆ ಅವರ ಈ ಹೇಳಿಕೆಗಳನ್ನು ನೋಡುವಾಗ 'ಮತ್ತೆ ಬರಲಿದೆ ಸಮಾಜವಾದ' ಎಂಬ ಅವರ ಪುಸ್ತಕ ಸೂಚಿಸುವ ಭರವಸೆದಾಯಕವಾದ ಮಾತು ಕನ್ನಡಿಗರ ಮೇಲೆ ಹಾಕಲಾದ ಬೆದರಿಕೆ ಎಂಬಂತೆ ಭಾಸವಾಗುತ್ತಿದೆ.

ನಾಗಭೂಷಣ ಅವರು ನಾನು ಹಾದಿಬದಿಯ ಮತ್ತು ರಾಜಕೀಯ ಚಾಡಿಕೋರರ ಮಾತುಗಳನ್ನು ಕೇಳಿಕೊಂಡು ಬರೆದವನು ಎನ್ನುತ್ತಾರೆ. ಇದನ್ನು ನಾನು ಕೆಲಮಟ್ಟಿಗೆ ಒಪ್ಪುತ್ತೇನೆ. ಆದರೆ ನಾನು ಕೇಳಿಸಿಕೊಂಡಿರುವ ಮಾತುಗಳನ್ನಾಡಿದವರು ಕಡಿದಾಳು ಶಾಮಣ್ಣ, ನೀಲಗಂಗಯ್ಯ ಪೂಜಾರ, ನಂಜುಂಡಸ್ವಾಮಿ, ದೇವನೂರ ಮಹಾದೇವ ಮುಂತಾದವರು.

ಇವರ ಜತೆಗೆ ನಾನು ಮಾಡಿದ ಮಾತುಕತೆಗಳೇ ಈ ಲೇಖನ ಬರೆಯಲು ಅರ್ಧ ಕಾರಣ. ಹಾದಿಬದಿ ಎಂಬ ಶಬ್ದವನ್ನು ನಾಗಭೂಷಣ ತುಚ್ಛ ದನಿಯಲ್ಲಿ ಬಳಸಿದ್ದಾರೆ. ಅನೇಕ ಸಲ ಅಧಿಕೃತ ದಾಖಲಾತಿಯಲ್ಲಿ ಕಾಣದ ಸತ್ಯಗಳು ಹಾದಿಬದಿಯ ಮಾತುಕೆಯಲ್ಲಿ ಸಿಗುವುದುಂಟು. ನಾನು ವಿಶ್ವವಿದ್ಯಾಲಯದಲ್ಲಿ ಇರುವವನು ಎಂಬ ಮಾತನ್ನು ಅವರು ತುಸು ವ್ಯಂಗ್ಯದಲ್ಲಿ ಬಳಸಿದ್ದಾರೆ. ಆದರೆ ನಮ್ಮ ವಿಶ್ವವಿದ್ಯಾಲಯಗಳ ಬಗ್ಗೆ ಅತಿಯಾದ ವಿಮರ್ಶೆ ಮಾಡಿಕೊಂಡು ಬಂದವರಲ್ಲಿ ನಾನೂ ಒಬ್ಬ. ಮಾತ್ರವಲ್ಲ, ಕಳೆದ ಎರಡು ದಶಕಗಳಿಂದ ನಾನು ಮಾಡಿರುವ ಬಹುತೇಕ ಅಧ್ಯಯನಗಳು ಈ ನಾಡಿನ ಹಾದಿಬೀದಿಗಳಲ್ಲಿ ತಿರುಗಾಡಿ ಪಡೆದ ತಿಳಿವಳಿಕೆಯ ಫಲವಾಗಿವೆ. ನಾಗಭೂಷಣ ಅವರ ಚಿಂತನೆಯಲ್ಲಿ ತಾತ್ವಿಕ ಖಚಿತತೆ, ವೈಚಾರಿಕ ಪ್ರಖರತೆಗಳು ಇರುತ್ತವೆ. ಆದರೆ ಅವುಗಳಲ್ಲಿ ಜನಸಮುದಾಯ ಸಹವಾಸದಿಂದ ಬಂದಿರುವ ಆಯಾಮಗಳು ಕಡಿಮೆ. ಇದಕ್ಕೆ ಕಾರಣ, ಅವರು ಹಾದಿಬೀದಿಗಳ ಬಗ್ಗೆ ಹಾಗೂ ಜನಸಮುದಾಯಗಳ ಬಗ್ಗೆ ಆಳದಲ್ಲಿ ಇರಿಸಿ ಕೊಂಡಿರುವ ಈ ನೇತ್ಯಾತ್ಮಕ ನಿಲುವೂ ಸಹ ಕಾರಣ ಇದ್ದೀತು.

ದಲಿತ ಸಂಘರ್ಷ ಸಮಿತಿಯ ಜತೆಗಿನ ನನ್ನ ಸಂಬಂಧದ ಬಗ್ಗೆ ನಾಗಭೂಷಣ ಅನುಮಾನ ವ್ಯಕ್ತಮಾಡಿದ್ದಾರೆ. ಬಿ. ಕೃಷ್ಣಪ್ಪನವರು ರೂಪಿಸಿದ ಡಿಎಸ್ಎಸ್ ಹೋರಾಟಗಳಲ್ಲಿ ಭಾಗವಹಿಸಿರುವ ತಃಖ್ತೆಯನ್ನು ಕೊಡುವುದು ಕಷ್ಟವಾಗುತ್ತದೆ. ಇದರಿಂದ ಆ ಚಳುವಳಿಗಳಿಗೂ ಅಪಮಾನವಾಗುತ್ತದೆ. ಆದರೆ ಒಬ್ಬ ಅಧ್ಯಾಪಕನಾಗಿ ನನ್ನ ಮಿತಿಯಲ್ಲಿ ಭಾಗವಹಿಸಿದ ಯಾವ ಮಾಸ್ ಮೂವ್‌ಮೆಂಟಿನಲ್ಲಿಯೂ ನಾಗಭೂಷಣ ಅವರನ್ನು ಕಂಡಂತಿಲ್ಲ. ಅಥವಾ ಅವರು ಭಾಗವಹಿಸಿದ ಚಳುವಳಿಗಳಲ್ಲಿ ನಾನು ಹೋಗಿಲ್ಲವೋ? ನೈತಿಕ ಅಹಂಕಾರದಿಂದ ಬರೆಯುವ ನಾಗಭೂಷಣ ಅವರಿಗೆ ಮತ್ತೊಬ್ಬರ ಪ್ರಾಮಾಣಿಕತೆಯನ್ನು ಪ್ರಶ್ನಿಸುವುದು ಮತ್ತು ತಿರಸ್ಕರಿಸುವುದು ಸುಲಭವಾಗಿಬಿಟ್ಟಿದೆ.

ಗೋಪಾಲಗೌಡರು ಕರ್ನಾಟಕ ಕಂಡ ಅಪರೂಪದ ಆದರ್ಶವಾದಿ ರಾಜಕಾರಣಿ. ನನ್ನ ತಲೆಮಾರಿನವರು ಅವರ ಬಗ್ಗೆ ಇನ್ನೂ ಅಧ್ಯಯನ ಮಾಡುವುದಿದೆ. ಆದರೆ ಕೊನೆಯ ದಿನಗಳಲ್ಲಿ ರಾಜಕೀಯವಾಗಿ ಅವರು ತೆಗೆದುಕೊಂಡ ಕೆಲವು ತೀರ್ಮಾನಗಳು ಸರಿಯಾಗಿರಲಿಲ್ಲವೆಂದು ಅವರ ಸಂಗಾತಿಗಳು ಬರೆದಿದ್ದಾರೆ. ನೀಲಗಂಗಯ್ಯ ಪೂಜಾರ ಅವರು ನನಗೆ ಕೊಟ್ಟಿರುವ ತಮ್ಮ ಸಂದರ್ಶನದಲ್ಲಿ ಗೋಪಾಲಗೌಡರು ಗುಡಿಬಂಡೆಯ ಬಿ. ನಾರಾಯಣರೆಡ್ಡಿ ಎಂಬ ದೊಡ್ಡ ಜಮೀನುದಾರರನ್ನು ಸ್ವತಂತ್ರ ಅಭ್ಯರ್ಥಿಯಾಗಿ ರಾಜ್ಯಸಭೆಗೆ ನಿಲ್ಲಿಸಿ ಅವರ ಪರವಾಗಿ ಕ್ಯಾಂಪೇನ್ ಮಾಡಲು ಬಂದಿದ್ದರೆಂತಲೂ ಅದನ್ನು ತಾವು ವಿರೋಧಿಸಿದರೆಂತಲೂ ಹೇಳಿದರು (ಆಸಕ್ತರು 'ಲೋಕ ವಿರೋಧಿಗಳ ಜತೆಯಲ್ಲಿ' ಕೃತಿಯನ್ನು ನೋಡಬಹುದು.) ರೈತ ಸಂಘದಲ್ಲಿ ದಲಿತರ ಭಾಗವಹಿಸುವಿಕೆ ಕುರಿತು "ರೈತ ಸಂಘದ ಪರವಾಗಿ ಕಡಿದಾಳು ಶಾಮಣ್ಣನವರನ್ನೂ, ದಸಂಸದ ಪರವಾಗಿ ಕೆ.ಬಿ.ಸಿದ್ಧಯ್ಯನವರನ್ನೂ ಕೇಳಿದರೆ ವಾಸ್ತವ ಗೊತ್ತಾಗುತ್ತದೆ" ಎಂದು ನಾಗಭೂಷಣ ಹೇಳಿದ್ದಾರೆ. ನಾನು ಶಾಮಣ್ಣನವರಿಗೆ ಕೇಳಿದ್ದೆ. ಅದಕ್ಕವರು ತಮ್ಮ ಸಂದರ್ಶನಲ್ಲಿ ಹೇಳಿದ ಮಾತುಗಳಿವು:

ಪ್ರಶ್ನೆ: ಕಾಗೋಡು ಸತ್ಯಾಗ್ರಹದಲ್ಲಿ ಕಾಣಿಸಿಕೊಂಡಿದ್ದ ಸಮಾಜವಾದಿ ಚೈತನ್ಯ ಮತ್ತೆ ಕಾಣಿಸಿಕೊಂಡಿದ್ದು ಈ ರೈತಚಳುವಳಿಯಲ್ಲಿ ಅನ್ಸುತ್ತಾ?

ಶಾಮಣ್ಣ: ಖಂಡಿತಾ ಹೌದು. ಮತ್ತೆ ಸಮಾಜವಾದಿ ಚಳುವಳೀನ ಇನ್ನೂ ಶಕ್ತಿಯುತವಾಗಿ ನಡ್ಸೋಕೆ ಸಾಧ್ಯವಾಗ್ತಾ ಇದೆ ಅಂತಾನೇ ಅನಿಸ್ತಿತ್ತು ನಮಿಗೆ.

ಪ್ರಶ್ನೆ: ಆದರೆ ಕಾಗೋಡು ಸತ್ಯಾಗ್ರಹ ಗೇಣೀರೈತರ ಕೇಂದ್ರದಲ್ಲಿದ್ದಂತೆ, ಈ ರೈತಚಳುವಳಿ ಆಗಲಿಲ್ಲ. ಇದು ದೊಡ್ಡರೈತರ ಚಳುವಳಿ.

ಶಾಮಣ್ಣ: ಹ್ಞೂ (ನಿಟ್ಟುಸಿರು ಬಿಡುತ್ತಾ) ನಿಜ ನಿಜ. ನಮ್ಮ ಗಹಚಾರಕ್ಕೆ ಎಲ್ಲಾ ಅವರೇ ಸೇರಕೊಂಡ್ರು. ಯಾಕಂದ್ರೆ ಲಾಭ ಮಾಡ್ಕೋಬೇಕಾಗಿತ್ತು. ಹೋರಾಟದಲ್ಲಿ ಇದೆಲ್ಲ ಇದ್ದದ್ದೇ. ಸಾಲಮನ್ನಾ, ವೈಜ್ಞಾನಿಕವಾದ ಬೆಲೆ ನೀತಿ ಇವೆಲ್ಲವೂ ಹೌದು. ಜತೆಜತೆಗೆ ಕೃಷಿಕಾರ್ಮಿಕರಿಗೆ ನ್ಯಾಯವಾದ ವೇತನ, ಅವರಿಗೂ ಜಮೀನ್ ಕೊಡಬೇಕು ಅನ್ನೋ ಹೋರಾಟಾನ, ಸೋಶಿಯಲಿಸ್ಟ್ ಪಾರ್ಟಿ ಮಾಡಿದಷ್ಟು ಪ್ರಾಮಾಣಿಕವಾಗಿ ನಾವು ಮಾಡ್ಲಿಲ್ಲ. ಅದ್ದರಿಂದ ದೊಡ್ಡ ಭೂಮಾಲಿಕರು ಇಲ್ಲಿ ಹೆಚ್ಚಿದ್ದಾರೆ ಅನ್ನೋ ಮಾತು ಇದೆಯಲ್ಲಾ, ಸತ್ಯ ಅದು. ನಮಗೆ ಇದು ಅನಿಸ್ತಾನೇ ಇತ್ತು. ಏನಾಯ್ತು ಅಂತ್ಹೇಳಿದ್ರೆ, ಜನಾನ್ತಗೊಂಡು ಹೋಗೋಕೆ ಒಂದೋ ಒಕ್ಕಲಿಗರು ಇಲ್ಲಾ ಲಿಂಗಾಯತರು ಬಿಟ್ಟ ಬೇರೆ ಯಾರೂ ಇಲ್ಲ. ಬೇರೆಯವರು ನಮ್ಮ ಜತೆ ಬರಲೇ ಇಲ್ಲ ಕಂಡ್ರಿ.

ನಾಗಭೂಷಣ ಅವರು ನಾನು ಹಾದಿಬದಿಯ ಮತ್ತು ರಾಜಕೀಯ ಚಾಡಿಕೋರರ ಮಾತುಗಳನ್ನು ಕೇಳಿಕೊಂಡು ಬರೆದವನು ಎನ್ನುತ್ತಾರೆ. ಇದನ್ನು ನಾನು ಕೆಲಮಟ್ಟಿಗೆ ಒಪ್ಪುತ್ತೇನೆ. ಆದರೆ ನಾನು ಕೇಳಿಸಿಕೊಂಡಿರುವ ಮಾತುಗಳನ್ನಾಡಿದವರು ಕಡಿದಾಳು ಶಾಮಣ್ಣ, ನೀಲಗಂಗಯ್ಯ ಪೂಜಾರ, ನಂಜುಂಡಸ್ವಾಮಿ, ದೇವನೂರ ಮಹಾದೇವ ಮುಂತಾದವರು. ಇವರ ಜತೆಗೆ ನಾನು ಮಾಡಿದ ಮಾತು ಕತೆಗಳೇ ಈ ಲೇಖನ ಬರೆಯಲು ಅರ್ಧ ಕಾರಣ. ಹಾದಿಬದಿ ಎಂಬ ಶಬ್ದವನ್ನು ನಾಗಭೂಷಣ ತುಚ್ಛ ದನಿಯಲ್ಲಿ ಬಳಸಿದ್ದಾರೆ.

ಪ್ರಶ್ನೆ: ದಲಿತ ಸಂಘರ್ಷ ಸಮಿತಿ ಜತೆಗೂ ಯಾವುದೇ ಸಂಬಂಧ ಆಗಲಿಲ್ಲ?

ಶಾಮಣ್ಣ: ಊಹೂಂ.. ಪ್ರತಿಯೊಂದು ಊರಲ್ಲೂನೂ ಕೃಷಿ ಕಾರ್ಮಿಕರು ಇವರೆಲ್ಲ ಯಾರ್ಲೇಳಿ? ದಲಿತು ಹೌದಾ? ಅದೆಂಗ್ ಬರತಾರೆ ನಮ್‌ಜತಿಗ್ ಅವ್ರು? ಅದಿಕ್ಕೇ ಹೇಳಿದ್ದು ಆಯಾ ವರ್ಗದಿಂದಲೇ ಲೀಡರ್ಸ್‌ಗಳನ್ನ ತಗೋಬೇಕು ನಾವು ಅಂತ. ರೈತ ಸಂಘದ ಅಧ್ಯಕ್ಷರು, ಕಾರ್ಯದರ್ಶಿ ಎಲ್ಲಾ ದಲಿತರನ್ನ ತಗೋಬೇಕು. ಒಬ್ಬ ಮುಸ್ಲಿಂನ ತಗೋಬೇಕು.. ಇವೆಲ್ಲ ನಮ್ಮಲ್ಲಿ ಇಲ್ವೇ ಇಲ್ಲ.

ಶಾಮಣ್ಣನವರ ಮೇಲಿನ ಮಾತುಗಳು ತಮಗೆ ತಾವೇ ಸ್ವಷ್ಟವಾಗಿವೆ. ಇಷ್ಟಕ್ಕೂ ಈ ಮಾತುಗಳನ್ನು ಮತ್ತಷ್ಟು ಪರಿಶೀಲಿಸುವ ಅಗತ್ಯವಿದೆ ಎಂದು ನನಗೂ ಅನಿಸುತ್ತಿದೆ. ಬಂಡಾಯ ಸಂಘಟನೆಯಿಂದ ನನಗೆ ಭಂಡತನ ಬಂದಿದೆ ಎಂದು ನಾಗಭೂಷಣ ಹೇಳಿದ್ದಾರೆ. ಲಂಕೇಶ್ ಅವರು ಬಂಡಾಯವನ್ನು ಡಂಬಾಯ ಎಂದು ಗೇಲಿಮಾಡುತ್ತಿದ್ದಂತೆ, ನಾಗಭೂಷಣ ಅವರು ಬಂಡಾಯ =ಭಂಡತನ ಎಂಬ ಸಮೀಕರಣ ಮಾಡಿದ್ದಾರೆ. ಸಮಾಜವಾದಿಗಳನ್ನು ಸಮಜವ್ವಾದಿಗಳು ಎಂದು ಕೆಲವರು ಕರೆದಿರುವುದುಂಟು. ಹೀಗೆ ಶಬ್ದಚಾತುರ್ಯದಿಂದ ಗೇಲಿ ಮಾಡುವುದು ಅಗ್ಗದ ವಿಧಾನ. ಆಯಾ ಚಳುವಳಿಗಳ ಬಗ್ಗೆ ನೇರವಾಗಿ ಸೈದ್ಧಾಂತಿಕವಾಗಿ ವಿಮರ್ಶೆ ಮಾಡುವುದು ಉಚಿತ. ಎಲ್ಲ ಸಂಘಟನೆ- ಚಳುವಳಿಗಳಲ್ಲಿ ಹಲವು ಬಗೆಯ ನಿದರ್ಶನಗಳು ವ್ಯಕ್ತಿತ್ವಗಳು ರೂಪುಗೊಳ್ಳುತ್ತವೆ. ನಮಗೆ ಬೇಕಾದ ನಿದರ್ಶನಗಳನ್ನು ಹೆಕ್ಕಿ ಇಟ್ಟುಕೊಂಡು ಇಡೀ ಸಂಘಟನೆಯ ಚಳುವಳಿಯನ್ನು ಬೀಸುಹೇಳಿಕೆಯಲ್ಲಿ ದುರುಳೀಕರಿಸುವುದು ತಪ್ಪು. ನಾಗಭೂಷಣ ಅವರ ತರ್ಕವನ್ನೇ ಅನುಸರಿಸಿ ಕೇಳುವುದಾದರೆ, ಬಂಡಾಯ ಚಳುವಳಿಯಿಂದ ನನ್ನಲ್ಲಿ ಭಂಡತನವು ಬಂದು ಸೇರಿದ್ದರೆ, ಅದರ ಒಂದು ಪಾಲನ್ನು ಆ ಚಳುವಳಿಯನ್ನು ರೂಪಿಸುವಲ್ಲಿ ಭಾಗವಹಿಸಿದ್ದ ಸಮಾಜವಾದಿಗಳಿಗೂ ಹಂಚಿಕೆ ಮಾಡಲು ಬಯಸಿದ್ದಾರೇನು?

ಅನಂತಮೂರ್ತಿ - ತೇಜಸ್ವಿಯವರು ಕುವೆಂಪು ಅವರಂತೆ 'ಚೈತನ್ಯಶೀಲ ಸ್ತ್ರೀಪಾತ್ರಗಳನ್ನು" ಚಿತ್ರಿಸುವುದಕ್ಕೆ ಸಾಧ್ಯವಾಗಲಿಲ್ಲ ಎಂಬ ನನ್ನ ಹೇಳಿಕೆಯನ್ನು ಒಪ್ಪುವುದು ಕಷ್ಟ ಎಂದು ನಾಗಭೂಷಣ ಹೇಳಿದ್ದಾರೆ. ಅವರ ಅಭಿಪ್ರಾಯವನ್ನು ನಾನು ಗೌರವಿಸುತ್ತೇನೆ. ನನ್ನ ನಿಲುವನ್ನು ಬದಲಿಸಿಕೊಳ್ಳುವ ಸನ್ನಿವೇಶ ಇನ್ನೂ ಬಂದಿಲ್ಲ.

ತೇಜಸ್ವಿಯವರು ಲೋಹಿಯಾವಾದಿ ಎಂಬ ಕಾರಣದಿಂದಲ್ಲ, ಅಪೂರ್ವ ಬಗೆಯ ಬರವಣಿಗೆಯ ಕಾರಣಕ್ಕಾಗಿ ಅವರು ನನ್ನ ಪ್ರೀತಿಯ ಲೇಖಕ. ನಾನು ಅವರ ಬಗ್ಗೆ ನಾನಾ ಕಾರಣದಿಂದ ಹೆಚ್ಚು ಸಲ ಮಾತಾಡಿದ್ದೇನೆ ಮತ್ತು ಬರೆದಿದ್ದೇನೆ. ಕಾರಣ, ಅವರು ನನ್ನ ಪ್ರಜ್ಞೆಯನ್ನು ರೂಪಿಸಿದ ಲೇಖಕರಲ್ಲಿ ಮುಖ್ಯರಾದವರು. ಆದರೂ ಅವರ ಕೃತಿಗಳನ್ನು ಓದುವಾಗ ನನಗೆ ಆ ಪ್ರಶ್ನೆ ಕಾಡುತ್ತದೆ. ನಾನು ಶಿವಮೊಗ್ಗೆಯಲ್ಲಿ 'ಮಾಯಾಲೋಕ' ಬಂದ ಹೊಸತರಲ್ಲಿ ಅದನ್ನು ಕುರಿತು ಮಾಡಿದ ಉಪನ್ಯಾಸದಲ್ಲಿ ತೇಜಸ್ವಿಯವರ ಬರೆಹದಲ್ಲಿ ಯಾಕೆ ಕುವೆಂಪು ಅವರಂತೆ ಧೀಮಂತ ಮಹಿಳೆಯರ ಪಾತ್ರಗಳಿಲ್ಲ ಎಂದು ಪ್ರಶ್ನೆಯನ್ನು ಎತ್ತಿದ್ದೆ. ಆಗ ಸಭೆಯಲ್ಲಿದ್ದ ನಾಗಭೂಷಣ ಅದೊಂದು ಮಹತ್ವದ ಪ್ರಶ್ನೆಯೇ ಅಲ್ಲವೆಂದು ಅಲ್ಲಗಳೆದರು. ಆಗ ನಾನು ಕೊಂಚ ತಮಾಷೆಯ ದನಿಯಲ್ಲಿ 'ನಾಗಭೂಷಣ, ನಿಮ್ಮ ಪಕ್ಕ ಸವಿತಾ ಕೂತಿದ್ದಾರೆ. ನಿಮಗೇ ಇದು ಮಹತ್ವದ ಪ್ರಶ್ನೆಯಲ್ಲವೆನಿಸಿರುವುದು ನನಗೆ ಸೋಜಿಗ' ಎಂದೆ. ಅನಂತರ ಈ ವಾಗ್ವಾದ ಕುರಿತು 'ಅಗ್ನಿ' ಪತ್ರಿಕೆಯಲ್ಲಿ ನಾಗಭೂಷಣ ಅವರು ಒಳ್ಳೆಯ ಒಂದು ಟಿಪ್ಪಣಿಯನ್ನು ಸಹ ಬರೆದರು.

ಕೆಲವರ ಕೃತಿಗಳಲ್ಲಿ ನಿರ್ದಿಷ್ಟ ಪಾತ್ರಗಳು ಹಾಜರಾತಿ ಗೈರುಹಾಜರಾತಿ ಅಥವಾ ನಿರ್ದಿಷ್ಟ ಮಾದರಿಯಲ್ಲಿ ಕಾಣಿಸಿಕೊಳ್ಳುವುದು ಇವೆಲ್ಲ ಆ ಕೃತಿಗಳನ್ನು ಅರ್ಥಮಾಡಿಕೊಳ್ಳುವ ವಿಧಾನಗಳಲ್ಲಿ ಕೆಲವು. ಇವನ್ನು ನಾನಾದರೂ ಲೇಖಕರನ್ನು ಕಟಕಟೆಯಲ್ಲಿ ನಿಲ್ಲಿಸುವ ಪ್ರಶ್ನೆಯನ್ನಾಗಿ ಎತ್ತದೆ, ಅವರ ಬರೆಹವನ್ನು ಸಾಂಸ್ಕೃತಿಕವಾಗಿ ಅರ್ಥಮಾಡಿಕೊಳ್ಳುವ ಭಾಗವಾಗಿ ಎತ್ತಲು ಯತ್ನಿಸಿರುವೆ. ತೇಜಸ್ವಿಯವರ ಮತ್ತು ನವ್ಯದ ಕುಲುಮೆಯಲ್ಲಿ ರೂಪುಗೊಂಡ ಅನೇಕ ಲೇಖಕರ ದೃಷ್ಟಿಕೋನದಲ್ಲಿಯೇ ಪುರುಷವಾದಿ ನಿಲುವಿದೆ. (ಶಾಂತಿನಾಥ ದೇಸಾಯಿ ಮುಂತಾದ ಕೆಲವರನ್ನು ಬಿಟ್ಟು). ನಾಗಭೂಷಣ ಅವರ ಚಿಂತನೆಗಳಲ್ಲೂ ಈ ಸಮಸ್ಯೆಯಿದೆ.

(ಇಂತಹದೊಂದು ಸಾಲು ನಾಗಭೂಷಣ ಅವರು ಅವರ ಪ್ರತಿಕ್ರಿಯೆಯಿರುವ 'ಸಂವಾದ' ಸಂಚಿಕೆಯಲ್ಲೇ ಸಿ.ಜಿ. ಲಕ್ಷ್ಮೀಪತಿಯವರಿಗೆ ಬರೆದಿರುವ ಪ್ರತಿಕ್ರಿಯೆಯಲ್ಲೂ ಉಳಿದುಕೊಂಡಿದೆ.) ನನ್ನನ್ನು ಒಳಗೊಂಡಂತೆ, ನಾವು ಪುರುಷರು ಎಷ್ಟೇ ಪ್ರಗತಿಪರರಾದರೂ, ನಮ್ಮ ಕ್ರಿಯೆ ಮತ್ತು ಬರೆಹದಲ್ಲಿ ಪುರುಷವಾದಿ ಮನೋಧರ್ಮದಿಂದ ಬಿಡುಗಡೆಯಾಗದ ಹಲವು ಅಂಶಗಳು ಉಳಿದುಬಿಟ್ಟಿರುತ್ತವೆ. ಅವನ್ನು ನಾವು ಆತ್ಮವಿಮರ್ಶೆಗೆ ಒಳಪಡಿಸಿಕೊಳ್ಳುತ್ತಲೇ ಮೀರುವುದು ಸಾಧ್ಯವಾಗಬೇಕು. ಈಗ ನಮ್ಮ ದೊಡ್ಡದೊಡ್ಡ ಲೇಖಕರನ್ನು ಅರ್ಥಮಾಡಿಕೊಳ್ಳಲು ಪುನರ್ ಮೌಲ್ಯೀಕರಣ ಮಾಡಲು ದಲಿತ ಮತ್ತು ಮಹಿಳಾ ದೃಷ್ಟಿಕೋನ ಅಥವಾ ಸಂವೇದನೆಗಳು ಬೇರೆಬೇರೆ ಬಗೆಯ ಪ್ರಶ್ನೆಗಳನ್ನು ಎತ್ತಲಾಗುತ್ತಿವೆ. ಅವು ಸಾಹಿತ್ಯಕವಾಗಿ ಕೊಂಚ ಅಸೂಕ್ಷ್ಮ ಅನಿಸುತ್ತವೆ. ಆದರೆ ಆ ತಾತ್ವಿಕ ಪ್ರಶ್ನೆಗಳನ್ನು ಸರಳವಾಗಿ ನಿರಾಕರಿಸಲಾಗದು. ಕಪ್ಪು ಜನರು ಯೂರೋಪಿಯನ್ ಸಾಹಿತ್ಯದ ಶ್ರೇಷ್ಠ ಕೃತಿಗಳ ಮೇಲೂ ಇಂತಹ ಸಮುದಾಯನಿಷ್ಠ ಪ್ರಶ್ನೆಗಳನ್ನೇ ಎತ್ತಿ ತಮ್ಮ ಚಳುವಳಿ ಮತ್ತು ಚಿಂತನೆಗಳಿಗೆ ಚಲನಶೀಲತೆಯನ್ನು ತಂದುಕೊಂಡರು ಎಂಬುದನ್ನು ಮರೆಯುವಂತಿಲ್ಲ.

ಕುವೆಂಪು "ದಲಿತರ ನಾಯಿಯನ್ನು ಸುಂದರವಾಗಿ ಚಿತ್ರಿಸಿಲ್ಲ" ಎಂದು ನಾಗಭೂಷಣ ಕೊಂಕು ಮಾತು ಆಡಿದ್ದಾರೆ. ಕುವೆಂಪು ಅವರ ಬಗ್ಗೆ ಈ ಮಾತನ್ನು ಆಡಿದವರು ಯಾರು? ಸ್ವತಃ ಬಿ.ಕೃಷ್ಣಪ್ಪನವರಾದರೂ ತಿಮ್ಮಪ್ಪ ಹೆಗ್ಗಡೆ ದಲಿತ ಮಹಿಳೆಯರೊಂದಿಗೆ ಮಲಗುವುದು, ಚೀನೀ ನಾಯಿಯೊಂದುದದ್ದು ಹಿಡಿದ ನಾಯಿಗಳ ಜತೆ ಹೋಗುವಂತೆ ಎಂದು ಕಾದಂಬರಿ ಹೋಲಿಕೆ ಮಾಡುವ ಹಿಂದಿನ ಮನೋಧರ್ಮವನ್ನು ಪ್ರಶ್ನಿಸಿದ್ದರು. ಅವರ ಲೇಖನವು ಕುವೆಂಪು ಕೃತಿಗಳನ್ನು ಪ್ರವೇಶಿಸುವುದಕ್ಕೆ - ಅರ್ಥಮಾಡಿಕೊಳ್ಳುವುದಕ್ಕೆ ಇಡಿಯಾದ ಹಾದಿಯನ್ನೇನು ಕೊಡುವುದಿಲ್ಲ. ಆದರೆ ಅವರು ಎತ್ತಿರುವ ಪ್ರಶ್ನೆಗಳು ಕುವೆಂಪು ಅವರನ್ನು ಮಾತ್ರವಲ್ಲ, ಇಡೀ ಸಾಹಿತ್ಯವನ್ನೇ ನೋಡುವ ಹೊಸ ಕೋನವೊಂದನ್ನು ಒಳಗೊಂಡಿವೆ.

ಲಂಕೇಶ್ ತೇಜಸ್ವಿಯವರ ರಾಜಕೀಯ ನಿಲುವುಗಳ ಬಗ್ಗೆ ನಾನು ಮಾಡಿರುವ ಟೀಕೆಗಳನ್ನು ನಿರಾಕರಿಸುತ್ತ ನಾಗಭೂಷಣ ಅವರು "ಮೂಲತಃ ಸೃಜನಶೀಲ ಲೇಖಕ'ರೆಂದೂ ಅವರಿಗೆ ತಮ್ಮದೇ ಆದ ತಳಮಳದ ನೆಲೆಯೊಂದಿರುತ್ತದೆ"ಯೆಂದೂ ಹೇಳಿದ್ದಾರೆ. ಇದು 'ಸೃಜನಶೀಲ' ಸಾಹಿತ್ಯದ ಚರ್ಚೆಯಲ್ಲಿ ಖಂಡಿತಕ್ಕೂ ಮರೆಯಬಾರದ ಸಂಗತಿ. (ಸೃಜನಶೀಲ ಸೃಜನೇತರ ಎಂಬ ಜಾತಿಭೇದದಂತಿರುವ ಬೈನರಿ ವಿರೋಧದ ಪರಿಕಲ್ಪನೆಗಳ ಬಗ್ಗೆ ನನಗೆ ತಕರಾರಿದೆ. ಅದರ ಬಗ್ಗೆ ಒಂದು ಲೇಖನವನ್ನೂ ಬರೆದಿದ್ದೇನೆ. ಅದಿರಲಿ.) ಆದರೆ 'ಸೃಜನಶೀಲ' ಎನ್ನಲಾಗುವ ಕೃತಿಗಳಲ್ಲಿಯೂ ರಾಜಕಾರಣದ ನೆಲೆಯೊಂದು- ಅದು ಅಭಿವ್ಯಕ್ತವಾಗುವ ನೆಲೆ ವಿಶಿಷ್ಟವಾಗಿದ್ದರೂ- ಇರುತ್ತದೆ. ಅದು ವಿಮರ್ಶೆಗೆ ಅತೀತವಲ್ಲ.

ಯಾವ ಅರ್ಥದಲ್ಲೂ ಲಂಕೇಶ್ ತೇಜಸ್ವಿಯವರಿಗೆ ಹೋಲಿಸಲು ಸಾಧ್ಯವಿಲ್ಲ ಎಂದು ಖುಬರಿನಲ್ಲಿ ಹೇಳಬೇಕೆಂದರೆ, ಈ ತರ್ಕದಲ್ಲಿ ಭೈರಪ್ಪನವರ 'ಆವರಣ' 'ಕವಲು' ತರಹದ ಕೃತಿಗಳ ಒಳಗಿರುವ ರಾಜಕಾರಣದ ನೆಲೆಯನ್ನು ವಿಮರ್ಶಿಸುವುದೇ ಕಷ್ಟವಾಗಿಬಿಡಬಹುದು. ಸ್ವತಃ ನಾಗಭೂಷಣ ಅವರು 'ಸೃಜನಶೀಲ' ಸಾಹಿತ್ಯ ಕೃತಿಗಳ ಚರ್ಚೆ ಮಾಡುವಾಗ ಅವುಗಳಲ್ಲಿರುವ ರಾಜಕೀಯ ನೆಲೆಗಳನ್ನು ಶೋಧಿಸಿ ಚರ್ಚಿಸಿದ್ದಾರೆ. ಇಷ್ಟಕ್ಕೂ ನಾನು ನನ್ನ ಲೇಖನದಲ್ಲಿ ಚರ್ಚಿಸಿರುವುದು ಲಂಕೇಶ್ ತೇಜಸ್ವಿಯವರ 'ಸೃಜನಶೀಲ' ಕೃತಿಗಳ ಒಳಗಿನ ರಾಜಕೀಯ ನಿಲುವುಗಳನ್ನಲ್ಲ. ಅವರು ಚಿಂತಕರಾಗಿ ಸಾರ್ವಜನಿಕ ವ್ಯಕ್ತಿಗಳಾಗಿ ಕೊಟ್ಟಿರುವ ರಾಜಕೀಯ ಹೇಳಿಕೆ ಮತ್ತು ಅವರ ರಾಜಕೀಯ ವಿಶ್ಲೇಷಣೆಗಳಲ್ಲಿ ವ್ಯಕ್ತವಾಗಿರುವ ರಾಜಕೀಯ ಚಿಂತನೆಯನ್ನು. ಯೂರೋಪಿನ ಅದರಲ್ಲೂ ಅಮೆರಿಕದ ಬಂಡವಾಳಶಾಹಿಯ ದಕ್ಷತೆ ಯಶಸ್ಸುಗಳನ್ನು ಕುರಿತು ಲಂಕೇಶ್ ಹಾಗೂ ತೇಜಸ್ವಿ ಅವರು ಮಾಡಿರುವ ಹಲವಾರು ಹೇಳಿಕೆಗಳಿದ್ದು, ಅವು ಅವರ ಅರ್ಥೋ ರಾಜಕೀಯ ಗ್ರಹಿಕೆಯ ಪರಿಮಿತಿಗಳನ್ನು ಒಳಗೊಂಡಿವೆ ಎಂದು ನನಗೆ ಅನಿಸಿಕೆ. ತೇಜಸ್ವಿಯವರಂತೂ 1992ರಲ್ಲಿ ಉದಾರವಾದಿ ಆರ್ಥಿಕ ನೀತಿಯನ್ನು ಭಾರತವು ರಾಜ್ಯನೀತಿಯನ್ನಾಗಿ ಘೋಷಿಸಿದಾಗ, ಒಂದು ಸ್ಕೂಟರ್ ಪಡೆಯಲು ಹಣಕಟ್ಟಿ ವರ್ಷಾನುಗಟ್ಟಲೆ ಕಾಯಬೇಕಾದ ದುರವಸ್ಥೆಯಿಂದ ಬಿಡುಗಡೆ ಪಡೆಯುವ ಕಾಲ ಬಂದಿದೆ ಎಂಬರ್ಥದಲ್ಲಿ ಅದನ್ನು ಸ್ವಾಗತಿಸಿದ್ದರು.

ಕುವೆಂಪು "ದಲಿತರ ನಾಯಿಯನ್ನು ಸುಂದರವಾಗಿ ಚಿತ್ರಿಸಿಲ್ಲ" ಎಂದು ನಾಗಭೂಷಣ ಕೊಂಕು ಮಾತು ಆಡಿದ್ದಾರೆ. ಕುವೆಂಪು ಅವರ ಬಗ್ಗೆ ಈ ಮಾತನ್ನು ಆಡಿದವರು ಯಾರು? ಸ್ವತಃ ಬಿ.ಕೃಷ್ಣಪ್ಪನವರಾದರೂ ತಿಮ್ಮಪ್ಪ ಹೆಗ್ಗಡೆ ದಲಿತ ಮಹಿಳೆಯರೊಂದಿಗೆ ಮಲಗುವುದು, ಚೀನೀ ನಾಯಿಯೊಂದು ದದ್ದುಹಿಡಿದ ನಾಯಿಗಳ ಜತೆ ಹೋಗುವಂತೆ ಎಂದು ಕಾದಂಬರಿ ಹೋಲಿಕೆ ಮಾಡುವ ಹಿಂದಿನ ಮನೋಧರ್ಮವನ್ನು ಪ್ರಶ್ನಿಸಿದ್ದರು. ಅವರ

ಲೇಖನವು ಕುವೆಂಪು ಕೃತಿಗಳನ್ನು ಪ್ರವೇಶಿಸುವುದಕ್ಕೆ – ಅರ್ಥಮಾಡಿಕೊಳ್ಳುವುದಕ್ಕೆ ಇಡಿಯಾದ ಹಾದಿಯನ್ನೇನು ಕೊಡುವುದಿಲ್ಲ. ಆದರೆ ಅವರು ಅಲ್ಲಿ ಎತ್ತಿರುವ ಪ್ರಶ್ನೆಗಳು ಕುವೆಂಪು ಅವರನ್ನು ಮಾತ್ರವಲ್ಲ, ಇಡೀ ಸಾಹಿತ್ಯವನ್ನೇ ನೋಡುವ ಹೊಸ ಕೋನವೊಂದನ್ನು ಒಳಗೊಂಡಿವೆ. ಕನ್ನಡದಲ್ಲಿ ದಲಿತ ಸಾಹಿತ್ಯ ಚಿಂತನೆಯನ್ನು ರೂಪಿಸುವಲ್ಲಿ ಪಾತ್ರವಹಿಸಿದ ಚಾರಿತ್ರಿಕ ಮಹತ್ವದ ಬರೆಹಗಳಲ್ಲಿ ಒಂದಾದ ಅದನ್ನು ಗೇಲಿಗೊಳಿಸುವುದು ನ್ಯಾಯವಲ್ಲ.

“ಮುಸ್ಲಿಮರು ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್ ರಾಜಕಾರಣಗಳ ಹೊರತಾಗಿ ಇನ್ನಾವ ರಾಜಕಾರಣದಲ್ಲಿ (ಈಗ ಬಿಡಿ, ಅವರು ಭಾಗವಹಿಸುತ್ತಿರುವ ಇನ್ನೂ ಹಲವಾರು ರೀತಿಯ ರಾಜಕಾರಣಗಳು ಹುಟ್ಟಿಕೊಂಡಿವೆ!) ಭಾಗವಹಿಸಿದ್ದಾರೆ?” ಎಂದು ನಾಗಭೂಷಣ ವ್ಯಂಗ್ಯವಾಗಿ ಕೇಳಿದ್ದಾರೆ. ಅದೇ ಪ್ರತಿಕ್ರಿಯೆಯಲ್ಲಿ ಸಮಾಜವಾದಿ ಚಳುವಳಿಯಲ್ಲಿ ಭಾಗವಹಿಸಿದ ಮುಸ್ಲಿಮರ ಪಟ್ಟಿಯನ್ನು ಸಹ ಅವರು ಕೊಡುತ್ತಾರೆ. ತಮ್ಮ ಮೊದಲನೇ ಹೇಳಿಕೆಯನ್ನು ನಾಗಭೂಷಣ ತಮ್ಮ ಎರಡನೇ ಹೇಳಿಕೆಯ ಮೂಲಕ ತಾವೇ ಹೊಡೆದುಹಾಕುತ್ತಿದ್ದಾರೆಯೆ? ಸಮುದಾಯವೊಂದರ ರಾಜಕೀಯ ಭಾಗವಹಿಸುವಿಕೆಯ ರಾಜಕೀಯ ವಿಶ್ಲೇಷಣೆ ಒತ್ತಟ್ಟಿಗೆ ಇರಲಿ, ಅವರ ಮೊದಲನೇ ಹೇಳಿಕೆಯೊಳಗೆ ಇರುವ ವ್ಯಂಗ್ಯ ಮತ್ತು ಅಸಹನೆಗಳು ಮಾತ್ರ ಗಾಬರಿ ಹುಟ್ಟಿಸುತ್ತವೆ. ಮತೀಯವಾದಿಗಳು ಉದ್ದೇಶಪೂರ್ವಕವಾಗಿ ಶಕ್ತಿ ರಾಜಕಾರಣದ ಫಾಯದೆಗಳಿಗಾಗಿ ಮಾಡುವ ಜನಾಂಗದ್ವೇಷವನ್ನು ಮಾಡುವುದನ್ನು ಅರ್ಥಮಾಡಿಕೊಳ್ಳಬಹುದು. ಆದರೆ ಪ್ರಗತಿಪರ ಸಂಗಾತಿಗಳು ಮಾಡುವ ಜನಾಂಗದ್ವೇಷವು ನೋವು ಹುಟ್ಟಿಸುತ್ತದೆ.

ನಾಗಭೂಷಣ ಅವರು ಸಕಾರಣವಾಗಿಯೇ ಉದ್ದಕ್ಕೂ ಮುಸ್ಲಿಂ ಮೂಲಭೂತವಾದವನ್ನು ಕಟುವಾಗಿ ಟೀಕಿಸಿಕೊಂಡು ಬಂದಿದ್ದಾರೆ. ಆದರೆ ಅವರು ತಮ್ಮ ಲೇಖನಗಳಲ್ಲಿ ಮೂಲಭೂತವಾದದ ಜತೆಯಲ್ಲೇ ಇಡಿಯಾಗಿ ಒಂದು ಧಾರ್ಮಿಕ ಸಮುದಾಯವನ್ನೇ ಪೂರ್ವಗ್ರಹದಲ್ಲಿ ನೋಡುವುದನ್ನೂ ಮಾಡಿಕೊಂಡು ಬಂದಿದ್ದಾರೆ. ದಲಿತರು, ಮಹಿಳೆಯರು, ಮುಸ್ಲಿಂ ಸಮುದಾಯದಿಂದ ಬಂದ ಕೆಲವು ವ್ಯಕ್ತಿಗಳ ಬಗ್ಗೆ ನಾಗಭೂಷಣ ಅವರಲ್ಲಿ ಸ್ನೇಹದ ಸಂಬಂಧವಿರಬಹುದು.

ಆದರೆ ಈ ಸಮುದಾಯಗಳ ವಿಷಯದಲ್ಲಿ ಅವರಲ್ಲಿ ಒಂದು ಬಗೆಯ ಪೂರ್ವಗ್ರಹಿಕೆಯ ಕಹಿ ಯಾಕೊ ಉಳಿದುಬಿಟ್ಟಿದೆ. ಇದಕ್ಕೆ ಕಾರಣ ಅವರು ಹಾದಿಬೀದಿಗಳಲ್ಲಿ ತಿರುಗಾಡದಿರುವುದೂ ಒಂದು ಕಾರಣವಿರಬೇಕು. ಉತ್ತರ ಕರ್ನಾಟಕದ ಹಳ್ಳಿಗಳ ಮುಸ್ಲಿಮರ ಬದುಕನ್ನು ನೋಡಿದರೆ, ಇಸ್ಲಾಂ ಮತ್ತು ಮುಸ್ಲಿಂ ಸಮುದಾಯದ ಬಗೆಗೆ ವೈಚಾರಿಕ ಆಕೃತಿಗಳ ಮೂಲಕ ಕಟ್ಟಿಕೊಂಡಿರುವ ಗ್ರಹಿಕೆಗಳು ಬದಲಾಗುತ್ತವೆ. ನಾಗಭೂಷಣ ಅವರ ಬರೆಹಗಳಲ್ಲಿ ಚಿಂತನೆಯ ಪ್ರಖರತೆ ಇರುತ್ತದೆ. ಸೈದ್ಧಾಂತಿಕ ನೋಟಗಳಿರುತ್ತವೆ. ಆದರೆ ಜನ ಸಮುದಾಯದ ಒಡನಾಟದಿಂದ ಆ ಚಿಂತನೆ – ತಾತ್ವಿಕ ನೋಟಗಳಿಗೆ ಬರುವ ಆಯಾಮ ಇರುವುದಿಲ್ಲ. ಲೋಹಿಯಾ ಅವರನ್ನು ಓದಿದವರಿಗೆ ಈ ಆಯಾಮವೇನೆಂದು ಅರ್ಥವಾಗುತ್ತದೆ.

ನನ್ನನ್ನು ಮನಬಂದಂತೆ ಬೈದು ದಣಿದ ಬಳಿಕ ನಾಗಭೂಷಣ ಅವರಲ್ಲಿ ಕೊಂಚ ಸಹಾನುಭೂತಿ ಹುಟ್ಟಿದಂತಿದೆ. “ರಹಮತ್ ತರೀಕೆರೆಯವರಂತಹ ವಿದ್ವಾಂಸರಿಂದ, ಬುದ್ಧಿಜೀವಿಗಳಿಂದ ಜನತೆ ಇನ್ನಷ್ಟು ವಿಶ್ವಾಸಾರ್ಹವಾದ, ಗಂಭೀರವಾದ, ಸಮಚಿತ್ತದ ಮತ್ತು ಜವಾಬ್ದಾರಿಯುತವಾದ ರಾಜಕೀಯ ವಿಶ್ಲೇಷಣೆಗಳನ್ನು ನಿರೀಕ್ಷಿಸುತ್ತದೆ” ಎಂದು ಸಲಹೆ ಮಾಡಿದ್ದಾರೆ. ನನ್ನ ಬಗ್ಗೆ ಇಲ್ಲಿ ಎರಡು ಒಳ್ಳೆಯ ಮಾತಾದರೂ ಸಿಕ್ಕವಲ್ಲ ಎಂದು ನನಗೆ ಸಂತೋಷವಾಗಿದೆ. ಕರ್ನಾಟಕ ಅಧ್ಯಯನಗಳ ವಿದ್ಯಾರ್ಥಿಯಾಗಿ ಅವರು ನೀಡಿರುವ ಸಲಹೆಯನ್ನು ಒಪ್ಪಿಕೊಂಡಿದ್ದೇನೆ. ಅವರು ನೀಡಿರುವ ಮಾಹಿತಿಯನ್ನು ಅಳವಡಿಸಿಕೊಳ್ಳುತ್ತೇನೆ ಮತ್ತು ನನ್ನ ಅಭಿಪ್ರಾಯಗಳನ್ನು ಪುನರ್ ವಿಮರ್ಶೆ ಮಾಡುತ್ತೇನೆ.

ನಾಗಭೂಷಣ ಅವರ ಸ್ವಭಾವದಲ್ಲೇ ಇರುವ ಗುಣವೊ, ಅಥವಾ ನಮ್ಮ ಕಾಲದ ಒಟ್ಟು ಚಳುವಳಿಗಳಿಲ್ಲದ ಕ್ರಿಯಾಶೂನ್ಯ ಸ್ಥಿತಿಗಳೇ ಅವರಲ್ಲಿ ತಂದಿರುವ ಒಂದು ಬಗೆಯ ಹತಾಶೆಯೊ ತಿಳಿಯೆ. ಆದರೂ ಸಭ್ಯತೆ ಸಜ್ಜನಿಕೆಯ ಸೋಗಿನಲ್ಲಿ ಮೌನವಾಗಿರುವ ಪ್ರವೃತ್ತಿ ಬೆಳೆಯುತ್ತಿರುವ ನಮ್ಮ ಕಾಲದಲ್ಲಿ, ರಾಜಕೀಯವಾಗಿ ಸೈದ್ಧಾಂತಿಕವಾಗಿ ನೇರವಾಗಿ ದಿಟ್ಟವಾಗಿ ಪ್ರತಿಕ್ರಿಯಿಸುತ್ತಿರುವವರಲ್ಲಿ ಅವರೊಬ್ಬರು. ಆದರೆ ಅವರ ಈ ದಿಟ್ಟತನದಲ್ಲಿ ವೈಯಕ್ತಿಕವಾಗಿ ಹಲ್ಲೆ ಮಾಡುವ – ಎಲ್ಲವನ್ನು ಎಲ್ಲರನ್ನೂ ಪಂಥೀಯ ಚೌಕಟ್ಟಿನಲ್ಲಿಟ್ಟು ಮೆಚ್ಚುವ ತೆಗಳುವ ಸೆಕ್ಟೇರಿಯನ್ ಗುಣಗಳು ಸೇರಿಕೊಂಡಿವೆ. ಇವನ್ನು ಕಡಿಮೆಮಾಡಿಕೊಂಡರೆ ನನ್ನಂತಹ ಮೆಳ್ಳೆಗಣ್ಣಿನವರು ಅವರೊಡನೆ ಒಡನಾಡುವುದಕ್ಕೂ, ಸಂವಾದಮಾಡಿ ಕಲಿಯುವುದಕ್ಕೂ, ಸಮೂಹ ಚಳುವಳಿಗಳಲ್ಲಿ ಕಲೆತು ಕೆಲಸ ಮಾಡುವುದಕ್ಕೂ, ಅವರೇ ಹೇಳುವ “ಆರೋಗ್ಯಕರ ರಾಜಕಾರಣವನ್ನು ರೂಪಿಸುವ ಉತ್ತಮದಾರಿ”ಯನ್ನು ಹುಡುಕುವುದಕ್ಕೂ ಸಹಾಯಕವಾಗುತ್ತದೆ.

ಆದರೆ ತಿಳುವಳಿಕೆಯಲ್ಲೂ ವಯಸ್ಸಿನಲ್ಲೂ ಹಿರಿಯರಾಗಿರುವ ಅವರಿಗೆ ಇದೇ ಸಂದರ್ಭದಲ್ಲಿ ಕೆಲವು ಸಲಹೆ ಅಥವಾ ಕೋರಿಕೆ ಮಾಡಬಯಸುತ್ತೇನೆ. ಅವರಂತಹ ಹಿರಿಯ ಚಿಂತಕರು ಸಹ “ಇನ್ನಷ್ಟು ವಿಶ್ವಾಸಾರ್ಹವಾದ, ಗಂಭೀರವಾದ, ಸಮಚಿತ್ತದ ಮತ್ತು ಜವಾಬ್ದಾರಿಯುತವಾದ” ಪ್ರತಿಕ್ರಿಯೆಗಳನ್ನು ಮಾಡುವಂತಾಗಲಿ. ನನ್ನಂತಹ ಮೆಳ್ಳೆಗಣ್ಣಿನವರಿಗೆ ಬುದ್ಧಿ ಕಲಿಸಲು ಅವರು ಕಣ್ಣುಮುಚ್ಚಿ ದೊಣ್ಣೆಯಿಂದ ಹೊಡೆಯದಿರಲಿ. ನಾಗಭೂಷಣ ಅವರು ಕನ್ನಡದ ಪ್ರಖರ ಚಿಂತಕರಲ್ಲಿ ಒಬ್ಬರು. ಧರ್ಮ ಮತ್ತು ರಾಜಕಾರಣದ ಬಗ್ಗೆ ಬರೆಯುವಾಗ ಕೆಲವು ಸಮಸ್ಯೆಗಳಿದ್ದರೂ, ಸಾಹಿತ್ಯದ ಬಗ್ಗೆ ಬರೆಯುವಾಗ ಅಪೂರ್ವವಾದ ಒಳನೋಟಗಳನ್ನು ಕೊಡುವವರು. ಅವರು ತಮ್ಮ ಚಿಂತನೆಗೂ ಸಾಹಿತ್ಯ ವಿಮರ್ಶೆಗೂ ಬಳಸುವ ಕನ್ನಡ ಭಾಷೆಯನ್ನು ಅದರ ತೀಕ್ಷ್ಣತೆ ಮತ್ತು ಲಯಗಾರಿಕೆಯನ್ನು ನಾನು ಅಸೂಯೆ ತುಂಬಿದ ಮೆಚ್ಚುಗೆಯಿಂದ ಓದುತ್ತೇನೆ.

ಅವರ ಬಗ್ಗೆ ಸಾಹಿತ್ಯದ ವಿದ್ಯಾರ್ಥಿಗಳಾದ ನನ್ನಂತಹವರಿಗೆ ಪ್ರೀತಿಯಿದೆ ಆದರವಿದೆ. ಆದರೆ ಅವರಲ್ಲಿ ನನ್ನಂತಹವರಿಗೆ ಕಿರಿಕಿರಿ ಅನಿಸುವ ಒಂದು ಕೆಟ್ಟ ಅಹಂಕಾರದ ಗುಣವೂ ಇದೆ. ತಾತ್ವಿಕ ಭಿನ್ನಮತಗಳಿಗಾಗಿ ಹಗೆಯಂತೆ ಹಲ್ಲೆ ಮಾಡುವುದು, ಭಿನ್ನಮತಗಳ ವಿಷಯದಲ್ಲಿ ಕುಹಕ ಮಾಡುವುದು, ಮನಸ್ಸು ಮುರಿದು ಮಾತಾಡುವುದು, ವಾದದಲ್ಲಿ ತಾನೇ ಗೆಲ್ಲಬೇಕೆಂಬ ಹಠದಲ್ಲಿ ಸವಾಲು ಹಾಕುವುದು, ಸಮರ್ಥನೆ ಇಲ್ಲವೇ ನಿರಾಕರಣೆಯಂತಹ ಹೋಲು ಪ್ರಜ್ಞೆಯಲ್ಲಿ ಪ್ರತಿಕ್ರಿಯಿಸುವುದು– ಮುಂತಾದ ಮಿತಿಗಳಿವೆ. ಸಿ.ಜಿ. ಲಕ್ಷ್ಮೀಪತಿ ಅವರ ಲೇಖನವನ್ನು ತಮ್ಮ ಪತ್ರದಲ್ಲಿ ಅವರು ಅಪದ್ಧ ಎಂಬ ಒಂದೇ ಪದದಿಂದ ಗುಡಿಸಿಹಾಕಿರುವುದನ್ನು ಗಮನಿಸಬೇಕು. ಜಗಳಕ್ಕೂ ವಾಗ್ವಾದಕ್ಕೂ ತಾತ್ವಿಕ ನಿಷ್ಠುರತೆಗೂ ಅಮಾನುಷವಾಗಿ ನಡೆದುಕೊಳ್ಳುವುದಕ್ಕೂ ನಡುವಣ ಗೆರೆಯೇ ಅವರಲ್ಲಿ ತೆಳು. (ಇದು ಬಹುಶಃ ಅವರ ಸ್ವಭಾವದಲ್ಲೇ ಬಂದಂತಿದೆ–ನನ್ನ ಮೆಳ್ಳೆಗಣ್ಣಿನಂತೆ.)

ಜನ ಇರುವಲ್ಲಿಗೆ ಹೋಗಿ ಕೆಲವರಿಂದ ನಾಲ್ಕು ಮಾತುಗಳನ್ನು ಅನಿಸಿಕೊಂಡು, ಭಂಡಬಿದ್ದು, ಅವರ ಮರ್ಜಿಗೆ ಕಾದು, ಅವರ ತಿಳುವಳಿಕೆಯನ್ನು ಪಡೆದು ಕಲಿಯುತ್ತ ಬಂದಿರುವ ನನಗೂ, ನಾಗಭೂಷಣ ಅವರಲ್ಲಿ ಹೋಗಿ ಚರ್ಚೆ ಮಾಡಲು ಹಿಂಜರಿಕೆ ಬರುತ್ತದೆ. ಕಾರಣ, ಎದುರು ಇರುವವರನ್ನು ಅವರು ಮನುಷ್ಯರೆಂದೂ ಅವರಿಗೂ ಮನಸ್ಸಿದೆಯೆಂದೂ ಬಹಳ ಸಲ ಪರಿಗಣಿಸುವುದಿಲ್ಲ. ಸಣ್ಣ ವಿಷಯಕ್ಕೂ ಮನಸ್ಸು ಮುರಿಯುವಂತೆ ರೂಕ್ಷವಾಗಿ ಮಾತಾಡುತ್ತಾರೆ. ಆಂದೋಲನ ಚಳುವಳಿ ಹೋರಾಟದ ಬಗ್ಗೆ ಮಾತಾಡುವವರಲ್ಲಿ ಮಾನವ ಸಂಬಂಧಗಳು ಬಹಳ ಮುಖ್ಯವೆಂದು ಅವರಿಗೆ ಯಾಕೆ ಹೊಳೆದಿಲ್ಲವೊ ಅರಿಯೆ. ವಿಚಾರ ಸಂಕಿರಣಗಳಲ್ಲಿ ಅವರು ಮಾಡುವ ಕೋಪಾಟೋಪ ನೋಡಿದರೆ, ‘ಕವಿರತ್ನಕಾಳಿದಾಸ’ ಸಿನಿಮಾದಲ್ಲಿ ಢಮರುಗವನ್ನು ಬಾರಿಸುತ್ತ ‘ಕಮಲೇ ಕಮಲೋತ್ಪತ್ತಿಃ’ ಎಂಬ ಒಗಟನ್ನು ಇಟ್ಟುಕೊಂಡು ಹೂಂಕರಿಸಿ ಬರುವ ಪಂಡಿತನ ನೆನಪಾಗುತ್ತದೆ.

ಇದು ನಾಗಭೂಷಣ ಅವರ ಸ್ವಭಾವದಲ್ಲೇ ಇರುವ ಗುಣವೊ, ಅಥವಾ ನಮ್ಮ ಕಾಲದ ಒಟ್ಟು ಚಳುವಳಿಗಳಿಲ್ಲದ ಕ್ರಿಯಾಶೂನ್ಯ ಸ್ಥಿತಿಗಳೇ ಅವರಲ್ಲಿ ತಂದಿರುವ ಒಂದು ಬಗೆಯ ಹತಾಶೆಯೊ ತಿಳಿಯೆ. ಆದರೂ ಸಭ್ಯತೆ ಸಜ್ಜನಿಕೆಯ ಸೋಗಿನಲ್ಲಿ ಮೌನವಾಗಿರುವ ಪ್ರವೃತ್ತಿ ಬೆಳೆಯುತ್ತಿರುವ ನಮ್ಮ ಕಾಲದಲ್ಲಿ, ರಾಜಕೀಯವಾಗಿ ಸೈದ್ಧಾಂತಿಕವಾಗಿ ನೇರವಾಗಿ ದಿಟ್ಟವಾಗಿ ಪ್ರತಿಕ್ರಿಯಿಸುತ್ತಿರುವವರಲ್ಲಿ ಅವರೊಬ್ಬರು. ಆದರೆ ಅವರ ಈ ದಿಟ್ಟತನದಲ್ಲಿ ವೈಯಕ್ತಿಕವಾಗಿ ಹಲ್ಲೆ ಮಾಡುವ – ಎಲ್ಲವನ್ನು ಎಲ್ಲರನ್ನೂ ಪಂಥೀಯ ಚೌಕಟ್ಟಿನಲ್ಲಿಟ್ಟು ಮೆಚ್ಚುವ ತೆಗಳುವ ಸೆಕ್ಟೇರಿಯನ್ ಗುಣಗಳು ಸೇರಿಕೊಂಡಿವೆ. ಇವನ್ನು ಕಡಿಮೆ ಮಾಡಿಕೊಂಡರೆ ನನ್ನಂತಹ ಮೆಳ್ಳೆಗಣ್ಣಿನವರು ಅವರೊಡನೆ ಒಡನಾಡುವುದಕ್ಕೂ, ಸಂವಾದ ಮಾಡಿ ಕಲಿಯುವುದಕ್ಕೂ, ಸಮೂಹ ಚಳುವಳಿಗಳಲ್ಲಿ ಕಲೆತು ಕೆಲಸ ಮಾಡುವುದಕ್ಕೂ, ಅವರೇ ಹೇಳುವ “ಆರೋಗ್ಯಕರ ರಾಜಕಾರಣವನ್ನು ರೂಪಿಸುವ ಉತ್ತಮದಾರಿ”ಯನ್ನು ಹುಡುಕುವುದಕ್ಕೂ ಸಹಾಯಕವಾಗುತ್ತದೆ. □

ಕಿ.ರಂ ಎನ್ನುವ ಕಿನ್ನರಿ ಜೋಗಿ...

ಡಾ. ಶೈಲಜಾ ಹಿರೇಮಠ

ಕಿರಂ ಅವರು ಸಾಹಿತ್ಯವನ್ನು ಸಾಹಿತ್ಯ ವಿಮರ್ಶೆಯನ್ನು ಮಾತ್ರ ಓದಬೇಕು ಎಂದು ಮಿತಿ ಹಾಕಿಕೊಂಡವರೇನಲ್ಲ. ರಾಜಕೀಯ, ಅರ್ಥಶಾಸ್ತ್ರವನ್ನು ಚೆನ್ನಾಗಿಯೇ ತಿಳಿದುಕೊಂಡಿದ್ದರು. ಈ ಕುರಿತಂತೆ ಕೆಲವು ಕಡೆ ಅವರು ನೀಡಿದ ವಿದ್ವತ್‌ಪೂರ್ಣ ಉಪನ್ಯಾಸಗಳನ್ನು ಕೇಳುವ ಭಾಗ್ಯ ನನಗೆ ಒದಗಿಬಂದಿತ್ತು. ಸಾಹಿತ್ಯ, ರಾಜಕೀಯ, ಅರ್ಥಶಾಸ್ತ್ರದಂತೆ ಕೆಲ ಆರೋಗ್ಯ ಸಮಸ್ಯೆಗಳನ್ನು ವೈದ್ಯಕೀಯ ಪರಿಭಾಷೆ ಬಳಸಿಯೇ ಮಾತ ನಾಡುವ ಸಾಮರ್ಥ್ಯ ಅವರಿಗಿತ್ತು. ಹೆಂಡತಿ ಕ್ಯಾನ್ಸರಿನಿಂದ ತೀರಿದ ನಂತರ ಕಿರಂ ಅವರು ಕ್ಯಾನ್ಸರಿಗೆ ಸಂಬಂಧಿಸಿದ ಒಳ್ಳೆಯ ಲೇಖನವನ್ನು ತಮ್ಮ ವಿದ್ಯಾರ್ಥಿಯೊಬ್ಬರಿಂದ ಭಾಷಾಂತರಿಸಿದ್ದನ್ನು ಹೇಳಿದರು. ಹೀಗೆ ಭಾಷಾಂತರಿಸಿದ್ದರ ಹಿಂದಿನ ಉದ್ದೇಶ ಕನ್ನಡದ ಜನತೆಗೆ ಕ್ಯಾನ್ಸರ್ ಕುರಿತ ಸಾಮಾನ್ಯ ತಿಳುವಳಿಕೆ ನೀಡುವುದಾಗಿತ್ತು.

ಆಡುವ ನನ್ನ ಮಕ್ಕಳೊಂದಿಗೆ ಹರಟುತ್ತಾ ಕುಳಿತಿದ್ದ ನನಗೆ "ಕಿರಂ ಇನ್ನಿಲ್ಲ" ಎನ್ನುವ ಸುದ್ದಿಯನ್ನು ಮೊದಲು ಹೇಳಿದ್ದು ನನ್ನ ಸಂಗಾತಿ ಅರುಣ್. ನನ್ನ ಮಕ್ಕಳಿಗೆ ಸಾವು-ಬದುಕಿನ ಸುದ್ದಿ ಅರ್ಥವಾಗದು. ಹೀಗಾಗಿ ಅವರು ತಮ್ಮ ಆಟವನ್ನು ಮುಂದುವರೆಸಿದ್ದರು. ನನ್ನ ಮಕ್ಕಳೊಂದಿಗಿನ ಆಟದಲ್ಲಿ ಬೆರೆತಿದ್ದ ನನ್ನ ಮನಸು ಕಿರಂ ಅವರ ಸಾವಿನ ಸುದ್ದಿಯಿಂದಾಗಿ ಕುಸಿಯಿತು. ಬೇಡಬೇಡವೆಂದರೂ ಅವರೊಂದಿಗಿನ ನೆನಪುಗಳೆಲ್ಲ ನನ್ನ ಕಣ್ಣ ನೀರಿನೊಂದಿಗೆ ಹರಿದಾಡಿದವು.

ಕನ್ನಡ ವಿಶ್ವವಿದ್ಯಾಲಯದಲ್ಲಿ ಕೆಲಸಕ್ಕೆ ಸೇರಿಕೊಂಡ ಹೊಸದರಲ್ಲಿ ಬೆಂಗಳೂರು, ಮೈಸೂರು ವಿಶ್ವವಿದ್ಯಾಲಯದಲ್ಲಿ ಓದಿ ಬಂದ ಕೆಲ ಸಹೋದ್ಯೋಗಿಗಳು ಧಾರವಾಡ ವಿಶ್ವವಿದ್ಯಾಲಯದಲ್ಲಿ ಓದಿ ಬಂದಂತಹ ನಮ್ಮನ್ನು ದಡ್ಡರು, ಬೌದ್ಧಿಕ ಶಕ್ತಿಯಿಲ್ಲದವರು ಎಂಬಂತೆ ನೋಡುತ್ತಿದ್ದರು. ಅವರ ಈ ಬೌದ್ಧಿಕ ಅಹಮ್‌ಗೆ ಕಾರಣ ಕಿ.ರಂ. ನಾಗರಾಜ, ಡಿ.ಆರ್.ನಾಗರಾಜರಂತವರು ಗುರುಗಳಾಗಿದ್ದುದು, ಇವರು ವಿದ್ವತ್ ಪ್ರಪಂಚದಲ್ಲಿ ಸ್ಟಾರ್‌ಗಳಾಗಿ ಗುರುತಿಸಿಕೊಂಡವರು. ಡಿ.ಆರ್. ಎನ್. ಅವರು ತೀರಿಕೊಂಡ ನಂತರ ಅವರ 'ಅಲ್ಲಮಪ್ರಭು ಮತ್ತು ಶೈವ ಪ್ರತಿಭೆ' ಪುಸ್ತಕ ಪ್ರಕಟವಾಗಿತ್ತು. ಈ ಪುಸ್ತಕದ ಪ್ರತಿಗಳನ್ನು ನನ್ನ ಸಹದ್ಯೋಗಿ ಸ್ನೇಹಿತೆಯೊಬ್ಬರು ಎಲ್ಲರಿಗೂ ವಿತರಿಸುತ್ತಿದ್ದರು. ಅವರಿಗೆ ನಾನು ಪುಸ್ತಕ ಕೊಡಿ ಎಂದಿದ್ದಕ್ಕೆ ಅದು ನಿಮಗೆ ಅರ್ಥವಾಗದು ಬಿಡಿ ಎಂದಿದ್ದರು. ನಿಜಕ್ಕೂ ನಾನು ತುಂಬಾ ನೊಂದುಕೊಂಡಿದ್ದೆ.

ಕಿರಂ ಮೇಷ್ಟ್ರು ಕನ್ನಡ ವಿಶ್ವವಿದ್ಯಾಲಯಕ್ಕೆ ಬಂದಾಗ ತಮ್ಮ ವಿದ್ಯಾರ್ಥಿಗಳನ್ನು ಹುಡುಕಿಕೊಂಡು ಅವರಿರುವ ವಿಭಾಗಕ್ಕೆ ಬರುತ್ತಿದ್ದರು. ಹಾಗೆ ನಮ್ಮ ಮಹಿಳಾ ಅಧ್ಯಯನ ವಿಭಾಗಕ್ಕೆ ಬಂದಿದ್ದರು. ಅವರಿಗೆ ನಮಸ್ಕಾರ ಹೇಳಿ ನನ್ನನ್ನು ಪರಿಚಯಿಸಿಕೊಂಡೆ. ಆದಾಗಲೇ "ಪಾತರದವರು" ಪುಸ್ತಕ ಪ್ರಕಟವಾಗಿತ್ತು. ಅದರ ಬಗ್ಗೆ ಒಳ್ಳೆಯ ಮಾತುಗಳನ್ನು ಕಿರಂ ಅವರಂತಹ ವಿದ್ವಾಂಸರು ಹೇಳಿದಾಗ ನನಗೆ ಸ್ವರ್ಗ ಮೂರೇ ಗೇಣು ಉಳಿದಿತ್ತು. ಆ ಖುಷಿ ಬಹಳ ಹೊತ್ತು ಉಳಿಯಲಿಲ್ಲ. ವಿಭಾಗದ ಸಹದ್ಯೋಗಿ ಸ್ನೇಹಿತೆಯೊಬ್ಬರು ಅವರೊಟ್ಟಿಗೆ ಮಾತನಾಡಬೇಕಿದ್ದರೂ ಒಂದು ಲೆವೆಲ್ ಬೇಕು ಎನ್ನುವ ಅರ್ಥದಲ್ಲಿ ಮಾತನಾಡುತ್ತಾ ಅವರನ್ನು ಕರೆದುಕೊಂಡು ಹೋದರು. ಸಹದ್ಯೋಗಿ ಸ್ನೇಹಿತೆಯು ಮಾತನಾಡಿದ್ದನ್ನು ಬಹುಶಃ ಕಿರಂ ಅವರು ಕೇಳಿಸಿಕೊಂಡಿರಲಿಕ್ಕಿಲ್ಲ.

ಆಗಸ್ಟ್ 22, 2004ರ ಡಿ.ಆರ್.ಎನ್. ನೆನಪಿನ ವಿಚಾರಗೋಷ್ಠಿಯಲ್ಲಿ ಮಹಿಳಾ ರಾಜಕಾರಣದ ಅಮೂರ್ತತೆ ಕುರಿತು ಉಪನ್ಯಾಸ ನೀಡಲು ಕರೆದಿದ್ದರು. ನಾನು ಪ್ರಬಂಧ ಮಂಡಿಸುವ ವಿಚಾರಗೋಷ್ಠಿಯಲ್ಲಿ ಡಾ. ಯು.ಆರ್.ಅನಂತಮೂರ್ತಿ, ಪ್ರೊ. ಕಿ.ರಂ. ನಾಗರಾಜರಂತಹ ಪ್ರಸಿದ್ಧ ವಿದ್ವಾಂಸರೂ ವಿಷಯ ಮಂಡನೆ ಮಾಡಲಿದ್ದರು. ಈ ಕುರಿತಂತೆ ಆಹ್ವಾನಪತ್ರಿಕೆ ಪ್ರಕಟಗೊಂಡಾಗಿನಿಂದ ಈ ಕಾರ್ಯಕ್ರಮದ ನಿರ್ವಾಹಕರಿಗೆ ನನ್ನ ಕೆಲ ಸಹದ್ಯೋಗಿ ಸ್ನೇಹಿತರು ಉತ್ತರ ಕರ್ನಾಟಕದ ಯಾವುದೋ ಹಳ್ಳಿಯ ಮೂಲೆಯಲ್ಲಿನ ಹೆಂಗಸನ್ನು ಇಂತಹ ದೊಡ್ಡ ದೊಡ್ಡ ವಿದ್ವಾಂಸರೊಟ್ಟಿಗೆ ಉಪನ್ಯಾಸ ನೀಡಲು ಯಾಕೆ ಕರೆಸಿದ್ದೀರಿ ಎಂದು ಪದೇ ಪದೇ ಫೋನಾಯಿಸಿದ್ದರಂತೆ. ನನ್ನ ಭಾಷಣ ಮುಗಿಸಿದ ತಕ್ಷಣ ಕಿ.ರಂ. ನಾಗರಾಜ ಮತ್ತು ಅನಂತಮೂರ್ತಿ ಅವರಂತಹ ದೊಡ್ಡ ವಿದ್ವಾಂಸರು ಚೆನ್ನಾಗಿ ಮಾತನಾಡಿದೆ ಎಂದು ಅಭಿನಂದನೆ ಸಲ್ಲಿಸಿದರು. ಈ ಕಾರ್ಯಕ್ರಮಕ್ಕೆ ಉಪನ್ಯಾಸ ನೀಡಲು ನನ್ನನ್ನು ಕರೆಯುವಂತೆ ಕಿರಂ ಅವರೇ ಡಿ.ಆರ್.ನಾಗರಾಜ ಸಾಹಿತ್ಯ ಸಂಸ್ಕೃತಿ ಟ್ರಸ್ಟ್‌ನವರಿಗೆ ತಿಳಿಸಿದ್ದರೆಂದು ನಂತರ ನನಗೆ ತಿಳಿಯಿತು. ಯಾವ ವಿದ್ವಾಂಸರು ಬರೆದ ಪುಸ್ತಕ ನನಗೆ ಅರ್ಥವಾಗದು ಎಂದು ಹೀಗಳೆದಿದ್ದರೊ ಆ ವಿದ್ವಾಂಸರ ನೆನಪಿನ ವಿಚಾರಗೋಷ್ಠಿಯಲ್ಲಿ ಕಿ.ರಂ. ನಾಗರಾಜ – ಅನಂತಮೂರ್ತಿ ಅವರಂತಹ ವಿದ್ವಾಂಸರೊಟ್ಟಿಗೆ ಉಪನ್ಯಾಸ ನೀಡುವ ಅವಕಾಶ ನೀಡಿದ ಕಿರಂ ಮೇಷ್ಟ್ರು ನನ್ನಲ್ಲೂ ವಿನಯ ಪೂರ್ವಕವಾದ ಬೌದ್ಧಿಕ ಆತ್ಮವಿಶ್ವಾಸ ಹುಟ್ಟುಹಾಕಿದ್ದನ್ನು ಹೇಗೆ ಮರೆಯಲಿ!



ತುಂಬಿದ ಕೊಡ ತುಳುಕುವುದಿಲ್ಲವೆನ್ನುತ್ತಾರೆ. ಹಾಗೆ ಕಿರಂ ಮೇಷ್ಟ್ರು. ಈ ವಿದ್ಯಾರ್ಥಿ ಬೇಕು, ಈ ವಿದ್ಯಾರ್ಥಿ ಬೇಡ; ಇವರು ಉತ್ತರ ಕರ್ನಾಟಕದವರು, ಇವರು ದಕ್ಷಿಣ ಕರ್ನಾಟಕ ದವರು; ಇವರು ಬುದ್ಧಿವಂತರು, ಇವರು ಬುದ್ಧಿ ಹೀನರು ಎನ್ನುವ ವಿಂಗಡನೆಯಾಗಲಿ, ಭಿನ್ನತೆ ಯಾಗಲಿ ಅವರಲ್ಲಿ ಇರಲೇ ಇಲ್ಲ. ಎಲ್ಲರನ್ನೂ ಸಮಾನ ಪ್ರೀತಿ-ವಿಶ್ವಾಸದಿಂದ ನೋಡುತ್ತಿದ್ದರು. ಅವರ ಶಿಷ್ಯೆ/ಷ್ಯರು ಪೂರ್ವಗ್ರಹದಿಂದ ತಮ್ಮೊಳಗೆ ಬೌದ್ಧಿಕ ಅಹಮ್ ಹಾಗೂ ಅಸ್ಪೃಶ್ಯತೆಯನ್ನು ಸೃಷ್ಟಿಸಿಕೊಂಡಿದ್ದರು. ಬೌದ್ಧಿಕ ಪ್ರಪಂಚದಲ್ಲಿ ಮಡಿವಂತಿಕೆಯನ್ನಾಗಲಿ, ಅಸ್ಪೃಶ್ಯತೆಯನ್ನಾಗಲಿ ಕಟ್ಟಿ ಕೊಂಡಿರದ ಕಿರಂ ಮೇಷ್ಟ್ರಿಗೆ ಇಡೀ ಕರ್ನಾಟಕದ ತುಂಬೆಲ್ಲಾ ಶಿಷ್ಯೆ/ಷ್ಯರಿದ್ದಾರೆ. ಕಿರಂ ಅವರು ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಓದಿದ

ವಿದ್ಯಾರ್ಥಿಗಳಿಗೆ ಮಾತ್ರ ಗುರುಗಳಲ್ಲ. ಉತ್ತರ ಕರ್ನಾಟಕದವರು, ದಕ್ಷಿಣ ಕರ್ನಾಟಕದವರು ಎಂದು ಪ್ರತ್ಯೇಕಿಸದೇ ನನ್ನನ್ನೂ ಒಳಗೊಂಡಂತೆ ಎಲ್ಲರನ್ನು ತಮ್ಮ ತೆಕ್ಕೆಗೆ ತೆಗೆದುಕೊಂಡು ಬೆಳೆಸಿದ್ದಾರೆ.

ನಮ್ಮ ಕನ್ನಡ ವಿಶ್ವವಿದ್ಯಾಲಯದಲ್ಲಿ ನಮ್ಮ ಮಹಿಳಾ ಅಧ್ಯಯನ ವಿಭಾಗದಿಂದ "ಮಹಿಳಾ ಸಾಹಿತ್ಯ ಚರಿತ್ರೆ" ಪ್ರಕಟಗೊಂಡಿದೆ. ಅದರಲ್ಲಿ ನನ್ನದು "ಮಹಿಳಾ ಜನಪದ ಸಾಹಿತ್ಯ: ಸಂಗ್ರಹ ಮತ್ತು ಅಧ್ಯಯನಗಳ ಚರಿತ್ರೆ" ಎನ್ನುವುದು ಏಳನೆಯ ಭಾಗವಾಗಿ ಪ್ರಕಟಗೊಂಡಿದೆ. ಕಿರಂ ಮೇಷ್ಟ್ರು "ಚೆನ್ನಾಗಿಯೇ ಬರೆದಿದ್ದೀಯಾ ಇನ್ನು ಕೆಲವು ಡೈಮೆನ್ಷನ್‌ಗಳಿಂದ ನೋಡಿದರೆ ಮತ್ತಷ್ಟು ಸಮಗ್ರತೆ ಬರುತ್ತಿತ್ತು" ಎಂದರು. ಆ ಕ್ಷಣವೇ ಉತ್ಸುಕಳಾಗಿ "ಹೇಳಿ ಸರ್, ನನಗೆ ನನ್ನ ಮಿತಿ ಗೊತ್ತಾಗಬೇಕಿದೆ" ಎಂದಿದ್ದೆ. ತುಂಬಾ ಅವಸರದಲ್ಲಿದ್ದ ಅವರು ಮತ್ತೊಮ್ಮೆ ಚರ್ಚಿಸೋಣ ಎಂದಿದ್ದರು.

ಇದಾದ ನಂತರ ನನಗೆ ಎರಡನೆಯ ಹೆರಿಗೆಯಾಯ್ತು. ಜೊತೆಯಲ್ಲಿಯೇ ಆರೋಗ್ಯದಲ್ಲಿ ತೀವ್ರ ಏರುಪೇರುಗಳು ಉಂಟಾದವು. ವೈದ್ಯರೂ ಕೆಲವು ಆರೋಗ್ಯ ಸಮಸ್ಯೆಗಳನ್ನು ಲಿಂಗ ಪೂರ್ವಗ್ರಹದಿಂದಲೇ ನೋಡುತ್ತಾರೆ ಎನ್ನುವುದಕ್ಕೆ ನಾನೇ ಸಾಕ್ಷಿಯಾಗಿದ್ದೆ. ಕಿಡ್ನಿ ಸ್ಟೋನ್ ಹೆಣ್ಣುಮಕ್ಕಳಿಗೆ ಸಮಸ್ಯೆಯಾಗದು ಎಂದು ಹೇಳಿ ನನ್ನ ಆರೋಗ್ಯ ಸಮಸ್ಯೆಯನ್ನು ವೈದ್ಯರು ಹಗುರವಾಗಿ ತೆಗೆದುಕೊಂಡ ಕಾರಣದಿಂದಾಗಿಯೇ ನಾನು ಕಿಡ್ನಿ ಎಕ್ಯೂಟ್ ಫೇಲ್ಯೂರ್ ಹಾಗೂ ಡಯಾಲಿಸಿಸ್‌ನಂತಹ ಸಮಸ್ಯೆಗಳಿಗೆ ಒಳಗಾಗಬೇಕಾಯಿತು. ನಾನು ನನ್ನ ಆರೋಗ್ಯ ಸಮಸ್ಯೆಯನ್ನು ಕಿರಂ ಅವರಿಗೆ ಹೇಳಿರಲಿಲ್ಲ. ಆದರೆ ಅದು ಹೇಗೋ ಅವರು ತಿಳಿದುಕೊಂಡಿದ್ದರು. ಫೋನಾಯಿಸಿ ಆರೋಗ್ಯದ ಬಗ್ಗೆ ಕಾಳಜಿ ವಹಿಸುವಂತೆ ಕಾಳಜಿಪೂರ್ಣವಾಗಿ ಸೂಚಿಸಿದ್ದರು.

ಆರೋಗ್ಯ ತಪಾಸಣೆಗೆಂದು ಬೆಂಗಳೂರಿಗೆ ಹೋದ ನಾನು ಕಿರಂ ಮೇಷ್ಟ್ರನ್ನು ಹುಡುಕಿಕೊಂಡು ಅವರ ಮನೆಗೆ ಹೋಗಿದ್ದೆ. "ಮಹಿಳಾ ಜನಪದ ಸಾಹಿತ್ಯ: ಸಂಗ್ರಹ ಮತ್ತು ಅಧ್ಯಯನಗಳ ಚರಿತ್ರೆ"ಯನ್ನು ಮರುಬರೆದು ಪ್ರತ್ಯೇಕವಾಗಿ ಪ್ರಕಟಿಸುವ ಕುರಿತು ಚರ್ಚಿಸುವುದಕ್ಕಾಗಿ ಅವರ ಬಳಿ ಹೋಗಿದ್ದೆ. ನಾನು ಬರೆದ ಅಧ್ಯಯನ ಭಾಗವನ್ನು ಮಾತ್ರ ಝೆರಾಕ್ಸ್ ಕೊಟ್ಟು ಸಲಹೆ ಸೂಚನೆ ನೀಡಲು ಕೇಳಿದ್ದೆ. "ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ" ಬಂದಾಗ ನೀನು ಬರೆದುದೆಲ್ಲವನ್ನೂ ಓದಿದ್ದೆ. ಯಾವುದ್ಯಾವುದೋ ಕಾರಣಗಳಿಂದ ಆಗ ಚರ್ಚಿಸಲು ವೇಳೆ ಮತ್ತು ಅವಕಾಶ ಸಿಗಲಿಲ್ಲ. ಈಗ ಅದು ಮರೆತು ಹೋಗಿದೆ. ಇನ್ನೊಮ್ಮೆ ಓದಿ ಹೇಳುತ್ತೇನೆ. ಆದರೆ ಎಲ್ಲಕ್ಕಿಂತ ಮೊದಲು ನಿನ್ನ ಆರೋಗ್ಯದ ಬಗ್ಗೆ ಕಾಳಜಿ ತೆಗೆದುಕೋ" ಎಂದು ಹೇಳಿದರು.

ನನ್ನ ಜೊತೆ ನನ್ನ ಸಂಗಾತಿ ಅರುಣ್ ಕೂಡ ಬಂದಿದ್ದರು. ಅವರನ್ನು ತೋರಿಸಿ "ಅವರಿಗೆ ನಮ್ಮ ಅಕ್ಯಾಡೆಮಿಕ್ ಚರ್ಚೆ ಬೋರ್ ತರಿಸಬಹುದು. ಇವತ್ತು ಬರಿ ಆರೋಗ್ಯದ ಬಗ್ಗೆ ಮಾತನಾಡೋಣ" ಎಂದು ನಗುತ್ತಾ ಮೂರು ಗಂಟೆಯವರೆಗೆ ಆರೋಗ್ಯದ ಬಗ್ಗೆಯೇ ಚರ್ಚಿಸಿದರು. ಕಿರಂ ಅವರು ತಮ್ಮ ಪತ್ನಿ ವಿಜಯಲಕ್ಷ್ಮಿ ಕ್ಯಾನ್ಸರ್‌ನಿಂದ ತೀರಿಕೊಂಡಿದ್ದನ್ನು ಹೇಳಿದರು.

ವಿಜಯಲಕ್ಷ್ಮಿ ಅವರಿಗೆ ಕ್ಯಾನ್ಸರ್ ಬಂದಿದೆ ಎಂಬುದು ತಿಳಿದ ತಕ್ಷಣ ಮೆಡಿಕಲ್ ಡಿಕ್ಷನರಿ ಇಟ್ಟುಕೊಂಡು ಕ್ಯಾನ್ಸರಿಗೆ ಸಂಬಂಧಿಸಿದಂತಹ ಎಲ್ಲಾ ಲೇಖನಗಳನ್ನು ಓದಿದರಂತೆ. ಡಾಕ್ಟರೊಂದಿಗೆ ಕ್ಯಾನ್ಸರ್ ಬಗ್ಗೆ ಸಂವಾದ ನಡೆಸುವಷ್ಟು ಕ್ಯಾನ್ಸರ್ ಬಗ್ಗೆ ತಿಳುವಳಿಕೆ ಬಂದಿತ್ತು ಎಂದು ಕಿರಂ ಮೇಷ್ಟ್ರು ಹೇಳಿದ್ದರು. ಕ್ಯಾನ್ಸರನ್ನು ಗೆದ್ದು ಬಂದಂತಹ ಕೆಲವು ಪ್ರಕರಣಗಳನ್ನು ಅಧ್ಯಯನ ನಡೆಸಿ, ಹೇಗೆ ಅವರು ಕ್ಯಾನ್ಸರನ್ನು ಮೀರಲು ಸಾಧ್ಯವಾಯಿತು ಎನ್ನುವುದನ್ನು ವಿಜಯಲಕ್ಷ್ಮಿ ಅವರಿಗೆ ತಿಳಿಸುತ್ತಾ ಒಂದು ಪೂರ್ಣ ಸೇಬು ಹಣ್ಣನ್ನು ತಿನ್ನಲು ಪ್ರಯತ್ನಿಸಿದ್ದನ್ನು ನೆನಪಿಸಿಕೊಂಡ ಅವರ ಕಣ್ಣಾಲಿಗಳು ತುಂಬಿಕೊಂಡಿದ್ದವು. ಕ್ಯಾನ್ಸರ್ ಪೀಡಿತ ವ್ಯಕ್ತಿಯೊಬ್ಬ ತನ್ನನ್ನು ನೋಡಲು ಬಂದವರು ಕ್ಯಾನ್ಸರ್ ಬಗ್ಗೆ ಮಾತನಾಡುವುದನ್ನು ವಿರೋಧಿಸುತ್ತಿದ್ದನು. ಡಾಕ್ಟರು ಆ ವ್ಯಕ್ತಿಗೆ ಸಾವಿನ ದಿನಗಳನ್ನು ಹೇಳಿದ್ದರು ಕೂಡ.

ನಮ್ಮ ಕನ್ನಡ ವಿಶ್ವವಿದ್ಯಾಲಯದಲ್ಲಿ ನಮ್ಮ ಮಹಿಳಾ ಅಧ್ಯಯನ ವಿಭಾಗದಿಂದ "ಮಹಿಳಾ ಸಾಹಿತ್ಯ ಚರಿತ್ರೆ" ಪ್ರಕಟಗೊಂಡಿದೆ. ಅದರಲ್ಲಿ ನನ್ನದು "ಮಹಿಳಾ ಜನಪದ ಸಾಹಿತ್ಯ: ಸಂಗ್ರಹ ಮತ್ತು ಅಧ್ಯಯನಗಳ ಚರಿತ್ರೆ" ಎನ್ನುವುದು ಏಳನೆಯ ಭಾಗವಾಗಿ ಪ್ರಕಟಗೊಂಡಿದೆ.

ಆತ ತಾನು ಕ್ಯಾನ್ಸರ್ ರೋಗಿಯಲ್ಲ ಎಂದು ತನಗೆ ತಾನೇ ಹೇಳಿಕೊಂಡು ಪ್ರಮಾಣೀಕರಿಸಿಕೊಂಡಿದ್ದ. ಏನೂ ತಿನ್ನಲು ಆಗದಿದ್ದರೂ ಇವತ್ತು ಒಂದು ಸೇಬು ಹಣ್ಣನ್ನು ತಿಂದು ಮುಗಿಸುತ್ತೇನೆ ಎಂದು ಹಠಕ್ಕೆ ಬಿದ್ದು ತಿನ್ನುತ್ತಿದ್ದನಂತೆ. ನಡೆಯಲು ಆಗದಿದ್ದರೂ ಇವತ್ತು ಅರ್ಧ ಕಿಲೋ ಮೀಟರ್ ನಡದೇ ತೀರುತ್ತೇನೆ ಎಂದು ನಡೆಯುತ್ತಿದ್ದನಂತೆ. ರೋಗದ ವಿರುದ್ಧ ಮನಸ್ಸು ಕ್ರಿಯಾಶೀಲವಾಗಿ ಉದುರಿಹೋಗಿದ್ದ ತಲೆಗೂದಲು ಚಿಗಿತುಕೊಳ್ಳಲು ಪ್ರಾರಂಭಿಸಿತಂತೆ. ಕಿಮೋಥೆರಪಿ ಕೂಡ ಅಗತ್ಯವಿಲ್ಲವೆಂದು ವೈದ್ಯರು ಕೈಬಿಟ್ಟರಂತೆ. ಈಗ ಆ ವ್ಯಕ್ತಿ ಕ್ಯಾನ್ಸರ್ ರಹಿತ ವ್ಯಕ್ತಿಯಾಗಿದ್ದಾನೆ. ಇಂತಹ ನೈಜಕಥೆಗಳನ್ನು ಪತ್ನಿ ವಿಜಯಲಕ್ಷ್ಮಿಯವರಿಗೆ ಮಾನಸಿಕ ಸ್ಥೈರ್ಯ ತುಂಬಲು ಹೇಳುತ್ತಿದ್ದರಂತೆ. ಆದರೆ ಅದ್ಯಾಕೋ ಅವರು ಅದಕ್ಕೆ ಸ್ಪಂದಿಸಲೇ ಇಲ್ಲವಂತೆ. ಆರೋಗ್ಯ ಸಮಸ್ಯೆಯಿಂದಾಗಿ ವಿಜಯಲಕ್ಷ್ಮಿ ಅವರು ತುಂಬಾ ಕುಸಿದು ಹೋಗಿದ್ದನ್ನು ಭಾರವಾದ ಹೃದಯದಿಂದಲೇ ಹೇಳಿಕೊಂಡರು. ನಾವು ಕಿರಂ ಅವರ ಮನೆಗೆ ಹೋದಾಗ ಅವರ ಮನೆಯಲ್ಲಿ ಒಬ್ಬ ವ್ಯಕ್ತಿ ಕುಳಿತುಕೊಂಡಿದ್ದರು. ಸರ್ ಹೇಳಿದ್ದನ್ನು ಕೇಳಿಸಿಕೊಳ್ಳುತ್ತಿದ್ದ ಅವರು ಅಮ್ಮಾವರು ಹಾಗೆ, ಹೀಗೆ ಎಂದು ವಿಜಯಲಕ್ಷ್ಮಿ ಅವರ ಬಗ್ಗೆ ಮಾತನಾಡಲು ಪ್ರಾರಂಭಿಸಿದಾಗ ಬೇಕಂತಲೇ ಕಿರಂ ಅವರು ಮಾತು ಬದಲಾಯಿಸಿದರು.

ವಿಜಯಲಕ್ಷ್ಮಿ ಅವರ ಬಗ್ಗೆ ಚರ್ಚಿಸುವುದು, ಅವರಿಗೆ ತುಂಬಾ ನೋವು ತರುವ ಸಂಗತಿಯಾಗಿದ್ದರಿಂದ ಆ ವಿಷಯವನ್ನು ಅವರು ಅಲ್ಲಿಗೇ ಕೈಬಿಟ್ಟರು. ಮುಂದೆ ಕಿರಂ ಮೇಷ್ಟ್ರು "ನಾನು ಇಷ್ಟೆಲ್ಲ ಯಾಕೆ ನಿಮಗೆ ತಿಳಿಸಿದೆನೆಂದರೆ ನಿಮ್ಮ ಆರೋಗ್ಯ ಸಮಸ್ಯೆ ಬಗ್ಗೆ ನೀವು ಎದೆಗುಂದಬೇಕಾಗಿಲ್ಲ. ಕ್ಯಾನ್ಸರ್ ಮುಂದೆ ನಿಮ್ಮ ಸಮಸ್ಯೆ ಏನೂ ಅಲ್ಲ. ಅದಕ್ಕೆ ನೀವು ನನಗೆ ಏನೂ ಆಗಿಲ್ಲ ಅಂದುಕೊಂಡು ಸಹಜವಾಗಿ ಇದ್ದುಬಿಡಿ. ಹಾಗಂತ ಆರೋಗ್ಯದ ಬಗ್ಗೆ ನಿರ್ಲಕ್ಷ್ಯ ಮಾಡಬೇಡಿ. ನನಗೆ ಗೊತ್ತಿರುವ ಒಳ್ಳೆಯ ಆಯುರ್ವೇದಿಕ್ ವೈದ್ಯರಿದ್ದಾರೆ. ಇನ್ನೊಮ್ಮೆ ಬಿಡುವು ಮಾಡಿಕೊಂಡು ಬನ್ನಿ. ನಮ್ಮ ಮನೆಯಲ್ಲಿಯೇ ಇರಿ. ನೋಡಿ ಇಲ್ಲಿ ಒಂದು ರೂಮು ಪ್ರತ್ಯೇಕವಾಗಿಯೇ ಇದೆ. ದಂಪತಿಗಳಿಗೆ ಇಷ್ಟು ರೂಮು ಸಾಕಲ್ಲ? ಅಲ್ಯಾಕೆ ಲಾಡ್ಜ್ ಮಾಡಿಕೊಂಡು ಇರಬೇಕು? ಒಂದೆರಡು ದಿನ ನಮ್ಮ ಮನೆಯಲ್ಲಿಯೇ ಇರುವ ಪ್ಲಾನ್ ಮಾಡಿಕೊಂಡು ಬನ್ನಿ. ಒಳ್ಳೆಯ ವೈದ್ಯರ ಹತ್ತಿರ ಕರೆದುಕೊಂಡು ಹೋಗುವೆ. ಆಗ ಇನ್ನೂ ಚೆನ್ನಾಗಿ ಮಾತನಾಡಬಹುದು" ಎಂದಿದ್ದರು.

ಮುಂದುವರೆದ ಕಿರಂ ಅವರು "ನನ್ನ ಸ್ನೇಹಿತರೊಬ್ಬರಿಗೆ ಕಿಡ್ನಿ ಸ್ಟೋನ್ ಆಗಿ ಒಂದು ಕಿಡ್ನಿಯಲ್ಲಿನ ಕಲ್ಲನ್ನು ಮಾತ್ರ ಮೇಜರ್ ಆಪರೇಷನ್ ಮಾಡಿ ತೆಗೆದಿದ್ದಾರೆ. ಇನ್ನೊಂದು ಕಿಡ್ನಿಯ ಆಪರೇಷನ್ ನಾಲ್ಕು ತಿಂಗಳು ಕಳೆದ ನಂತರ ಮಾಡುವುದಾಗಿ ವೈದ್ಯರು ಹೇಳಿದ್ದಾರೆ" ಎಂದು ಹೇಳಿದರು. ಗೆಳೆಯನಿಗೆ ಕಿಡ್ನಿ ಸ್ಟೋನ್ ಸಮಸ್ಯೆ ಆಗಿದೆ ಎಂದು ತಿಳಿದ ತಕ್ಷಣ ಅದಕ್ಕೆ ಸಂಬಂಧಿಸಿದ ಸಾಹಿತ್ಯವನ್ನೆಲ್ಲ ಓದಿರುವುದಾಗಿ ಹೇಳಿದರು. ನಾನು ಯಾವ ಆಹಾರವನ್ನು ತೆಗೆದುಕೊಳ್ಳಬೇಕು, ಯಾವುದನ್ನು ತೆಗೆದುಕೊಳ್ಳಬಾರದು ಎನ್ನುವುದನ್ನು ಸೂಚಿಸಿದರು. ಪಪ್ಪಾಯಿ ಕಾಯಿಯಿಂದ ಪಲ್ಯ ಇಲ್ಲವೇ ಸಾಂಬಾರು ಮಾಡಿಕೊಂಡು ತಿನ್ನಲು ಹೇಳಿದರು. ಪೂರ್ಣ ಹಣ್ಣಾಗದ ಪಪ್ಪಾಯಿ ಹಣ್ಣನ್ನು ತಿನ್ನುವಂತೆ ಸೂಚಿಸಿದರು.

ಪಪ್ಪಾಯಿಗೆ ಕಲ್ಲು ಕರಗಿಸುವ ಗುಣವಿದೆ ಎಂದರು. ಕಿರಂಮೇಷ್ಟ್ರು ಚಿಕ್ಕವರಿದ್ದಾಗ ಅವರ ಅಜ್ಜಿ ಇಲ್ಲವೇ ತಾಯಿ ಅವರ ಕೈಯಲ್ಲಿ ಶುಂಠಿ ಹಾಗೂ ಲಿಂಬೆಹಣ್ಣನ್ನು ಕೊಟ್ಟು ಕಬ್ಬಿನ ಜೊತೆಯಲ್ಲಿ ಇವುಗಳನ್ನು ಇಟ್ಟು ಕಬ್ಬಿನ ಹಾಲು ತೆಗೆದುಕೊಡಬೇಕೆಂದು, ಕಬ್ಬಿನ ಹಾಲು ಕೊಡುವ ವ್ಯಕ್ತಿಗೆ ಹೇಳುವಂತೆ ತಿಳಿಸಿ ಇವರನ್ನು ಕಳುಹಿಸಿಕೊಡುತ್ತಿದ್ದರಂತೆ. ಅಜ್ಜಿ ಇಲ್ಲವೆ ಅಮ್ಮ ಹೇಳಿದ್ದನ್ನು ಚಾಚೂ ತಪ್ಪದೆ ತಾವು ಪಾಲಿಸುತ್ತಿದ್ದನ್ನು ನೆನಪಿಸಿಕೊಂಡ ಅವರು ಕಬ್ಬಿನ ಹಾಲು ಕಿಡ್ನಿಯನ್ನು ಪರಿಣಾಮಕಾರಿಯಾಗಿ ಸ್ವಚ್ಛ ಗೊಳಿಸುತ್ತದೆ ಎಂಬುದನ್ನು ಹೇಳಿದರು. ಹಿಂದಿನ ಆಹಾರ ಪದ್ಧತಿ ಮತ್ತು ಪಾನೀಯ ಪದ್ಧತಿ ನಮ್ಮ ಆರೋಗ್ಯವನ್ನು ಗಟ್ಟಿಗೊಳಿಸುವ ಉದ್ದೇಶವನ್ನೇ ಹೊಂದಿವೆ ಎಂದು ಹೇಳಿದ್ದರು.

ನಾನು ತಿಳಿದ ಹಾಗೆ ಕಿರಂ ಅವರು ಸಾಹಿತ್ಯವನ್ನು, ಸಾಹಿತ್ಯ ವಿಮರ್ಶೆಯನ್ನು ಮಾತ್ರ ಓದಬೇಕು ಎಂದು ಮಿತಿ ಹಾಕಿಕೊಂಡವರೇನಲ್ಲ. ರಾಜಕೀಯ, ಅರ್ಥಶಾಸ್ತ್ರವನ್ನು ಚೆನ್ನಾಗಿಯೇ ತಿಳಿದುಕೊಂಡಿದ್ದರು. ಈ ಕುರಿತಂತೆ ಕೆಲವು ಕಡೆ ಅವರು ನೀಡಿದ ವಿದ್ವತ್‌ಪೂರ್ಣ ಉಪನ್ಯಾಸಗಳನ್ನು ಕೇಳುವ ಭಾಗ್ಯ ನನಗೆ ಒದಗಿಬಂದಿತ್ತು. ಸಾಹಿತ್ಯ, ರಾಜಕೀಯ, ಅರ್ಥಶಾಸ್ತ್ರದಂತೆ ಕೆಲ ಆರೋಗ್ಯ ಸಮಸ್ಯೆಗಳನ್ನು ವೈದ್ಯಕೀಯ ಪರಿಭಾಷೆ ಬಳಸಿಯೇ ಮಾತನಾಡುವ ಸಾಮರ್ಥ್ಯ ಅವರಿಗಿತ್ತು. ಹೆಂಡತಿ ಕ್ಯಾನ್ಸರಿನಿಂದ ತೀರಿದ ನಂತರ ಕಿರಂ ಅವರು ಕ್ಯಾನ್ಸರಿಗೆ ಸಂಬಂಧಿಸಿದ ಒಳ್ಳೆಯ ಲೇಖನವನ್ನು ತಮ್ಮ ವಿದ್ಯಾರ್ಥಿಯೊಬ್ಬರಿಂದ ಭಾಷಾಂತರಿಸಿದ್ದನ್ನು ಹೇಳಿದರು. ಹೀಗೆ ಭಾಷಾಂತರಿಸಿದ್ದರ ಹಿಂದಿನ ಉದ್ದೇಶ ಅವರೇ ಹೇಳಿದಂತೆ ಕನ್ನಡದ ಜನತೆಗೆ ಕ್ಯಾನ್ಸರ್ ಕುರಿತ ಸಾಮಾನ್ಯ ತಿಳುವಳಿಕೆ ನೀಡುವುದಾಗಿತ್ತು. ಬದುಕಿನ ಒತ್ತಡಗಳು ತಳ್ಳಿದ ಕಡೆ ಕಿರಂ ಹೋಗಿದ್ದಾರೆ.

(18ನೇ ಪುಟಕ್ಕೆ)

ಟೆರರ್ ಅಲ್ಲ ಫ್ಯಾಸಿಸಂ

ನಾ ದಿವಾಕರ

ಮಲೆಗಾಂವ್, ಗೋವಾ, ಹೈದರಾಬಾದ್‌ನ ಮಕ್ಕಾ ಮಸೀದಿ, ರಾಜಸ್ಥಾನದ ಅಜ್ಮೇರ್ ದರ್ಗಾ, ಸಂಜೋತ ಎಕ್ಸ್‌ಪ್ರೆಸ್ ಹೀಗೆ ಹಲವು ಭಯೋತ್ಪಾದಕ ದಾಳಿಗಳಲ್ಲಿ ಸಕ್ರಿಯ ಪಾತ್ರವಹಿಸಿರುವ ಕೆಲವು ಹಿಂದೂ ಸಂಘಟನೆಗಳು ಈಗ ಭಯೋತ್ಪಾದಕರ ಪಟ್ಟಿಗೆ ಸೇರ್ಪಡೆಯಾಗಿವೆ. ಕೆಲವು ಹಿಂದುತ್ವ ವಿದ್ವಾಂಸರು(?) ಇದನ್ನು ಹಿಂದೂ ಟೆರರ್ ಎಂದು ಕರೆಯಬೇಕಿಲ್ಲ ಬದಲಾಗಿ ಹಿಂದೂ ರಿಯಾಕ್ಷನ್ ಎಂದು ಹೇಳಬಹುದು ಎಂದು ಮತ್ತೊಮ್ಮೆ ನ್ಯೂಟನ್ ಸಿದ್ಧಾಂತವನ್ನು ಪ್ರತಿಪಾದಿಸುತ್ತಿದ್ದಾರೆ. ಪ್ರತಿಯೊಂದು ಕ್ರಿಯೆಗೂ ಒಂದು ಪ್ರತಿಕ್ರಿಯೆ ಇದ್ದೇ ಇರುತ್ತದೆ ಎನ್ನುವ ವೈಜ್ಞಾನಿಕ ಪ್ರಮೇಯವನ್ನು ಧಾರ್ಮಿಕ ಚಟುವಟಿಕೆಗಳಿಗೆ, ವಿಧ್ವಂಸಕ ಕೃತ್ಯಗಳಿಗೆ ಹೋಲಿಸುವುದು ಪ್ರಜಾಸತ್ತಾತ್ಮಕ ಸಮಾಜದಲ್ಲಿ ಎಷ್ಟು ಸರಿ ಎನ್ನುವ ಪ್ರಶ್ನೆಗಿಂತಲೂ, ಅಪರಾಧಗಳನ್ನು, ಪಾತಕಿ ಕೃತ್ಯಗಳನ್ನು, ಸಮಾಜಘಾತುಕ ಶಕ್ತಿಗಳನ್ನು ಸಮರ್ಥಿಸಲು ಇಂತಹ ಅಮೂಲ್ಯವಾದ ವೈಜ್ಞಾನಿಕ ಸೂತ್ರವನ್ನು ಬಳಸಿಕೊಳ್ಳುವುದೇ ಅಕ್ಷಮ್ಯ ಅಪರಾಧವಾದೀತು ಎನ್ನುವ ಪರಿಜ್ಞಾನ ಇಲ್ಲಿ ಮುಖ್ಯವಾಗುತ್ತದೆ. ಗೋಧ್ರಾ ದುರಂತದ ಬಳಿಕ ಗುಜರಾತ್‌ನಲ್ಲಿ ಸಂಭವಿಸಿದ ವ್ಯವಸ್ಥಿತ ಮಾರಣಹೋಮವನ್ನೂ ಇದೇ ಸೂತ್ರವನ್ನಾಧರಿಸಿ ಸಮರ್ಥಿಸಿಕೊಳ್ಳಲಾಗಿತ್ತು.

ಈಗ ಹಿಂದುತ್ವ ಸಂಘಟನೆಗಳು ತಮ್ಮ ನಿಜ ಸ್ವರೂಪವನ್ನು ದೆಹಲಿಯಲ್ಲಿ ಹೆಡ್‌ಲೈನ್ಸ್ ಟುಡೇ ಕಚೇರಿಯ ಮೇಲೆ ದಾಳಿ ನಡೆಸುವ ಮೂಲಕ ಪ್ರದರ್ಶಿಸುತ್ತಿವೆ. ಮೇಲೆ ಉಲ್ಲೇಖಿಸಲಾದ ಬಾಂಬ್ ದಾಳಿಗಳಲ್ಲಿ ಹಿಂದುತ್ವ ಸಂಘಟನೆಗಳ ಕೈವಾಡವಿರುವುದು ಬಹುತೇಕ ನಿರೂಪಿತವಾಗಿದ್ದು ವಿಚಾರಣೆ ನಡೆಯುತ್ತಿದೆ. ಅಭಿನವ ಭಾರತ ಎಂಬ ಸಂಘಟನೆಯ ಕೈವಾಡವಿರುವ ಈ ಘಟನೆಗಳಲ್ಲಿ ಕೆಲವು ಸಂಘಪರಿವಾರದ ನಾಯಕರೂ, ಕಾರ್ಯಕರ್ತರೂ, ಭಾಜಪ ಸಂಸದರೂ ಭಾಗಿಯಾಗಿದ್ದನ್ನು ವಿಡಿಯೋ ಚಿತ್ರಣದ ಮೂಲಕ ನಿರೂಪಿಸಿರುವ ಹೆಡ್‌ಲೈನ್ಸ್ ಟುಡೇ ಮಾಡಿದ ಅಪರಾಧವಾದರೂ ಏನು? ನಡೆದದ್ದನ್ನು ಜನತೆಯ ಮುಂದಿರಿಸುವುದು. ಒಂದು ವೇಳೆ ಈ ಸುದ್ದಿ ಸುಳ್ಳಾಗಿದ್ದರೆ, – ಟಿವಿ ವಾಹಿನಿಯವರ ಕುತಂತ್ರವಾಗಿದ್ದರೆ, ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬಹುದಾಗಿತ್ತು. ಎಷ್ಟಾದರೂ ಸಂಘ ಪರಿವಾರ ಸಂವಿಧಾನವನ್ನು ಪೂಜಿಸುವ ದೇಶಭಕ್ತ ಸಂಘಟನೆ. ಈ ದೇಶದ ಸಂವಿಧಾನ ಒಪ್ಪದ ಮಾವೋವಾದಿಗಳನ್ನು, ಜಿಹಾದಿಗಳನ್ನು ದೇಶ ದ್ರೋಹಿಗಳೆಂದು ಜರೆಯುವ ಪರಿವಾರದ ಅಂಗ ಸಂಸ್ಥೆಗಳು ಭಾರತೀಯ ಸಂವಿಧಾನ ರೀತ್ಯಾ ಕ್ರಮ ಕೈಗೊಳ್ಳಬಹುದಿತ್ತು.

ಆದರೆ ಶಿಸ್ತಿನ ಸಂಘಟನೆ ಎಂದೇ ಹೆಸರಾದ, ಅಹಿಂಸಾ ಪ್ರತಿಪಾದನೆಯಲ್ಲಿ ಗಾಂಧೀಜಿಯನ್ನೂ ನಾಚಿಸುವ, ಎಂದಿಗೂ ಯಾರ ಮೇಲೂ ಆಕ್ರಮಣವನ್ನೇ ಮಾಡದ ಹಿಂದೂ ಸಂಘಟನೆಗಳು ಮಾಡಿದ್ದೇನು? ಹೆಡ್‌ಲೈನ್ಸ್ ಟುಡೇ ಕಛೇರಿಯ ಮೇಲೆ ದಾಳಿನಡೆಸಿ, ಎಲ್ಲವನ್ನೂ ಧ್ವಂಸ ಮಾಡಿ, ಅಲ್ಲಿನ ಸಿಬ್ಬಂದಿಗೆ ಜೀವ ಬೆದರಿಕೆ ಒಡ್ಡುವುದು. ಇದು ಭಯೋತ್ಪಾದನೆಯೋ ಅಲ್ಲವೋ ಇಲ್ಲಿ ಮುಖ್ಯವಲ್ಲ. ಇದನ್ನು ನ್ಯೂಟನ್ ಸಿದ್ಧಾಂತಕ್ಕೇ ತುಲನೆ ಮಾಡಿ ನೋಡಿದರೆ, ಟಿವಿ ವಾಹಿನಿ ಯಾವುದೇ ರೀತಿಯ ದಾಳಿ ಮಾಡಿರಲಿಲ್ಲವಲ್ಲ? ಆದರೆ ಸಂಘಪರಿವಾರದ ಸಂಸ್ಕೃತಿಯೇ ಈ ರೀತಿ ದಾಳಿ ನಡೆಸುವುದು. ಕೆಲವೊಮ್ಮೆ ಸೈದ್ಧಾಂತಿಕ ದಾಳಿ ನಡೆಸಿದರೆ, ಮತ್ತೊಮ್ಮೆ ದೈಹಿಕವಾಗಿ ದಾಳಿ ನಡೆಸುತ್ತದೆ. ಕೈ ಕತ್ತರಿಸಿ, ತಲೆ ಕತ್ತರಿಸಿ, ಕಾಲು ಮುರಿ ಇವೆಲ್ಲವೂ ಕಳೆದ ಎರಡು ದಶಕಗಳಲ್ಲಿ ಸಂಘಪರಿವಾರದ ಅಜೆಂಡಾ ಆಗಿರುವುದು ಗುಟ್ಟಿನ ಮಾತೇನಲ್ಲ. ಮಂಗಳೂರಿನಲ್ಲಿ ನಡೆದ ಪಬ್ ದಾಳಿ, ಚರ್ಚುಗಳ ಮೇಲೆ ನಡೆದ ಆಕ್ರಮಣಗಳು, ಲವ್ ಜಿಹಾದ್ ಪ್ರಕರಣಗಳು ಇವೆಲ್ಲವೂ ನ್ಯೂಟನ್ ಪ್ರಮೇ ಯದ ನಿದರ್ಶನಗಳೇನಲ್ಲ. ಏಕೆಂದರೆ ಇಲ್ಲಿ ಯಾವುದೂ ಕ್ರಿಯೆ ಇಲ್ಲದೆ ಪ್ರತಿಕ್ರಿಯೆ ವ್ಯಕ್ತವಾಗಿದ್ದವು.

ಇಸ್ಲಾಮಿ ಜಿಹಾದ್ ಅಥವಾ ಮುಸ್ಲಿಂ ಭಯೋ ತ್ಪಾದನೆಗೆ

ಶಿಸ್ತಿನ ಸಂಘಟನೆ ಎಂದೇ ಹೆಸರಾದ, ಅಹಿಂಸಾ ಪ್ರತಿಪಾದನೆಯಲ್ಲಿ ಗಾಂಧೀಜಿಯನ್ನೂ ನಾಚಿಸುವ, ಎಂದಿಗೂ ಯಾರ ಮೇಲೂ ಆಕ್ರಮಣವನ್ನೇ ಮಾಡದ ಹಿಂದೂ ಸಂಘಟನೆಗಳು ಮಾಡಿದ್ದೇನು ? ಹೆಡ್ ಲೈನ್ಸ್ ಟುಡೇ ಕಛೇರಿಯ ಮೇಲೆ ದಾಳಿ ನಡೆಸಿ, ಎಲ್ಲವನ್ನೂ ಧ್ವಂಸ ಮಾಡಿ, ಅಲ್ಲಿನ ಸಿಬ್ಬಂದಿಗೆ ಜೀವ ಬೆದರಿಕೆ ಒಡ್ಡುವುದು. ಇದು ಭಯೋತ್ಪಾದನೆಯೋ ಅಲ್ಲವೋ ಇಲ್ಲಿ ಮುಖ್ಯ ವಲ್ಲ. ಇದನ್ನು ನ್ಯೂಟನ್ ಸಿದ್ಧಾಂತಕ್ಕೇ ತುಲನೆ ಮಾಡಿ ನೋಡಿದರೆ, ಟಿವಿ ವಾಹಿನಿ ಯಾವುದೇ ರೀತಿಯ ದಾಳಿ ಮಾಡಿರ ಲಿಲ್ಲವಲ್ಲ? ಆದರೆ ಸಂಘ ಪರಿವಾರದ ಸಂಸ್ಕೃತಿಯೇ ಈ ರೀತಿ ದಾಳಿ ನಡೆಸುವುದು. ಕೆಲವೊಮ್ಮೆ ಸೈದ್ಧಾಂತಿಕ ದಾಳಿ ನಡೆಸಿದರೆ, ಮತ್ತೊಮ್ಮೆ ದೈಹಿಕವಾಗಿ ದಾಳಿ ನಡೆಸುತ್ತದೆ.

ಪ್ರತಿಕ್ರಿಯೆಯಾಗಿಯೇ ಹಿಂದೂ ಭಯೋತ್ಪಾದನೆಯೂ ಸೃಷ್ಟಿಯಾಗಿದೆ, ಹಾಗಾಗಿ ಅದು ಭಯೋತ್ಪಾದನೆ ಅಲ್ಲ ಎನ್ನುವುದಾದರೆ ಅಡ್ಡಿಯಿಲ್ಲ. ಪದಪುಂಜಗಳ ಬಳಕೆ ನಮ್ಮ ಗ್ರಹೀಕೆಗಳಿಗೆ ಮಾತ್ರ. ಆದರೆ ಮೂಲಭೂತವಾದ, ಕೋಮುವಾದ, ಹಿಂಸಾತ್ಮಕ ಧೋರಣೆ, ಭಯೋತ್ಪಾದನೆ ಇವೆಲ್ಲವೂ ಧರ್ಮಾತೀತವಾದುದು. ಹಾಗೆಯೇ ಜನಸಾಮಾನ್ಯರಿಂದ ದೂರವಾದದ್ದೂ ಹೌದು. ಎಂ.ಎಫ್. ಹುಸೇನ್ ವಿರುದ್ಧ ದಾಳಿ ನಡೆಸುವ ಹಿಂದುತ್ವ ಸಂಘಟನೆಗಳಿಗೂ, ತಸ್ಲೀಮ್-ಸಲ್ಮಾನ್ ರಷ್ದಿಯ ವಿರುದ್ಧ ಫತ್ವಾ ಹೊರಡಿಸುವ ಮುಸ್ಲಿಂ ಸಂಘಟನೆಗಳಿಗೂ, ಡಾವಿನ್ಸಿ ಕೋಡ್ ನಿಷೇಧಿಸುವ ಕ್ರೈಸ್ತ ಸಂಘಟನೆಗಳಿಗೂ ಯಾವುದೇ ಮೂಲಭೂತ ವ್ಯತ್ಯಾಸವಿಲ್ಲ. ಹಾಗೆಯೇ ತಮ್ಮ ಧಾರ್ಮಿಕ ಭಾವನೆ(?)ಗಳನ್ನು ಘಾಸಿಗೊಳಿಸುವ ಅಭಿವ್ಯಕ್ತಿ ಮಾಧ್ಯಮವನ್ನು ಸಂಹರಿಸುವಲ್ಲೂ ಈ ಸಂಘಟನೆಗಳ ನಡುವೆ ವ್ಯತ್ಯಾಸವಿಲ್ಲ. ಕೇರಳದ ಜೋಸೆಫ್ ಪ್ರಕರಣ, ಹೆಡ್‌ಲೈನ್ಸ್ ಟುಡೇ ಪ್ರಕರಣ, ಟಿವಿ9 ಪ್ರಕರಣ, ಕೊಲ್ಲಾಪುರದ ಝಿ ಟಿವಿ ಕಛೇರಿಯ ಮೇಲಿನ ದಾಳಿ ಇವೆಲ್ಲವೂ ಒಂದೇ ಬೀಜದಿಂದ ಉತ್ಪತ್ತಿಯಾದ ವಿಷ ವೃಕ್ಷಗಳ ಫಲ.

ಆದರೂ ಹೆಡ್‌ಲೈನ್ಸ್ ಕಚೇರಿಯ ಮೇಲಿನ ದಾಳಿಯನ್ನು ಸಂಘಪರಿವಾರದ ವಕ್ತಾರರು ಯಾವುದೋ ಒಂದು ರೀತಿಯಲ್ಲಿ ಸಮರ್ಥಿಸುತ್ತಿದ್ದಾರೆ. ಹೆಡ್‌ಲೈನ್ಸ್ ಪ್ರಚಾರಮಾಡಿದ ಸಂಘಪರಿವಾರದ ಭಯೋತ್ಪಾದಕ ಚಟುವಟಿಕೆಗಳ ಸಿಡಿ ಸ್ಪಷ್ಟವಾಗಿ ನಿರೂಪಿತವಾಗಿದ್ದರೂ, ಅದನ್ನು ಒಂದು ಪಿತೂರಿ ಎಂದು ಆರೋಪಿಸುವ ಮೂಲಕ ಪರಿವಾರದ ನಾಯಕರು ತಮ್ಮ ಗೂಂಡಾ ಪಡೆಗಳನ್ನು ಸಮರ್ಥಿಸುತ್ತಿದ್ದಾರೆ. ಭಾಜಪ ವಕ್ತಾರ ಪ್ರಕಾಶ್ ಜಾವಡೇಕರ್ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, ಟಿವಿ ವಾಹಿನಿಯವರೇ ತಮ್ಮ ಕಚೇರಿಯನ್ನು ಧ್ವಂಸಮಾಡಿ ಸಂಘಪರಿವಾರವನ್ನು ದೂರುತ್ತಿದ್ದಾರೆ ಎಂದು ಆರೋಪಿಸಿದ್ದಾರೆ. ಸುದ್ದಿ ಮಾಧ್ಯಮಗಳಲ್ಲಿ ಸಂಘಪರಿವಾರದ ಕಾರ್ಯಕರ್ತರ ಧ್ವಂಸ ಕಾರ್ಯಾಚರಣೆಯನ್ನು ಸ್ಪಷ್ಟವಾಗಿ ತೋರಿಸುತ್ತಿದ್ದರೂ ಅದನ್ನು ಅಲ್ಲಗಳೆಯುವುದು ಪರಿವಾರದ ಠಕ್ಕುತನಕ್ಕೆ ಕನ್ನಡಿ ಹಿಡಿದಂತಿದೆ.

ದೇಶದ ಹಿತಾಸಕ್ತಿಗಳ ವಿರುದ್ಧ, ದೇಶದ ಪ್ರಜೆಗಳ ವಿರುದ್ಧ ಸಮರ ಸಾರುವ, ವಿಧ್ವಂಸಕ ಕೃತ್ಯ ಎಸಗುವ ಯಾವುದೇ ಶಕ್ತಿಗಳನ್ನು ವಿಚಾರಣೆಗೂ ಒಳಪಡಿಸದೆ ನೇಣು ಹಾಕಬೇಕೆಂದು ವಾದಿಸುವ ಭಾಜಪ-ಸಂಘಪರಿವಾರಕ್ಕೆ ಮಲೆಗಾಂವ್, ಮಕ್ಕಾ ಮಸೀದಿ, ಅಜ್ಮೇರ್ ದಾಳಿಗಳ ಕರ್ತೃಗಳು ಮಾತ್ರ ಕ್ಷಮಾರ್ಹರಾಗುತ್ತಾರೆ. ಅಫ್ಜಲ್ ಗುರು ಅವರನ್ನು ಗಲ್ಲಿಗೇರಿಸದಿರುವುದನ್ನು ಭಾರತ ಸರ್ಕಾರದ ದೌರ್ಬಲ್ಯ ಎಂದು ಪರಿಗಣಿಸಿ ಕಾಂಗ್ರೆಸ್ ಸರ್ಕಾರದ ನೀತಿಯನ್ನು ಮೆದುನೀತಿ ಎಂದು ಮೂದಲಿಸುವ ಭಾಜಪ-ಸಂಘಪರಿವಾರಕ್ಕೆ ಪುರೋಹಿತ್, ಬಿ.ಎಲ್. ಶರ್ಮ ಮುಂತಾದವರು ಮಾತ್ರ ದೇಶ ಭಕ್ತರಾಗುತ್ತಾರೆ. ಏಕೆಂದರೆ ಅವರು ಭಯೋತ್ಪಾದಕರಲ್ಲ. ಇಸ್ಲಾಂ ಭಯೋತ್ಪಾದನೆಗೆ ಪ್ರತಿಕ್ರಿಯೆ ವ್ಯಕ್ತಪಡಿಸುತ್ತಿರುವ ಅಪ್ಪಟ ದೇಶ ಭಕ್ತರು !

ಹಾಗಾಗಿ ಈ ದೇಶಭಕ್ತರ, ಭಗತ್‌ಸಿಂಗ್ (!) ಅನುಯಾಯಿಗಳ ಎಲ್ಲಾ ಹಿಂಸಾತ್ಮಕ ಕೃತ್ಯಗಳು ಸಂವಿಧಾನ ಬದ್ಧವಾದುದು. ಈ ಹಿಂಸಾಕೃತ್ಯವನ್ನು ತಡೆಗಟ್ಟಿ ನ್ಯೂಟನ್ ಸಿದ್ಧಾಂತದ ಅನುಷ್ಠಾನಕ್ಕೆ ತಡೆ ಒಡ್ಡಬೇಕೆಂದರೆ ಭಾರತ ಸರ್ಕಾರ ಮತ್ತೊಂದು ಬದಿಯ ಭಯೋತ್ಪಾದನೆಯನ್ನು ತಡೆಗಟ್ಟಬೇಕು. ಅಂದರೆ ಇಸ್ಲಾಂ ಜಿಹಾದಿಗಳು ಇರುವವರೆಗೂ ಹಿಂದೂ ಪ್ರತಿಕ್ರಿಯೆ, ಎಷ್ಟೇ ಭಯಾನಕವಾದರೂ ಭಯೋತ್ಪಾದನೆಯಲ್ಲ, ಕೇವಲ ಪ್ರತಿಕ್ರಿಯೆ ಅಷ್ಟೆ, ವ್ಯಕ್ತವಾಗುತ್ತಲೇ ಇರುತ್ತದೆ. ಮತ್ತಷ್ಟು ಮಲೆಗಾಂವ್‌ಗಳು, ಮತ್ತಷ್ಟು ಅಜ್ಮೇರ್‌ಗಳು, ಮಕ್ಕಾ ಮಸೀದಿಗಳು ಸಂಭವಿಸುತ್ತಿರುತ್ತವೆ. ಈ ಕೃತ್ಯಗಳನ್ನು ಖಂಡಿಸುವಿರೋ, ಇದೋ ಇಲ್ಲಿದೆ ನಮ್ಮ ಸೇನೆ! ಹೆಡ್‌ಲೈನ್ಸ್ ಟುಡೇ ಕಚೇರಿಗೆ ಬಂದ ಗತಿಯೇ ಎಲ್ಲ ಮಾಧ್ಯಮಗಳಿಗೂ ಶತಃ ಸಿದ್ಧ. ಇದು ಸಂಘಪರಿವಾರ ನೀಡಿರುವ, ನೀಡುತ್ತಿರುವ, ಸಮರ್ಥಿಸುತ್ತಿರುವ ನೀತಿ.

> **ಈ ದೇಶಭಕ್ತರ, ಭಗತ್‌ಸಿಂಗ್ (!) ಅನುಯಾಯಿಗಳ ಎಲ್ಲಾ ಹಿಂಸಾತ್ಮಕ ಕೃತ್ಯಗಳು ಸಂವಿಧಾನ ಬದ್ಧವಾದುದು. ಈ ಹಿಂಸಾಕೃತ್ಯವನ್ನು ತಡೆಗಟ್ಟಿ ನ್ಯೂಟನ್ ಸಿದ್ಧಾಂತದ ಅನುಷ್ಠಾನಕ್ಕೆ ತಡೆ ಒಡ್ಡಬೇಕೆಂದರೆ ಭಾರತ ಸರ್ಕಾರ ಮತ್ತೊಂದು ಬದಿಯ ಭಯೋತ್ಪಾದನೆಯನ್ನು ತಡೆಗಟ್ಟಬೇಕು. ಅಂದರೆ ಇಸ್ಲಾಂ ಜಿಹಾದಿಗಳು ಇರುವವರೆಗೂ ಹಿಂದೂ ಪ್ರತಿಕ್ರಿಯೆ, ಎಷ್ಟೇ ಭಯಾನಕವಾದರೂ ಭಯೋತ್ಪಾದನೆಯಲ್ಲ, ಕೇವಲ ಪ್ರತಿಕ್ರಿಯೆ ಅಷ್ಟೆ, ವ್ಯಕ್ತವಾಗುತ್ತಲೇ ಇರುತ್ತದೆ.**

ಹಾಗಾಗಿ ಸಂಘಪರಿವಾರದ ಗೂಂಡಾಗಿರಿಯನ್ನು, ಅಭಿನವ ಭಾರತ್ ಸಂಘಟನೆಯ ಹೋರಾಟವನ್ನು ಭಯೋತ್ಪಾದನೆ ಎಂದು ಕರೆಯುವಂತಿಲ್ಲ. ದೇಶದ ಎಲ್ಲಾ ಮಾಧ್ಯಮಗಳೂ, ಪ್ರಗತಿಪರರೂ, ಬುದ್ಧಿ ಜೀವಿಗಳೂ ಇದನ್ನು ಗಮನಿಸಬೇಕು. ಆದರೆ ಭಾರತದ ಜನಸಾಮಾನ್ಯರಿಗೆ ಸರಿತಪ್ಪುಗಳನ್ನು ಪರಾಮರ್ಶಿಸುವ ಸಾಮರ್ಥ್ಯ, ಬೌದ್ಧಿಕ ಗ್ರಹಿಕೆ ಇರುವುದನ್ನು ಸಂಘಪರಿವಾರದ ನಾಯಕರು ಮರೆಯದಿರಲಿ. ಪಕ್ಷದ, ಸಂಘಟನೆಯ ನಾಯಕರು, ವಕ್ತಾರರು ನೀಡುವ ಸಮಜಾಯಿಷಿಗಳು ಅವರ ಅನುಯಾಯಿಗಳನ್ನು, ಹಿಂಬಾಲಕರನ್ನು, ಸಮರ್ಥಕರನ್ನು ಸಮಾಧಾನ ಪಡಿಸಬಹುದು. ಧರ್ಮದ ಹೆಸರಿನಲ್ಲಿ ಎಲ್ಲಾ ಧರ್ಮಗಳ ಮೂಲಭೂತವಾದಿಗಳು ದೇಶದಲ್ಲಿ ಬಿತ್ತುತ್ತಿರುವ ದ್ವೇಷಾ ಸೂಯೆಗಳ ವಿಷಬೀಜಗಳನ್ನು ಜನ ಗಮನಿಸದಿರುವುದಿಲ್ಲ. ಗೋಬೆಲ್ ತಂತ್ರಗಳು ಸದಾಕಾಲ ಯಶಸ್ವಿಯಾಗುವುದೂ ಇಲ್ಲ. ಹಿಟ್ಲರನ ತಂತ್ರಗಳೂ.

ಭಯೋತ್ಪಾದನೆಯನ್ನು ವ್ಯಾಖ್ಯಾನಿಸುವ ರೀತಿಯಲ್ಲಿ ವೈವಿಧ್ಯವಿರಬಹುದು, ಆಧರೆ ಮನುಕುಲವನ್ನು ಅಂತರ್ಯದಿಂದಲೇ ಸರ್ವನಾಶ ಮಾಡುವ ಈ ಭಾವನಾತ್ಮಕ ವಿದ್ಯಮಾನ ಧರ್ಮಾತೀತವಾಗಿರುವುದನ್ನು ಯಾರಿಂದಲೂ ಅಲ್ಲಗಳೆಯಲಾಗುವುದಿಲ್ಲ. ಕೋಮುವಾದ, ಮೂಲಭೂತವಾದ, ಭಯೋತ್ಪಾದನೆ ಇವೆಲ್ಲವೂ ಫ್ಯಾಸಿಸ್ಟ್ ಮನೋಭಾವದ ವಿಭಿನ್ನ ಸ್ವರೂಪಗಳಷ್ಟೆ. ಎಲ್ಲವೂ ಪರ್ಯವಸಾನ ಹೊಂದುವುದು ಹಿಂಸೆಯಲ್ಲಿ, ಮಾರಣ ಹೋಮಗಳಲ್ಲಿ, ಹತ್ಯಾಕಾಂಡಗಳಲ್ಲಿ, ಮನುಕುಲದ ವಿನಾಶದಲ್ಲಿ. ಸಂಘಪರಿವಾರದವರು ಮತ್ತು ಪರಿವಾರದ ಸಮರ್ಥಕರು ಇತಿಹಾಸವನ್ನು ತುಲನಾತ್ಮಕ ದೃಷ್ಟಿಯಿಂದ ವಿಶ್ಲೇಷಿಸುವುದನ್ನು ಬಿಟ್ಟು, ವಾಸ್ತವತೆಯ ನೆಲೆಗಟ್ಟಿನಲ್ಲಿ ವಿಶ್ಲೇಷಿಸಿದಲ್ಲಿ ನ್ಯೂಟನ್‌ನ ಪ್ರಮೇಯ ಅನಗತ್ಯವಾಗುತ್ತದೆ. ಇಲ್ಲವಾದಲ್ಲಿ ಕ್ರಿಯೆ-ಪ್ರತಿಕ್ರಿಯೆ ಸಿದ್ಧಾಂತ ಇಡೀ ಮನುಕುಲವನ್ನೇ ವಿನಾಶದ ಅಂಚಿಗೆ ಕೊಂಡೊಯ್ಯುವ ಕಾಲ ದೂರವೇನಿಲ್ಲ. □

ಮನುಷ್ಯ ಜಂತುಗಳು ನಿರ್ಮಿಸಿದ ಜಾತಿ ಕ್ರೌರ್ಯದ ಒಂದು ಮುಖ

ಕೆ. ಎಲ್ ಚಂದ್ರಶೇಖರ್ ಐಜೂರ್

1994ರಲ್ಲಿ ಹೊತ್ತಿಕೊಂಡ ಜಾತಿ ಸಂಘರ್ಷದ ಕಿಡಿಯೊಂದು ಈಗ ಆ ಹಳ್ಳಿಯಲ್ಲಿ ಮನುಷ್ಯರ ನಡುವೆ ಅನುಮಾನ, ಸಂಚು – ಕ್ರೌರ್ಯ ತುಂಬಿಕೊಂಡ ಅಟ್ಟಹಾಸದ ಗೋಡೆಗಳನ್ನು ನಿರ್ಮಿಸಿದೆ. ಮನುಷ್ಯರ ಎದೆಯೊಳಗೆ ಅವಿತು ಕುಳಿತಿರುವ ಸೈತಾನರು ಹೊರಬಂದು ಅಲ್ಲಿ ಯಾವಾಗ ಬೇಕಾದರೂ ಇನ್ನೊಂದು ಕಂಬಾಲಪಲ್ಲಿಯನ್ನು ನಿರ್ಮಿಸಬಲ್ಲರು. ರಾಮನಗರ ತಾಲ್ಲೋಕಿನ, ಅಂಕನಹಳ್ಳಿ ಎಂಬ ಗ್ರಾಮದಲ್ಲಿ ಈಗ ದುರಂತದ ನಂತರ ಕಾಣಿಸಿಕೊಳ್ಳಬಹುದಾದ ಸೂತಕದ ಕಳೆ ಆವರಿಸಿಕೊಂಡಿದೆ. 300 ಒಕ್ಕಲಿಗ, 40 ದಲಿತ ಹಾಗೂ ತಲಾ ಒಂದೊಂದು ಲಿಂಗಾಯತ ಮತ್ತು ಗೊಲ್ಲರ ಕುಟುಂಬವಿರುವ ಅಂಕನಹಳ್ಳಿ ರಾಮನಗರದ ಹಾಲಿ ಶಾಸಕರಾದ ಕೆ.ರಾಜು ಅವರ ನೆಂಟರಿಷ್ಟರು ಹೆಚ್ಚಿನ ಸಂಖ್ಯೆಯಲ್ಲಿರುವ ಗ್ರಾಮವೂ ಹೌದು.

1994ರಲ್ಲಿ ಇಲ್ಲಿನ ಮಾರಮ್ಮನ ದೇವಾಲಯದಲ್ಲಿ ಸವರ್ಣೀಯರಿಗೂ ದಲಿತರಿಗೂ ಪೂಜೆಯ ವಿಚಾರದಲ್ಲಿ ನಡೆದ ತಾರತಮ್ಯದಿಂದಾಗಿ ವೈಮನಸ್ಯಗಳು ಉಂಟಾಗಿ, ಅದು ಸಣ್ಣದೊಂದು ಕದನಕ್ಕೂ ಕಾರಣವಾಗಿ ನಂತರ ನೊಂದ ದಲಿತರು ರಾಮನಗರದ ಗ್ರಾಮಾಂತರ ಪೊಲೀಸ್ ಠಾಣೆಯ ಹಾದಿ ತುಳಿದರು. ಸವರ್ಣೀಯರು ಪೂಜೆಗೆಂದು ತರುವ ತಟ್ಟೆಯನ್ನು ಅಲ್ಲಿನ ಮಾರಮ್ಮನ ಗುಡಿಯ ಪೂಜಾರಿ ಗರ್ಭಗುಡಿಯೊಳಕ್ಕೆ ತೆಗೆದುಕೊಂಡು ಹೋಗಿ ಪೂಜೆ ಮಾಡಿದರೆ, ದಲಿತರ ತಟ್ಟೆಗಳನ್ನು ಮುಟ್ಟದೆ ತೆಂಗಿನಕಾಯಿ ಹಣ್ಣುಗಳನ್ನು ಮಾತ್ರ ತೆಗೆದುಕೊಂಡು ಪೂಜೆಮಾಡಿ ನಂತರ ಅದನ್ನು ಗುಡಿಯ ಹೊರಭಾಗದಲ್ಲಿ ಗುಡ್ಡೆ ಹಾಕುತ್ತಿದ್ದನು. ನಂತರ ಆ ಗುಡ್ಡೆಯಲ್ಲಿ ದಲಿತ ಹೆಣ್ಣುಮಕ್ಕಳು ತಮ್ಮ ಹಣ್ಣುಕಾಯಿಗಳನ್ನು ಗುರುತಿಸಿ ತಮ್ಮದನ್ನು ಮನೆಗೆ ತೆಗೆದುಕೊಂಡು ಹೋಗಬೇಕಾಗಿತ್ತು.

ಇದರಿಂದ ಕೆರಳಿದ ಕೆಲವು ದಲಿತ ಯುವಕರು ಇದನ್ನು ಪ್ರಶ್ನಿಸಿ ಪೊಲೀಸರಿಗೆ ದೂರು ನೀಡಿದರು. ಆಗ ಪೊಲೀಸ್ ವರಿಷ್ಠಾಧಿಕಾರಿಯಾಗಿದ್ದ ಸುಭಾಷ್ ಭರಣಿ – ಜಿಲ್ಲಾಧಿಕಾರಿಯಾಗಿದ್ದ ಕೆ.ಶಿವರಾಮ್ ಅಂಕನಹಳ್ಳಿಗೆ ಬಂದು ಪರಿಸ್ಥಿತಿಯನ್ನು ಅರಿತು ಶಾಂತಿಸಭೆ ನಡೆಸಲು ಮುಂದಾದರು. ದಲಿತರ ದೇವಾಲಯ ಪ್ರವೇಶವನ್ನು ನಿರಾಕರಿಸಿ ಪೂಜೆಯಲ್ಲಿ ತಾರತಮ್ಯ ಮಾಡುವುದಾದರೆ ಮಾರಮ್ಮನ ಗುಡಿಗೆ ಬೀಗ ಹಾಕಲಾಗುವುದು ಎಂಬ ಆದೇಶವೂ ಆ ಸಭೆಯಲ್ಲಿ ಹೊರಬಿತ್ತು. ಮಾರಮ್ಮನ ಹೆಸರಿನಲ್ಲಿ ಯಾವುದೇ ಹಬ್ಬ, ಉತ್ಸವ, ಜಾತ್ರೆ ಮಾಡುವುದಾದರೆ ಎರಡು ಕೋಮಿನ ಜನ ಒಟ್ಟಾಗಿ ಸೇರಿ ಮಾಡಬೇಕೆಂಬ ಜಿಲ್ಲಾಧಿಕಾರಿ ನಿಲುವಿಗೆ ಎರಡು ಕೋಮಿನ ಮುಖಂಡರು ಒಪ್ಪಿಗೆಯನ್ನು ನೀಡಿದರು. ಆದರೆ ನಂತರ ನಡೆದದ್ದೇ ಬೇರೆ. ಜಿದ್ದಿಗೆ ಬಿದ್ದ ಸವರ್ಣೀಯ ಕೋಮಿನ ಮುಖಂಡರು ದಲಿತರೊಂದಿಗೆ ಸೇರಿ ಊರ ಹಬ್ಬ ಮಾಡಿ ಮೈಲಿಗೆಯಾಗುವುದಕ್ಕಿಂತ ಸುಮ್ಮನಿದ್ದುಬಿಡುವುದು ವಾಸಿ ಯೆಂದು ತೀರ್ಮಾನಿಸಿ, 1994ರಿಂದ ಅಂಕನಹಳ್ಳಿಯಲ್ಲಿ ಮಾರಮ್ಮನ ಹಬ್ಬ ಜರುಗದಂತೆ ನೋಡಿಕೊಂಡರು. ಜೊತೆಗೆ ಪೂಜೆ ವಿಧಾನದ ತಾರತಮ್ಯವೂ ಮೊದಲಿದ್ದ ರೀತಿಯೇ ಮುಂದುವರೆಯಿತು. ಸವರ್ಣೀಯರು ಮತ್ತು ದಲಿತರ ನಡುವೆ ಶೀತಲ ಸಮರ ಮಾತ್ರ ಆಗಾಗ ನಡೆಯುತ್ತಲೇ ಇತ್ತು.

ಮೊನ್ನೆ ಮಾರ್ಚ್ ತಿಂಗಳಿನಲ್ಲಿ ದಲಿತ ಜನಾಂಗದವರಿಗೆ ಗೊತ್ತಾಗದಂತೆ ಇಲ್ಲಿನ ಒಕ್ಕಲಿಗ ಸಮುದಾಯ ಏಕಪಕ್ಷೀಯವಾಗಿ 16ವರ್ಷಗಳ ನಂತರ ಮಾರಮ್ಮನ ಹಬ್ಬ ಮಾಡುವ ನಿರ್ಧಾರ ಕೈಗೊಂಡಿದೆ. ಈಗ ಅಂಕನಹಳ್ಳಿಯ ದಲಿತ ಕುಟುಂಬಗಳಲ್ಲಿ ಮೆಡಿಕಲ್, ಇಂಜಿನಿಯರಿಂಗ್ ಓದುತ್ತಿರುವ ವಿದ್ಯಾರ್ಥಿಗಳಿದ್ದಾರೆ. ದಲಿತ ಸಂಘಟನೆಗಳ ಹೋರಾಟ ಮತ್ತು ಶಿಕ್ಷಣದ ಅರಿವಿನಿಂದಾಗಿ ಇಲ್ಲಿನ ದಲಿತ ಹುಡುಗರು ಪ್ರಶ್ನಿಸುವ ಮತ್ತು ಸ್ವಾಭಿಮಾನದ ಬದುಕು ಸಾಗಿಸುವ ಮನೋಭಾವವನ್ನು ಬೆಳೆಸಿಕೊಂಡಿದ್ದಾರೆ.

೧೯೯೪ರಲ್ಲಿ ಇಲ್ಲಿನ ಮಾರಮ್ಮನ ದೇವಾಲಯದಲ್ಲಿ ಸವರ್ಣೀಯರಿಗೂ ದಲಿತರಿಗೂ ಪೂಜೆಯ ವಿಚಾರದಲ್ಲಿ ನಡೆದ ತಾರತಮ್ಯದಿಂದಾಗಿ ವೈಮನಸ್ಯಗಳು ಉಂಟಾಗಿ, ಅದು ಸಣ್ಣದೊಂದು ಕದನಕ್ಕೂ ಕಾರಣವಾಗಿ ನಂತರ ನೊಂದ ದಲಿತರು ರಾಮನಗರದ ಗ್ರಾಮಾಂತರ ಪೊಲೀಸ್ ಠಾಣೆಯ ಹಾದಿ ತುಳಿದರು. ಸವರ್ಣೀಯರು ಪೂಜೆಗೆಂದು ತರುವ ತಟ್ಟೆಯನ್ನು ಅಲ್ಲಿನ ಮಾರಮ್ಮನ ಗುಡಿಯ ಪೂಜಾರಿ ಗರ್ಭದ ಗುಡಿಯೊಳಕ್ಕೆ ತೆಗೆದುಕೊಂಡು ಹೋಗಿ ಪೂಜೆ ಮಾಡಿದರೆ, ದಲಿತರ ತಟ್ಟೆಗಳನ್ನು ಮುಟ್ಟದೆ ತೆಂಗಿನಕಾಯಿ ಹಣ್ಣುಗಳನ್ನು ಮಾತ್ರ ತೆಗೆದುಕೊಂಡು ಪೂಜೆಮಾಡಿ ನಂತರ ಅದನ್ನು ಗುಡಿಯ ಹೊರಭಾಗದಲ್ಲಿ ಗುಡ್ಡೆ ಹಾಕುತ್ತಿದ್ದನು.

ಮೊನ್ನೆ ಇದೇ ದಲಿತ ಕೋಮಿನ ಶಿಕ್ಷಕ ನಾಗರಾಜು ದೇವಸ್ಥಾನದ ಪೂಜೆಯಲ್ಲಾಗುತ್ತಿರುವ ತಾರತಮ್ಯ ಹಾಗೂ ದಲಿತರನ್ನು ಕೈಬಿಟ್ಟು ತಾವಷ್ಟೇ ಮಾರಮ್ಮನ ಹಬ್ಬ ಮಾಡಲು ಹೊರಟಿರುವ ಸವರ್ಣೀಯರ ನಡೆಗಳನ್ನು ಖಂಡಿಸಿ ಪ್ರಶ್ನೆ ಮಾಡಿದ್ದಾರೆ. ಇಷ್ಟಕ್ಕೇ ರೊಚ್ಚಿಗೆದ್ದ ಸವರ್ಣೀಯರು ಶಿಕ್ಷಕ ನಾಗರಾಜು ಮತ್ತು ಏಳೆಂಟು ಮಂದಿ ದಲಿತರ ಮೇಲೆ ಕೈಮಾಡಲು ಮುಂದಾಗಿದ್ದಾರೆ. ದಲಿತರು ಮತ್ತು ಸವರ್ಣೀಯರ ಓಣಿಯನ್ನು ಪ್ರತ್ಯೇಕಿಸಿ, ದಲಿತರು ಯಾವ ಕಾರಣಕ್ಕೂ ತಮ್ಮ ಮನೆ ಮುಂದಿನ ಬೀದಿಗಳಲ್ಲಿ ಕಾಣಿಸಿಕೊಳ್ಳದಂತೆ ಇಲ್ಲಿನ ಸವರ್ಣೀಯರು ದಲಿತರ ಮನೆಗಳಿಗೆ ಅಂಟಿಕೊಂಡಂತೆ ಮುಳ್ಳಿನ ಬೇಲಿಗಳನ್ನು ನೆಟ್ಟಿದ್ದಾರೆ.

ಬರೀ ಇಷ್ಟಕ್ಕೇ ತೃಪ್ತರಾಗದೆ, ಅವರು ಮುಂದುವರೆದು ಅಂಕನಹಳ್ಳಿಯ ನ್ಯಾಯಬೆಲೆ ಅಂಗಡಿ, ದಿನಸಿ ಅಂಗಡಿ, ಗೂಡಂಗಡಿ, ಫ್ಲೋರ್‌ಮಿಲ್‌ಗಳಿಗೆ ದಲಿತರ ಪ್ರವೇಶವಾಗದಂತೆ ನೋಡಿಕೊಂಡಿದ್ದಾರೆ. ಅಂಗಡಿ, ಮನೆ ಮತ್ತು ಹಾದಿಬೀದಿಗಳಲ್ಲಿ ದಲಿತರೊಂದಿಗೆ ಮಾತನಾಡಲು ಮುಂದಾಗುವ ಸವರ್ಣೀಯರಿಗೆ ಇಲ್ಲಿನ ಒಕ್ಕಲಿಗ ಮುಖಂಡರು ಐದು ಸಾವಿರ ರೂಪಾಯಿ ದಂಡ ವಿಧಿಸುವ ಆಜ್ಞೆಗಳನ್ನು ಮೌಖಿಕವಾಗಿ ಹೊರಡಿಸಿದ್ದಾರೆ. ಇದರಿಂದಾಗಿ ದಲಿತರ ಬಗ್ಗೆ ಅನುಕಂಪವಿರುವ ನಾಲ್ಕೈದು ಒಕ್ಕಲಿಗ ಕುಟುಂಬಗಳು ಮೌನ ತಾಳುವಂತಾಗಿವೆ.

ಸವರ್ಣೀಯರ ಈ ಬಗೆಯ ಕ್ರೌರ್ಯ ಇಷ್ಟಕ್ಕೆ ಮುಗಿದಿಲ್ಲ. ತಮ್ಮೊಂದಿಗೆ ಬಸ್ಸನ್ನು ಹತ್ತುವ ದಲಿತರನ್ನು ಥಳಿಸಿ, ನಿರ್ದಾಕ್ಷಿಣ್ಯವಾಗಿ ಬಸ್ಸಿನಿಂದ ಕೆಳಗಿಳಿಸಿದ್ದಾರೆ. ಶಾಲೆಯಲ್ಲಿ ದಲಿತ ಮಕ್ಕಳನ್ನು ಮುಟ್ಟದಂತೆ, ಅವರೊಂದಿಗೆ ಮಾತನಾಡದಂತೆ ಇಲ್ಲಿನ ಸವರ್ಣೀಯರು ತಮ್ಮ ಮಕ್ಕಳಿಗೆ ತಾಕೀತು ಮಾಡಿದ್ದಾರೆ. ಮನುಷ್ಯ ಜಂತುಗಳು ನಿರ್ಮಿಸಿರುವ ಈ ಕ್ರೌರ್ಯದ ಯಾವ ಮುಖಗಳನ್ನು ಕಾಣದ ನಾಲ್ಕೈದು ವರ್ಷಗಳ ಎಳೆಯ ಮಕ್ಕಳು ಸವರ್ಣೀಯರ ಅಂಗಡಿಗಳಿಗೆ ತಿಂಡಿ ತರಲೆಂದು ಹೋದವರು ಬೈಗುಳ, ಗದರಿಕೆಗಳನ್ನು ತಿಂದು ಮನೆಯತ್ತ ಅಳುತ್ತಾ ಬಂದಿದ್ದಾರೆ. ಅಲ್ಲಿ ಆ ಹಳ್ಳಿಯಲ್ಲಿ ದಲಿತರನ್ನು ಸಾಮಾಜಿಕವಾಗಿ ಬಹಿಷ್ಕಾರಕ್ಕೆ ಒಳಪಡಿಸಲಾಗಿದೆ.

ದೌರ್ಜನ್ಯಕ್ಕೊಳಗಾದ ದಲಿತರು ರಾಮನಗರ ತಾಲ್ಲೋಕಿನ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ(ಅಪರಾಧ ಸಂಖ್ಯೆ: 175/10 ದಿನಾಂಕ.23.06.2010). ಆ ದೂರಿನನ್ವಯ ಪೊಲೀಸ್ ಠಾಣೆಯಲ್ಲಿ ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳ (ದೌರ್ಜನ್ಯ ಪ್ರತಿಬಂಧ) ಅಧಿನಿಯಮ, 1989ರ ಸೆಕ್ಷನ್ 3(1), 3(10) – ಇಂಡಿಯನ್ ಪೀನಲ್ ಕೋಡ್‌ನ ಸೆಕ್ಷನ್ 506ರ ಅಡಿ ಎಫ್.ಐ.ಆರ್. ರೂಪಿಸಲಾಗಿದೆ. ಈ ಅಟ್ರಾಸಿಟಿ ಅಧಿನಿಯಮದೊಳಗೆ ಬರುವ ಅಪರಾಧಗಳಿಗೆ ಸುಲಭವಾಗಿ ಜಾಮೀನು ದೊರೆಯಲಾರದು. ಈ ಕಾರಣದಿಂದಾಗಿಯೇ ದಲಿತರ ಆತ್ಮಸ್ಥೈರ್ಯವನ್ನು ಕುಗ್ಗಿಸಲು, ಈ ಕಾಯ್ದೆಯನ್ನು ಆದಷ್ಟು ದುರ್ಬಲಗೊಳಿಸಲು ಪೊಲೀಸರು ದಲಿತರ ಮೇಲೆ ಸವರ್ಣೀಯರಿಂದ ದೂರೊಂದನ್ನು ಪಡೆದು ದೌರ್ಜನ್ಯಕ್ಕೊಳಗಾದ ದಲಿತರ ಮೇಲೆಯೇ ಕೌಂಟರ್ ಕೇಸ್ ದಾಖಲಿಸುತ್ತಾರೆ.

ತಮ್ಮ ಮೇಲೆರಗಿದ ದೌರ್ಜನ್ಯಕ್ಕೆ ನ್ಯಾಯ ಕೇಳಲು ಹೋಗುವ ದಲಿತರು ತಾವು ಎಸಗದ ತಪ್ಪಿಗೆ ಆರೋಪಿಗಳ ಕಟಕಟೆಯಲ್ಲೂ ನಿಲ್ಲಬೇಕಾಗುತ್ತದೆ. ಪರಿಹಾರಕ್ಕೆ

ಸವರ್ಣೀಯರ ಈ ಬಗೆಯ ಕ್ರೌರ್ಯ ಇಷ್ಟಕ್ಕೆ ಮುಗಿದಿಲ್ಲ. ತಮ್ಮೊಂದಿಗೆ ಬಸ್ಸನ್ನು ಹತ್ತುವ ದಲಿತರನ್ನು ಥಳಿಸಿ, ನಿರ್ದಾಕ್ಷಿಣ್ಯವಾಗಿ ಬಸ್ಸಿನಿಂದ ಕೆಳಗಿಳಿಸಿದ್ದಾರೆ. ಶಾಲೆಯಲ್ಲಿ ದಲಿತ ಮಕ್ಕಳನ್ನು ಮುಟ್ಟದಂತೆ, ಅವರೊಂದಿಗೆ ಮಾತನಾಡದಂತೆ ಇಲ್ಲಿನ ಸವರ್ಣೀಯರು ತಮ್ಮ ಮಕ್ಕಳಿಗೆ ತಾಕೀತು ಮಾಡಿದ್ದಾರೆ. ಮನುಷ್ಯ ಜಂತುಗಳು ನಿರ್ಮಿಸಿರುವ ಈ ಕ್ರೌರ್ಯದ ಯಾವ ಮುಖಗಳನ್ನು ಕಾಣದ ನಾಲ್ಕೈದು ವರ್ಷಗಳ ಎಳೆಯ ಮಕ್ಕಳು ಸವರ್ಣೀಯರ ಅಂಗಡಿಗಳಿಗೆ ತಿಂಡಿ ತರಲೆಂದು ಹೋದವರು ಬೈಗುಳ, ಗದರಿಕೆಗಳನ್ನು ತಿಂದು ಮನೆಯತ್ತ ಅಳುತ್ತಾ ಬಂದಿದ್ದಾರೆ. ಅಲ್ಲಿ ಆ ಹಳ್ಳಿಯಲ್ಲಿ ದಲಿತರನ್ನು ಸಾಮಾಜಿಕವಾಗಿ ಬಹಿಷ್ಕಾರಕ್ಕೆ ಒಳಪಡಿಸಲಾಗಿದೆ.

ಅಂಗಲಾಚುವ ದಲಿತ 'ವಿಕ್ಟಿಮ್' ಮತ್ತು 'ಅಫೆಂಡರ್' ಎಂಬ ಎರಡು ಪಾತ್ರಗಳನ್ನು ಒಮ್ಮೆಗೆ ತೊಟ್ಟುಕೊಳ್ಳಬೇಕಾದ ಸ್ಥಿತಿಯನ್ನು ಈ ದೊಡ್ಡದೇಶದ ಪೊಲೀಸ್ ಠಾಣೆಗಳು ಸಲೀಸಾಗಿ ನಿರ್ಮಿಸಿವೆ. ರಾಮನಗರದ ಶಾಸಕರ ಅಧೀನದಲ್ಲಿ ಜೀತಕ್ಕಿರುವ ಇಲ್ಲಿನ ಗ್ರಾಮಾಂತರ ಪೊಲೀಸ್ ಠಾಣೆಯ ಪೊಲೀಸರು, ತಮ್ಮ ಶಾಸಕರ ಕೋಮಿನ ಜನರ ಬೆನ್ನಿಗೆ ಬಹಿರಂಗವಾಗಿ ನಿಂತಿರುವುದು ಅಂಕನಹಳ್ಳಿಯ ದಲಿತರ ಆತಂಕವನ್ನು ಇನ್ನಷ್ಟು ಹೆಚ್ಚಿಸಿದೆ. ಪೊಲೀಸರ ಮೇಲೆ ಸಾಸಿವೆ ಗಾತ್ರದಷ್ಟು ನಂಬಿಕೆ ಇಡದ ಇಲ್ಲಿನ ದಲಿತರು 'ಮುಂದೊಂದು ದಿನ ಇದೇ ಪೊಲೀಸರನ್ನು ಕಣ್ಣಮುಂದೆ ಇಟ್ಟುಕೊಂಡು, ನಮ್ಮ ಮೇಲೆ ಎಂತಹ ಭೀಕರ ಕ್ರೌರ್ಯವನ್ನು ಬೇಕಾದರೂ ಇಲ್ಲಿನ ಸವರ್ಣೀಯರು ನಡೆಸಬಲ್ಲರು' ಎಂದು ಆತಂಕದಿಂದಲೇ ಹೇಳುತ್ತಾರೆ.

ಇಲ್ಲಿ ದೌರ್ಜನ್ಯ ನಡೆದು ಕೆಲದಿನಗಳ ನಂತರ ರೈತ ಹೋರಾಟಗಾರರಾದ ಅನಸೂಯಮ್ಮನವರ ನೇತೃತ್ವದಲ್ಲಿ ನಮ್ಮ ಪುಟ್ಟತಂಡ ಅಂಕನಹಳ್ಳಿಗೆ ಭೇಟಿ ನೀಡಿದಾಗ ದಲಿತ ಹೆಣ್ಣುಮಕ್ಕಳು 'ನಮ್ಮ ಮನೆಯ ಗಂಡಸರು ಕೆಲಸಕ್ಕೆಂದು ಊರ ಹೊರಹೋದಾಗ, ಇಲ್ಲಿನ ಸವರ್ಣೀಯರು ಅವಾಚ್ಯ ಶಬ್ದಗಳಲ್ಲಿ ಬೈಯುತ್ತಾ ಕಾಲುಕೆರೆದುಕೊಂಡು ಜಗಳಕ್ಕೆ ಬರುತ್ತಾರೆ. ನಮ್ಮನ್ನು ಬಹಿಷ್ಕಾರಕ್ಕೆ ಒಳಪಡಿಸಿದ ಮೇಲೆ ರಾಮನಗರದ ಪೇಟೆ ಬೀದಿಗಳಲ್ಲಿ ನಮ್ಮ ವಡವೆಗಳನ್ನು ಅಡವಿಟ್ಟು, ಅದರಲ್ಲಿ ಬಂದ ದುಡ್ಡಿನಿಂದ ಹತ್ತಾರು ಮೈಲಿ ನಡೆದು ಪಕ್ಕದ ಹಳ್ಳಿಗಳಿಂದ ಮನೆಗೆ ಬೇಕಾದ ಅಕ್ಕಿ ರಾಗಿ ತಂದುಕೊಳ್ಳುತ್ತಿದ್ದೇವೆ. ಸಂಜೆ ಮನೆಗಳಿಗೆ ಗಂಡಸರು ಬಂದಮೇಲೆ ಇದೇ ಸವರ್ಣೀಯರು ಕೊಚ್ಚುವ ಕೊಲ್ಲುವ ಮಾತುಗಳನ್ನಾಡುತ್ತಾರೆ. ಕಳೆದ ಎರಡು ತಿಂಗಳಿನಿಂದ ನರಕವೆಂದರೆ ಇದೇ ಇರಬೇಕೇನೋ ಅನ್ನಿಸಿಬಿಟ್ಟಿದೆ' ಎಂದು ಹೇಳಿ ತಮ್ಮ ನೋವು ತೋಡಿಕೊಂಡರು. ಲೇಖಕ ಬಂಜಗೆರೆ ಜಯಪ್ರಕಾಶರು ದಲಿತ ಮುಖಂಡರೊಂದಿಗೆ ಇಲ್ಲಿಗೆ ಭೇಟಿ ನೀಡಿ ನೊಂದಿತರ ಅಳಲನ್ನು ಖುದ್ದು ದಾಖಲಿಸಿಕೊಂಡಿದ್ದಾರೆ.

ಸಂಪೂರ್ಣವಾಗಿ ಹಾದಿ ತಪ್ಪಿರುವ ರಾಮನಗರದ ಕೆಲವು ದಲಿತ ಸಂಘಟನೆಗಳ ಮುಖಂಡರು ಈ ಪ್ರಕರಣವನ್ನು ಮುಖ್ಯವಾಗಿಟ್ಟುಕೊಂಡು ಲಾಭನಷ್ಟಗಳ ಲೆಕ್ಕಾಚಾರಗಳಲ್ಲಿ ಒಕ್ಕಲಿಗ ಮುಖಂಡರಿಂದ ಬರಬಹುದಾದ ರಾಜಿ, ಸಂಧಾನಗಳ ಸಂದೇಶಗಳಿಗಾಗಿ ಕಾದು ಕೂತಿದ್ದರೆ, ದಿನಾಂಕ 4.7.2010ರಂದು ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಶಾಂತಿ ಸಭೆ ನಡೆದರೂ ಕೂಡ ಅಂಕನಹಳ್ಳಿಯಲ್ಲಿ ದಲಿತರ ಮೇಲೆ ಅಮಾನವೀಯವಾಗಿ ವಿಧಿಸಲಾಗಿರುವ ಬಹಿಷ್ಕಾರವನ್ನು ಅಲ್ಲಿನ ಸವರ್ಣೀಯರು ಕೊಂಚವೂ ಸಡಿಲಿಸಿಲ್ಲ. ಜಿಲ್ಲಾ ಮತ್ತು ತಾಲ್ಲೂಕು ಸಮಾಜ ಕಲ್ಯಾಣ ಇಲಾಖೆಯ ಅಷ್ಟೂ ಸಿಬ್ಬಂಧಿಗಳು ಇಲ್ಲಿ ಠಿಕಾಣಿ ಹೂಡಿದ್ದರೂ ಕೂಡ ಬಹಿಷ್ಕಾರದ ಮುಳ್ಳಿನ ಬೇಲಿಗಳು ಸ್ವಲ್ಪವೂ ಅತ್ತಿತ್ತ ಸರಿದಿಲ್ಲ. ಇಷ್ಟಾಗಿಯೂ ನ್ಯಾಯ ಪಡೆಯುವ ಆಸೆಯನ್ನು

ಮಾತ್ರ ಅಲ್ಲಿನ ದಲಿತರು ಇನ್ನೂ ಕಳೆದುಕೊಂಡಿಲ್ಲ.

ದಲಿತರ ಮೇಲಿನ ದೌರ್ಜನ್ಯ: ಕಾಯ್ದೆಗೆ ಬೇಕಿದೆ ತಿದ್ದುಪಡಿ

ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳ (ದೌರ್ಜನ್ಯ ನಿಯಂತ್ರಣ) ಕಾಯ್ದೆ 1989ರ ಕಲಂ 3ರಲ್ಲಿ ದೌರ್ಜನ್ಯದ ಸ್ವರೂಪಗಳನ್ನು ವಿವರಿಸುವ 15 ವಿವಿಧ ಬಗೆಯ ಅಪರಾಧಗಳನ್ನು ಗುರುತಿಸಲಾಗಿದೆ: ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಬುಡಕಟ್ಟಿಗೆ ಸೇರಿರದ ಯಾರೇ ಆಗಲಿ, ಆ ಜಾತಿಗೆ ಸೇರಿರುವ ವ್ಯಕ್ತಿಗಳಿಗೆ ಅಸಹ್ಯಕರವಾದ ಪದಾರ್ಥಗಳನ್ನು ತಿನ್ನುವಂತೆ ಬಲತ್ಕಾರಿಸಿದರೆ, ಆತನ ಮನೆಮುಂದೆ ಮಲ ಮೂತ್ರ ವಿಸರ್ಜಿಸಿದರೆ, ಸತ್ತ ಪ್ರಾಣಿಗಳನ್ನು ಎಸೆದು ಹೋದರೆ, ಆತನನ್ನು ಬೆತ್ತಲೆಗೊಳಿಸಿ ಮುಖಕ್ಕೆ ಅಥವಾ ಶರೀರದ ಯಾವುದೇ ಭಾಗಕ್ಕೆ ಮಸಿ ಬಳಿದರೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಬುಡಕಟ್ಟಿನ ಜನರಿಗೆ ಸಿಗಬೇಕಾದ ಭೂಮಿಯನ್ನು ಅಕ್ರಮವಾಗಿ ಆಕ್ರಮಿಸಿಕೊಂಡರೆ, ಭೂಮಿ, ಸಾರ್ವಜನಿಕ ಸ್ಥಳ, ನೀರಿನ ಹಕ್ಕುಗಳನ್ನು ಉಪಯೋಗಿಸಲು ಅಡ್ಡಿಪಡಿಸಿದರೆ, ಬಲಾತ್ಕಾರದ ಜೀತಕ್ಕೆ ಒಳಪಡಿಸಿದರೆ, ತಾವು ಹೇಳಿದ ವ್ಯಕ್ತಿಗಳಿಗೆ ಮಾತ್ರ ಮತ ನೀಡುವಂತೆ ಅಥವಾ ನೀಡದಂತೆ ಬೆದರಿಕೆ ಒಡ್ಡಿದರೆ, ಕೋರ್ಟಿನಲ್ಲಿ ಈ ಜಾತಿ ಜನರ ವಿರುದ್ಧ ಸುಳ್ಳು ದಾವೆ ಹೂಡಿದರೆ, ಸರ್ಕಾರಿ ನೌಕರರ ಮೂಲಕ ಪರಿಶಿಷ್ಟ ಜಾತಿ ಮತ್ತು ಬುಡಕಟ್ಟಿನ ಜನರಿಗೆ ವಂಚನೆಯಾಗುವಂತೆ ಪ್ರೇರೇಪಿಸಿದರೆ, ಸಾರ್ವಜನಿಕ ಸ್ಥಳದಲ್ಲಿ ಅಪಮಾನಗೊಳಿಸಿದರೆ, ಈ ಜಾತಿಯ ಹೆಣ್ಣು ಮಕ್ಕಳ ಮಾನಕ್ಕೆ ಅಗೌರವ ತರುವಂತೆ ಮಾಡಿದರೆ, ಲೈಂಗಿಕವಾಗಿ ಶೋಷಿಸಿದರೆ, ಈ ಜಾತಿ ಜನ ಉಪಯೋಗಿಸುವ ಸಾರ್ವಜನಿಕ ಕೆರೆ, ಬಾವಿಗಳನ್ನು ದುರುದ್ದೇಶದಿಂದ ಮಲಿನಗೊಳಿಸಿದರೆ, ಸಾರ್ವಜನಿಕರಿಗೆ ಮುಕ್ತ ಪ್ರವೇಶಾವಕಾಶವಿರುವ ಸ್ಥಳಗಳಿಗೆ ಈ ಜಾತಿಯ ಜನ ಬರದಂತೆ ಅಡ್ಡಿಪಡಿಸಿದರೆ, ಬಲಪ್ರಯೋಗದಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಬುಡಕಟ್ಟಿಗೆ ಸೇರಿದ ಜನರನ್ನು ಮನೆ, ಗ್ರಾಮ ಮತ್ತು ವಾಸದ ಇತರೆ ಸ್ಥಳಗಳನ್ನು ಬಿಟ್ಟುಹೋಗುವಂತೆ ಮಾಡಿದರೆ ಅಂಥವರು ಆರು ತಿಂಗಳುಗಳಿಗೆ ಕಡಿಮೆಯಿಲ್ಲದ, ಐದು ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರಾವಾಸ ಮತ್ತು ಜುಲ್ಮಾನೆಯಿಂದ ದಂಡಿತರಾಗತಕ್ಕದೆಂದು ಈ ಅಧಿನಿಯಮವು ಹೇಳುತ್ತದೆ.

ಇಷ್ಟೆಲ್ಲ ಹೇಳಿರುವ ಕಾಯ್ದೆಯಲ್ಲಿ ಸಾಮಾಜಿಕ ಬಹಿಷ್ಕಾರದಂತಹ ಅಮಾನವೀಯ ಕ್ರೌರ್ಯದ ಬಗ್ಗೆ ಒಂದು ಮಾತೂ ಇಲ್ಲ. ಹೀಗಾಗಿಯೇ ಪೊಲೀಸರು ಸಾಮಾಜಿಕ ಬಹಿಷ್ಕಾರಕ್ಕೊಳಪಡಿಸಿದ ಆರೋಪಿಗಳನ್ನು ಪರಿಶಿಷ್ಟ ಜಾತಿಗಳು – ಪರಿಶಿಷ್ಟ ಪಂಗಡಗಳ (ದೌರ್ಜನ್ಯ ನಿಯಂತ್ರಣ) ಕಾಯ್ದೆಯ ಬದಲಿಗೆ ಭಾರತ ದಂಡಸಂಹಿತೆಯಡಿ ಸಣ್ಣ ಮಟ್ಟದ ಅಪರಾಧವೆಸಗಿದ ಆರೋಪದ ಹೆಸರಿನಲ್ಲಿ ದೂರು ದಾಖಲಿಸಿ ನಂತರ ಎಫ್.ಐ.ಆರ್. (ಪ್ರಥಮ ಮಾಹಿತಿ ವರದಿ) ರೂಪಿಸಿ ಪರೋಕ್ಷವಾಗಿ ಆರೋಪಿಗಳ ರಕ್ಷಣೆಗೆ ನಿಲ್ಲುತ್ತಾರೆ. ಪ್ರಥಮ ಮಾಹಿತಿ ವರದಿಯಲ್ಲಿದ್ದಂತೆ ನ್ಯಾಯಾಲಯಕ್ಕೆ ಆರೋಪ ಪಟ್ಟಿ (ಚಾರ್ಜ್ ಶೀಟ್) ಸಲ್ಲಿಸುವುದರಿಂದ ಸಾಮಾಜಿಕ ಬಹಿಷ್ಕಾರದಂತಹ ಪ್ರಕರಣಗಳು ಅಲ್ಲಿ ಗಟ್ಟಿಯಾಗಿ ನಿಲ್ಲುವುದಿಲ್ಲ. ಸಾಮಾಜಿಕ ಬಹಿಷ್ಕಾರವನ್ನು ಅಪರಾಧವೆಂದು ಪರಿಗಣಿಸಿ ಸದರಿ ಕಾಯ್ದೆಯ ಕಲಂ 3ರಲ್ಲಿ ಸೇರಿಸಿ ತಿದ್ದುಪಡಿ ತರಬೇಕಾದ ಹೊಣೆ ನಮ್ಮಿಂದ ಮತ ಪಡೆದು ಜನಪ್ರತಿನಿಧಿಗಳೆಂದು ಕರೆಸಿಕೊಳ್ಳುವವರ ಮೇಲಿದೆ.

ಶಿಕ್ಷೆಯೇ ಕಾಣದ ಅಪರಾಧಗಳು

ಕಳೆದ ಆರು ವರ್ಷಗಳಲ್ಲಿ (2000-2006) ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳ (ದೌರ್ಜನ್ಯ ನಿಯಂತ್ರಣ) ಕಾಯ್ದೆ 1989ರ ಅಡಿಯಲ್ಲಿ ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆಗಳಲ್ಲಿ ದಾಖಲಾದ ದಲಿತರ ಮೇಲೆ ಎಸಗಲಾದ ದೌರ್ಜನ್ಯ ಪ್ರಕರಣಗಳ ಸಂಖ್ಯೆ 358. ದಲಿತರ ಮೇಲೆ ದೌರ್ಜನ್ಯ ಎಸಗುವುದರಲ್ಲಿ ಈ ಭಾಗಗಳಲ್ಲಿ ಭೂಮಿಯ ಒಡೆತನ ಹೊಂದಿರುವ ಬಲಿಷ್ಠ ಸಮುದಾಯ ಒಕ್ಕಲಿಗರದ್ದೇ ಅಗ್ರಸ್ಥಾನ. ಈ ನಾಡಿನುದ್ದಕ್ಕೂ ಕಳೆದ ಐದು ವರ್ಷಗಳಲ್ಲಿ 3200ಕ್ಕೂ ಹೆಚ್ಚು ದಲಿತರ ಮೇಲಿನ ದೌರ್ಜನ್ಯ ಪ್ರಕರಣಗಳು ದಾಖಲಾಗಿವೆ. ಇದರಲ್ಲಿ 2002ರಲ್ಲಿ 1232, 2005 ರಲ್ಲಿ 1306, 2006 ರಲ್ಲಿ 1056 ಪ್ರಕರಣಗಳು ದಾಖಲಾಗಿವೆ. ಸರಾಸರಿ ಪ್ರತಿ ವರ್ಷ 1200 ರಿಂದ 1300ರಷ್ಟು ದಲಿತರ ಮೇಲಿನ ದೌರ್ಜನ್ಯದ ಪ್ರಕರಣಗಳು ಕೋರ್ಟು ಮೆಟ್ಟಿಲೇರುತ್ತಿವೆ.

2002ರಲ್ಲಿ 24, 2005ರಲ್ಲಿ ಕೇವಲ 5 ಪ್ರಕರಣಗಳಿಗೆ ಪರಿಶಿಷ್ಟಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳ (ದೌರ್ಜನ್ಯ ನಿಯಂತ್ರಣ) ಕಾಯ್ದೆಯಡಿಯಲ್ಲಿ ಶಿಕ್ಷೆಯಾಗಿರುವುದು ಬಿಟ್ಟರೆ ಇನ್ನುಳಿದ ಬಹುತೇಕ ಪ್ರಕರಣಗಳು ಖುಲಾಸೆಯಾಗಿವೆ. ಒಂದಿಷ್ಟು ಪ್ರಕರಣಗಳು ಕೋರ್ಟಿನ ಕಡತಗಳಲ್ಲಿ ಧೂಳು ತುಂಬಿಕೊಂಡು ನ್ಯಾಯಾಲಯದ ಪರಿಭಾಷೆಯಲ್ಲಿ ಹೇಳಬೇಕೆಂದರೆ ಲೀಗಲ್ ಪೆಂಡೆನ್ಸಿಯ ಹಂತದಲ್ಲಿವೆ.

ಈ ದೇಶದ ಇನ್ನಷ್ಟು ಕತೆ ಕೇಳಿ: ರಾಷ್ಟ್ರೀಯ ಅಪರಾಧ ದಾಖಲು ಕೇಂದ್ರದವರು ನೀಡಿರುವ ಮಾಹಿತಿಯ ಪ್ರಕಾರ ಈ ದೇಶದಲ್ಲಿ ಪ್ರತಿ ಇಪ್ಪತ್ತು ನಿಮಿಷಕ್ಕೊಂದು ದಲಿತರ ಮೇಲೆ ದೌರ್ಜನ್ಯವಾಗುತ್ತದೆ. 2006ರಲ್ಲಿ ಈ ದೇಶದಲ್ಲಿ ದಲಿತರ ಮೇಲೆ ಎಸಗಲಾದ ಅಟ್ರಾಸಿಟಿ ಪ್ರಕರಣಗಳು 26127. 2004ರಲ್ಲಿ 26887, 2005ರಲ್ಲಿ 1172 ದಲಿತ ಮಹಿಳೆಯರ ಮೇಲೆ ಅತ್ಯಾಚಾರ, 669 ಕೊಲೆ, 258 ಕಿಡ್ನ್ಯಾಪ್, 3847 ತೀವ್ರತರವಾಗಿ ಗಾಯ, ಹಲ್ಲೆಗೊಳಿಸಿದ ಅಟ್ರಾಸಿಟಿ ಪ್ರಕರಣಗಳು ದಾಖಲಾಗಿವೆ.

ರಾಷ್ಟ್ರೀಯ ಅಪರಾಧ ದಾಖಲು ಕೇಂದ್ರದವರು ಕೊಡುವ ಮಾಹಿತಿ ನಮ್ಮನ್ನು ಇನ್ನಷ್ಟು ಭಯಕ್ಕೀಡು ಮಾಡುತ್ತದೆ. ಈ ಆರು ವರ್ಷ(2000-2006)ಗಳ ಅವಧಿಯಲ್ಲಿ ದಲಿತರ ಮೇಲೆ ಎಸಗಲಾದ ದೌರ್ಜನ್ಯ ಪ್ರಕರಣಗಳಲ್ಲಿ ಶೇ.94.1ರಷ್ಟು ಆರೋಪ ಪಟ್ಟಿಯನ್ನು ಕೋರ್ಟುಗಳಲ್ಲಿ ಸಲ್ಲಿಸಲಾಗಿದೆ. ಅದರಲ್ಲಿ ಶಿಕ್ಷೆಯ ಪ್ರಮಾಣ ಕೇವಲ ಶೇ.29.8 ರಷ್ಟು ಮಾತ್ರ. 2005ರಲ್ಲಿ ದಲಿತರ ಮೇಲಿನ ಅಟ್ರಾಸಿಟಿಗಳಿಗೆ ಸಂಬಂಧಿಸಿದಂತೆ 57804 ಮಂದಿಯನ್ನು ಬಂಧಿಸಲಾಗಿತ್ತು. ಇವರಲ್ಲಿ 46936 (ಶೇ.82.4) ಆರೋಪಿಗಳ ಮೇಲೆ ಕೋರ್ಟಿನಲ್ಲಿ ಆರೋಪ ಪಟ್ಟಿಯನ್ನೂ ಸಲ್ಲಿಸಲಾಗಿತ್ತು.

ಆದರೆ ನ್ಯಾಯಾಲಯದಲ್ಲಿ ಕೇವಲ 12691 ಆರೋಪಿಗಳು ಮಾತ್ರ ಕಟಕಟೆಯಲ್ಲಿ ನಿಂತು ಇನ್ನುಳಿದವರು ಖುಲಾಸೆಯಾದರು. ಅಟ್ರಾಸಿಟಿ ಪ್ರಕರಣಗಳನ್ನು ತೀರ್ಮಾನಿಸಲಿಕ್ಕೆಂದೇ ಇರಬೇಕಾದ 'ವಿಶೇಷ ನ್ಯಾಯಾಲಯ' ಇದುವರೆವಿಗೂ ಯಾವ ರಾಜ್ಯ, ಯಾವ ಜಿಲ್ಲೆಯಲ್ಲೂ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿರುವ ಬಗ್ಗೆ ಮಾಹಿತಿ ಇಲ್ಲ. ಬರಿ ದುಡ್ಡಿನಿಂದಲೇ ಸಮಸ್ಯೆಯನ್ನು ಪರಿಹರಿಸುತ್ತೇವೆ ಎನ್ನುವ ಸರ್ಕಾರಗಳು ಮತ್ತದರ ಅನೇಕ ಇಲಾಖೆಗಳು ರೋಟರಿ ಕ್ಲಬ್, ಲಯನ್ಸ್ ಕ್ಲಬ್‌ನ ನೆರಳುಗಳಂತೆ ವರ್ತಿಸುತ್ತಿವೆ. □

ಕಿ.ರಂ ಎನ್ನುವ ಕಿನ್ನರಿ ಜೋಗಿ...

(13ನೇ ಪುಟದಿಂದ)

ಅದಕ್ಕೆ ಸಂಬಂಧಿಸಿದ ಸಾಹಿತ್ಯವನ್ನು ಓದಿ, ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಪ್ರಯತ್ನಿಸಿದ್ದಾರೆ. ಸ್ನೇಹದಲ್ಲಿ ಹೇಗೋ ಹಾಗೆಯೇ ಅಧ್ಯಯನದಲ್ಲಿಯೂ ಮಿತಿ ಹಾಗೂ ಮಡಿವಂತಿಕೆಯನ್ನು ಅವರು ಹಾಕಿಕೊಂಡಿರಲಿಲ್ಲ. ಹೀಗಾಗಿಯೇ ಅವರು ಸಂತನಂತೆ ಎಲ್ಲರೊಂದಿಗೆ ಬೆರೆಯುವ; ಎಲ್ಲದರ ಬಗ್ಗೆ ಮಾತನಾಡುವ ಸಾಮರ್ಥ್ಯವನ್ನು ಪಡೆದುಕೊಂಡಿದ್ದರು.

ಕಿರಂ ಮೇಷ್ಟ್ರು ಒಬ್ಬ ಸಂತ, ಫಕೀರ, ಪುರುಷ ಸರಸ್ವತಿ ಎಲ್ಲಕ್ಕಿಂತ ಹೆಚ್ಚಾಗಿ ತಾಯಿ. ಗೆಳತಿ ನಾಗವೇಣಿ ಹೇಳಿದ ಹಾಗೆ ಅವರಲ್ಲೊಬ್ಬ ಮದರ್ ತೆರೆಸಾ ಇದ್ದಳು. ಹೀಗಾಗಿ ನನ್ನ ಉಸಿರಿರುವವರೆಗೂ ಅವರು ನನ್ನೊಟ್ಟಿಗೆ ಇರುತ್ತಾರೆ. ಅವರು ಭೌತಿಕವಾಗಿ ಈಗ ಇಲ್ಲದಿರಬಹುದು. ಅಧ್ಯಯನದಲ್ಲಿ ಇಲ್ಲವೇ, ಜೀವನದಲ್ಲಿ ಕಷ್ಟ ಬಂದಾಗ ಮಾನಸಿಕವಾಗಿ ಅವರೊಂದಿಗೆ ಅನುಸಂಧಾನ ನಡೆಸಿ ಸಮಸ್ಯೆಗೆ ಪರಿಹಾರವನ್ನು, ಮಾನಸಿಕ ನೆಮ್ಮದಿಯನ್ನು ಕಂಡುಕೊಳ್ಳಲು ಪ್ರಯತ್ನಿಸುತ್ತಿದ್ದೇನೆ. ನನ್ನೊಳಗಿನ ಕಿರಂಗೆ ಸಾವಿಲ್ಲ.

ನೆರೆಹಾವಳಿ ಬಗ್ಗೆ ನಾವು ನಡೆಸಿದ ಅಧ್ಯಯನ ವರದಿಯ ಕುರಿತು ಕೆಲವರು ಹಗುರವಾಗಿ ಮಾತನಾಡಿದರು. ಅದು ಪೇಪರ್‌ನಲ್ಲಿ ಪ್ರಕಟಗೊಂಡಿತ್ತು ಕೂಡ. ಆಗ ಕಿರಂ ಅವರು ನನಗೆ ಫೋನಾಯಿಸಿದ್ದರು. ಆ ವೇಳೆಯಲ್ಲಿ ನಾನು ಹರದೇಶಿ ನಾಗೇಶಿಯರ ಅಧ್ಯಯನಕ್ಕೆ ಸಂಬಂಧಿಸಿದಂತೆ ಕ್ಷೇತ್ರಕಾರ್ಯದಲ್ಲಿದ್ದೆನು. ನಾನು ವ್ಯಕ್ತಿಗಳ ಸಂದರ್ಶನ ನಡೆಸುತ್ತಿದ್ದರಿಂದ ನನ್ನ ಮೊಬೈಲನ್ನು ನನ್ನ ಜೊತೆ ಬಂದಿದ್ದ ವಿದ್ಯಾರ್ಥಿಯ ಕೈಯಲ್ಲಿ ಕೊಟ್ಟಿದ್ದೆ. ನಾನು ಸಂದರ್ಶನ ನಡೆಸಿ ಹೊರಬಂದಾಗ "ಮೇಡಂ ಯಾರೋ ಕಿರಣ ಅನ್ನುವರು ಫೋನ್ ಮಾಡಿದ್ದರು. ಆದರೆ ನಾವು ಫೋನ್ ಎತ್ತಿಕೊಳ್ಳಲಿಲ್ಲ" ಎಂದರು. ಯಾರೋ ಕಿರಣ ಎನ್ನುವ ಹುಡುಗ ಫೋನ್ ಮಾಡಿರಬಹುದು ಎಂದು ಸುಮ್ಮನಾದೆ. ಹದಿನೈದು ದಿನಗಳ ನಂತರ ಸಿಕ್ಕಿದ ಕಿರಣ್ ತಾನು ಫೋನ್ ಮಾಡಿಲ್ಲ ಎಂದನು. ತಕ್ಷಣ ನಾನು ಚುರುಕಾಗಿ ಮಿಸ್‌ಕಾಲ್ ಲಿಸ್ಟನ್ನು ತೆಗೆದು ನೋಡಿದೆ. ಅದು ಕಿರಂ ಅವರ ಫೋನಾಗಿತ್ತು. ಕಿರಂ ಎನ್ನುವುದನ್ನು ನನ್ನ ವಿದ್ಯಾರ್ಥಿ ಕಿರಣ ಎಂದು ತಪ್ಪಾಗಿ ಓದಿಕೊಂಡಿದ್ದರು. ಅಷ್ಟು ದೊಡ್ಡವರು ಫೋನು ಮಾಡಿದ ಹದಿನೈದು ದಿನಗಳ ನಂತರ ನಿಮ್ಮ ನಂಬರ್ ಮಿಸ್ ಕಾಲ್ ಲಿಸ್ಟಲ್ಲಿತ್ತು ಅಂತ ಹೇಳಿ ಹೇಗೆ ಫೋನು ಮಾಡುವುದು ಎಂದು ಹೆದರಿ ಫೋನು ಮಾಡಲಿಲ್ಲ. ಕಿರಂ ಅವರು ನನಗೆ ಫೋನು ಮಾಡಿದ್ದು, ನೆರೆಹಾವಳಿಯ ಅಧ್ಯಯನ ವರದಿಯ ಬಗ್ಗೆಯೇ ಎನ್ನುವುದು ನನ್ನ ಖಚಿತ ಭಾವನೆಯಾಗಿದೆ. ಕಿರಂ ಅವರಿಗೆ ಮರಳಿ ಫೋನಾಯಿಸಿದ್ದರೆ ಯಾವ ಧೈರ್ಯದ ಮಾತುಗಳನ್ನು ಹೇಳುತ್ತಿದ್ದರು, ಅಧ್ಯಯನಕ್ಕೆ ಯಾವ ಸಲಹೆ ಸೂಚನೆ ನೀಡುತ್ತಿದ್ದರು ಎನ್ನುವ ಭಾವನೆಗಳು ಈಗಲೂ ನನ್ನನ್ನು ಕಾಡುತ್ತಿದೆ. ಮರಳಿ ಫೋನ್ ಮಾಡದೇ ಜೀವನದಲ್ಲಿ ಬಹಳ ದೊಡ್ಡ ತಪ್ಪು ಮಾಡಿ ಬಿಟ್ಟೆ ಎನ್ನುವ ಅಪರಾಧಿ ಪ್ರಜ್ಞೆ ನನ್ನಲ್ಲಿ ಈಗಲೂ ಉಳಿದಿದೆ. □

ಅಕ್ಕರೆಯ ಕಡಲು
ಆರ್. ಭರಣಯ್ಯ ನೆನಪಿನ ಸಂಪುಟ
ಸಂ: ತುಕಾರಾಮ್, ಎಸ್
ಬೆಲೆ: ರೂ.೩೬೦/

ಅಂತಃಕರಣ ಹಾಗೂ ತಮ್ಮ ಜನಪರ ನಿಲುವುಗಳಿಂದ ಅಪರೂಪದ ಅಧಿಕಾರಿಯಾಗಿ ಎಲ್ಲರ ಮನಗೆದ್ದಿದ್ದ ಆರ್. ಭರಣಯ್ಯನವರ ನೆನಪಿನ ಬೃಹತ್ ಸಂಪುಟ ಇದು.ಶ್ರೀಯುತರು ಏರಿದ ಎತ್ತರ-ಬಿತ್ತರದ ಬಗ್ಗೆ ನಾಡಿನ ಅನೇಕ ಪ್ರಜ್ಞಾವಂತರು, ಒಡನಾಡಿಗಳು ಮತ್ತು ಅವರಿಂದ ಉಪಕೃತರಾದವರ ಮನದಾಳದ ಮಾತುಗಳಿವೆ. ಕನ್ನಡ ಪುಸ್ತಕ ಲೋಕದಲ್ಲಿ ದಮನಿತ ಸಮುದಾಯದ ಸಾಧಕರ ಬಗೆಗಿನ ಕೃತಿಗಳು ವಿರಳವಾಗಿರುವ ಈ ಹೊತ್ತಿನಲ್ಲಿ ಈ ಕೃತಿಗೆ ವಿಶೇಷ ಮನ್ನಣೆಯಿದೆ.

ಪ್ರ: ಆರ್. ಭರಣಯ್ಯ ಪೀಪಲ್ ಟ್ರೀ ಫೌಂಡೇಷನ್, ಬೆಂಗಳೂರು-೨೦

ಹೊಸ ಪುಸ್ತಕ

ಸೂರ್ಯ ಮತ್ತು ನಾನು
ಕವಿ: ಡಾ. ನಿತ್ಯಾನಂದ ಸುಂಡವಾಳು
ಬೆಲೆ: ರೂ. ೫೦/-

ಇದು ಸರಳ ಭಾಷೆಯ, ಆದರೆ ಭಾವ, ದೃಷ್ಟಿ, ಆಶಯ ಮತ್ತು ಲಯದ ಮೇಲೆ ಪ್ರಭುದ್ಧತೆಯಿರುವ ಕವನ ಸಂಕಲನ. ಕವಿತೆಗಳ ಮೂಲಕ ಲೋಕ ರಹಸ್ಯ ತಿಳಿಯುವ ಹಂಬಲ ಹಾಗೂ ಸಕಾರಾತ್ಮಕ ಗುಣಗಳು ಮೇಳೈಸಿವೆ. ಲವಲವಿಕೆಯಿಂದ ಸುಲಲಿತವಾಗಿ ಓದಿಸಿಕೊಳ್ಳುವ ಕವಿತೆಗಳು ಆಪ್ತವೆನಿಸುತ್ತವೆ. ಕವಿಗಳು ಇಲ್ಲಿ ಎತ್ತಿರುವ ಪ್ರಶ್ನೆಗಳು ಜೀವನ ಪ್ರೀತಿ ಇರುವ ಎಲ್ಲರವೂ ಹೌದು.

ಪ್ರಕಾಶನ: ನಿರಂತರ, ವಿಜಯನಗರ, ಬೆಂಗಳೂರು- ೫೬೦೦೪೦

ಮಹಿಳೆಯರೇ ಮತ್ತು ಮಹಿಳೆಯರೇ..
ಲೇ: ಡಾ. ಜಯಪ್ರಕಾಶ ಮಾವಿನಕುಳಿ
ಬೆಲೆ: ರೂ. ೪೫

ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆಯ ಸ್ಥಿತಿಗತಿ ಕುರಿತು ಅವಲೋಕನವಿರುವ ಪುಟ್ಟ ಕೃತಿ ಇದು. ಭಾರತದಲ್ಲಿ ಮಹಿಳೆಯ ಶೋಷಣೆಯ ಅನೇಕ ಕರಾಳ ರೂಪಗಳು, ಅವರ ದಯನೀಯ ಸ್ಥಿತಿ, ಮಹಿಳಾ ಮೀಸಾಲಾತಿಯನ್ನು ವಿರೋಧಿಸುವ ರಾಜಕೀಯ ಪಕ್ಷಗಳ ಷಡ್ಯಂತ್ರಗಳು ಅಂಕಿ-ಅಂಶಗಳೊಂದಿಗೆ ದಾಖಲಾಗಿವೆ. ತಂತ್ರಜ್ಞಾನವೂ ಕೂಡ ಮಹಿಳೆಯ ಮೇಲೆ ಹೇಗೆ ಸವಾರಿ ಮಾಡುತ್ತದೆ ಎಂಬುದು ನಿರೂಪಿತವಾಗಿದೆ.

ಪ್ರಕಾಶನ: ಸ್ಫಟಿಕ ಪ್ರಕಾಶನ ಮಾವಿನಕುಳಿಮನೆ, ಮೂಡುಬಿದರೆ-೫೭೪೧೬೭

ಭಾವ ಸಮನ್ವಯ
ಲೇ: ಪ್ರೊ. ಬಿ. ಎಚ್. ಶ್ರೀಧರ
ಬೆಲೆ: ರೂ.೬೫/-

ಕಾವ್ಯ ಮಿಮಾಂಸೆಯಲ್ಲಿ ಉಲ್ಲೇಖಿನಗೊಂಡ ನವರಸಗಳನ್ನು ಹೊಸಗನ್ನಡ ಕಾವ್ಯ, ನಾಟಕಗಳೊಂದಿಗೆ ಅನುಸಂಧಾನಿಸಿರುವ ಹಾಗೂ ಅವುಗಳಲ್ಲಿ ಪ್ರಮುಖವಾಗಿ ಧ್ವನಿತಗೊಂಡ ಅಂಶಗಳ ರಸಸ್ವಾದದ ಮಹತ್ವದ ಕೃತಿ ಇದು. ಅಪರಿಚಿತ ಕಾವ್ಯ ಭಾಗವನ್ನು ಪರಿಚಯ ಮಾಡಿಕೊಳ್ಳಲು ಉತ್ತೇಜಿಸುವಲ್ಲಿ ಸಫಲವಾಗಿದೆ. ನಮ್ಮ ಸಂವಿಧಾನಕ್ಕೆ ಪೂರಕವಾಗಿ ಅನೇಕ ನವ್ಯ ಗೀತಗಳು, ನಾಟಕಗಳು ಪ್ರಗತಿಶೀಲವೂ ಸರ್ವಹಿತವೂ ಆಗಿ ಹೇಗೆ ಸಂವಾದಿ ಯಾಗುತ್ತವೆಂಬ ಅಂಶ ಎದ್ದು ಕಾಣುತ್ತದೆ.

ಪ್ರಕಾಶಕರು: ಬಂಡಾಯ ಪ್ರಕಾಶನ ಅರೇಅಂಗಡಿ, ಹೊನ್ನಾವರ(ಉ.ಕ)

* **ಶಾಂತಾದೇವಿ ಮಾಳವಾಡ, ಬೆಲೆ: ರೂ.೧೦/-**
  ಲೇ: ಡಾ. ಶಾಂತಾ ಇಮ್ರಾಪೂರ
* **ಓದ್ಸೋ ಕರಿಬಸಯ್ಯನವರು, ಬೆಲೆ: ರೂ. ೧೦/-**
  ಲೇ: ಡಾ. ಮೃತ್ಯುಂಜಯ ರುಮಾಲೆ
* **ನಾಗರಾಳ ಸಂಗಪ್ಪನವರು, ಬೆಲೆ: ರೂ.೧೦/-**
  ಲೇ: ಡಾ. ಪ್ರೋ.ಎನ್.ಜಿ ಕರೂರ
* **ಗೊಗ್ಗ ಬಸಯ್ಯನವರು, ಬೆಲೆ:ರೂ.೧೦/-**
  ಲೇ: ಡಾ. ಮೃತ್ಯುಂಜಯ ರುಮಾಲೆ
* **ಚೆನ್ನಬಸವ ಮಹಾಸ್ವಾಮಿಗಳು, ಬೆಲೆ:ರೂ:೧೦/-**
  ಲೇ: ಪ್ರೊ. ಶಾಶ್ವತಸ್ವಾಮಿ ಮುಕ್ಕುಂದಿಮಠ

ಈ ಮೇಲಿನ ಐದೂ ಕೃತಿಗಳು ಲಿಂಗಾಯತ ಪುಣ್ಯಪುರುಷ ಮಾಲೆಯ ವಿಭಿನ್ನ ನೆಲೆಯ ವ್ಯಕ್ತಿ-ವಿಶೇಷಗಳನ್ನು ಪರಿಚಯಿಸುವಂತಹವು. ಮೊದಲನೆಯದು ಮಹಿಳಾ ಸಮಸ್ಯೆ ಹಾಗೂ ನಾಡು ನುಡಿಗಳ ಬಗ್ಗೆ ಧನಿ ಎತ್ತಿ ಹೋರಾಟ ಮಾಡಿದ, ಪ್ರೌಢ ಶಾಲೆಯ ಹಂತವನ್ನೂ ದಾಟದ ಇವರು ರಚಿಸಿದ ಕೃತಿಗಳು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ ಪಠ್ಯಗಳಾದ ಹೆಗ್ಗಳಿಕೆಗೆ ಪಾತ್ರವಾದ ಹಾಗೂ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನ ಪಡೆದ ಶಾಂತಾದೇವಿ ಮಾಳವಾಡರ ಪರಿಚಯಾತ್ಮಕ ಕೃತಿ.

ಎರಡನೆಯದು ಆತ್ಮಕಲ್ಯಾಣ, ಸಮಾಜೊದ್ಧಾರ ಈ ಎರಡೂ ನೆಲೆಯಲ್ಲಿ ತಮ್ಮನ್ನು ತೊಡಗಿಸಿಕೊಂಡು, ಕುಗ್ರಾಮದ ಬಡಮಕ್ಕಳಿಗೆ, ಅನಕ್ಷರಸ್ತರಿಗೆ ನಿರಂತರವಾಗಿ ಅಕ್ಷರ ದಾಸೋಹವನ್ನು ಸಾಕಾರಗೊಳಿಸಿದ ಹಾಗೂ ತಮ್ಮ ಮರಣೊತ್ತರ ಕಾಲದಲ್ಲಿಯೂ ಸಮಾಜೋದ್ಧಾರದ ಕಾರ್ಯಗಳಿಗೆ ಚ್ಯುತಿ ಬರಬಾರದೆಂದು ಶಾಶ್ವತ ನಿಧಿಯ ಠೇವಣಿಯನ್ನಿಟ್ಟ ಘನ ವ್ಯಕ್ತಿತ್ವದ ಓದ್ಸೋ ಕರಿಬಸಯ್ಯನವರನ್ನು ಪರಿಚಯಿಸುತ್ತದೆ.

ಮೂರನೇ ಕೃತಿ ಶುದ್ಧ ಚಾರಿತ್ರ್ಯ, ಪರಿಶುದ್ಧ ಸಮಾಜ ಸೇವೆಗಳ ಅಪೂರ್ವ ಸಾಧಕ, ಶಾಸಕರಾಗಿ, ಸಚಿವರಾಗಿ ಶೈಕ್ಷಣಿಕ-ರಾಜಕೀಯ ಧಾರ್ಮಿಕ ಕ್ಷೇತ್ರಗಳಿಗೆ ಆದರ್ಶ ಸೇವೆ ಸಲ್ಲಿಸಿದ ನಾಗರಾಳ ಸಂಗಪ್ಪನವರ ವ್ಯಕ್ತಿತ್ವವನ್ನು ಪರಿಚಯಿಸುತ್ತದೆ.

ಗಣಿ ಉದ್ಯಮ ನಡೆಸುತ್ತಿದ್ದರೂ, ಸಿರಿವಂತಿಕೆಯಿದ್ದರೂ ಶ್ರಮ ಸಂಸ್ಕೃತಿಯನ್ನು ಮೈಗೂಡಿಸಿಕೊಂಡು ತಮ್ಮ ಕುಟುಂಬದ ಪರಂಪರೆಗೆ ಅನುಗುಣವಾಗಿ ಸದಾಚಾರ, ಸನ್ನಡತೆಗಳಿಂದ ಜನರ ಅನುರಾಗಕ್ಕೆ ಪಾತ್ರರಾಗಿದ್ದ, ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸಿ ಜನರು ಅಕ್ಷರವಂತರಾಗುವಂತೆ ಉಪನ್ಯಾಸಗಳ ಮೂಲಕ ಪ್ರೇರೇಪಿಸುತ್ತಿದ್ದ ಗೊಗ್ಗ ಬಸಯ್ಯನವರ ಕಾಯಕ - ದಾಸೋಹದ ಬಗ್ಗೆ ನಾಲ್ಕನೇ ಕೃತಿಯಿಂದ ತಿಳಿಯಬಹುದು.

ಒಳಬಳ್ಳಾರಿ ಮಠದ ಪೀಠಾಧ್ಯಕ್ಷರಾಗಿದ್ದ ಚೆನ್ನಬಸವ ಮಹಾಸ್ವಾಮಿಗಳು ತಮ್ಮ ಅಲೌಕಿಕ ಚಾರಿತ್ರ್ಯದಿಂದ ಜನರ ಮೇಲೆ ಆಧ್ಯಾತ್ಮಿಕ ಪ್ರಭಾವ ಬೀರಿ, ಅನೇಕ ನೊಂದ ಜೀವಿಗಳ ಬದುಕಿಗೆ ಸಾಂತ್ವನ ನೀಡಿ ಅವರನ್ನು ಸನ್ಮಾರ್ಗದಲ್ಲಿ ಮುನ್ನೆಡೆಸಿದ ಸಂಗತಿಗಳ ವಿವರಗಳನ್ನು ಈ ಕೃತಿಯಿಂದ ತಿಳಿಯಬಹುದು.

ಮೇಲಿನ ಎಲ್ಲಾ ಪುಸ್ತಕಗಳ ಪ್ರಕಾಶಕರು: ಲಿಂಗಾಯತ ಅಧ್ಯಯನ ಸಂಸ್ಥೆ. ಎಡೆಯೂರು ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಗದಗ

ಬಳ್ಳಾರಿ ಗಣಿ ಲೂಟಿಯೂ, ಕಾಮನ್ ವೆಲ್ತ್ ಕ್ರೀಡಾಕೂಟವೂ...

ಡಿ.ಎಸ್ ನಾಗಭೂಷಣ

ಕಾಂಗ್ರೆಸ್ ಪಾದಯಾತ್ರೆ ಬಳ್ಳಾರಿಯಲ್ಲಿ ಸಮಾರೋಪಗೊಂಡು ಭರ್ಜರಿ ಎನ್ನಬಹುದಾದ ಯಶಸ್ಸನ್ನು ಸಾಧಿಸಿದೆ. ಇದರಿಂದ ಉಬ್ಬಿಹೋದಂತೆ ಕಾಣುವ ಅದರ ಕೆಲ ನಾಯಕರು ಈ ಪಾದಯಾತ್ರೆಯ ಮೂಲ ಗುರಿಯನ್ನೇ ಮರೆತಂತೆ ಯಾವುದಾವುದೋ ನೆಪದಲ್ಲಿ ವಿಧಾನಸಭೆಯ ವಿಸರ್ಜನೆಗೆ ಕರೆಕೊಡಲಾರಂಭಿಸಿದ್ದಾರೆ. ಈ ಸರ್ಕಾರವನ್ನು ಉರುಳಿಸುವವರೆಗೂ ತಮಗೆ ನೆಮ್ಮದಿಯಿಲ್ಲ ಎಂಬಂತೆ ಮಾತನಾಡತೊಡಗಿದ್ದಾರೆ. ಅಕ್ರಮ ಗಣಿಗಾರಿಕೆಯನ್ನು ಸಮಗ್ರ ತನಿಖೆಯ ದೃಷ್ಟಿಯಿಂದ ಸಿ.ಬಿ.ಐ.ಗೆ ವಹಿಸಬೇಕೆಂಬ ಆಗ್ರಹದೊಂದಿಗೆ ಮತ್ತು 'ಬಳ್ಳಾರಿಗೆ ಬನ್ನಿ ನೋಡಿಕೊಳ್ಳುತ್ತೇವೆ' ಎಂಬ ಒಬ್ಬಿಬ್ಬರು ಸ್ಥಳೀಯ ಶಾಸಕರ ಬೆದರಿಕೆಯನ್ನು ಸವಾಲಾಗಿ ಸ್ವೀಕರಿಸಿ ಈ ಪಾದಯಾತ್ರೆಯನ್ನು ಆರಂಭಿಸಲಾಯಿತು.

ಹಾಗಾಗಿಯೇ ರಾಜ್ಯದ ಅನೇಕ ಚಿಂತಕರು-ಲೇಖಕರು-ಬುದ್ಧಿಜೀವಿಗಳು ಪಕ್ಷಭೇದವಿಲ್ಲದೆ ಈ ಪಾದಯಾತ್ರೆಗೆ ಬೆಂಬಲ ವ್ಯಕ್ತಪಡಿಸಿದರು. ಹಾಗೇ ದಾರಿಯುದ್ದಕ್ಕೂ ಸ್ಥಳೀಯ ಜನ ಅಪಾರ ಸಂಖ್ಯೆಯಲ್ಲಿ ಈ ಪಾದಯಾತ್ರೆಯಲ್ಲಿ ಉತ್ಸಾಹದಿಂದ ಭಾಗವಹಿಸಿದ್ದರು. ಆದರೆ ಪಾದಯಾತ್ರೆ ಮುಗಿದರೂ ಸಿ.ಬಿ.ಐ. ತನಿಖೆಗೆ ಬಿಜೆಪಿ ಸರ್ಕಾರ ಒಪ್ಪಲಾರದು ಎಂದು ಕಾಂಗ್ರೆಸ್ಸಿಗೆ ಮನವರಿಕೆಯಾಗುತ್ತಿದ್ದಂತೆ ಅದರ ನಾಯಕರು ಈಗ ಪಾದಯಾತ್ರೆಯ ಉದ್ದೇಶ ಅಕ್ರಮ ಗಣಿಗಾರಿಕೆಯ ವಿರುದ್ಧ ಸಿ.ಬಿ.ಐ. ತನಿಖೆಯ ಆಗ್ರಹಕ್ಕಷ್ಟೇ ಸೀಮಿತವಾದುದಲ್ಲವೆಂದು ಹೇಳತೊಡಗಿದ್ದಾರೆ. ಪಕ್ಷವೀಗ ಮೂರು ತಿಂಗಳ ಸಂಘರ್ಷ ಕಾರ್ಯಕ್ರಮವನ್ನು ಪ್ರಕಟಿಸಿದೆ.

ಬಳ್ಳಾರಿಯತ್ತಲೇ ನಿರ್ದಿಷ್ಟವಾಗಿ ನಡೆಯುವ ಮೂಲಕ ಹಣ ಮತ್ತು ಬೆದರಿಕೆಯ ರಾಜಕಾರಣದ ವಿರುದ್ಧ ತನ್ನ ಧ್ವನಿ ಮೊಳಗಿಸಲು ಕಾಂಗ್ರೆಸ್ ಯತ್ನಿಸಿತ್ತು. ಆದರೀಗ ಅದು ತನ್ನ ಈ ನಿರ್ದಿಷ್ಟ ಗುರಿಯಿಂದ ಚ್ಯುತವಾಗಿ, ಅದನ್ನು ಬಿಜೆಪಿ ಸರ್ಕಾರವನ್ನೇ ಪದಚ್ಯುತಗೊಳಿಸುವ ಸಾರ್ವತ್ರಿಕ ಗುರಿಯನ್ನಾಗಿ ಮಾರ್ಪಡಿಸುವ ಪ್ರಯತ್ನದಲ್ಲಿರುವಂತೆ ತೋರುತ್ತಿದೆ. ಇದು ವಿಷಾದಕರ. ಜನತೆಯಿಂದ ಎರಡು ವರ್ಷಗಳ ಹಿಂದಷ್ಟೇ ತಿರಸ್ಕೃತವಾಗಿರುವ ಈ ಪಕ್ಷ ಈಗ ಬಹುಮತ ಪಡೆದಿರುವ ಸರ್ಕಾರವನ್ನೇ ಪದಚ್ಯುತಗೊಳಿಸುವ ಪ್ರಯತ್ನ ಮಾಡಿದಲ್ಲಿ, ಅದು ಯಾವ ಮೌಲ್ಯಗಳನ್ನು ಸಂರಕ್ಷಿಸಲು ಪಾದಯಾತ್ರೆ ಹೊರಟಿತ್ತೋ ಆ ಪ್ರಜಾಪ್ರಭುತ್ವವಾದಿ ಮೌಲ್ಯಗಳಿಗೇ ಆಘಾತ ಉಂಟುಮಾಡುವಲ್ಲಿ ಮಾತ್ರ ಯಶಸ್ವಿಯಾಗಬಲ್ಲದಷ್ಟೆ! ಇದರಿಂದ ರಾಜಕೀಯವಾಗಿ ಕಾಂಗ್ರೆಸ್‌ಗೆ ಲಾಭಕ್ಕಿಂತ ನಷ್ಟವಾಗುವ ಸಂಭವವೇ ಹೆಚ್ಚು ಎಂಬುದನ್ನು ಅದರ ನಾಯಕರು ಆದಷ್ಟೂ ಬೇಗ ಅರಿತರೆ ಒಳ್ಳೆಯದು.

ಹಾಗಾಗಿ, ರಾಜ್ಯ ಕಾಂಗ್ರೆಸ್ ಪ್ರಜಾಪ್ರಭುತ್ವದ ಮರ್ಯಾದೆಯನ್ನು ಮೀರದೆ ತಾನು ತುರ್ತಾಗಿ ಯಾವುದರ ವಿರುದ್ಧ ಹೋರಾಟ ಮಾಡಬೇಕಾಗಿದೆ ಎಂಬುದನ್ನು ಮೊದಲು ಸ್ಪಷ್ಟಪಡಿಸಿಕೊಳ್ಳಬೇಕು. ಸದ್ಯಕ್ಕೆ ಅದು ತನ್ನ ನಿರ್ದಿಷ್ಟ ಗುರಿಯಾಗಿದ್ದ 'ಗಣಿ ಲೂಟಿ ಹಣದ ರಾಜಕಾರಣ'ದ ಅಪಾಯಗಳನ್ನು ನಿವಾರಿಸುವತ್ತ ತನ್ನ ಗಮನವನ್ನು ಕೇಂದ್ರೀಕರಿಸಿದಲ್ಲಿ ಮಾತ್ರ ತಾನು ನಡೆಸಿದ ಪಾದಯಾತ್ರೆಗೆ ಜನರ ಆತ್ಯಂತಿಕ ಮಾನ್ಯತೆ ಮತ್ತು ಐತಿಹಾಸಿಕ ಮಹತ್ವ ದೊರೆತೀತು. ಇಲ್ಲದೇ ಹೋದಲ್ಲಿ, ಅದರ ವಿರೋಧಿಗಳು ಬಣ್ಣಿಸುತ್ತಿರುವಂತೆ ಅದು 'ರಾಜಕೀಯ ದೊಂಬರಾಟ'ವಷ್ಟೇ (ದೊಂಬ ಜಾತಿಯೊಂದಿಗೆ ಗುರುತಿಸಿಕೊಂಡವರು ಕ್ಷಮಿಸಬೇಕು!) ಎನಿಸಿಕೊಂಡೀತು.

ಹಾಗೆ ನೋಡಿದರೆ ರಾಜಕಾರಣದಲ್ಲಿ ಹಣದ ಅನಾಹುತಕಾರಿ ಪಾತ್ರ ನೆನ್ನೆ ಮೊನ್ನೆಯದೇನಲ್ಲ. ಹೆಂಡದ ಹಣ, ಶಿಕ್ಷಣ ಮಾಫಿಯಾದ ಹಣ, ನಂತರ ಗ್ರಾನೈಟ್ ಉದ್ಯಮದ ಹಣ ಮತ್ತು ಇತ್ತೀಚೆಗೆ ರಿಯಲ್ ಎಸ್ಟೇಟ್ ಹಣ ರಾಜಕಾರಣದಲ್ಲಿ ಹೂಡಲ್ಪಟ್ಟು, ಸೂಕ್ತ ಪ್ರಾತಿನಿಧ್ಯ ರೂಪದಲ್ಲಿ ಪ್ರತಿಫಲ ಪಡೆದು ರಾಜ್ಯ ರಾಜಕಾರಣವನ್ನು ಒಳಗೊಳಗೇ ಕೊರೆದುಹಾಕಿತ್ತು. ಇದರಲ್ಲಿ ಕಾಂಗ್ರೆಸ್ - ಜೆಡಿಎಸ್‌ಗಳ ಪಾತ್ರವೇನೂ ಕಡಿಮೆಯಿಲ್ಲ. ಆದರೆ ಒಂದೆರಡೇ ವರ್ಷಗಳಲ್ಲಿ, ಕೆಲವೊಮ್ಮೆ ಒಂದೆರಡೇ ತಿಂಗಳುಗಳಲ್ಲಿ ಸಾವಿರಾರುಕೋಟಿ ರೂಪಾಯಿಗಳ ಹಣ ಒಂದೆಡೆ ಅಥವಾ ಒಬ್ಬಿಬ್ಬರ ಕೈಯಲ್ಲಿ ಸಂಗ್ರಹವಾಗಿ ಅದು ರಾಜ್ಯವೊಂದರ ಇಡೀ ರಾಜಕಾರಣವನ್ನು ನಿಯಂತ್ರಿಸುವಷ್ಟು ರಾಕ್ಷಸ ರೂಪದಲ್ಲಿ ಬೆಳೆದದ್ದು ಇತ್ತೀಚೆಗಷ್ಟೆ.

ರಾಜ್ಯ ಕಾಂಗ್ರೆಸ್ ಪ್ರಜಾಪ್ರಭುತ್ವದ ಮರ್ಯಾದೆಯನ್ನು ಮೀರದೆ ತಾನು ತುರ್ತಾಗಿ ಯಾವುದರ ವಿರುದ್ಧ ಹೋರಾಟ ಮಾಡಬೇ ಕಾಗಿದೆ ಎಂಬುದನ್ನು ಮೊದಲು ಸ್ಪಷ್ಟಪಡಿಸಿ ಕೊಳ್ಳಬೇಕು. ಸದ್ಯಕ್ಕೆ ಅದು ತನ್ನ ನಿರ್ದಿಷ್ಟ ಗುರಿಯಾಗಿದ್ದ 'ಗಣಿ ಲೂಟಿ ಹಣದ ರಾಜ ಕಾರಣ'ದ ಅಪಾಯಗ ಳನ್ನು ನಿವಾರಿಸುವತ್ತ ತನ್ನ ಗಮನವನ್ನು ಕೇಂದ್ರೀ ಕರಿಸಿದಲ್ಲಿ ಮಾತ್ರ ತಾನು ನಡೆಸಿದ ಪಾದಯಾತ್ರೆಗೆ ಜನರ ಆತ್ಯಂತಿಕ ಮಾನ್ಯತೆ ಮತ್ತು ಐತಿಹಾಸಿಕ ಮಹತ್ವ ದೊರೆತೀತು. ಇಲ್ಲದೇ ಹೋದಲ್ಲಿ, ಅದರ ವಿರೋಧಿಗಳು ಬಣ್ಣಿ ಸುತ್ತಿರುವಂತೆ ಅದು 'ರಾಜಕೀಯ ದೊಂಬ ರಾಟ'ವಷ್ಟೇ(ದೊಂಬ ಜಾತಿಯೊಂದಿಗೆ ಗುರುತಿ ಸಿಕೊಂಡವರು ಕ್ಷಮಿಸಬೇಕು!) ಎನಿಸಿಕೊಂಡೀತು.

ಈ ಬೆಳವಣಿಗೆಯ ಹಿಂದೆ ಸದ್ಯಕ್ಕೆ ರಾಜ್ಯದಲ್ಲಿ ಎದ್ದು ಕಾಣುವಂತಿರುವುದು ಐವತ್ತು ಸಾವಿರ ಕೋಟಿ ರೂಪಾಯಿಗಳನ್ನು ಮೀರಿದೆಯೆಂದು ಹೇಳಲಾಗುವ ಬಳ್ಳಾರಿ ಜಿಲ್ಲೆಯ ಗಣಿ ಹಣ. ಇದರಲ್ಲಿ ಎಷ್ಟು ಹಣ ಸಕ್ರಮ ಅಥವಾ ಅಕ್ರಮವಾದದ್ದು ಎಂಬುದು ಸಮಗ್ರ ತನಿಖೆಯಿಂದಷ್ಟೇ ಗೊತ್ತಾಗಬೇಕಾದುದಾದರೂ, ಇಷ್ಟು ಅಪಾರ ಪ್ರಮಾಣದ ಹಣ ಒಮ್ಮೆಗೇ ಒಂದು ಕುಟುಂಬದಲ್ಲಿ ಸಂಗ್ರಹವಾಗುವುದು ಹೇಗೆ ಸಾಧ್ಯವಾಯಿತು? ಇದನ್ನು ವಿಚಾರ ಮಾಡುವುದರಿಂದ ಮಾತ್ರ ಸಮಸ್ಯೆಯ ನಿಜ ಪರಿಹಾರಕ್ಕೆ ದಾರಿ ಕಂಡೀತೆಂಬುದನ್ನು ಕಾಂಗ್ರೆಸ್ ಅರಿತರೆ ಒಳ್ಳೆಯದು. ಏಕೆಂದರೆ ಬಳ್ಳಾರಿಯ ಗಣಿ ಧಣಿಗಳು ಮಾತ್ರವಲ್ಲ, ರಾಷ್ಟ್ರಾದ್ಯಂತ ಇಂದು ರಫ್ತು ಪ್ರೋತ್ಸಾಹ, ಸೇವೆ, ಹೊರಗುತ್ತಿಗೆ, ನಿರ್ವಹಣಾ ಶುಲ್ಕ, ಫ್ರಾಂಚೈಸಿ, ಮರ್ಚೆಂಡೈಸ್ ಇತ್ಯಾದಿ ಹೆಸರುಗಳಲ್ಲಿ 'ಸೂಕ್ತ ಸಂಪರ್ಕ'ಗಳ ಚಾಣಾಕ್ಷರು ತಮ್ಮ ಕರಾಮತ್ತುಗಳನ್ನು ತೋರುತ್ತಾ ರಾತ್ರೋರಾತ್ರಿ ಕೋಟ್ಯಾಧಿಪತಿಗಳಾಗುತ್ತಿದ್ದಾರೆ. ಈ ದೇಶದಲ್ಲಿ ತೊಂಭತ್ತರ ದಶಕದಲ್ಲಿ ಮುಕ್ತ ಮಾರುಕಟ್ಟೆ ನೀತಿ(?) ಜಾರಿಗೆ ಬಂದಾಗಿನಿಂದ ಸುಖರಾಂರ ಟೆಲಿಕಾಂ ಹಗರಣದಿಂದ ಹಿಡಿದು ಇತ್ತೀಚಿನ ಕಾಮನ್‌ವೆಲ್ತ್ ಕ್ರೀಡಾ ಕೂಟದ ಹಗರಣದವರೆಗೆ ಹಿಂದೆಂದೂ ಇಲ್ಲದಷ್ಟು ಪ್ರಮಾಣದ–ಸಾವಿರಾರು ಕೋಟಿ ರೂಪಾಯಿಗಳ–ಹಣದ ಲೂಟಿ ಪ್ರಕರಣಗಳು ಎಡಬಿಡದೆ ಬೆಳಕಿಗೆ ಬರುತ್ತಿವೆ.

ಸದ್ಯಕ್ಕೆ ರಾಜ್ಯದಲ್ಲಿ ಎದ್ದು ಕಾಣುವಂತಿರುವುದು ಐವತ್ತು ಸಾವಿರ ಕೋಟಿ ರೂ.ಗಳನ್ನು ಮೀರಿದೆಯೆಂದು ಹೇಳಲಾಗುವ ಬಳ್ಳಾರಿ ಜಿಲ್ಲೆಯ ಗಣಿ ಹಣ. ಇದರಲ್ಲಿ ಎಷ್ಟು ಹಣ ಸಕ್ರಮ ಅಥವಾ ಅಕ್ರಮವಾದದ್ದು ಎಂಬುದು ಸಮಗ್ರ ತನಿಖೆಯಿಂದಷ್ಟೇ ಗೊತ್ತಾಗಬೇಕಾದುದಾದರೂ, ಇಷ್ಟು ಅಪಾರ ಪ್ರಮಾಣದ ಹಣ ಒಮ್ಮೆಗೇ ಒಂದು ಕುಟುಂಬದಲ್ಲಿ ಸಂಗ್ರಹವಾಗುವುದು ಹೇಗೆ ಸಾಧ್ಯವಾಯಿತು? ಇದನ್ನು ವಿಚಾರ ಮಾಡುವುದರಿಂದ ಮಾತ್ರ ಸಮಸ್ಯೆಯ ನಿಜ ಪರಿಹಾರಕ್ಕೆ ದಾರಿ ಕಂಡೀತೆಂಬುದನ್ನು ಕಾಂಗ್ರೆಸ್ ಅರಿಯಬೇಕು. ಏಕೆಂದರೆ ಬಳ್ಳಾರಿ ಗಣಿ ಧಣಿಗಳು ಮಾತ್ರವಲ್ಲ, ರಾಷ್ಟ್ರಾದ್ಯಂತ ಇಂದು ರಫ್ತು ಪ್ರೋತ್ಸಾಹ, ಸೇವೆ, ಹೊರಗುತ್ತಿಗೆ, ನಿರ್ವಹಣಾ ಶುಲ್ಕ, ಫ್ರಾಂಚೈಸಿ, ಮರ್ಚೆಂಡೈಸ್ ಇತ್ಯಾದಿ ಹೆಸರುಗಳಲ್ಲಿ 'ಸೂಕ್ತ ಸಂಪರ್ಕ'ಗಳ ಚಾಣಾಕ್ಷರು ತಮ್ಮ ಕರಾಮತ್ತುಗಳನ್ನು ತೋರುತ್ತಾ ರಾತ್ರೋರಾತ್ರಿ ಕೋಟ್ಯಾಧಿಪತಿಗಳಾಗುತ್ತಿದ್ದಾರೆ.

ಈ ವಂಚನೆ ಸುಖರಾಂರ ನೂರಾರು ಕೋಟಿ ರೂಪಾಯಿಗಳ ಹಗರಣದಿಂದ ಆರಂಭವಾಗಿ ಸಾವಿರಾರು ಕೋಟಿ ರೂಪಾಯಿಗಳ ಷೇರು ಹಗರಣ, ಇಂಡಿಯನ್ ಬ್ಯಾಂಕ್ ಹಗರಣ, ಯು.ಟಿ.ಐ. ಹಗರಣ, ಸತ್ಯಂ ಹಗರಣ, ಐ.ಪಿ.ಎಲ್. ಹಗರಣಗಳನ್ನು ದಾಟಿ ಈ ವರ್ಷದ ಎ.ರಾಜಾ ಅವರ ಮತ್ತೊಂದು ಟೆಲಿಕಾಂ ಹಗರಣವನ್ನು ಮುಟ್ಟುವ ಹೊತ್ತಿಗೆ ನೂರಾರು ಸಾವಿರ ಕೋಟಿ ರೂಪಾಯಿಗಳನ್ನು ಮುಟ್ಟಿದೆ! ಅರವತ್ತೈದು ಸಾವಿರ ಕೋಟಿ ರೂಪಾಯಿಗಳದ್ದೆಂದು ಹೇಳಲಾಗುವ ಈ ಹಗರಣದ್ದೇ ಉದಾಹರಣೆ ಕೊಡುವುದಾದರೆ, ಬರೀ ಲೆಟರ್ ಹೆಡ್‌ವೊಂದನ್ನು ಮಾಡಿಸಿದ ಬಿಡಾಡಿ ಸಂಸ್ಥೆಯೊಂದು ಮಧ್ಯವರ್ತಿ ಮಹಿಳೆಯೊಬ್ಬಳನ್ನು ಬಳಸುವ ಮೂಲಕ ಜಿ–2 ಸ್ಪೆಕ್ಟ್ರಂ 'ಬಿಡ್' ಗೆದ್ದು, ಅದನ್ನು ತಕ್ಷಣವೇ ಸುಸಜ್ಜಿತ ಟೆಲಿ ಸಂಸ್ಥೆಯೊಂದಕ್ಕೆ ಮಾರಾಟ ಮಾಡಿ ರಾತ್ರೋರಾತ್ರಿ ಇಪ್ಪತ್ತುಸಾವಿರ ಕೋಟಿ ರೂಪಾಯಿಗಳನ್ನು ಸಂಪಾದಿಸಿತೆಂದು ಹೇಳಲಾಗುತ್ತಿದೆ.

ಈ ಸಂದರ್ಭದಲ್ಲಿ ಕಾಮನ್ವೆಲ್ತ್ ಕ್ರೀಡಾಕೂಟದ ಹಗರಣದ ಬಗ್ಗೆ ವಿವರವಾಗಿಯೇ ಬರೆಯಬೇಕಾಗಿದೆ. ಏಕೆಂದರೆ ಈ ಹಗರಣ ಭ್ರಷ್ಟಾಚಾರಕ್ಕೆ ಸಾಮಾಜಿಕ ಅಶ್ಲೀಲತೆಯ ಆಯಾಮವನ್ನೂ ಸೇರಿಸಿ ಹೊಸದೊಂದು ವ್ಯಾಖ್ಯೆಯನ್ನೇ ಬರೆಯುತ್ತಿರುವಂತೆ ತೋರುತ್ತಿದೆ. ಈ ಹಗರಣದ ವಿವರಗಳು ಈಗ ಒಂದೊಂದಾಗಿ ಹೊರಬರುತ್ತಿದ್ದು, ಇದೊಂದು ವ್ಯವಸ್ಥಿತ ಹಣ ಹಗರಣವೆಂಬುದು ಮಾತ್ರ ಕೆಲವು ಆಸಕ್ತ ಟಿ.ವಿ.ವಾಹಿನಿಗಳ ಕ್ರಿಯಾಶೀಲತೆಯಿಂದಾಗಿ ಹೆಚ್ಚೂ ಕಡಿಮೆ ಸಾಬೀತಾಗಿದೆ. 'ಪ್ರಕಾಶಮಾನ ಭಾರತ'ದ ಪ್ರಚಾರಾಂದೋಲನದ ಭಾಗವಾಗಿ 2003ರಲ್ಲಿ ಎನ್.ಡಿ.ಎ. ಸರ್ಕಾರವಿದ್ದಾಗ ಅನುಮೋದನೆ ಪಡೆದ ಈ 'ವ್ಯವಸ್ಥಿತ ಯೋಜನೆ'ಯ ವೆಚ್ಚ ಯು.ಪಿ.ಎ. ಸರ್ಕಾರಗಳ ಸಮಯದಲ್ಲಿ ಹತ್ತು ಪಟ್ಟು ಹೆಚ್ಚಿದೆ.

ಈಗ ಸುಮಾರು 42 ಸಾವಿರ ಕೋಟಿ ರೂಪಾಯಿಗಳ ಅಂದಾಜು ವೆಚ್ಚವನ್ನು ಮುಟ್ಟಿರುವ ಈ ಕ್ರೀಡಾಕೂಟ ಬರೀ ಕ್ರೀಡಾಕೂಟದ ಉದ್ದೇಶವನ್ನು ಹೊಂದಿಲ್ಲವಂತೆ. ಈ ಯೋಜನೆಯ ಭಾಗವಾಗಿ, ಈ ಕ್ರೀಡಾಕೂಟ ನಡೆಯುವ ದೆಹಲಿ ನಗರವನ್ನು ಜಾಗತಿಕ ಮಟ್ಟದ ನಗರವನ್ನಾಗಿ ಮಾಡಲು ಇಡೀ ನಗರವನ್ನೇ ಪುನಾರಚಿಸಲಾಗುತ್ತಿದೆ! ಇದರ ಪರಿಣಾಮವಾಗಿ ಈಗ ಬಾಂಬ್ ಬಿದ್ದ ನಗರದಂತೆ ಭಯಾನಕವಾಗಿ ತೋರುತ್ತಿರುವ ದೆಹಲಿ ಇನ್ನು ಮುಂದೆ ಅತಿ ಪ್ರತಿಷ್ಠಿತರ ನಗರವಾಗಿ ಮಾತ್ರ ಉಳಿಯಲಿದ್ದು, ಇನ್ನಷ್ಟು ಭಯಂಕರವಾಗಿ ತೋರಲಿದೆ ಎಂದು ನಗರ ಮೂಲ ನಿವಾಸಿಗಳು ಆತಂಕಪಡತೊಡಗಿದ್ದಾರೆ.

ಒಂದು ಲಕ್ಷ ರೂಪಾಯಿಗಳಿಗೂ ಕಡಿಮೆ ಬೆಲೆಯಲ್ಲಿ ದೊರೆಯುವ ತುಳಿ ಯಂತ್ರಕ್ಕೆ 45 ದಿನಗಳ ಬಾಡಿಗೆಯಾಗಿ ಹತ್ತು ಲಕ್ಷ ರೂಪಾಯಿಗಳನ್ನೂ, 10–15ಸಾವಿರ ರೂಪಾಯಿಗಳ ಬೆಲೆಗೆ ಸಿಗುವ ರೆಫ್ರಿಜಿರೇಟರ್‌ಗೆ 42 ಸಾವಿರ ರೂಪಾಯಿಗಳನ್ನೂ, 250–300 ರೂಪಾಯಿ ಬೆಲೆ ಬಾಳುವ ಕುರ್ಚಿಗೆ 8400 ರೂಪಾಯಿಗಳನ್ನೂ, 500 ರೂಪಾಯಿಗಳಿಗೆ ಸಿಗುವ ಬಣ್ಣದ ಛತ್ರಿಗಾಗಿ 6400 ರೂಪಾಯಿಗಳನ್ನೂ, 100 ರೂಪಾಯಿಗಳಿಗೆ ದೊರಕುವ ಶೌಚ ಕಾಗದದ ಉಂಡೆಯನ್ನು 400 ರೂಪಾಯಿಗಳನ್ನೂ 'ಅಧಿಕೃತ ಟೆಂಡರ್' ಮೂಲಕ ನೀಡಲಾಗಿದೆ ಎಂದು ಈವರೆಗೆ ಹೊರಬಿದ್ದಿರುವ ಈ ಯೋಜನೆಯ ಕೆಲ ವಿವರಗಳು. ಕೋಟ್ಯಾಂತರ ರೂಪಾಯಿಗಳ ವೆಚ್ಚದಲ್ಲಿ ನಿರ್ಮಾಣವಾಗುತ್ತಿರುವ ಕ್ರೀಡಾಂಗಣಗಳು, ಕ್ರೀಡಾಳು ವಸತಿ ಗೃಹಗಳು, ಫ್ಲೈ ಓವರ್‌ಗಳು, ನಗರದ ಎಲ್ಲ ರಸ್ತೆಗಳ ಮತ್ತು ಪಾದಚಾರಿ ಮಾರ್ಗಗಳ ಪುನರ್‌ನಿರ್ಮಾಣ, ಮೆಟ್ರೋ ರೈಲ್ವೆಯ ವಿಸ್ತರಣೆ, ಸಂಚಾರ ಮತ್ತು ಸಂಪರ್ಕ ವ್ಯವಸ್ಥೆಯ ಆಧುನೀಕರಣ, ಕಾರ್ಯಕ್ರಮ ಪ್ರಸಾರ ವ್ಯವಸ್ಥೆ, ವಿದ್ಯುತ್ ಮತ್ತು ಕುಡಿಯುವ ನೀರಿನ ಹೊಸ ವ್ಯವಸ್ಥೆ, ಇತ್ಯಾದಿ ಕೋಟ್ಯಾಂತರ ರೂಪಾಯಿಗಳ ಕಾಮಗಾರಿಯಲ್ಲಿ ಹಾಗೂ ಪ್ರಾಯೋಜಕತ್ವ ಶುಲ್ಕ, ಮನರಂಜನಾ ಕಾರ್ಯಕ್ರಮ ನಿಯೋಜನೆ, ಮರ್ಚೆಂಡೈಸ್, ಸಾರ್ವಜನಿಕ ಸಂಪರ್ಕಗಳ ಹೊರಗುತ್ತಿಗೆ ಇತ್ಯಾದಿ ವ್ಯವಹಾರಗಳಲ್ಲಿ ಎಷ್ಟೆಷ್ಟು ಹಣ ಯಾರಾರ ಪಾಲಾಗಿರಬಹುದು ಎಂಬುದರ ಸೂಚನೆ ನೀಡುತ್ತದೆ.

ಕ್ರೀಡಾಕೂಟದ 'ಲಾಂಛನ ದಂಡ'ವನ್ನು ಕಾಮನ್ವೆಲ್ತ್ ರಾಷ್ಟ್ರಗಳ ಒಕ್ಕೂಟದ ಔಪಚಾರಿಕ ಮುಖ್ಯಸ್ಥೆಯಾದ ಬ್ರಿಟನ್ನಿನ ರಾಣಿ ಲಂಡನ್ನಿನಲ್ಲಿ ನಮ್ಮ ರಾಷ್ಟ್ರಪತಿಗಳಿಗೆ ವರ್ಗಾಯಿಸುವ ಸಮಾರಂಭದ ವ್ಯವಸ್ಥೆಗಾಗಿ ಭಾರತದ ಕಾಮನ್ವೆಲ್ತ್ ಕ್ರೀಡಾಕೂಟದ ಸಂಘಟನಾ ಸಮಿತಿ ಆಶೀಶ್ ಪಟೇಲ್ ಎಂಬ ಭಾರತೀಯ ಮೂಲದ ಬ್ರಿಟಿಷ್ ಪ್ರಜೆಯ ಒಡೆತನದ ಸಂಸ್ಥೆಯೊಂದಕ್ಕೆ ಹೊರಗುತ್ತಿಗೆ ನೀಡಿತ್ತು. ಅದಕ್ಕಾಗಿ ನೀಡಿದ ಹಣದ ವರ್ಗಾವಣೆಯ ಬಗ್ಗೆ ಬ್ರಿಟಿಷ್ ಸರ್ಕಾರದ ತೆರಿಗೆ ಅಧಿಕಾರಿಗಳು ಸಂಶಯ ವ್ಯಕ್ತಪಡಿಸಿ ತನಿಖೆಯನ್ನಾರಂಭಿಸಿದಾಗಷ್ಟೇ ಹಗರಣದ ವಿವರಗಳು

ಬಿಚ್ಚಿಕೊಳ್ಳತೊಡಗಿದ್ದು!(ಈಗ ಬಹು ಮುಖ್ಯವೆಂಬಂತೆ ಚರ್ಚಿತವಾಗುತ್ತಿರುವ ಲೆಕ್ಕ ಪರಿಶೋಧಕರ ವರದಿಯನ್ನು ಔಪಚಾರಿಕ ವರದಿಯಂತೆ ನಿರ್ಲಕ್ಷಿಸಲಾಗಿತ್ತು ಎಂಬುದನ್ನೂ ಇಲ್ಲಿ ಹೇಳಬೇಕು) ಆ ಮೊದಲು ಈ ಕ್ರೀಡಾಕೂಟದ ಬಗ್ಗೆ ಇದ್ದ ಆತಂಕವೆಂದರೆ, ಸಕಾಲದಲ್ಲಿ ಕ್ರೀಡಾಂಗಣಗಳು ಮತ್ತು ಇತರೆ ನಾಗರಿಕ ಸೌಲಭ್ಯಗಳು ಸಿದ್ಧಗೊಳ್ಳದೆ ಭಾರತದ ಮಾನ ಜಾಗತಿಕ ಮಟ್ಟದಲ್ಲಿ ಹರಾಜಾಗಿ, ಯಾವ ಉದ್ದೇಶದಿಂದ ಈ ಕ್ರೀಡಾಕೂಟವನ್ನು ಆಯೋಜಿಸಲಾಯಿತೋ ಆ ಉದ್ದೇಶಕ್ಕೇ ಭಂಗ ಉಂಟಾಗುವದೋ ಎಂಬುದು ಮಾತ್ರ. ಆದರೀಗ ಈ ಆತಂಕದ ಜೊತೆಗೆ ಭ್ರಷ್ಟಾಚಾರದ ಹಗರಣವೂ ಸೇರಿಕೊಂಡು ಇಡೀ ಕ್ರೀಡಾಕೂಟದ ವಿಶ್ವಾಸಾರ್ಹತೆಗೇ ಭಂಗ ಉಂಟಾಗಿದೆ.

ಹಾಗೆ ನೋಡಿದರೆ ಈಗ ಕಾಮನ್‌ವೆಲ್ತ್ ಕ್ರೀಡಾಕೂಟಕ್ಕೆ ಜಾಗತಿಕವಾಗಿ ಯಾವ ಮಹತ್ವವೂ ಇಲ್ಲ. ಇದೊಂದು ಸಾಮ್ರಾಜ್ಯಶಾಹಿ ವೈಭವದ ಸ್ಮೃತಿಯನ್ನು ಇತಿಹಾಸದಲ್ಲಿ ಕಾಪಾಡುವ ಬ್ರಿಟನ್‌ನ ಪ್ರಯತ್ನದ ಒಂದು ಭಾಗವಷ್ಟೆ. ಇದರಲ್ಲಿ ಬ್ರಿಟಿಷ್ ಸಾಮ್ರಾಜ್ಯಶಾಹಿಗೆ ಒಳಗಾಗಿದ್ದ ದೇಶಗಳಷ್ಟೇ ಭಾಗವಹಿಸುವುದು. ಆದರೀಗ ಇದಕ್ಕಿಂತ ಹೆಚ್ಚಿನ ಮಹತ್ವದ ಮತ್ತು ಸ್ಪರ್ಧಾತ್ಮಕತೆಯ ಜಾಗತಿಕ ಕ್ರೀಡಾಕೂಟಗಳ ಸಂಖ್ಯೆ ಹೆಚ್ಚುತ್ತಿದ್ದಂತೆ, ಈ ಕ್ರೀಡಾಕೂಟದಲ್ಲಿ ಭಾಗವಹಿಸುವ ಆಸಕ್ತಿ ಈ ದೇಶಗಳಲ್ಲೂ ಕಡಿಮೆಯಾಗಿದೆ. ಹಾಗಾಗಿಯೇ ಈ ಕೆಲ ದೇಶಗಳ ಹಲವು ಕ್ರೀಡಾ ಒಕ್ಕೂಟಗಳು – ಕ್ರೀಡಾಳುಗಳು ಭದ್ರತೆಯ ನೆಪವೊಡ್ಡಿ ಈ ಕ್ರೀಡಾಕೂಟದಲ್ಲಿ ಭಾಗವಹಿಸಲು ನಿರಾಕರಿಸಿವೆ.

ಕೆನಡಾ, ಆಸ್ಟ್ರೇಲಿಯಾ, ನ್ಯೂಜಿಲೆಂಡ್‌ನಂತಹ ಶ್ರೀಮಂತ ದೇಶಗಳೂ ಸೇರಿದಂತೆ ಈ ದೇಶಗಳಿಗೆ ಕ್ರೀಡಾಕೂಟದಲ್ಲಿ ಭಾಗವಹಿಸುವ ಖರ್ಚಿಗೆಂದು ಭಾರತ ಸರ್ಕಾರ ಅಪಾರ ಪ್ರಮಾಣದ ಧನ ಸಹಾಯ ನೀಡಿರುವುದಾದರೂ! (ಇದು ಧನ ಸಹಾಯವಲ್ಲ, ಈ ಕ್ರೀಡಾಕೂಟಕ್ಕೆ ಭಾರತವನ್ನೇ ಆಯ್ಕೆ ಮಾಡುವಂತೆ ಈ ದೇಶಗಳಿಗೆ ನೀಡಲಾದ 'ಲಂಚ' ಎಂದೂ ವ್ಯಾಖ್ಯಾನಿಸಲಾಗುತ್ತಿದೆ) ಭಾರತದಲ್ಲೂ ಈ ಕ್ರೀಡಾಕೂಟದ ಬಗ್ಗೆ 1982ರ ಏಷ್ಯನ್ ಕ್ರೀಡಾಕೂಟಕ್ಕೆ (ಇದರಲ್ಲಿ ಈ ಲೇಖಕ ಆಕಾಶವಾಣಿಗಾಗಿ ಕಾರ್ಯಕ್ರಮ ನಿರ್ವಾಹಕನಾಗಿ ಪಾಲ್ಗೊಂಡಿದ್ದ) ಹೋಲಿಸಿದಂತೆ ಕ್ರೀಡಾಳುಗಳಲ್ಲಾಗಲೀ, ಸಾರ್ವಜನಿಕರಲ್ಲಾಗಲೀ ಕುತೂಹಲ ಅಥವಾ ಆಸಕ್ತಿ ಇಲ್ಲವೇ ಇಲ್ಲವೆನ್ನುವಷ್ಟು ಕಡಿಮೆ. ಹಾಗಾಗಿಯೇ ಇದೇ ಸಮಯದಲ್ಲಿ ನಡೆಯಲಿರುವ ಕ್ರಿಕೆಟ್ ಪಂದ್ಯಗಳ ಪ್ರಸಾರದಿಂದ ತನಗೆ ಪ್ರಸಾರ ಆದಾಯದಲ್ಲಿ ತೊಂದರೆಯಾಗುವುದೆಂದು ಕ್ರೀಡಾಕೂಟದ ಸಂಘಟನಾ ಸಮಿತಿ ಭಾರತದ ಕ್ರಿಕೆಟ್ ನಿಯಂತ್ರಣ ಮಂಡಳಿಯಿಂದ ಪರಿಹಾರ ಕೋರಿದೆ!

ಅದೇನೇ ಇರಲಿ, ಜಾಗತಿಕ ಮಟ್ಟದ ಕ್ರೀಡಾಂಗಣಗಳು ಮತ್ತು ಇತರೆ ಕ್ರೀಡಾ ಸೌಲಭ್ಯಗಳನ್ನು ನಿರ್ಮಿಸಲಾಗುತ್ತಿದೆ ಎಂದು ಹೆಮ್ಮೆಯಿಂದ ಹೇಳಿಕೊಳ್ಳಲಾಗುತ್ತಿರುವ ಈ ಯೋಜನೆ ಜಾಗತಿಕ ಮಟ್ಟದ ಕ್ರೀಡಾಳುಗಳನ್ನು ರೂಪಿಸುವ ಯಾವ ಕಾರ್ಯಕ್ರಮವನ್ನೂ ರೂಪಿಸಿಕೊಳ್ಳದಿರುವುದು ಎಲ್ಲರ ಹುಬ್ಬೇರುವಂತೆ ಮಾಡಿದೆ. ದೇಶೀ ಕ್ರೀಡಾಳುಗಳಿಗೆ ಅನುಕೂಲವಾಗುವಂತೆ ಅವರ ಪೂರ್ವಭ್ಯಾಸಕ್ಕಾಗಿ ಕ್ರೀಡಾಂಗಣಗಳನ್ನು ಬಿಟ್ಟುಕೊಡಲು ಕ್ರೀಡಾಕೂಟ ಆರಂಭಕ್ಕೆ ಇನ್ನೊಂದು ತಿಂಗಳಷ್ಟೇ ಬಾಕಿ ಇರುವಾಗಲೂ ಅವು ಪೂರ್ಣವಾಗಿ ಸಿದ್ಧವಾಗಿಲ್ಲ! ಕ್ರೀಡಾಕೂಟವೊಂದರ ಆಯೋಜನೆಯಲ್ಲಿ ಕ್ರೀಡಾಳುಗಳ ಹಿತಾಸಕ್ತಿಯೇ ಗಮನದಲ್ಲಿಲ್ಲ ಎಂದರೆ ಏನು ಹೇಳುವುದು? ಹಾಗಾಗಿ ಆರಂಭದಿಂದಲೂ ಈ ಕ್ರೀಡಾಕೂಟದ ಇಡೀ ಯೋಜನೆಯ ಹಿಂದಿರುವುದು ಅಪಾರ ಹಣದ ವ್ಯವಹಾರವೇ ಹೊರತು ಭಾರತದ ಕ್ರೀಡೋನ್ನತಿಯ ಉದ್ದೇಶವಲ್ಲ ಎಂಬುದು ಸ್ಪಷ್ಟವಾಗುತ್ತದೆ.

ಇನ್ನು ಈ ಯೋಜನೆಯ ನಿರ್ಮಾಣದಲ್ಲಿ ಮೂರ್ನಾಲ್ಕು ವರ್ಷಗಳಿಂದ ತೊಡಗಿರುವ ಸಾವಿರಾರು ಕಾರ್ಮಿಕರ ಹಿತಾಸಕ್ತಿ ಕಾಪಾಡಲು, ಇವರಿಗೆ ಎಲ್ಲ ಅಗತ್ಯ ನಾಗರಿಕ ಸೌಲಭ್ಯಗಳನ್ನೂ ಭವಿಷ್ಯನಿಧಿಯನ್ನು ಒದಗಿಸುವ ನಿಯಮಗಳನ್ನು ರೂಪಿಸಿ ಅದಕ್ಕಾಗಿ 400 ಕೋಟಿ ರೂಪಾಯಿಗಳ ಕಲ್ಯಾಣ ನಿಧಿ ಸ್ಥಾಪಿಸಲಾಗಿದ್ದರೂ, ಇಲ್ಲಿನ ಕಾರ್ಮಿಕರು ಕ್ರೀಡಾಂಗಣ ಮತ್ತು ರಸ್ತೆ ಬದಿಗಳಲ್ಲಿನ ಮಳೆ ಬಿಸಿಲು ಗಾಳಿಗಳಿಗೆ ತುತ್ತಾಗಿರುವ ಷೆಡ್‌ಗಳಲ್ಲಿ ಯಾವುದೇ ನಾಗರಿಕ ಸೌಲಭ್ಯಗಳಿಲ್ಲದೆ ವಾಸಿಸುತ್ತಿದ್ದಾರೆ.

ನಿರ್ಮಾಣ ಕಾರ್ಯದ ಆಕಸ್ಮಿಕಗಳಿಗೆ ಸಿಕ್ಕಿ ಈವರೆಗೆ 42 ಮಂದಿ ಕಾರ್ಮಿಕರು ಅಸು ನೀಗಿ, ನೂರಕ್ಕೂ ಹೆಚ್ಚು ಜನ ಗಾಯಗೊಂಡಿದ್ದರೂ, ಇವರಾರಿಗೂ ಗುತ್ತಿಗೆದಾರರಿಂದ ಯಾವುದೇ ರೂಪದ ಪರಿಹಾರ ದೊರೆಯದಾಗಿದೆ. ಏಕೆಂದರೆ ಗುತ್ತಿಗೆದಾರರು ಈ ಹೆಚ್ಚಿನ ಜನರನ್ನು ಅಧಿಕೃತ ಕಾರ್ಮಿಕರ ಪಟ್ಟಿಯಲ್ಲಿ ನೋಂದಣಿ ಮಾಡಿಕೊಂಡೇ ಇಲ್ಲ. ಇದನ್ನು ಸಂಬಂಧಪಟ್ಟ ಕಾರ್ಮಿಕ ಕಲ್ಯಾಣ ಅಧಿಕಾರಿಗಳು ಗಮನಿಸಿಯೂ ಇಲ್ಲ. ಇದೀಗ, ಎಲ್ಲ ಕಾಮಗಾರಿ ಕೊನೆಯ ಘಟ್ಟ ಮುಟ್ಟುತ್ತಿದ್ದಂತೆ, ಸಾರ್ವಜನಿಕ ಹಿತಾಸಕ್ತಿಯ ಅರ್ಜಿಯೊಂದಕ್ಕೆ ಪ್ರತಿಸ್ಪಂದನವಾಗಿ ಸರ್ವೋಚ್ಚ ನ್ಯಾಯಾಲಯ ಕಾರ್ಮಿಕ ಕಲ್ಯಾಣ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಗುತ್ತಿಗೆದಾರರಿಗೆ ಮತ್ತು ಸರ್ಕಾರಕ್ಕೆ ಸೂಚನೆ ನೀಡಿದೆ!

ಜನರಿಗೆ ಸೇರಿದ ಕೋಟ್ಯಾಂತರ ರೂಪಾಯಿಗಳ ವೆಚ್ಚದಲ್ಲಿ ಈ ಕ್ರೀಡಾಕೂಟವನ್ನು ಯಾಕಾಗಿ, ಯಾರಿಗಾಗಿ ನಡೆಸಲಾಗುತ್ತಿದೆ ಎಂಬ ರಾಷ್ಟ್ರೀಯ ಜವಾಬ್ದಾರಿ ಅಥವಾ ಪರಿವೆಯೇ ಇಲ್ಲದೆ ಹೇಗೆ ಆಯೋಜಿಸಲಾಗುತ್ತಿದೆ ಎಂದರೆ, ಈ ಕ್ರೀಡಾಕೂಟದ ಸಮಯದಲ್ಲಿ ವಿದೇಶೀ ಕ್ರೀಡಾಸಕ್ತರಿಗೆ ನಮ್ಮ ಬಡತನ ಕಣ್ಣಿಗೆ ಬೀಳಬಾರದೆಂದು, ದೆಹಲಿಯ ಎಲ್ಲ ಭಿಕ್ಷುಕರನ್ನೂ ಹೊರಕ್ಕಟ್ಟಲಾಗಿದೆ. ನಗರದ ಕೊಳಚೆ ಪ್ರದೇಶಗಳನ್ನು ಗುಡಾರದ ಬಟ್ಟೆಯಿಂದ ಮುಚ್ಚಲಾಗುತ್ತಿದೆ! ಕ್ರೀಡಾಕೂಟದ ಸಮಯದಲ್ಲಿ ಜನ ಮನೆ ಬಿಟ್ಟು ಹೊರಬರುವ ದುಸ್ಸಾಹಸಕ್ಕೆ ತಾವು ಜವಾಬ್ದಾರರಲ್ಲವೆಂದು ನಗರದ ಪೊಲೀಸ್ ವರಿಷ್ಠರು ಘೋಷಿಸಿದ್ದಾರೆ. ಇದನ್ನರಿತು ಶಿಕ್ಷಣ ಇಲಾಖೆ ಎಲ್ಲ ಶಾಲಾ ಕಾಲೇಜುಗಳಿಗೂ ರಜೆ ಘೋಷಿಸಿದೆ.

ಜನರಿಗೆ ಸೇರಿದ ಕೋಟ್ಯಾಂತರ ರೂಪಾಯಿಗಳ ವೆಚ್ಚದಲ್ಲಿ ಈ ಕ್ರೀಡಾಕೂಟವನ್ನು ಯಾಕಾಗಿ, ಯಾರಿಗಾಗಿ ನಡೆಸಲಾಗುತ್ತಿದೆ ಎಂಬ ರಾಷ್ಟ್ರೀಯ ಜವಾಬ್ದಾರಿ ಅಥವಾ ಪರಿವೆಯೇ ಇಲ್ಲದೆ ಹೇಗೆ ಆಯೋಜಿಸಲಾಗುತ್ತಿದೆ ಎಂದರೆ, ಈ ಕ್ರೀಡಾಕೂಟದ ಸಮಯದಲ್ಲಿ ವಿದೇಶೀ ಕ್ರೀಡಾಸಕ್ತರಿಗೆ ನಮ್ಮ ಬಡತನ ಕಣ್ಣಿಗೆ ಬೀಳಬಾರದೆಂದು, ದೆಹಲಿಯ ಎಲ್ಲ ಭಿಕ್ಷುಕರನ್ನೂ ಹೊರಕ್ಕಟ್ಟಲಾಗಿದೆ.

ನಗರದ ಕೊಳಚೆ ಪ್ರದೇಶಗಳನ್ನು ಗುಡಾರದ ಬಟ್ಟೆಯಿಂದ ಮುಚ್ಚಲಾಗುತ್ತಿದೆ! ಕ್ರೀಡಾಕೂಟದ ಸಮಯದಲ್ಲಿ ಜನ ಮನೆ ಬಿಟ್ಟು ಹೊರಬರುವ ದುಸ್ಸಾಹಸಕ್ಕೆ ತಾವು ಜವಾಬ್ದಾರರಲ್ಲವೆಂದು ನಗರದ ಪೊಲೀಸ್ ವರಿಷ್ಠರು ಘೋಷಿಸಿದ್ದಾರೆ. ಇದನ್ನರಿತು ಶಿಕ್ಷಣ ಇಲಾಖೆ ಎಲ್ಲ ಶಾಲಾ ಕಾಲೇಜುಗಳಿಗೂ ರಜೆ ಘೋಷಿಸಿದೆ. ಹತ್ತು ದಿನಗಳ ಕ್ರೀಡಾಳುಗಳ ವಾಸಕ್ಕೆ ಕ್ರೀಡಾ ಗ್ರಾಮವನ್ನು ನಿರ್ಮಿಸಿ ಅವನ್ನು ನಂತರ ದೆಹಲಿ ವಿಶ್ವವಿದ್ಯಾಲಯದ ವಿದ್ಯಾರ್ಥಿ ನಿಲಯಗಳಾಗಿ ಬಳಸಲು ನೀಡುವುದಾಗಿ ಹೇಳಿದ್ದ ಕ್ರೀಡಾಕೂಟದ ಸಂಘಟನಾ ಸಮಿತಿ, ಈಗ ಕ್ರೀಡಾ ಗ್ರಾಮಕ್ಕೆ ಬದಲಾಗಿ ವೈಭವೋಪೇತ ಮನೆಗಳನ್ನು ನಿರ್ಮಿಸಿ, ಕ್ರೀಡಾಕೂಟದ ನಂತರ ಅವುಗಳನ್ನು ಶ್ರೀಮಂತರಿಗೆ ಮಾರಾಟ ಮಾಡುವ ಸಲಹೆಯನ್ನು ಸರ್ಕಾರದ ಮುಂದಿಟ್ಟಿದೆ. ಸರ್ಕಾರ ಅದಕ್ಕೆ ಈಗ ಒಪ್ಪಿಗೆ ನೀಡುವುದು 'ಅನಿವಾರ್ಯ'ವಾಗಿದೆ!

ಹೀಗಾಗಿ, ಈ ಇಡೀ ಕ್ರೀಡಾಕೂಟದ ಯೋಜನೆ ಕೇವಲ ಹಣದುದ್ಯಮಿಗಳ ಒಂದು ದೊಡ್ಡ ಅಂತರಾಷ್ಟ್ರೀಯ ವ್ಯಾಪಾರದಂತೆ ಯಾರಿಗಾದರೂ ಕಂಡರೆ ಆಶ್ಚರ್ಯವಿಲ್ಲ. ಈ ವ್ಯಾಪಾರಕ್ಕೆ ವ್ಯಾಪಾರ ಸಹಜವಾದ ಯಾವ ಪ್ರಾಥಮಿಕ ನೈತಿಕತೆಯ ಅಥವಾ ಸಾಮಾಜಿಕ ಜವಾಬ್ದಾರಿಯ ಹಂಗೂ ಇದ್ದಂತೆ ತೋರುವುದಿಲ್ಲ. ಇಂತಹ ವ್ಯಾಪಾರದ ಯಶಸ್ಸನ್ನು ಆಧರಿಸಿ ಮುಂದಿನ ಇಪ್ಪತ್ತು ವರ್ಷಗಳಲ್ಲಿ ಭಾರತದಲ್ಲಿ ಏಷ್ಯನ್ ಕ್ರೀಡೆಗಳನ್ನೂ, ಒಲಂಪಿಕ್ಸನ್ನೂ ಆಯೋಜಿಸುವ ಹುನ್ನಾರ ಇದರ ಹಿಂದಿದೆ. ಹಾಗಾಗಿಯೇ ಈ ಹಗರಣವನ್ನು ಮುಚ್ಚಿಹಾಕಲು ಕ್ರೀಡಾಕೂಟದ ಸಂಘಟನಾ ಸಮಿತಿಯ ಕಡೆಯಿಂದ–ಒಂದಿಬ್ಬರು ಪದಾಧಿಕಾರಿಗಳನ್ನು ವಜಾ ಮಾಡಿ, ಆಂತರಿಕ ತನಿಖೆಯೊಂದಕ್ಕೆ ಆಜ್ಞೆ ಮಾಡುವ ಮೂಲಕ– ಎಲ್ಲ ಪ್ರಯತ್ನಗಳೂ ನಡೆದಿವೆ.

ಇದರಿಂದ ಪೇಚಿಗೆ ಸಿಕ್ಕಿರುವ ಸರ್ಕಾರವೂ ಇದಕ್ಕೆ ಮೌನ ಸಮ್ಮತಿಯನ್ನು ಸೂಚಿಸುತ್ತಿರುವಂತಿದೆ. ಕ್ರೀಡಾಕೂಟ ಭಾರತಕ್ಕೆ ಹೆಸರು ತರುವಂತೆ ಯಶಸ್ವಿಯಾಗಿ ಮುಗಿಯಲಿ;ನಂತರ ತಪ್ಪಿಸ್ಥರನ್ನು ಗುರುತಿಸಿ ಶಿಕ್ಷೆ ಕೊಡುವ ತನಿಖೆ ಆರಂಭಿಸೋಣ ಎಂದು ಅದು ಹೇಳುತ್ತಿದೆ. ಯಾವ ರಾಷ್ಟ್ರೀಯ ಉದ್ದೇಶಗಳನ್ನೂ ಈಡೇರಿಸದ ಈ ಕೆಲಸಕ್ಕೆ ಬಾರದ ಮತ್ತು ಭ್ರಷ್ಟಾಚಾರವನ್ನು ಹಲವು ಅನೈತಿಕ ನೆಲೆಗಳಿಗೆ ವಿಸ್ತರಿಸಿರುವಂತೆ ತೋರುತ್ತಿರುವ ಈ ಕ್ರೀಡಾಕೂಟಕ್ಕೆ ಒಪ್ಪಿಗೆ ನೀಡಿದ ರಾಜಕೀಯ ಮನಃಸ್ಥಿತಿಯೇ ಈ ನಂತರದ ತನಿಖೆಯ ಮಾತನ್ನೂ ಆಡುತ್ತಿರುವುದು ಎಂಬುದನ್ನು ನಾವು ಗಮನಿಸುವುದು ಇಲ್ಲಿ ಮುಖ್ಯ. ಹಾಗಾಗಿ ಇಲ್ಲಿ ಯಾವೊಂದು ರಾಜಕೀಯ ಪಕ್ಷದ ಪ್ರಶ್ನೆ ಬರುವುದಿಲ್ಲ.

ಭ್ರಷ್ಟಾಚಾರ ಹಿಂದೆಯೂ ಇತ್ತು ನಿಜ. ಅದು ಭ್ರಷ್ಟಾಚಾರ ಮಾತ್ರವಾಗಿತ್ತು ಮತ್ತು ಅದನ್ನು ಹಾಗೆ ಗುರುತಿಸ

ಲಾಗುತ್ತಿತ್ತು ಕೂಡಾ. ಹಾಗಾಗಿ ಅದಕ್ಕೆ ಶಿಕ್ಷೆಯ ಭಯವಿತ್ತು. ಆದರೆ ಅದು ಹೀಗೆ ಹಗಲು ಲೂಟಿಯ ರೂಪದಲ್ಲಿ ಮತ್ತು ಪ್ರಮಾಣದಲ್ಲಿ ಇರಲಿಲ್ಲ. ಇದಕ್ಕೆ ಮುಖ್ಯವಾಗಿ, ನಮ್ಮ ಪಾರಂಪರಿಕ 'ದುಡಿಮೆಗೆ ತಕ್ಕ ಪ್ರತಿಫಲ' ತತ್ವವು ಮನಮೋಹನ ಸಿಂಗ್ ಅವರು ಜಾರಿಗೆ ತಂದ ಮುಕ್ತ ಮಾರುಕಟ್ಟೆ ನೀತಿಯಿಂದಾಗಿ ವಿಕ್ಷಿಪ್ತಗೊಂಡು, ಅದು ದುಡಿಮೆ ಎಂಬುದನ್ನು ಎಲ್ಲ ನೈತಿಕತೆಯಿಂದ ಮುಕ್ತಗೊಳಿಸಿ 'ಅವಕಾಶವಾದಿ ಲಾಭಕೋರತನ'ವಾಗಿ ಮಾರ್ಪಡಿಸಿದ್ದೇ ಕಾರಣವಾಗಿದೆ.

ಹಾಗೇ, ಈ ನೀತಿಯ ಭಾಗವಾಗಿಯೇ 'ಅಭಿವೃದ್ಧಿ'ಯ ಹೆಸರಲ್ಲಿ ದೇಶದೊಳಕ್ಕೆ (ಸಾಲದ)ಹಣದ ಹೊಳೆಯನ್ನೇ ಹರಿಸಿದ್ದು – ಎಂದೂ ಕಾಣದಿದ್ದ ಅಷ್ಟೊಂದು ಪ್ರಮಾಣದ ಹಣದ ಆಟಾಟೋಪವನ್ನು ನಿಯಂತ್ರಿಸಬಲ್ಲ ಶೀಲ ನಿರ್ಮಾಣ ಮಾಡಬಲ್ಲ ರಾಜಕಾರಣವನ್ನು ರೂಪಿಸುವ ಕಡೆ ಗಮನ ಕೊಡದಿದ್ದುದೂ ಇದಕ್ಕೆ ಇನ್ನೊಂದು ಕಾರಣವಾಗಿದೆ. ಹಾಗಾಗಿ ಹಿಂದೆ ನಾವು ಯಾವುದನ್ನು ಭ್ರಷ್ಟಾಚಾರವೆಂದು ಕರೆಯುತ್ತಿದ್ದೆವೋ ಅಥವಾ ಯಾವುದನ್ನು ಮೋಸ, ದಗಲ್ಬಾಜಿ, ಲೂಟಿ ಅಥವಾ ಪಾಪದ ಹಣ ಎಂದು ಕರೆಯುತ್ತಿದ್ದೆವೋ ಅದು ಇಂದು ಹೊಸ ವ್ಯಾಪಾರ ಸಂಸ್ಕೃತಿಯ ವೇಷದಲ್ಲಿ ನೈತಿಕ ದುಡಿಮೆ ಎಂದೇ ಮಾನ್ಯಮಾಡಲ್ಪಟ್ಟಿದೆ.

ಇದರಿಂದ ಸಾಮಾನ್ಯ ಜನ ಕೂಡಾ ಹತಾಶರಾಗಿ, ಸಿಕ್ಕಿದವರಿಗೆ ಸೀರುಂಡೆ ತತ್ವವನ್ನು ಒಪ್ಪಿಕೊಂಡು, ನೈತಿಕ ರಾಜಕಾರಣದ ಗೊಡವೆಯಿಂದ ದೂರವಾಗಿದ್ದಾರೆ. ಹಾಗೇ ಹಣ ಹೇಗಾದರೂ ಬರಲಿ, ಅದರಿಂದ ಸಿಗುವ 'ಸುಖ'ವೇ ಆತ್ಯಂತಿಕ ಎಂದು ತೀರ್ಮಾನಿಸಿದಂತೆ ತೋರುತ್ತಿದೆ. ಇದನ್ನು ನಿಯಂತ್ರಿಸಬೇಕಾದ ಕಾನೂನು ಮತ್ತು ಶಿಸ್ತು ಮೇಲ್ವಿಚಾರಕರು ಮತ್ತು ಇದರ ಬಗ್ಗೆ ತಿಳುವಳಿಕೆ ನೀಡಬೇಕಾದ ಧಾರ್ಮಿಕ ಮುಖಂಡರೂ, ಹಣದ ಹಿಂದೆ ಬಿದ್ದಿರುವ ದುರಂತಮಯ ದೃಶ್ಯವನ್ನು ನಾವಿಂದು ನೋಡುತ್ತಿದ್ದೇವೆ. ಇದರಿಂದ ಲೂಟಿ ಇನ್ನಷ್ಟು ಸುಲಭವಾಗಿದೆ.

ಇದೆಲ್ಲವೂ ಪಶ್ಚಿಮದ ವಸಾಹತುಶಾಹಿ ಮೂಲದ, ಅಂದರೆ ಲೂಟಿ ಆಧಾರಿತ ಆರ್ಥಿಕತೆಯಿಂದ ಸ್ಫೂರ್ತಿ ಪಡೆದ ರಾಜಕೀಯ ನೀತಿಯ ಫಲವೇ ಆಗಿದೆ. ಹಾಗಾಗಿಯೇ ಇದು ಇಂದು ದೇಶದಾದ್ಯಂತ ಸಂಪತ್ತಿನ ದ್ವೀಪಗಳನ್ನು ಸೃಷ್ಟಿಸುತ್ತಾ, ಹಲವು ಆಂತರಿಕ ವಸಾಹತುಗಳ ನಿರ್ಮಾಣಕ್ಕೆ ಕಾರಣವಾಗಿದೆ. ಬಳ್ಳಾರಿ ಸೀಮೆ ಅಂತಹ ಒಂದು ವಸಾಹತು ಮಾತ್ರ, ಅದರ ಹಿಂದಿರುವ ಲೂಟಿ ಹಣ ಈಗ ಕರ್ನಾಟಕವನ್ನೇ ಒಂದು ವಸಾಹತುವನ್ನಾಗಿ ವಿಸ್ತರಿಸಿಕೊಳ್ಳುವ ಹವಣಿಕೆಯಲ್ಲಿದೆ. ಇದಕ್ಕೆ ಬಿಜೆಪಿ ಎಂಬುದು ಒಂದು ಆಕಸ್ಮಿಕ ನೆಪ ಅಥವಾ ಸಾಧನ ಮಾತ್ರವಾಗಿದೆ. ಈ ಆಕಸ್ಮಿಕ ಸ್ವಲ್ಪ ಹೆಚ್ಚು ಕಮ್ಮಿಯಾಗಿದ್ದರೆ, ಆಂಧ್ರದಲ್ಲಾದಂತೆ ಕಾಂಗ್ರೆಸ್ಸೇ ಇದಕ್ಕೆ ಸಾಧನವಾಗುತ್ತಿತ್ತೋ ಏನೋ, ಯಾರು ಬಲ್ಲರು?

ಹಾಗಾಗಿ ಇಂದು ಕಾಂಗ್ರೆಸ್ ನಿಜವಾಗಿ ಬಳ್ಳಾರಿ ಗಣಿ ಲೂಟಿ ಹಣದ ವಿರುದ್ಧ ಮತ್ತು ಆ ಮೂಲಕ ರಾಜ್ಯ ರಾಜಕಾರಣದ ಹರಾಜಿನ ವಿರುದ್ಧ ಹೋರಾಡಲು, ಮೊದಲು ತನ್ನ ಪಕ್ಷದ ಆರ್ಥಿಕ ನೀತಿಯ ವಿರುದ್ಧ ಹೋರಾಡಬೇಕಿದೆ. ಆ ವಿವೇಚನೆ, ಪ್ರಬುದ್ಧತೆ, ತಾಕತ್ತು ರಾಜ್ಯ ಕಾಂಗ್ರೆಸ್ ನಾಯಕರಿಗೆ ಇದೆಯೇ? ಇದೇ ಇಂದಿನ ಮುಖ್ಯ ಪ್ರಶ್ನೆ. □

ಎರಡು ಚುಟುಕಗಳು

೧

ನಳ ಜೋರಾಗಿ ತಿರುವಬಾರದು
ಹನಿ ಹನಿ ತೊಟ್ಟಿಕ್ಕುತ್ತದೆ.
ಮಿಣಿ, ಹಗ್ಗ ಮಿತಿ ಮೀರಿ
ಹುರಿಮಾಡಬಾರದು
ಪಟ್ಟನೆ ಹರಿಯುತ್ತವೆ.
ಮನಕ್ಕೆ ಮಿತಿ ಮೀರಿ
ಕಟ್ಟೆ ವಿಧಿಸಬಾರದು
ಮೆಲ್ಲನೆ ಜಾರುತ್ತದೆ!

೨

ನಾಳೆ ಏನಾಗುವದೆಂದು
ಇಂದು ಯಾರು ಹೇಳಬಲ್ಲರು
ಇಂದು ಏನಾಗುದೆಂದು
ಈಗ ಯಾರು ಹೇಳಬಲ್ಲರು
ಭವಿಷ್ಯ ಹೇಳುವ ಜ್ಯೋತಿಷಿಗಳು ಸುಳ್ಳರು
ತಲೆಹಾಕಿ ಕೇಳುವವರು ಮಳ್ಳರು.

❍ ಅಲ್ಲಮ ಪ್ರಭು ಬೆಟ್ಟದೂರು

CHILD RIGHTS AND YOU
www.cry.org
Stand up for what is Right

You can make permanent change by working with CRY.

Here is an opportunity for you to use your professional skills and experience to restore to Indian children their basic right - the right to a childhood. We are looking for people with an urge to face new challenges. But most importantly, people who would want to work towards ensuring a just world for our children.
CRY is an Indian NGO that believes every child regardless of gender, caste or economic status has the right to survival, protection, development and participation - thus a childhood. For over 30 years, CRY has partnered grassroots level NGOs working with children, their parents and communities to make this a reality.

Project Mahan Seva Sansthan - Rajasthan

We have openings for the position of :

Manager - Development Support for the States of Karnataka, Andhra Pradesh and Kerala
Language Proficiency : Kannada , Telugu, Malayalam respectively (Local language)
Location : Bangalore

Your responsibilities will include
- Supporting CRY's efforts on advocacy. You will assist in formulating stances on regional issues and ensuring that these issues get recognition at the state, regional and national level.
- Encouraging project partners to join alliances. This will ensure that Child rights efforts are undertaken in a coordinated manner.
- Conducting quarterly reviews. This will include ensuring partners are compliant with CRY's stated requirements and that partners receive disbursements as per schedule. You will collate information relating to impact indicators for each project and compare with the stated regional objectives.
- Ensuring regular documentation and reporting of the ongoing interventions and programs.
- You will assist the state head to assess and identify projects and development partners that would best help to achieve the regional objectives in the state and create assessment reports for new partners and ensure that proposals for funding are presented to the regional committee for approvals.

You must hold a Graduate /Post Graduate Degree in Social Sciences with 6-8 years of experience in a grant making role with experience as mentioned above. Knowledge of Child Rights and its related issues and experience and association with people's movements would be an advantage. You must have good written and verbal communication skills in English and the local language. You must be willing to travel at least 10-12 days in a month.

Interested candidates can e-mail your CV to [illegible] or post to Child Rights and You, Madhavi Mansion, 12/3-1, Bachammal Road, Cox Town, Bangalore - 560 005. Tel: 080-2548 4952 / 8574. Please specify the post applied for and the position code (M/DS/BLRCH/COL).

For more information call Pravin Shivashankar on 94481- 48075 or e-mail at pravin.shivashankar@crymail.org

ತಾಲಿಬಾನೀಕರಣಕ್ಕೆ ಇಂಬುಗೊಡುವ ವ್ಯವಸ್ಥೆ

ಸುರೇಶ್ ಭಟ್

ಕೇರಳದ ಮೂವತ್ತುಪುರದ ಪ್ರೊ॥ ಟಿ.ಜೆ. ಜೋಸೆಫ್ ಎಂಬ ಉಪನ್ಯಾಸಕರ ಕೈಯನ್ನು ದುಷ್ಕರ್ಮಿಗಳು ಕಡಿದುಹಾಕಿದ ಸುದ್ದಿ ಬರಸಿಡಿಲಿನಂತೆ ಎರಗಿ ದಿಗ್ಭ್ರಮೆಗೊಳಿಸಿದೆ. ಇದು 21ನೆ ಶತಮಾನವೇ ಅಥವಾ ಮಧ್ಯಯುಗದಲ್ಲಿದ್ದೇವೆಯೇ ಎಂದು ಮೈ ಚಿವುಟಿಕೊಳ್ಳುವಂತಾಗಿದೆ. ಇಂತಹ ತಾಲಿಬಾನ್ ಶೈಲಿಯ ಬರ್ಬರ ಕೃತ್ಯವನ್ನೆಸಗಿರುವುದರ ಹಿಂದೆ ಯಾರ ಮತ್ತು ಯಾವ ತೆರನಾದ ಪ್ರಚೋದನೆ ಇದ್ದಿರಬೇಕು? ಇದನ್ನು 'ಧರ್ಮದ ರಕ್ಷಣೆ'ಗಾಗಿ ನಡೆಸಲಾಯಿತೇ ಅಥವಾ ಅದರ ಹಿಂದೆ ರಾಜಕೀಯ ಅಥವಾ ಇನ್ನಿತರ ಉದ್ದಿಶ್ಯಗಳಿರಬಹುದೇ? ಕೆಲವು ಸಮಯದ ಹಿಂದೆ ಸರಿಸುಮಾರು ಏಕಕಾಲಕ್ಕೆ ಹಲವು ರಾಜ್ಯಗಳಲ್ಲಿ ಹುಟ್ಟಿದ್ದ "ಲವ್ ಜಿಹಾದ್" ಎಂಬ ಕಲ್ಪಿತ ಪ್ರಕರಣಕ್ಕೆ ಸಂಬಂಧಿಸಿದಂತೆ ಹಿಂದೂ ಮತ್ತು ಕ್ರೈಸ್ತ ಮೂಲಭೂತವಾದಿಗಳು ಕೈಜೋಡಿಸಿದ್ದ ಒಂದು ವಿಲಕ್ಷಣ ವಿದ್ಯಮಾನವೂ ಕೇರಳದಲ್ಲಿ ನಡೆದಿರುವುದು ಈ ಸಂದರ್ಭದಲ್ಲಿ ಜ್ಞಾಪಕಕ್ಕೆ ಬರುತ್ತಿದೆ.

ಅದೇನೇ ಇರಲಿ, ನಾಗರಿಕ ಸಮಾಜದಲ್ಲಿ, ಅದೂ ಒಂದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಇಂತಹ ರಾಕ್ಷಸೀಯ ವರ್ತನೆಗಳನ್ನು ಎಂದೆಂದಿಗೂ ಸಹಿಸಲು ಸಾಧ್ಯವಿಲ್ಲ. ಇಂತಹ ಬರ್ಬರ ಹಲ್ಲೆ, ನೈತಿಕ ಪೊಲೀಸ್‌ಗಿರಿ, 'ಗೌರವ ಹತ್ಯೆ' ಮುಂತಾದ ಕೃತ್ಯಗಳನ್ನು ನಡೆಸುತ್ತಿರುವಂತಹ ಮತ್ತು ಅದನ್ನು ಪ್ರೋತ್ಸಾಹಿಸುತ್ತಿರುವಂತಹ ಮತಾಂಧ, ಮತೀಯ ಮೂಲಭೂತವಾದಿ ಸಂಘಟನೆಗಳು ಮತ್ತು ಸಮುದಾಯಗಳು ಯಾವುದೇ ಧರ್ಮಕ್ಕೆ ಸೇರಿರಲಿ, ಅವೆಲ್ಲವುಗಳ ವಿರುದ್ಧ ನಿರ್ದಾಕ್ಷಿಣ್ಯವಾಗಿ ಸೂಕ್ತ ಕ್ರಮ ಜರಗಿಸುವುದು ಅಗತ್ಯ. ಅಂತಹ ಅಗತ್ಯ ಬಿದ್ದಲ್ಲಿ ನಿಷೇಧಕ್ಕೂ ಸರಕಾರ ಹಿಂಜರಿಯಬಾರದು. ಸಂವಿಧಾನವೊಂದನ್ನು ಹೊಂದಿರುವ ಪ್ರಜಾತಾಂತ್ರಿಕ ಭಾರತದಲ್ಲಿ ಮಧ್ಯಯುಗೀನ ನ್ಯಾಯದಾನ ವ್ಯವಸ್ಥೆಗಳಿಗೆ ಅವಕಾಶವಿಲ್ಲ ಮತ್ತು ಇರಲೂ ಕೂಡದು.

ಪ್ರೊ॥ ಜೋಸೆಫ್ ಅವರು ಪ್ರವಾದಿ ಪೈಗಂಬರರ ಬಗ್ಗೆ ಆಕ್ಷೇಪಾರ್ಹ ಪ್ರಶ್ನೆಯೊಂದನ್ನು ಪ್ರಶ್ನೆಪತ್ರಿಕೆಯಲ್ಲಿ ಸೇರಿಸಿದ್ದ ಕೃತ್ಯಕ್ಕೆ ಕೇರಳದ ಆಡಳಿತ ತ್ವರಿತವಾಗಿ ಸ್ಪಂದಿಸಿತ್ತು. ಪ್ರೊ॥ ಜೋಸೆಫ್ ವಿರುದ್ಧ ಪ್ರಕರಣ ದಾಖಲಿಸಲಾಗಿತ್ತು. ಕಾಲೇಜಿನ ಆಡಳಿತ ಮಂಡಳಿ ಆತನನ್ನು ಅಮಾನತುಗೊಳಿಸಿತ್ತು. ಬೇಕೇ ಬೇಡವೇ ಎಂಬಂತೆ ಒಲ್ಲದ ಮನಸ್ಸಿನಿಂದ ಅಥವಾ ಮೊದಲೇ 'ಸೆಟ್ಟಿಂಗ್' ಮಾಡಿಕೊಂಡಿರುವಂತೆ ಕೇಸು ದಾಖಲಿಸಿ ನಂತರ ಸಚಿವಸಂಪುಟ ಅವನ್ನೆಲ್ಲ ಹಿಂಪಡೆಯುವಂತಹ ಘಟನೆ ಕೇರಳದಲ್ಲಿ ನಡೆದಿರಲಿಲ್ಲವೆನ್ನುವುದು ಮೇಲ್ನೋಟಕ್ಕೆ ಸ್ಪಷ್ಟವಿದೆ. ಹೀಗಿರುವಾಗ ಕಾನೂನು ತನ್ನ ಹಾದಿಯಲ್ಲಿ ಸಾಗುವುದಕ್ಕೆ ಅವಕಾಶ ಮಾಡಿಕೊಡುವುದು ನಾಗರಿಕ ಲಕ್ಷಣವಾಗಿರುತ್ತಿತ್ತು.

ವಿವಿಧ ಧರ್ಮಗಳಲ್ಲಿ ಆಗಿ ಹೋಗಿರುವ ದಾರ್ಶನಿಕರು, ಜ್ಞಾನಿಗಳು, ಪ್ರವಾದಿಗಳು ಎಲ್ಲರೂ ಬೋಧಿಸಿರುವುದು ಮಾನವೀಯತೆ, ಸಹಿಷ್ಣುತೆ, ಕ್ಷಮಾಗುಣ ಮತ್ತು ಶಾಂತಿಯನ್ನು. ಮಾನವರನ್ನು ಅಮಾನವೀಯವಾಗಿ ವರ್ತಿಸುವಂತೆ ಮಾಡುವ ಧರ್ಮ ಅದರ ನಿಜಾರ್ಥದಲ್ಲಿ ಧರ್ಮವೇ ಅಲ್ಲ. ಆದರೆ ಸುಶಿಕ್ಷಿತರಾಗುವ ಹಾದಿಯಲ್ಲಿ ಬಹಳಷ್ಟು ದೂರವನ್ನು ಕ್ರಮಿಸಿ ಬಂದಿರುವ ನಾವು ಇಂದು ಧರ್ಮಗಳ ಮೂಲ ಆಶಯಗಳನ್ನೇ ಮರೆತು ಅನ್ಯ ಧರ್ಮೀಯರನ್ನು ದ್ವೇಷಿಸುವುದರಲ್ಲಿ, ದೈಹಿಕ ಹಲ್ಲೆ ನಡೆಸುವುದರಲ್ಲಿ ತೊಡಗಿರುವುದನ್ನು ಒಂದು ಬಹುದೊಡ್ಡ ವಿಪರ್ಯಾಸವೆನ್ನದೆ ಬೇರೆ ವಿಧಿಯಿಲ್ಲ. ಪ್ರಾಯಶಃ ರಾಜಕೀಯ ಪಕ್ಷಗಳ ಅಧಿಕಾರದಾಟ ವಿವಿಗಳ ಕ್ಯಾಂಪಸ್‌ಗಳಿಗೂ ವಿಸ್ತರಿಸಿ ಅವೆಲ್ಲವೂ ರಾಜಕೀಕರಣಕ್ಕೆ ಒಳಗಾಗಿರುವುದರ ಪರಿಣಾಮವಾಗಿ ಶಿಕ್ಷಣದ ಸಂಸ್ಕೃತಿ, ಉದ್ದೇಶ ಮತ್ತು ಪಾವಿತ್ರ್ಯಗಳು ನಶಿಸುತ್ತಿರುವುದು ಇದಕ್ಕೆ ಕಾರಣವಿರಬಹುದೇ?

ತಾಲಿಬಾನ್ ಎಂದೋ ನಮ್ಮ ನಡುವಿನಲ್ಲಿದೆ

ಬಾಂಗ್ಲಾದೇಶೀಯ ಲೇಖಕಿ ತಸ್ಲಿಮಾ ನಸ್ರೀನ್ ಧರ್ಮವನ್ನು ನಿರಾಕರಿಸುವುದಿಲ್ಲ. ಮತೀಯ ಮೂಲಭೂತವಾದಿಗಳಲ್ಲಿರುವ ಸರ್ವಾಧಿಕಾರಿ ಪ್ರವೃತ್ತಿ ಹಾಗೂ ಮಹಿಳಾ ವಿರೋಧಿ ನಿಲುವುಗಳನ್ನು ಎತ್ತಿ ತೋರಿಸುತ್ತಾರೆ. ಸಮಾಜ ಮತ್ತು ಆಡಳಿತಗಳು ಧರ್ಮವನ್ನು ವ್ಯಾಖ್ಯಾನಿಸಿಕೊಂಡ ಪರಿಯನ್ನು ಪ್ರಶ್ನಿಸಿದ ಕಾರಣಕ್ಕೆ ಆಕೆ ದೇಶಭ್ರಷ್ಟಳಾಗಬೇಕಾಯಿತು. ಇದೇ ತಸ್ಲಿಮಾ ಬರೆದ ಲೇಖನವೊಂದಕ್ಕೆ ಸಂಬಂಧಿಸಿ ಇತ್ತೀಚೆಗೆ ಶಿವಮೊಗ್ಗದಲ್ಲಿ ದೊಂಬಿಗಳಾಗಿದ್ದವು. ತದ ನಂತರ ಮಂಗಳೂರು, ಉಡುಪಿಗಳ ಕೆಲವು ಪತ್ರಿಕಾ ಕಚೇರಿಗಳ ಮೇಲೆ ದಾಳಿ ನಡೆಸಿದ ವಿಕೃತ ಮನಸ್ಸುಗಳೂ ತಾಲಿಬಾನ್ ಬಳಗಕ್ಕೇ ಸೇರಿದವುಗಳು. ಮುಸ್ಲಿಂ ಮೂಲಭೂತ ವಾದಿಗಳು ತಸ್ಲಿಮಾರಿಗೆ ವಿರುದ್ಧವಿದ್ದಾಗ 'ಶತ್ರುವಿನ ಶತ್ರು ಮಿತ್ರ' ಎಂಬಂತೆ ಹಿಂದೂ ಮೂಲಭೂತ ವಾದಿಗಳು ಆಕೆಯ ಸ್ನೇಹಿತರೆಂದು ಬಿಂಬಿಸುವ ಯತ್ನವನ್ನು ಮಾಡಿದಾತ ಗುಜರಾತ್ ಮುಖ್ಯಮಂತ್ರಿ ನರೇಂದ್ರ ಮೋದಿ!

ತಪ್ಪಿತಸ್ತನೆಂದು ಘೋಷಿಸಲ್ಪಟ್ಟ ವ್ಯಕ್ತಿಯೊಬ್ಬನನ್ನು ಜನರ ಸಮಕ್ಷಮದಲ್ಲಿ ಗಲ್ಲಿಗೇರಿಸುವುದು ಶಕ್ತಿಯ ಸಂಕೇತವೆಂದು ಸಾರ್ವಜನಿಕವಾಗಿ ಹೇಳಿ

ವಿವಿಧ ಧರ್ಮಗಳಲ್ಲಿ ಆಗಿ ಹೋಗಿರುವ ದಾರ್ಶನಿಕರು, ಜ್ಞಾನಿಗಳು, ಪ್ರವಾದಿಗಳು ಎಲ್ಲರೂ ಬೋಧಿಸಿರುವುದು ಮಾನವೀಯತೆ, ಸಹಿಷ್ಣುತೆ, ಕ್ಷಮಾಗುಣ ಮತ್ತು ಶಾಂತಿಯನ್ನು. ಮಾನವರನ್ನು ಅಮಾನವೀಯವಾಗಿ ವರ್ತಿಸುವಂತೆ ಮಾಡುವ ಧರ್ಮ ಅದರ ನಿಜಾರ್ಥದಲ್ಲಿ ಧರ್ಮವೇ ಅಲ್ಲ. ಆದರೆ ಸುಶಿಕ್ಷಿತರಾಗುವ ಹಾದಿಯಲ್ಲಿ ಬಹಳಷ್ಟು ದೂರವನ್ನು ಕ್ರಮಿಸಿ ಬಂದಿರುವ ನಾವು ಇಂದು ಧರ್ಮಗಳ ಮೂಲ ಆಶಯಗಳನ್ನೇ ಮರೆತು ಅನ್ಯ ಧರ್ಮೀಯರನ್ನು ದ್ವೇಷಿಸುವುದರಲ್ಲಿ, ದೈಹಿಕ ಹಲ್ಲೆ ನಡೆಸುವುದರಲ್ಲಿ ತೊಡಗಿರುವುದನ್ನು ಒಂದು ಬಹುದೊಡ್ಡ ವಿಪರ್ಯಾಸವೆನ್ನದೆ ಬೇರೆ ವಿಧಿಯಿಲ್ಲ. ಪ್ರಾಯಶಃ ರಾಜಕೀಯ ಪಕ್ಷಗಳ ಅಧಿಕಾರದಾಟ ವಿವಿಗಳ ಕ್ಯಾಂಪಸ್‌ಗಳಿಗೂ ವಿಸ್ತರಿಸಿ ಅವೆಲ್ಲವೂ ರಾಜಕೀಕರಣಕ್ಕೆ ಒಳಗಾಗಿರುವುದರ ಪರಿಣಾಮವಾಗಿ ಶಿಕ್ಷಣದ ಸಂಸ್ಕೃತಿ, ಉದ್ದೇಶ ಮತ್ತು ಪಾವಿತ್ರ್ಯಗಳು ನಶಿಸುತ್ತಿರುವುದು ಇದಕ್ಕೆ ಕಾರಣವಿರಬಹುದೇ?

ಆತ ಪ್ರತಿನಿಧಿಸುತ್ತಿರುವ ಬಣದ ನ್ಯಾಯದಾನ ವಿಧಾನಗಳಿಗೂ ಮೂಲ ತಾಲಿಬಾನಿಗಳು ಅನುಸರಿಸುತ್ತಿರುವ ನ್ಯಾಯದಾನ ವಿಧಾನಗಳಿಗೂ ನಿಗೂಢ ಸಾಮ್ಯವಿದೆ. ನಾವು ಮೂಲ ತಾಲಿಬಾನಿಗಳ ದುಷ್ಕೃತ್ಯಗಳನ್ನು ಖಂಡಿಸುತ್ತೇವೆ. ಅವರು ಅನಾಗರಿಕರು, ಅಸಂಸ್ಕೃತರು ಎಂದೆಲ್ಲ ನಮ್ಮ ತಿರಸ್ಕಾರ ವ್ಯಕ್ತಪಡಿಸುತ್ತೇವೆ. ಅವರ ಅನಾಗರಿಕ ವರ್ತನೆಗಳಿಗೂ ಧಾರ್ಮಿಕ ನಂಬಿಕೆಗಳಿಗೂ ಒಂದು ತೆರನಾದ ಸಂಬಂಧವಿದೆಯೆಂದು ಸದಾ ಸೂಚ್ಯವಾಗಿ ಹೇಳುತ್ತಿರುತ್ತೇವೆ. ಆದರೆ ತಾಲಿಬಾನಿಗಳು ಈಗಾಗಲೆ ಭಾರತದೊಳಗೆ ಬೇರುಬಿಟ್ಟಿರುವುದನ್ನು ಸಂಘ ಪರಿವಾರಿಗಳ ರೂಪದಲ್ಲಿ, ಪ್ರೊ॥ ಜೋಸೆಫ್‌ರ ಕೈಕಡಿದವರ ರೂಪದಲ್ಲಿ ಕಾಣಬಹುದಲ್ಲವೇ.

ಪ್ರೊ॥ ಜೋಸೆಫ್‌ರ ಕೈ ಕತ್ತರಿಸಿರುವುದಂತೂ ಪಕ್ಕಾ ತಾಲಿಬಾನ್ ಶೈಲಿ. ಗ್ರಹಾಂ ಸ್ಟೇನ್ಸ್ ಎಂಬ ಪಾದ್ರಿ ಮತ್ತು ಆತನ ಇಬ್ಬರು ಪುಟ್ಟ ಮಕ್ಕಳನ್ನು ಸುಟ್ಟು ಹಾಕಿರುವುದೂ ತಾಲಿಬಾನ್ ಶೈಲಿಯೇ. ಲಕ್ಷಾಂತರ ಜನ ಟೀವಿ ಪರದೆಗಳಲ್ಲಿ ನೋಡುನೋಡುತ್ತಿದ್ದಂತೆ, ಡಜನುಗಟ್ಟಲೆ ಸಾಕ್ಷಿಗಳ ಕಣ್ಣೆದುರಿನಲ್ಲೆ ಉಜ್ಜಯಿನಿಯ ಮಾಧವ್ ಕಾಲೇಜಿನ ಪ್ರೊ॥ ಸಭರ್‌ವಾಲ್‌ರನ್ನು ಬಡಿದು ಸಾಯಿಸಿರುವುದೂ ತಾಲಿಬಾನ್ ಶೈಲಿ. ಪಬ್ ದಾಳಿ, ನೈತಿಕ ಪೊಲೀಸ್‌ಗಿರಿಯೂ ತಾಲಿಬಾನ್ ಶೈಲಿ. ನೈವೇಂ, ದೆಹಲಿ, ಕಂಧಮಾಲ್, ಗುಜರಾತ್, ಕರ್ನಾಟಕ, ಮಹಾರಾಷ್ಟ್ರ ಮತ್ತಿತರ ಅನೇಕ ಜಾಗಗಳಲ್ಲಿ ಸಾವಿರಗಟ್ಟಲೆ ಅಲ್ಪಸಂಖ್ಯಾತರನ್ನು ಅತ್ಯಂತ ನಿಷ್ಕಾರುಣ್ಯವಾಗಿ ಹತ್ಯೆಗೈದಿರುವುದೂ ತಾಲಿಬಾನ್ ಶೈಲಿ. ಬಾಬರಿ ಮಸೀದಿಯನ್ನು ಕೆಡವಿರುವುದೂ ತಾಲಿ ಬಾನ್ ಶೈಲಿಯೇ. ಇವೆಲ್ಲದರ ಹಿಂದೆ ಕೆಲಸ ಮಾಡಿರುವುದು ಅದೇ ಮತೀಯ ಅಸಹನೆ ಮತ್ತು ಮೂಲಭೂತವಾದ.

ಅಹಿಂಸಾತ್ಮಕ ಚಳುವಳಿಯ ಮೂಲಕ ಆ ಬಲಿಷ್ಠ ಬ್ರಿಟಿಷ್ ಸಾಮ್ರಾಜ್ಯವನ್ನೇ ನಡುಗಿಸಿದ ಗಾಂಧಿ ಎಂದೂ ತಮ್ಮ ಮೂಲ ನೈತಿಕ ತತ್ವಗಳನ್ನು ಬಿಟ್ಟುಕೊಟ್ಟಿರಲಿಲ್ಲ. ಯಾವುದೇ ನಾಗರಿಕ ಸಮಾಜದ ಮುನ್ನಡೆಗೆ ಕಾನೂನುಗಳ ಚೌಕಟ್ಟು ಅವಶ್ಯವೆಂಬುದನ್ನು ಗಾಂಧಿ ಅರಿತಿದ್ದರು. ಆದರೆ ಅದೇ ವೇಳೆ ಅನ್ಯಾಯಯುತ ಕಾಯಿದೆಗಳನ್ನು ಮುರಿಯಲು ಆತ ಎಂದೂ ಹಿಂಜರಿದಿರಲಿಲ್ಲ. ತಾನೇ ಆರೋಪಿಸಿಕೊಂಡಿರುವ ಶಕ್ತಿಯ ಪ್ರದರ್ಶನವನ್ನು ಇನ್ನೊಬ್ಬನನ್ನು ಕೊಲ್ಲುವ ಮೂಲಕ ಅಥವಾ ಕೈಕಾಲು ಕಡಿಯುವ ಮೂಲಕ ಮಾಡುವುದು ಗಾಂಧಿಯ ನೈತಿಕ ಪ್ರಪಂಚದಲ್ಲಿ ಸಲ್ಲದ ವಿಷಯ. ನರೇಂದ್ರ ಮೋದಿ ಹಾಗೂ ಸಂಘ ಪರಿವಾರಿಗಳ ಗುಂಪು ಪ್ರತಿನಿಧಿಸುತ್ತಿರುವ 'ನೈತಿಕತೆ' ಬೇರೆ ವಿಧದ್ದು. ಅದು ರಾಜಕೀಯ ಉದ್ದೇಶದ ಎನ್‌ಕೌಂಟರ್ ಕೊಲೆಗಳನ್ನು, ಅಲ್ಪಸಂಖ್ಯಾತರ ಮಾರಣ ಹೋಮಗಳನ್ನು ಕೆಲವೊಮ್ಮೆ ಗುಟ್ಟಿನಲ್ಲಿ, ಕೆಲವೊಮ್ಮೆ ಬಹಿರಂಗವಾಗಿ ಸಮರ್ಥಿಸುತ್ತದೆ. ತಾಲಿಬಾನಿಗಳ ಮಾದರಿಯಲ್ಲೆ ಸಾಂವಿಧಾನಿಕ ಹಾಗೂ ನ್ಯಾಯಾಂಗ ಪ್ರಕ್ರಿಯೆಗಳ ಬಗೆಗಿನ ತಿರಸ್ಕಾರದ ಭಾವನೆಯಿಂದ ಇದು ಜನಿಸುತ್ತದೆ. 'ಶತ್ರು' ಯಾರೆಂಬುದನ್ನು ತಾನೇ ತೀರ್ಮಾನಿಸಿಕೊಂಡು ಅಂತಹ ನೈಜ ಹಾಗೂ ಕಾಲ್ಪನಿಕ ಶತ್ರುಗಳೊಂದಿಗೆ ವ್ಯವಹರಿಸುವ ಜವಾಬ್ದಾರಿಯನ್ನೂ ತನಗೆ ತಾನೇ ಕೊಟ್ಟುಕೊಳ್ಳುತ್ತದೆ. ನೀತಿನಿಯಮಗಳಿಲ್ಲದ, ಕೇವಲ ಮತಾಂಧತೆಯಿಂದ ಕೂಡಿದ ಈ ಯಾಂತ್ರಿಕ ಕ್ರಿಯೆಗಳ ಪ್ರಪಂಚ

ಅಹಿಂಸಾತ್ಮಕ ಚಳುವಳಿಯ ಮೂಲಕ ಆ ಬಲಿಷ್ಠ ಬ್ರಿಟಿಷ್ ಸಾಮ್ರಾಜ್ಯವನ್ನೇ ನಡುಗಿಸಿದ ಗಾಂಧಿ ಎಂದೂ ತಮ್ಮ ಮೂಲ ನೈತಿಕ ತತ್ವಗಳನ್ನು ಬಿಟ್ಟುಕೊಟ್ಟಿರಲಿಲ್ಲ. ಯಾವುದೇ ನಾಗರಿಕ ಸಮಾಜದ ಮುನ್ನಡೆಗೆ ಕಾನೂನುಗಳ ಚೌಕಟ್ಟು ಅವಶ್ಯ ವೆಂಬುದನ್ನು ಗಾಂಧಿ ಅರಿತಿದ್ದರು. ಆದರೆ ಅದೇ ವೇಳೆ ಅನ್ಯಾಯಯುತ ಕಾಯಿದೆಗಳನ್ನು ಮುರಿಯಲು ಆತ ಎಂದೂ ಹಿಂಜರಿದಿರಲಿಲ್ಲ. ತಾನೇ ಆರೋಪಿಸಿಕೊಂಡಿರುವ ಶಕ್ತಿಯ ಪ್ರದರ್ಶನವನ್ನು ಇನ್ನೊಬ್ಬನನ್ನು ಕೊಲ್ಲುವ ಮೂಲಕ ಅಥವಾ ಕೈ ಕಾಲು ಕಡಿಯುವ ಮೂಲಕ ಮಾಡುವುದು ಗಾಂಧಿಯ ನೈತಿಕ ಪ್ರಪಂಚದಲ್ಲಿ ಸಲ್ಲದ ವಿಷಯ. ನರೇಂದ್ರ ಮೋದಿ ಹಾಗೂ ಸಂಘ ಪರಿವಾರಿಗಳ ಗುಂಪು ಪ್ರತಿನಿಧಿಸುತ್ತಿರುವ 'ನೈತಿಕತೆ' ಬೇರೆ ವಿಧದ್ದು. ಅದು ರಾಜಕೀಯ ಉದ್ದೇಶದ ಎನ್‌ಕೌಂಟರ್ ಕೊಲೆಗಳನ್ನು, ಅಲ್ಪಸಂಖ್ಯಾತರ ಮಾರಣ ಹೋಮಗಳನ್ನು ಕೆಲವೊಮ್ಮೆ ಗುಟ್ಟಿನಲ್ಲಿ, ಕೆಲವೊಮ್ಮೆ ಬಹಿರಂಗವಾಗಿ ಸಮರ್ಥಿಸುತ್ತದೆ.

ದಲ್ಲಿ ಕ್ರಿಯೆಗಳಿಗೆ ಅಸಮ ಪ್ರತಿಕ್ರಿಯೆಗಳಿರುತ್ತವೆ.

ಮೂಲಭೂತವಾದಿಗಳು ಪರಸ್ಪರರ ಮತಾಂಧ ಕೃತ್ಯಗಳನ್ನು ಟೀಕಿಸುತ್ತಿರುತ್ತಾರೆ. ಇಸ್ಲಾಂ ಧರ್ಮದಲ್ಲಿರುವ ಮೂಲಭೂತವಾದವನ್ನು ಹಿಂದೂ ಮೂಲಭೂತವಾದಿ ಸಂಘಪರಿವಾರ ಪದೇಪದೇ ಟೀಕಿಸುತ್ತದೆ. ನಿಜಕ್ಕೂ ವಿವಿಧ ಧರ್ಮಗಳ ಮೂಲಭೂತವಾದಿಗಳಲ್ಲಿ ಯಾವ ವ್ಯತ್ಯಾಸಗಳೂ ಇಲ್ಲ. ಟೀಕಿಸುವ ಹೊರಗಿನವರ ಕೈಕಾಲು ಕಡಿಯಲು, ಕೊಲ್ಲಲು ಹೇಸದಿರುವುದು, ಮಹಿಳೆಯನ್ನು ಸಮುದಾಯದ ಸರಕಾಗಿ ಭಾವಿಸುವುದು ಮುಂತಾದವುಗಳಲ್ಲಿ ಅವೆರಡರ ಮಧ್ಯೆ ಇರುವ ಸಾಮ್ಯಗಳನ್ನು ಸ್ಪಷ್ಟವಾಗಿ ಕಾಣಬಹುದು. ಎಲ್ಲಾ ಮೂಲಭೂತವಾದಿಗಳೂ ತಂತಮ್ಮ ಸಮುದಾಯದೊಳಗಿನ ಕಲಾವಿದರು, ಸಾಹಿತಿಗಳು, ಸಿನಿಮಾ ತಯಾರಕರು ಮುಂತಾದವರ ಭಿನ್ನಮತ, ಟೀಕೆ, ಅಂತರ್ಜಾತೀಯ ವಿವಾಹ ಇತ್ಯಾದಿಗಳ ಬಗ್ಗೆಯೂ ಅಸಹಿಷ್ಣುಗಳಾಗಿದ್ದಾರೆ ಎಂಬುದನ್ನೂ ಗಮನಿಸಬೇಕಿದೆ. ಎರಡೂ ಕೂಡಾ ಪ್ರಜಾತಂತ್ರಕ್ಕೆ ಅಪಾಯಕಾರಿಯಾಗಿವೆ. ಇಂದು ಬೇಕಿರುವುದು ಮತೀಯ ಮೂಲಭೂತವಾದ ಅಲ್ಲ, ನೆಹರೂ ಹೇಳಿದ 'ಮತನಿರಪೇಕ್ಷತೆಯ ಮೂಲಭೂತವಾದ' (Secular Fundamentalism).

ರಾಜಕಾರಣ ಮತ್ತು ತಾಲಿಬಾನೀಕರಣ

ಯಲ್ಲಿ ತೂಗಲು ಬರುವುದಿಲ್ಲವಾದರೂ ಇಂದು ಎರಡೂ ಪಕ್ಷಗಳು ನವ ಉದಾರೀಕರಣದ ಸಿದ್ಧಾಂತವನ್ನು ಬೆಂಬಲಿಸುತ್ತವೆ; ಬಂಡವಾಳಶಾಹಿಗಳ ಪರವಾಗಿವೆ; ಬಡವರನ್ನು, ಅಂಚಿನಲ್ಲಿರುವವರನ್ನು, ಅಲ್ಪಸಂಖ್ಯಾತರನ್ನು, ದಲಿತರನ್ನು, ಆದಿವಾಸಿಗಳನ್ನು ಕಡೆಗಣಿಸುತ್ತಿವೆ. ಕೋಮುವಾದಿಗಳು, ಭಯೋತ್ಪಾದಕರು ನಿರ್ಭೀತಿಯಿಂದ ಕಾನೂನನ್ನು ಕೈಗೆತ್ತಿಕೊಂಡು ದೇಶದಲ್ಲಿ ಅನಾಹುತಗಳ ಸರಮಾಲೆಯನ್ನೇ ಸೃಷ್ಟಿಸುತ್ತಿದ್ದಾರೆ. ದೇಶದಲ್ಲಿ ಇಷ್ಟೆಲ್ಲ ಕೋಮುಸಂಘರ್ಷಗಳು ನಡೆದು ಆಯೋಗಗಳು ಸ್ಥಾಪಿತವಾಗಿ, ತಪ್ಪಿತಸ್ಥರನ್ನು ಹೆಸರಿಸಿದ್ದರೂ ಆ ವರದಿಗಳೆಲ್ಲವೂ ಧೂಳುತಿನ್ನುತ್ತಾ ಅನಾಥವಾಗಿ ಬಿದ್ದುಕೊಂಡಿವೆ. ಕೋಮು ದಂಗೆಗಳ ಅಪರಾಧಿಗಳನ್ನು ಶಿಕ್ಷಿಸಿ ಕೋಮುವಾದದ ವಿರುದ್ಧ ಮತ್ತು ಜಾತ್ಯತೀತತೆಯ ಪರವಾಗಿ ರಾಷ್ಟ್ರವ್ಯಾಪಿ ಆಂದೋಲನಗಳನ್ನು ನಡೆಸಿ ಅಲ್ಪಸಂಖ್ಯಾತರಲ್ಲಿ ಧೈರ್ಯ ತುಂಬಿಸುವ ಕೆಲಸ ಆಗಬೇಕಾಗಿತ್ತು. ಅದನ್ನು ಯಾವ ರಾಜಕೀಯ ಪಕ್ಷವೂ ಮಾಡಿಲ್ಲ. ಇದರ ನೇರ ಪರಿಣಾಮ ಇಂದು ಸಮಾಜದ ಸ್ವಾಸ್ಥ್ಯದ ಮೇಲೆ ಆಗಿದೆ.

ಭಾರತ ಎದುರಿಸುತ್ತಿರುವ ಕೋಮುವಾದ, ಭಯೋತ್ಪಾದನೆ, ಅಸಮಾನತೆ, ಭ್ರಷ್ಟಾಚಾರ, ನಕ್ಸಲಿಸಂ ಇತ್ಯಾದಿ ಹಲವಾರು ಪ್ರಬಲ ಸವಾಲುಗಳಿಗೆ ಉತ್ತರ ಕಂಡುಕೊಳ್ಳಬೇಕಿದ್ದರೆ ಅದಕ್ಕೆ ಕೇವಲ ರಾಜಕೀಯ ದೂರದೃಷ್ಟಿಯೊಂದೆ ಸಾಲದು, ರಾಜಕೀಯ ಇಚ್ಛಾಶಕ್ತಿ ಕೂಡಾ ಬೇಕು. ರಾಷ್ಟ್ರನಾಯಕನಿಗೆ ನೆಹರೂ, ಲಿಂಕನ್, ರೂಸ್‌ವೆಲ್ಟ್‌ರಂತೆ ದೃಢನಂಬಿಕೆಗಳು ಇರಬೇಕಲ್ಲದೆ ಅವುಗಳಿಗಾಗಿ ಪ್ರಾಣವನ್ನೇ ಪಣವಾಗಿಡಲೂ ಸಿದ್ಧನಿರಬೇಕು. ಭಾರತದ ಪ್ರಸಕ್ತ ನಾಯಕರಾರೂ ಆ ಮಟ್ಟಕ್ಕೆ ತಲುಪುವುದಿಲ್ಲ. ಇದೇ ನಮ್ಮ ದುರಂತ. ಉತ್ತಮ, ಪ್ರಜ್ಞಾವಂತ ನಾಯಕತ್ವ ಇಲ್ಲದಾಗ ಜನರಿಗೆ ಕಾದಿರುವುದು ವ್ಯತ್ಯಾಸ ಮತ್ತು ಮತಾಂಧತೆಗಳನ್ನು ಬಳಸಿ ಬೆಳೆಯುವ ಮತ್ತೊಂದು ಪ್ರಕಾರದ ನಾಯಕರು. ಜರ್ಮನಿಯ ಹಿಟ್ಲರ್, ಇಟಲಿಯ ಮುಸೊಲಿನಿಗಳಂತೆ ಇಂತಹವರ ಯಶಸ್ಸಿನ ಗುಟ್ಟಿರುವುದೇ ವ್ಯಕ್ತಿಪೂಜೆಯಲ್ಲಿ. ಇಂತಹವರು ಅಂತಿಮವಾಗಿ ಪ್ರಜೆಗಳನ್ನು ಸರ್ವನಾಶದತ್ತ ಕೊಂಡೊಯ್ಯುವವರು.

ಸರ್ವಾಧಿಕಾರಿ ಪ್ರವೃತ್ತಿಯ ವ್ಯಕ್ತಿಗಳನ್ನು ಅಧಿಕಾರಕ್ಕೇರಿಸುವಂತಹ ಗಂಭೀರ ಅಪರಾಧವನ್ನು ಜನತೆ ಎಲ್ಲಿಯ ತನಕ ಎಸಗುವುದಿಲ್ಲವೋ ಅಲ್ಲಿಯ ತನಕ ತಾಲಿಬಾನೀಕರಣಕ್ಕೆ ಆಸ್ಪದವಿರುವುದಿಲ್ಲ. ಒಂದು ವೇಳೆ ಅಧಿಕಾರಾರೂಢರು ಸರ್ವಾಧಿಕಾರಿ ಪ್ರವೃತ್ತಿಗಳನ್ನು ತೋರಿಸಿದರೆ ಕೂಡಲೆ ಅವರನ್ನು ಗದ್ದುಗೆಯಿಂದ ಕಿತ್ತೆಸೆಯುವ ಕೆಲಸ ಸಮಾಜದ ಹಿತದೃಷ್ಟಿಯಲ್ಲಿದೆ. ಇದೀಗ ನಮ್ಮ ಮುಂದಿರುವ ಪ್ರಶ್ನೆ: ಸಂವಿಧಾನ ಶಿಲ್ಪಿಗಳು ರೂಪಿಸಿದಂತಹ ಪ್ರಜಾತಾಂತ್ರಿಕ, ಉದಾರವಾದಿ, ಸಮಾಜವಾದಿ, ಸೆಕ್ಯೂಲರ್, ನ್ಯಾಯಪರ, ಸರ್ವರನ್ನೂ ಒಳಗೊಂಡ ಒಂದು ಆಧುನಿಕ ಭಾರತದತ್ತ ನಾವು ಪಯಣ ಬೆಳೆಸಬೇಕೇ? ಅಥವಾ ಮತಾಂಧತೆಯ, ಮತೀಯ ಮೂಲಭೂತವಾದದ, ಆಕ್ರಮಣಶೀಲ ದೇಶಭಕ್ತಿಯ, ಬೂರ್ಷ್ವಾ ಪ್ರಜಾತಂತ್ರದ, ರಾಜಕಾರಣಿ ಮತ್ತು ಕಾರ್ಪೊರೇಟುಗಳ ಅನೈತಿಕ ಕೂಟದ ಪ್ರಪಾತಕ್ಕೆ ಬೀಳಬೇಕೇ?

ಆಧಾರ; ಪ್ರೊ॥ ಜ್ಯೋತಿರ್ಮಯ ಶರ್ಮ, ಅನಿತಾ ರತ್ನಂ, ಮಣಿ ಶಂಕರ್ ಐಯರ್ ಮತ್ತು 'ತೆಹೆಲ್ಕ' ಲೇಖನ ಮುಂತಾದ ವಿವಿಧ ಮೂಲಗಳು. □

ಕರ್ನಾಟಕ ಸಂಸ್ಕೃತಿ ಮತ್ತು ಲೋಹಿಯಾವಾದ

ರಹಮತ್ ತರೀಕೆರೆ

ಆಗಸ್ಟ್ ತಿಂಗಳ ಸಂಚಿಕೆಯಲ್ಲಿ ಪ್ರಕಟವಾದ ಡಿ.ಎಸ್ ನಾಗಭೂಷಣ ಅವರ ಲೇಖನಕ್ಕೆ ಪ್ರೇರಣೆಯಾದ ರಹಮತ್ ಅವರ ಮೂಲ ಲೇಖನ ಇದು. ನಾಗಭೂಷಣ ಅವರ ಲೇಖನಕ್ಕೆ ಪ್ರತಿಕ್ರಿಯಿಸುವ ಮೊದಲು ಮೂಲ ಲೇಖನ ಓದಬೇಕಾದ ಅಗತ್ಯವನ್ನು ಮೂಲ ಲೇಖಕರು ಮತ್ತು ಕೆಲವು ಓದುಗರು ಒತ್ತಿ ಹೇಳಿದ್ದರಿಂದ ಅದನ್ನು ಇಲ್ಲಿ ಪುನರ್ ಮುದ್ರಿಸುತ್ತಿದ್ದೇವೆ. ನಾಗಭೂಷಣ ಅವರ ಲೇಖನಕ್ಕೆ ರಹಮತ್ ಅವರು ನೀಡಿದ ಪ್ರತಿಕ್ರಿಯೆ ಕೂಡ ಇದೇ ಸಂಚಿಕೆಯ ೮ನೇ ಪುಟದಲ್ಲಿದಲ್ಲಿದೆ.

-ಸಂ

ಸಾಹಿತ್ಯ, ವೈಚಾರಿಕ ಚಿಂತನೆ, ಚಳುವಳಿ, ಶಕ್ತಿರಾಜಕಾರಣ, ಆದರ್ಶವಾದ, ಸೈದ್ಧಾಂತಿಕ ಅರಾಜಕತೆ ಮುಂತಾದ ಸಂಗತಿಗಳೆಲ್ಲವನ್ನು ವಿಶಾಲ ಅರ್ಥದಲ್ಲಿ 'ಸಾಂಸ್ಕೃತಿಕ ರಾಜಕಾರಣ' ಎಂದು ಭಾವಿಸುವುದಾದರೆ, 20ನೇ ಶತಮಾನದ ಉತ್ತರಾರ್ಧದ ಕರ್ನಾಟಕದ ಸಾಂಸ್ಕೃತಿಕ ರಾಜಕಾರಣವನ್ನು ಲೋಹಿಯಾವಾದ ಹೊರತುಪಡಿಸಿ ಚರ್ಚಿಸುವುದು ಸಾಧ್ಯವಿಲ್ಲ. ಒಂದು ಕಾಲಕ್ಕೆ ಸಮಾಜವಾದಿ ಪಕ್ಷದಿಂದ ಕರ್ನಾಟದ ಎಲ್ಲ ಭಾಗಗಳಿಂದ ಶಾಸಕರು, ಸಂಸತ್ ಸದಸ್ಯರು ಆರಿಸಿ ಬರುತ್ತಿದ್ದರು. ಕರ್ನಾಟಕದ ರಾಜಕಾರಣದಲ್ಲಿ ಇಷ್ಟು ವ್ಯಾಪಕವಾಗಿ ನೆಲೆಸಿದ್ದ ಸಮಾಜವಾದಿ ಪಕ್ಷವು ನಂತರ ತನ್ನ ನೆಲೆಯನ್ನು ಉಳಿಸಿಕೊಳ್ಳಲಿಲ್ಲ. ಆದರೆ ಅದು ಕರ್ನಾಟಕದ ಸಾಂಸ್ಕೃತಿಕ ರಾಜಕಾರಣದ ಮೇಲೆ ತನ್ನ ಗಾಢ ಪ್ರಭಾವವನ್ನು ಉಳಿಸಿತು. ಮಾರ್ಕ್ಸ್‌ವಾದ, ಅಂಬೇಡ್ಕರ್ ಚಿಂತನೆ, ಶರಣರ ವಿಚಾರಗಳು, ಕುವೆಂಪು, ಪೆರಿಯಾರ್, ಗಾಂಧಿ ಚಿಂತನೆಗಳ ಹಾಗೆಯೇ ಲೋಹಿಯಾ ಸಮಾಜವಾದವೂ ಕರ್ನಾಟಕದ ಸಾಂಸ್ಕೃತಿಕ ರಾಜಕಾರಣವನ್ನು ಪ್ರೇರೇಪಿಸಿತು. ಲೋಹಿಯಾವಾದದ ಬಗ್ಗೆ ಈ ಮಾತನ್ನಾಡುವಾಗ, ಲೋಹಿಯಾ ಚಿಂತನೆಗಿಂತ ಲೋಹಿಯಾರ (1910–19 67)ವ್ಯಕ್ತಿತ್ವ – ರಾಜಕೀಯ ಕ್ರಿಯೆಗಳು ಹೆಚ್ಚು ಜನರನ್ನು ಪ್ರೇರೇಪಿಸಿದವು ಎನ್ನುವುದು ಉಚಿತ.

ಹೀಗೆ ನಾನಾ ನೆಲೆಯಿಂದ ನಾನಾ ಕಾರಣದಿಂದ ಪ್ರಭಾವಿತರಾದ ಅನೇಕರು ಕರ್ನಾಟಕದ ಮುಖ್ಯ ಸಾರ್ವಜನಿಕ ವ್ಯಕ್ತಿಗಳಾಗಿ ರೂಪುಗೊಂಡರು. ಅವರು ರಾಜಕಾರಣ, ವೈದ್ಯಕೀಯ, ನ್ಯಾಯಾಂಗ, ಸಿನಿಮಾ, ಸಾಹಿತ್ಯ, ಸಂಸ್ಕೃತಿ ಚಿಂತನೆ, ಚಳುವಳಿ, ಕೃಷಿ, ರೈತಸಂಘಟನೆ, ಪುಸ್ತಕ ಪ್ರಕಾಶನ, ಕಾರ್ಮಿಕ ಚಳುವಳಿ ಹೀಗೆ ಅನೇಕ ಕ್ಷೇತ್ರಗಳಿಗೆ ಸೇರಿದವರು; ಅವರಲ್ಲಿ ಕೆಲವರೆಂದರೆ–ಪೊನ್ನಮ್ಮಾಳ್, ನೀಲಗಂಗಯ್ಯ ಪೂಜಾರ, ಕೆ.ಜಿ. ಮಹೇಶ್ವರಪ್ಪ, ಶಾಂತವೇರಿ ಗೋಪಾಲಗೌಡ, ಎಂ.



ನಂಜುಂಡಸ್ವಾಮಿ, ಪೂರ್ಣಚಂದ್ರ ತೇಜಸ್ವಿ, ಯು.ಆರ್. ಅನಂತಮೂರ್ತಿ, ಲಂಕೇಶ್, ದೇವನೂರ ಮಹಾದೇವ, ಕಡಿದಾಳು ಶಾಮಣ್ಣ, ಎಸ್.ಎಸ್.ಕುಮಟಾ, ಎಲಿಗಾರ ತಿಮ್ಮಪ್ಪ, ಡಾ. ವಿಷ್ಣುಮೂರ್ತಿ, ಜಾರ್ಜ್ ಫರ್ನಾಂಡಿಸ್, ಕೆ.ವಿ.ಸುಬ್ಬಣ್ಣ, ಸದಾಶಿವರಾವ್, ವೆಂಕಟರಾಂ, ಕೋಣಂದೂರು ಲಿಂಗಪ್ಪ, ಜೆ.ಎಚ್.ಪಟೇಲ್, ಎಂ.ಪಿ.ಪ್ರಕಾಶ್, ಚಂಪಾ, ಕೆ.ಎಂ. ಶಂಕರಪ್ಪ, ಕೆ.ರಾಮ ದಾಸ್, ರಘುರಾಮಶೆಟ್ಟರು, ಖಾದ್ರಿಶಾಮಣ್ಣ, ಗರುಡಶರ್ಮ, ರಾಮ ಚಂದ್ರೇಗೌಡ, ಕಾಳೇಗೌಡ ನಾಗವಾರ, ಡಿ.ಎಸ್.ನಾಗಭೂಷಣ, ಚನ್ನ ಬಸವಣ್ಣ, ರವಿವರ್ಮಕುಮಾರ್, ನಟರಾಜ ಹುಳಿಯಾರ್ ಮುಂತಾದವರು. ಹಲವಾರು ತಲೆಮಾರಿಗೆ ಸೇರಿರುವ ಈ ಪಟ್ಟಿಯನ್ನು ನೋಡಿದರೆ, ಲೋಹಿಯಾವಾದವು ಕರ್ನಾಟಕದ ಮೇಲೆ ಬೀರಿರುವ ಪ್ರಭಾ ವದ ಸ್ವರೂಪವೂ, ಅದರ ವ್ಯಾಪಕತೆ ಮತ್ತು ವೈವಿಧ್ಯವೂ ಹೊಳೆಯುತ್ತದೆ. ಇವರಲ್ಲದೆ ಅಷ್ಟೊಂದು ಪ್ರಸಿದ್ಧಿಗೆ ಬಾರದೆ ಅಜ್ಞಾತವಾಗಿ ಬದುಕುತ್ತಿರುವ ನೂರಾರು ಲೋಹಿಯಾವಾದಿಗಳಿದ್ದಾರೆ.

ಅವರಲ್ಲಿ ಮುಂಬೈ ವಿಧಾನಸಭೆಗೆ ರೋಣ ಕ್ಷೇತ್ರದಿಂದ ಸಮಾಜವಾದಿ ಪಾರ್ಟಿಯಿಂದ ಗೆದ್ದುಹೋಗಿದ್ದ, ಹೆಬ್ಬಳ್ಳಿ ಭೂಹೋರಾಟದ ನೇತಾರರಾದ ನೀಲಗಂಗಯ್ಯ ಪೂಜಾರಿಯವರ ರಾಜಕೀಯ ಗುರು ಕೆ.ಸದಾಶಿವ ಕಾಮತರು, ಅಮ್ಮೆಂಬಳ ಬಾಳಪ್ಪನವರು, ಚಳುವಳಿಗಾರ ಅಬ್ಬಿಗೇರಿ ವಿರೂಪಾಕ್ಷಪ್ಪನವರು, ಬೀದರಿನಲ್ಲಿರುವ ವಕೀಲರಾದ ಕಾಶಿನಾಥ ಬೇಲೂರೆಯವರು, ಲೋಹಿಯಾ ಚಿಂತನೆಗಳನ್ನು ಅನುವಾದಿಸುತ್ತ ಸಾರ್ವಜನಿಕವಾಗಿ ಹೆಚ್ಚು ಕಾಣಿಸದ ಹನುಮಂತುರವರು– ಹೀಗೆ ಹಲವಾರು ಜನರನ್ನು ಉಲ್ಲೇಖಿಸಬಹುದು. ಬಹುಶಃ ಗಾಂಧಿ ನಂತರ ಉತ್ತರ ಭಾರತದ ರಾಜಕಾರಣಿಯೊಬ್ಬರು ಕರ್ನಾಟಕದ ಸಾಂಸ್ಕೃತಿಕ ರಾಜಕಾರಣದಲ್ಲಿ ಆ ಮಟ್ಟಿಗೆ ಪ್ರಭಾವ ಬೀರಿದವರು ಲೋಹಿಯಾ ಅವರೇ ಎಂದು ಕಾಣುತ್ತದೆ.

ರಾಮಮನೋಹರ ಲೋಹಿಯಾ ಕರ್ನಾಟಕದ ಜತೆಗೆ ನೇರ ಸಂಪರ್ಕಕ್ಕೆ ಒದಗಿದ್ದು 1950ರ ದಶಕದಲ್ಲಿ ಕಾಣಿಸಿಕೊಂಡ ಕಾಗೋಡು ಭೂ ಹೋರಾಟದ ಮೂಲಕ. ಆಗವರು ಸ್ವತಃ ಕರ್ನಾಟಕಕ್ಕೆ ಬಂದು ಚಳುವಳಿಯಲ್ಲಿ ಭಾಗವಹಿಸಿದರು. ಕೆಲವು ದಿನ ಜೈಲುವಾಸವನ್ನೂ ಅನುಭವಿಸಿದರು. ನಂತರ ಅವರ ಚಿಂತನೆಯನ್ನು ಕರ್ನಾಟಕದಲ್ಲಿ ಪಸರಿಸುತ್ತ ಬಂದವರು ಲೋಹಿಯಾ ಶಿಷ್ಯರಾದ ಒರಿಸ್ಸಾದ ಕಿಶನ್ ಪಟ್ನಾಯಕ್. ಜಾತಿಪದ್ಧತಿ, ಕಾಂಗ್ರೆಸ್ ಪಕ್ಷದ ಜಡತೆ, ನೆಹರೂ ಆಡಳಿತ ಮತ್ತು ಇಂಗ್ಲಿಷ್ ಹೇರಿಕೆಗಳನ್ನು ವಿರೋಧಿಸುವುದು, ದೇಶೀಭಾಷೆ, ಗಾಂಧಿವಾದಗಳ ಒಲವು, ಸಾಂಸ್ಕೃತಿಕ ಸೂಕ್ಷ್ಮತೆ, ಸಾಹಿತ್ಯ ಸಂಗೀತಗಳ ಅಭಿರುಚಿ ಹೊಂದಿರುವುದು ಲೋಹಿಯಾವಾದಿ ಚಿಂತನೆಯ ಪ್ರಮುಖ ತಾತ್ವಿಕ ರಾಜಕೀಯ ಸಾಮಾಜಿಕ ನಿಲುವುಗಳಾಗಿದ್ದವು.

ಇವು ಕರ್ನಾಟಕದ 1950–60ರ ದಶಕದ ಅನೇಕ ವಿದ್ಯಮಾನಗಳ ಜತೆ ವಿಚಿತ್ರವಾಗಿ ಬೆಸೆದುಕೊಂಡವು. ಅದರಲ್ಲೂ ಆಗ ಆಧುನಿಕ ಶಿಕ್ಷಣ ಹಾಗೂ ಸಾಮಾಜಿಕ ಎಚ್ಚರವನ್ನು ಪಡೆದು ನಗರವಾಸಕ್ಕೆ ಬಂದಿದ್ದ ಭೂಮಾಲೀಕ ಶೂದ್ರ ಜಾತಿಗಳ ತರುಣರ ತುಡಿತಗಳ ಜತೆ ಲೋಹಿಯಾವಾದವು ಆಪ್ತವಾಗಿ ಬೆರೆಯಿತು. ತನ್ನನ್ನು ಪತ್ರಿಕೆ, ಸಾಹಿತ್ಯ, ಸಿನಿಮಾ, ರಾಜಕಾರಣ, ಮುಂತಾದ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡಿದ್ದ ಬಿಸಿರಕ್ತದ ಈ ತರುಣರಿಗೆ ಲೋಹಿಯಾರ ಸ್ವಾಭಿಮಾನ ಪ್ರಜ್ಞೆ, ಹಠಮಾರಿತನ, ಪ್ರತಿರೋಧದ ಗುಣ, ಸಾಂಸ್ಕೃತಿಕ ವಿಶ್ಲೇಷಣೆಗಳು, ಮಾನವೀಯತೆ, ಸೂಕ್ಷ್ಮತೆ ಬೌದ್ಧಿಕತೆಗಳು ಇಷ್ಟವಾದವು. ತೇಜಸ್ವಿ ಮತ್ತು ನಂಜುಂಡಸ್ವಾಮಿ ಸೇರಿಕೊಂಡು ಲೋಹಿಯಾ ಚಿಂತನೆಗಳ ರೆಡ್‌ಬುಕ್ ಸಿದ್ಧಪಡಿಸಿ ಪ್ರಕಟಿಸಿರುವುದು ಈ ಪ್ರಭಾವದ ಒಂದು ಸಣ್ಣ ಸಾಕ್ಷಿಯಾಗಿದೆ. 1947ರಿಂದಲೂ ಸತತವಾಗಿ ಅಧಿಕಾರದಲ್ಲಿದ್ದ ಕಾಂಗ್ರೆಸ್

ಪಕ್ಷವು ಭಾರತದ ಅಧಿಕಾರಸ್ಥ ರಾಜಕಾರಣದ ಸಂಕೇತವಾಗಿದ್ದು, ಅದನ್ನು ವಿರೋಧಿಸುತ್ತಿದ್ದ ಲೋಹಿಯಾ ಚಿಂತನೆ, ಕಾಂಗ್ರೆಸ್ ಅಧಿಕಾರದಲ್ಲಿದ್ದ ಕರ್ನಾಟಕದಲ್ಲೂ ತನ್ನ ಪ್ರಸ್ತುತತೆಯನ್ನು ಪಡೆದುಕೊಂಡಿತು. ಬ್ರಾಹ್ಮಣರ ಸಾಮಾಜಿಕ ಯಜಮಾನಿಕೆಯನ್ನು ವಿರೋಧಿಸುವ ಬಸವಣ್ಣ-ಕುವೆಂಪು ಹಿನ್ನೆಲೆಗಳು ಕೂಡ ಇದರ ಜತೆ ಸೇರಿಕೊಂಡವು.

ಈಗ ಕಳೆದರ್ಧ ಶತಮಾನದ ಚರಿತ್ರೆಯನ್ನು ಕಂಡರೆ, ಲೋಹಿಯಾವಾದವು ಕರ್ನಾಟಕದ ಸಾಂಸ್ಕೃತಿಕ ರಾಜಕಾರಣದಲ್ಲಿ ಬೀರಿದ ಪ್ರಭಾವವು ಅನೇಕ ವೈರುಧ್ಯಗಳಿಂದ ಕೂಡಿರುವುದು ತಿಳಿಯುತ್ತದೆ. ಶೂದ್ರ ತರುಣ ತಲೆಮಾರಿಗೆ ಲೋಹಿಯಾ ಅವರ ಜಾತಿವಿರೋಧಿ ಚಿಂತನೆಗಳು ಪ್ರಿಯವಾಗಿದ್ದು ಮಾತ್ರವಲ್ಲ, ಜಾತಿಪದ್ಧತಿಯನ್ನು ವಿರೋಧಿಸುತ್ತಿದ್ದ ಉಚ್ಚಜಾತಿಯಿಂದ ಬಂದ ಅನೇಕರು ಲೋಹಿಯಾ ಚಿಂತನೆಗೆ ತಮ್ಮನ್ನು ಒಪ್ಪಿಸಿಕೊಂಡರು. ಕೆ.ವಿ.ಸುಬ್ಬಣ್ಣನವರು ಲೋಹಿಯಾ ಅವರ ಬಹಳ ಪ್ರಸಿದ್ಧವಾದ ಕೃತಿ 'ರಾಜಕೀಯದ ಮಧ್ಯೆ ಬಿಡುವು' ಅನುವಾದಿಸಿದರು. ವಯಸ್ಸಿನಲ್ಲಿ ಕೊಂಚ ಹಿರಿಯರಾಗಿದ್ದ ಅಡಿಗರು, ಜಾತಿಪದ್ಧತಿಯ ಸಮರ್ಥಕರಾಗಿದ್ದರೂ, ಜಾತಿಪದ್ಧತಿಯ ಕಟು ಟೀಕಾಕಾರರಾಗಿದ್ದ ಲೋಹಿಯಾರ 'ಇತಿಹಾಸ ಚಕ್ರ'ವನ್ನು ಅನುವಾದಿಸಿದರು. ಅಡಿಗರು ತಮ್ಮ ಮೊದಲ ಘಟ್ಟದಲ್ಲಿ ಸಮಾಜವಾದಿ ಆಶಯಗಳುಳ್ಳ ಕವಿತೆಗಳನ್ನೂ ಬರೆದವರು. ಅನಂತಮೂರ್ತಿ, ಲಂಕೇಶ್, ಚಂಪಾ ಸಾಹಿತ್ಯಕವಾಗಿ ರಾಜಕೀಯವಾಗಿ ಅವರ ಶಿಷ್ಯರಾಗಿದ್ದರು. ಎಲ್ಲರೂ ನವ್ಯದ ವ್ಯಕ್ತಿವಿಶಿಷ್ಟವಾದಿ ಚಿಂತನೆಯನ್ನು ಒಂದು ತಾತ್ವಿಕ ದರ್ಶನವಾಗಿ ಒಪ್ಪಿಕೊಂಡಿದ್ದವರು.

ಆದರೂ ಹೀಗಾಗಿಯೇ ಮೊದಲ ಘಟ್ಟದಲ್ಲಿ ಅಡಿಗರ ಪ್ರಭಾವಕ್ಕೆ ಒಳಗಾದಂತೆ ಕಂಡ ಚಂಪಾ ಮತ್ತು ತೇಜಸ್ವಿ, ನಂತರ ತಾತ್ವಿಕವಾಗಿ ದೂರ ಸರಿದರು. ಬ್ರಾಹ್ಮಣರು ಸಾಂಸ್ಕೃತಿಕ ರಾಜಕಾರಣದಲ್ಲಿ ಪಡೆದುಕೊಂಡಿರುವ ಹಿಡಿತವನ್ನು ತಪ್ಪಿಸಬೇಕೆಂದು ಚಂಪಾ, ತೇಜಸ್ವಿ, ಲಂಕೇಶ್ ಮುಂತಾದವರು ಸೇರಿ, ಜಾತಿವಿನಾಶ ಚಳುವಳಿ ಮತ್ತು ಕಲಾವಿದರ-ಬರಹಗಾರರ ಒಕ್ಕೂಟ ಮುಂತಾದ ಸಮಾವೇಶವನ್ನು ಸಂಘಟಿಸಿದಾಗ, ಲೋಹಿಯಾವಾದಿಗಳಾಗಿದ್ದ ತಮ್ಮ ಬ್ರಾಹ್ಮಣ ಸಂಗಾತಿಗಳನ್ನು ಸಮಾವೇಶದಿಂದ ಹೊರಗಿಟ್ಟರು. ಆದರೆ ಇದಕ್ಕೆ ವ್ಯತಿರಿಕ್ತವಾಗಿ ಅಡಿಗರು ಕಾಂಗ್ರೆಸ್ ವಿರೋಧಿಸಿ ಜನಸಂಘದ ವತಿಯಿಂದ ಚುನಾವಣೆಗೆ ನಿಂತಾಗ ಲಂಕೇಶ್ ಅದನ್ನು ಬೆಂಬಲಿಸಿದರು ಮತ್ತು ಚುನಾವಣಾ ಪ್ರಚಾರಕ್ಕೂ ಹೋದರು.

ಆದರೆ ಅನಂತಮೂರ್ತಿ ಅವರು ಇದಕ್ಕೆ ವಿರುದ್ಧವಾಗಿದ್ದರು. ಅಡಿಗರ ಜತೆಯಿದ್ದ ಲಂಕೇಶ್ ಕುವೆಂಪು ಅವರನ್ನು ಮೊದಮೊದಲು ಕಟುವಾಗಿ ನೋಡುತ್ತಿದ್ದವರು, ಕೊನೆಯ ದಿನಗಳಲ್ಲಿ ಅಡಿಗರಿಗಿಂತ ಕುವೆಂಪು ಸಾಂಸ್ಕೃತಿಕವಾಗಿ ಮುಖ್ಯವೆಂದು ಕಂಡುಕೊಂಡರು. ಸಾಹಿತ್ಯ - ಸಾಮಾಜಿಕ ಧೋರಣೆಗಳ ವಿಷಯದಲ್ಲಿ ಅಷ್ಟೊಂದು ಸಮಾನ ಮನಸ್ಕರಲ್ಲದ ಕುವೆಂಪು - ಅಡಿಗರ ಶಿಷ್ಯರು, ಲೋಹಿಯಾವಾದದ ವಿಷಯದಲ್ಲಿ ಸಮಾನ ಮನಸ್ಕರಾಗಿದ್ದರು. ಹೆಚ್ಚುಕಡಿಮೆ ಎಲ್ಲರಿಗೂ ಕಾಮೂ, ಕಾಫ್ಕಾ, ಎಲಿಯಟ್ ಮುಂತಾದ ಮಾಡರ್ನಿಸ್ಟ್ ಲೇಖಕರ ಪ್ರಭಾವವಿತ್ತು.

ಹೀಗೆ ರಾಜಕೀಯದಲ್ಲಿ ಗಾಂಧಿವಾದ, ಲೋಹಿಯಾವಾದ, ಜೆಪಿ ಚಿಂತನೆ, ಸಾಹಿತ್ಯಕವಾಗಿ ಯೂರೋಪಿನ ನವ್ಯ ಲೇಖಕರು, ಕುವೆಂಪು, ಬಸವಣ್ಣ, ಸಾಮಾಜಿಕವಾಗಿ ಸಮಾಜವಾದ-ಇವೆಲ್ಲವೂ ಈ ಕಾಲಘಟ್ಟದ ಚಿಂತಕರು, ಲೇಖಕರು ಮತ್ತು ಚಳುವಳಿಗಾರರಲ್ಲಿ ವಿಚಿತ್ರವಾಗಿ ಸಿಂಥಸೈಜ್ ಆಗಿದ್ದವು. ಇದರ ವೈರುಧ್ಯಗಳೇ ಬಹುಶಃ ಲೋಹಿಯಾವಾದದ ಪ್ರಭಾವಕ್ಕೆ ಸಿಲುಕಿದವರ ಸೂಕ್ಷ್ಮತೆ ಸೃಜನಶೀಲತೆ ಮಾನವೀಯ ಸರಳತೆ ಅರಾಜಕತೆಗಳಿಗೂ ಕಾರಣವಾದವು. ಮೇಲೆ ಕಾಣಿಸಿದ ವೈರುಧ್ಯಮಯ ಎನಿಸುವ ವಿವರಗಳು ಸೂಚಿಸುವ ಸಂಗತಿಯೆಂದರೆ- ಲೋಹಿಯಾವಾದದ ಪ್ರಭಾವವು ಕರ್ನಾಟಕದ ಮೇಲೆ ಏಕರೂಪಿಯಾಗಿಲ್ಲ; ಬೇರೆಬೇರೆ ತಲೆಮಾರು, ಸಾಮಾಜಿಕ ಹಾಗೂ ಆರ್ಥಿಕ ಹಿನ್ನೆಲೆಗಳಿಗೆ ಸೇರಿದವವರು ಬೇರೆಬೇರೆ ಕಾರಣಕ್ಕಾಗಿ ಲೋಹಿಯಾವಾದದ ಜತೆಗೆ ಲಗತ್ತಿಸಿಕೊಂಡ ಕಾರಣದಿಂದ ಸಂಭವಿಸಿದ ಪರಿಣಾಮಗಳೂ ಬೇರೆಬೇರೆಯಾಗಿವೆ. ಅದೊಂದು ಬಹುರೂಪಿಯಾದ ಜಗತ್ತು.

ಗಾಂಧಿವಾದಿಯಲ್ಲದಿದ್ದರೂ ತೇಜಸ್ವಿ, ಕಾಂಗ್ರೆಸ್ಸಿನ ಆಡಳಿತವು ಜನರಿಗೆ ಬಿಡುಗಡೆ ತರಲಿಲ್ಲ ಎಂಬ ದನಿಯುಳ್ಳ 'ತಬರನ ಕತೆ'ಯನ್ನು ಬರೆದರು. ಕೆ.ವಿ.ಸುಬ್ಬಣ್ಣ, ಲಂಕೇಶ್, ಅನಂತಮೂರ್ತಿ, ಚಂಪಾ ಮುಂತಾದವರಲ್ಲಿ ಮತ್ತೆಮತ್ತೆ ಕಾಣುವ 'ಗಾಂಧಿಸ್ಮರಣೆ'ಗಳು ಲೋಹಿಯಾವಾದದ ಪ್ರೇರಣೆಯಿಂದ ಬಂದವು. ಅಂದರೆ ನೇರ ಗಾಂಧಿಯ ಪ್ರಭಾವದಿಂದ ಬರೆಯುವ ಪುತಿನ, ಹರ್ಡೇಕರ, ರಂ.ರಾ ದಿವಾಕರ, ಸಿಂಪಿ ಲಿಂಗಣ್ಣ ಮುಂತಾದವರಿಗಿಂತ ಇವು ಬೇರೆಯಾಗಿದ್ದವು.

2

ಲೋಹಿಯಾವಾದದ ಪ್ರಮುಖ ಆಶಯಗಳು ಕರ್ನಾಟಕದಲ್ಲಿ ಕೆಲಸ ಮಾಡಿದ ವಿಧಾನವನ್ನು ಈಗ ಪರಿಶೀಲಿಸಬಹುದು.

ಲೋಹಿಯಾವಾದಿ ಸಮಾಜವಾದ ಪಕ್ಷದಲ್ಲಿದ್ದ ಪ್ರಮುಖ ರಾಜಕೀಯ ನಿಲುವುಗಳಲ್ಲಿ ಕಾಂಗ್ರೆಸ್ ಮತ್ತು ಕಮ್ಯುನಿಸ್ಟರ ವಿರೋಧವೂ ಒಂದು. ಇದು ಆ ಕಾಲದ ಕಾಂಗ್ರೆಸ್ ವಿರೋಧಿ ರಾಜಕೀಯದಲ್ಲಿದ್ದ ಅನೇಕರನ್ನು ಒಗ್ಗೂಡುವಂತೆ ಮಾಡಿತು. ಇದರಲ್ಲಿ ಬಲಪಂಥೀಯರೂ ಸೇರಿಕೊಂಡರು. ನೆಹರೂ ಕುರಿತು ಲೋಹಿಯಾರ ಕಟು ವಿಮರ್ಶೆಗಳು ಆಕಾಲದ ಮುಖ್ಯ ರಾಜಕೀಯ ಡಿಬೇಟುಗಳಾಗಿದ್ದವು. ಅಡಿಗರ 'ನೆಹರೂ ನಿವೃತ್ತರಾಗುವುದಿಲ್ಲ' ಪದ್ಯ, ಚಂಪಾರ ಇಂದಿರಾಗಾಂಧಿ ಮೇಲಿನ ವಿಡಂಬನ ಪದ್ಯಗಳನ್ನು ಈ ಹಿನ್ನೆಲೆಯಲ್ಲೆ ಗಮನಿಸಬೇಕು. ಮತ್ತೂ ಅನೇಕ ಸಂಗತಿಗಳಲ್ಲಿ ಅಡಿಗರು ಲೋಹಿಯಾ ಅವರ ಮನೋಧರ್ಮಕ್ಕೆ ಹತ್ತಿರವಾಗಿದ್ದರು-ಅದರಲ್ಲೂ ಕಾಂಗ್ರೆಸ್ಸು ಮತ್ತು ಕಮ್ಯುನಿಸ್ಟರ ವಿರೋಧದಲ್ಲಿ. ಎಲ್ಲ ಬಗೆಯ ಪ್ರಭುತ್ವಗಳನ್ನು ಅನುಮಾನಿಸುತ್ತಿದ್ದ ನಿರಾಕರಿಸುತ್ತಿದ್ದ ಅಡಿಗರಿಗೆ ನೆಹರೂ ಸರ್ಕಾರದ ವಿರುದ್ಧ ಧರ್ಮಯುದ್ಧ ಸಾರಿದವರಂತೆ ಗುದ್ದಾಡುವ ಲೋಹಿಯಾರ ನಿಲುವು ಪ್ರಿಯವಾಗಿರಬೇಕು.

ಲೋಹಿಯಾರ ಪ್ರಭಾವದಿಂದಲೊ ಏನೊ, ತೇಜಸ್ವಿ, ಲಂಕೇಶ್, ಅನಂತಮೂರ್ತಿ, ಚಂಪಾ ಇವರ ಚಿಂತನೆಯಲ್ಲಿ ಕಾಂಗ್ರೆಸ್ ರಾಜಕಾರಣವನ್ನು ವಿರೋಧಿಸುವ ನೆಲೆಯೊಂದು ನೆಲೆಸಿತು. ಇದಕ್ಕೆ ಕರ್ನಾಟಕದ ಕಾಂಗ್ರೆಸ್ಸಿನ ಸನ್ನಿವೇಶಗಳಿಗಿಂತ ಭಾರತದ ಮಟ್ಟದಲ್ಲಿ ಲೋಹಿಯಾ ತೆಗೆದುಕೊಂಡ ರಾಜಕೀಯ ನಿಲುವೇ ಬಹುಮಟ್ಟಿಗೆ ಕಾರಣ. 1947ರ ಅಧಿಕಾರ ಹಸ್ತಾಂತರ ಮತ್ತು 1948ರ ಗಾಂಧಿ ಹತ್ಯೆ ಬಳಿಕ ಆಡಳಿತಾರೂಢ ಕಾಂಗ್ರೆಸ್ಸಿನ ಭ್ರಷ್ಟತೆಯನ್ನು ಕಂಡು ಹತಾಶೆ ಗೊಂಡ ಕೆಲವು ಗಾಂಧಿವಾದಿಗಳಿಗೂ, ಗಾಂಧಿವಾದದ ರೂಪಾಂತರದಂತೆ ಕಂಡ ಲೋಹಿಯಾ ಚಿಂತನೆಗೆ ಆಪ್ತ ವೆನಿಸಿತು. ಗಾಂಧಿಯ ನೇರ ಶಿಷ್ಯರಾದ ಲೋಹಿಯಾ, ಗಾಂಧಿಯ ನಂತರ ಅವರ ಚಿಂತನೆಗಳನ್ನು ಆಧುನಿಕ ಅರ್ಥದಲ್ಲಿ ಮಂಡಿಸುತ್ತಿದ್ದವರು.

ಗಾಂಧಿವಾದಿಯಲ್ಲದಿದ್ದರೂ ತೇಜಸ್ವಿ, ಕಾಂಗ್ರೆಸ್ಸಿನ ಆಡಳಿತವು ಜನರಿಗೆ ಬಿಡುಗಡೆ ತರಲಿಲ್ಲ ಎಂಬ ದನಿಯುಳ್ಳ 'ತಬರನ ಕತೆ'ಯನ್ನು ಬರೆದರು. ಕೆ.ವಿ.ಸುಬ್ಬಣ್ಣ, ಲಂಕೇಶ್, ಅನಂತಮೂರ್ತಿ, ಚಂಪಾ ಮುಂತಾದವರಲ್ಲಿ ಮತ್ತೆಮತ್ತೆ ಕಾಣುವ 'ಗಾಂಧಿಸ್ಮರಣೆ'ಗಳು ಲೋಹಿಯಾವಾದದ ಪ್ರೇರಣೆಯಿಂದ ಬಂದವು. ಅಂದರೆ ನೇರ ಗಾಂಧಿಯ ಪ್ರಭಾವದಿಂದ ಬರೆಯುವ ಪುತಿನ, ಹರ್ಡೇಕರ, ರಂ.ರಾ ದಿವಾಕರ, ಸಿಂಪಿ ಲಿಂಗಣ್ಣ ಮುಂತಾದವರಿಗಿಂತ ಇವು ಬೇರೆಯಾಗಿದ್ದವು. ಕೆ.ವಿ. ಸುಬ್ಬಣ್ಣನವರು ಮರಳಿ ತಮ್ಮ ಹುಟ್ಟಿದ ಹಳ್ಳಿಗೆ ಮರಳಿದ್ದರ ಹಿಂದೆ ಗಾಂಧಿವಾದದ ಒಂದು ಸಣ್ಣ ಪ್ರೇರಣೆ ಇದ್ದಂತಿದೆ.

ಲೋಹಿಯಾವಾದಿಗಳಲ್ಲಿ ತೇಜಸ್ವಿ ಕೂಡ ಸರ್ಕಾರಿ ನೌಕರಿ ಹಿಡಿದು ನಗರದಲ್ಲಿ ನೆಲೆಸದೆ, ಕೃಷಿ ಕಾಯಕಕ್ಕೆಂದು ಹಳ್ಳಿಗೆ ಹೋದರು. ಆದರೆ ಕನ್ನಡದ ಅನೇಕ ಚಿಂತಕರಲ್ಲಿ ಗಾಂಧಿವಾದವು ಅವರ ಅಸಹಾಯಕ ಮತ್ತು ರಾಜಕೀಯ ಕ್ರಿಯಾಶೀಲತೆಯಿಲ್ಲದ ಕಾರಣದಿಂದ ನೈತಿಕ ಗೊಣಗಾಟದಂತೆ ಕೂಡ ಪ್ರಕಟವಾಗುತ್ತ ಹೋಯಿತು. ಆಧುನಿಕ ವಿಕಾರಗಳಿಗೆ ಸಿದ್ಧ ಪರ್ಯಾಯದಂತೆ ಗಾಂಧಿವಾದವನ್ನು ಸುಲಭವಾಗಿನೆನೆಯುವ ಅನೇಕರನ್ನು ಕಂಡರೆ, ಗಾಂಧಿವಾದವು ಒಂದು ವ್ಯಸನವಾಗಿದೆ ಅನಿಸುತ್ತದೆಯೇ ಹೊರತು, ವಾಸ್ತವವನ್ನು ಮುಖಾಮುಖಿ ಮಾಡುವ ಕ್ರಿಯಾಶೀಲ ರಾಜಕೀಯ ಸಿದ್ಧಾಂತವೆಂದು ಅನಿಸುವುದಿಲ್ಲ.

ಗಾಂಧಿಯನ್ನು ಕಟುವಾಗಿ ವಿಮರ್ಶಿಸುವ ಅಂಬೇಡ್ಕರ್ ಪ್ರಭಾವದಿಂದ ಕರ್ನಾಟಕದಲ್ಲಿ ಹುಟ್ಟಿಬೆಳೆದ ದಲಿತ ಚಳುವಳಿಯು, ಈ ಕಾರಣಕ್ಕಾಗಿ ಲೋಹಿಯಾವಾದಿಗಳ ಜತೆ ಹೆಚ್ಚು ಸಾಮೀಪ್ಯ ಪಡೆಯಲು ಆಗಲಿಲ್ಲ. ಲೋಹಿಯಾವಾದಿ ಎನ್ನಲಾಗುವ ದೇವನೂರ ಮಹಾದೇವ ಅವರು ಆಟೆನ್‌ಬರೊ ಮಾಡಿದ ಗಾಂಧಿ ಸಿನಿಮಾ ನೋಡಿ ಮಾಡಿದ ಮೆಚ್ಚುಗೆಯ ಉದ್ಗಾರಕ್ಕೆ, ಅನೇಕ ದಲಿತರು ತೋರಿದ ಅಸಮ್ಮತಿಯನ್ನು ಇಲ್ಲಿ ನೆನೆಯಬಹುದು. ಆದರೆ ದಲಿತರ ದೂರೀಕರಣಕ್ಕೆ ನಿಜವಾದ ಕಾರಣ, ಲಿಂಗಾಯತ ಮತ್ತು ಒಕ್ಕಲಿಗ ಜಾತಿಗೆ ಸೇರಿದ ಭೂಮಾಲಿಕರಿರುವ ಗ್ರಾಮಗಳೇ ದಲಿತರಿಗೆ ದಮನಕಾರಿ ಜಾಗಗಳೂ ಆಗಿದ್ದುದು. ಇದುವೇ ಸಾಮಾಜಿಕ ಮತ್ತು ಸೈದ್ಧಾಂತಿಕ ಹಿನ್ನೆಲೆಯಿಂದ ರೂಪುಗೊಂಡ ರೈತ ಸಂಘಟನೆಗಳಲ್ಲಿ ದಲಿತರ ಗೈರುಹಾಜರಾತಿಗೆ ಕಾರಣವಾಯಿತು.

ಲೋಹಿಯಾ ತಮ್ಮ ಕಾಲದ ಕಮ್ಯುನಿಸ್ಟರ ಬಗ್ಗೆ ಕಟು ಟೀಕಾಕಾರರಾಗಿದ್ದರಷ್ಟೆ. ವಾಸ್ತವದಲ್ಲಿ ಅದು ಕಮ್ಯುನಿಸಂ ಸಿದ್ಧಾಂತಕ್ಕಿಂತಲೂ ಭಾರತದ ಕಮ್ಯುನಿಸ್ಟರನ್ನು ಕುರಿತ

ನೆಹರೂ ಮತ್ತು ಇಂದಿರಾಗಾಂಧಿ ನೇತೃತ್ವದ ಕಾಂಗ್ರೆಸ್ ಸರ್ಕಾರಗಳ ಜತೆ ಮತ್ತು ರಷ್ಯಾವಾದಿ ಕಮ್ಯುನಿಸ್ಟರು ರಾಜಕೀಯವಾಗಿ ಏಕೀಕರಣಗೊಂಡು, ಪ್ರತಿರೋಧ ಶಕ್ತಿಯನ್ನೇ ಕಳೆದುಕೊಂಡಿದ್ದು ಅವರನ್ನು ಕೆರಳಿಸಿದ ಸಂಗತಿಯಾಗಿತ್ತು. ಇದರ ಪರಿಣಾಮವೊ ಏನೊ, ಕರ್ನಾಟಕದಲ್ಲಿ ಲೋಹಿಯಾವಾದದಿಂದ ಪ್ರಭಾವಿತರಾದ ಬಹುತೇಕ ಲೇಖಕರ ರಾಜಕೀಯ ಚಿಂತನೆಯಲ್ಲಿ ಕಮ್ಯುನಿಸ್ಟ್ ವಿರೋಧವು ಸ್ಥಾಯಿಭಾವವಾಗಿ ಉಳಿದುಬಿಟ್ಟಿತು. ಅಡಿಗರಿಗೆ ಈ ವಿರೋಧವು ಅವರ ಬಲಪಂಥೀಯ ರಾಜಕಾರಣದ ಭಾಗವಾಗಿತ್ತು.

ನೆಹರೂ ಮತ್ತು ಕಮ್ಯುನಿಸ್ಟರು ಸೇರಿ ಜಾರಿತರುತ್ತಿರುವ ಸಮಾಜವಾದವು ವ್ಯಕ್ತಿವಿಶಿಷ್ಟತೆಯಿಂದ ಮಾತ್ರವೇ ಬದುಕಬಲ್ಲ ಮತ್ತು ಸೃಜಿಸಬಲ್ಲ ಲೇಖಕರ ಮತ್ತು ಕಲಾವಿದರ ಸೂಕ್ಷ್ಮ ಜಗತ್ತನ್ನು ಧ್ವಂಸಮಾಡುತ್ತದೆ ಎಂದು ಅವರು ಕನಲಿದ್ದರು. ಈ ಆಕ್ರೋಶಕ್ಕೆ ಸಾಕ್ಷಿಯಾಗಿ ಅವರ ಅನೇಕ ಕವನಗಳಿವೆ. ಅಡಿಗರ ಪ್ರಭಾವಕ್ಕೆ ಒಳಗಾದ ಅನಂತಮೂರ್ತಿ, ಲಂಕೇಶ್ ಅವರಲ್ಲೂ ಎಡವಾದದ ಬಗೆಗಿನ ಆಗ್ರಹಪೂರ್ವಕ ನಿಲುವಿದೆ. ತೇಜಸ್ವಿ ಸಾಹಿತ್ಯದಲ್ಲಿ ವರ್ಗಹೋರಾಟ ಮಾಡುವವರು ಕಡ್ಡಾಯವೆಂಬಂತೆ ವ್ಯಂಗ್ಯಚಿತ್ರಗಳಾಗಿ ಬರುತ್ತಾರೆ. ಚಂಪಾ ಅವರ ಕಮ್ಯುನಿಸ್ಟರನ್ನು ವಿಡಂಬಿಸುವ ಪದ್ಯಗಳು ಖ್ಯಾತವಾಗಿವೆ. ಭಾರತದ ಕಮ್ಯುನಿಸ್ಟರು ಮಾರ್ಕ್ಸ್‌ವಾದಕ್ಕೂ ಜನಿವಾರಸುತ್ತಿದ್ದಾರೆ ಎಂದು ಅವು ತಮಾಶೆ ಮಾಡುತ್ತವೆ. ಕಮ್ಯುನಿಸ್ಟರನ್ನು ಕುರಿತ ಲೋಹಿಯಾವಾದಿಗಳ ಈ ಆಗ್ರಹವು ಅವರನ್ನು ಒಂದು ಬಗೆಯಲ್ಲಿ ಮಾರ್ಕ್ಸ್‌ವಾದಕ್ಕೆ ಸೈದ್ಧಾಂತಿಕ ಎದುರಾಳಿಯಾಗಿಸಿತು.

ಅನೇಕರಲ್ಲಿ ಅದು ರಾಜಕೀಯ ಪೂರ್ವಾಗ್ರಹದಂತಹ ವಿರೋಧಕ್ಕಾಗಿ ವಿರೋಧವಾಗಿತ್ತು. ಮಾರ್ಕ್ಸ್‌ವಾದ ಕುರಿತ ಈ ವಿರೋಧವು ಅನೇಕ ಲೋಹಿಯಾವಾದಿ ಲೇಖಕರ ಮತ್ತು ಚಳುವಳಿಗಾರರ ರಾಜಕೀಯ ಪ್ರಜ್ಞೆಯನ್ನು ಪರಿಮಿತಿಗೆ ಒಳಪಡಿಸಿತು. ಇದನ್ನು ಲಂಕೇಶ್ ಮತ್ತು ತೇಜಸ್ವಿಯವರು ಜಾಗತೀಕರಣಕ್ಕೆ ಯೂರೋಪಿನ ಬಂಡವಾಳಶಾಹಿ ಹಾಗೂ ಅಮೆರಿಕ ನೇತೃತ್ವದ ಜಾಗತೀಕರಣ ಕುರಿತು ಮಾಡಿದ ಗೊಂದಲಕರ ವಿಶ್ಲೇಷಣೆಗಳಲ್ಲಿ ಕಾಣಬಹುದು. ಬಹುಶಃ ಇದಕ್ಕೆ ಅಪವಾದವೆಂದರೆ ನಂಜುಂಡಸ್ವಾಮಿಯವರೇ. ಅವರಲ್ಲಿ ಮಾರ್ಕ್ಸ್‌ವಾದದ ಆಳವಾದ ಸೈದ್ಧಾಂತಿಕ ತಿಳುವಳಿಕೆಯ ಆಧಾರದಲ್ಲಿ ಹುಟ್ಟುವ ವಿಮರ್ಶೆಯನ್ನು ಕಾಣಬಹುದು. ಅವರಿಗೆ ಅಂತಾರಾಷ್ಟ್ರೀಯ ರಾಜಕೀಯ ಪ್ರಜ್ಞೆಯು ಬಹಳ ಸ್ಪಷ್ಟವಾಗಿತ್ತು.

ಮುಂದೆ ಬಂಡಾಯ ಸಾಹಿತ್ಯ ಚಳುವಳಿ ಆರಂಭವಾದಾಗ, ಅಂಬೇಡ್ಕರ್‌ವಾದಿಗಳು, ಲೋಹಿಯಾವಾದಿಗಳು ಹಾಗೂ ಮಾರ್ಕ್ಸ್‌ವಾದಿಗಳು ಒಂದೇ ವೇದಿಕೆಯಲ್ಲಿ ಸೇರಬೇಕಾಯಿತು. ಆಗ ಸ್ಥಳೀಯ ಅಗತ್ಯಗಳಿಗೆ ಅನುಗುಣವಾಗಿ ತಾತ್ವಿಕ ಭಿನ್ನಮತಗಳು ಕೊಂಚ ಕಡಿಮೆಗೊಂಡವು. ಆದರೂ ಜಾತಿಗೆ ಒತ್ತುನೀಡುವ ಸಮಾಜವಾದಿಗಳು ವರ್ಗಪ್ರಶ್ನೆಯನ್ನು ಲೆಕ್ಕಿಸುವುದಿಲ್ಲವೆಂದು ಒಂದು ಬಣ ಆಕ್ಷೇಪಿಸಿದರೆ, ವರ್ಗಹೋರಾಟದ ಪರಿಕಲ್ಪನೆ ಇಟ್ಟುಕೊಂಡು ಹೋಗುವ ಮಾರ್ಕ್ಸ್‌ವಾದಿಗಳಿಗೆ ನಮ್ಮ ಗ್ರಾಮೀಣ ಜಗತ್ತಿನ ಜಾತಿಕ್ರೌರ್ಯ – ಅಸ್ಪೃಶ್ಯತೆಗಳು ತಿಳಿಯವುದಿಲ್ಲ ಎಂದು ಇನ್ನೊಂದು ಬಣ ಆಕ್ಷೇಪಿಸಿತು. ಈ ಕುರಿತ ತಾತ್ವಿಕ ಜಾತಿಪದ್ಧತಿ ಮತ್ತು ಬ್ರಾಹ್ಮಣ [illegible] ವಿರೋಧಗಳು ಲೋಹಿಯಾವಾದದ ಮತ್ತೊಂದು ಮುಖ್ಯ ಸಂಗತಿ. ಒಕ್ಕಲಿಗ ಮತ್ತು ಲಿಂಗಾಯತ ಸಾಮಾಜಿಕ ಹಿನ್ನೆಲೆಯಿಂದ ಬಂದವರಿಗೆ ಬಸವಣ್ಣ – ಕುವೆಂಪು ಅವರ ಚಿಂತನೆಯ ಪ್ರಭಾವವಿತ್ತು. ತಾತ್ವಿಕವಾಗಿ ಕುವೆಂಪು ಬಸವಣ್ಣನವರು ಕೂಡ ಜಾತಿಪದ್ಧತಿಯ ಕ್ರೌರ್ಯಗಳನ್ನು ಕುರಿತು ಚಿಂತಿಸಿದವರು. ಬಸವಣ್ಣ, ಕುವೆಂಪು ಮಾದರಿಯ ಸಮಾಜವಾದಿ ಚಿಂತಕರಿಗೆ ಲೋಹಿಯಾರ ಸಮಾಜವಾದಿ ಚಿಂತನೆಗೆ ಹೊರಳಿಕೊಳ್ಳುವುದು ಕಷ್ಟವಾಗಲಿಲ್ಲ. ಕರ್ನಾಟಕದಲ್ಲಿ ಲೋಹಿಯಾ ಚಿಂತನೆಯು ಕುವೆಂಪು ಚಿಂತನೆಗಳ ಜತೆ ಸಮ್ಮಿಲನಗೊಂಡ ಹಾಗೆ ಉಳಿದ ಯಾವ ಚಿಂತಕರ ಜತೆಯೂ ಸಮ್ಮಿಲನಗೊಳ್ಳಲಿಲ್ಲ.

ಕರ್ನಾಟಕದ ಜಾತಿವಿನಾಶ ಚಳುವಳಿ, ಬ್ರಾಹ್ಮಣ ವಿರೋಧಿ ಚಳುವಳಿಗಳಿಗೆ ಲೋಹಿಯಾ ಅವರಷ್ಟೇ ಕುವೆಂಪು ಬಸವಣ್ಣ ಕೂಡ ಪ್ರೇರಣೆ. ಮೈಸೂರಿನಲ್ಲಿ ನಡೆದ ಇಂತಹ ಚಳುವಳಿ ಮತ್ತು ಸಮಾವೇಶಗಳನ್ನು ಸಾಮಾನ್ಯವಾಗಿ ಕುವೆಂಪು ಅವರೇ ಉದ್ಘಾಟಿಸಿದರು. ಇದು ಕೂಡ ಆಕಸ್ಮಿಕವಲ್ಲ. ಭಾರತದ ರಾಷ್ಟ್ರಪತಿಯವರು ಕಾಶಿಯಲ್ಲಿ ನೂರೊಂದು ಜನ ದ್ವಿಜರ ಪಾದತೊಳೆಯುವ ಕೆಲಸ ಮಾಡಿದ್ದನ್ನು ತೀವ್ರವಾಗಿ ವಿರೋಧಿಸಿದ ಲೋಹಿಯಾ ಚಿಂತನೆಯು, ಕರ್ನಾಟಕದ ವೈಚಾರಿಕ ಚಿಂತನೆಯಲ್ಲಿ ಮೊದಲಿಂದಲೂ ಇರುವ ದ್ವಿಜಶ್ರೇಷ್ಠತೆಯ ನಿರಾಕರಣೆಯ ಜತೆ ಅನೋನ್ಯವಾಗಿ ಸೇರಿಕೊಂಡಿತು.

ತೇಜಸ್ವಿಯವರ 'ಅಬಚೂರಿನ ಪೋಸ್ಟಾಫೀಸು' ಕಥಾ ಸಂಕಲನದ ಚಾರಿತ್ರಿಕ ಮಹತ್ವದ ಮುನ್ನುಡಿಯು ('ಹೊಸದಿಗಂತದ ಕಡೆಗೆ') ಬ್ರಾಹ್ಮಣರ ಸಂಕುಚಿತ ಮನೋಭಾವಗಳು ಕನ್ನಡ ಸಾಹಿತ್ಯಕ ಪರಿಸರವನ್ನು ಉಸಿರುಗಟ್ಟಿಸಿ ಕೊಲ್ಲುತ್ತಿರುವುದನ್ನು ಆಕ್ರೋಶದಿಂದ ಪ್ರಕಟಿಸಿತು. ಮುಂದೆ ಲಂಕೇಶರು ಕೂಡ ಅಡಿಗರ ಆತ್ಮಕತೆಯ ವಿಮರ್ಶೆಯಲ್ಲಿ ಮತ್ತು ಸುಬ್ಬಣ್ಣನವರು ಕುವೆಂಪು ಬಗ್ಗೆ ಅವರು 'ಜಾತಿ ಕೂಡ ಕ್ರಿಯೇಟಿವ್ ಆಗಬಹುದು' ಎಂದು ಕೊಟ್ಟ ಹೇಳಿಕೆ ವ್ಯಾಪಕ ಟೀಕೆಗೆ ಒಳಗಾಯಿತು. ಅಂದರೆ ಲೋಹಿಯಾವಾದದ ಕ್ಯಾಂಪಿನಲ್ಲೇ ಆಳವಾದ ಸೈದ್ಧಾಂತಿಕ ವಾದ ಜಗಳಗಳು ಸಂಭವಿಸಿದವು.

ಶೂದ್ರರು ಜಾತಿಪದ್ಧತಿಯು ತಮ್ಮ ಸಾಮಾಜಿಕ ಚಲನೆಯನ್ನು ನಿಯಂತ್ರಿಸಿರುವ ಸಂಸ್ಥೆಯೆಂದು ತಿಳಿದಿರುವ ಕಾರಣದಿಂದ, ಅವರಿಗೆ ಲೋಹಿಯಾವಾದವು ಸಹಜವಾಗಿ ಪರ್ಯಾಯವೆನಿಸಿತು. ಆದರೆ ಜಾತಿಪದ್ಧತಿಯ ಬಗ್ಗೆ ಕಟುವಾದ ನಿಲುವಿದ್ದ ಅನೇಕ ಬ್ರಾಹ್ಮಣರು ಕೂಡ ಲೋಹಿಯಾವಾದವನ್ನು ಒಪ್ಪಿಕೊಂಡಿದ್ದು ಮಹತ್ವದ ಸಂಗತಿ. ಬಹುಶಃ ಅವರಲ್ಲಿ ಅನೇಕರಿಗಾದರೂ ಲೋಹಿಯಾವಾದವು ತಮ್ಮನ್ನು ಬಿಡುಗಡೆ ಮಾಡಿಕೊಳ್ಳುವ ಒಂದು ಸನ್ನೆಯೂ ಆಗಿತ್ತು. ಈ ದೃಷ್ಟಿಯಿಂದ ಕೆ.ವಿ.ಸುಬ್ಬಣ್ಣನವರು ಹವ್ಯಕ ಸಮ್ಮೇಳನ ವಿರೋಧಿಸಿ ಬರೆದ ಪತ್ರ ಚಾರಿತ್ರಿಕವಾಗಿ ಮಹತ್ವದ್ದಾಗಿದೆ. ಆದರೂ ಲೋಹಿಯಾವಾದಿಗಳಲ್ಲಿದ್ದ ಬ್ರಾಹ್ಮಣ–ಶೂದ್ರರ ನಡುವಣ ಅಪನಂಬಿಕೆ ಕೊನೆಯ ತನಕವೂ ಉಳಿಯಿತು. ಚಂಪಾ ಮತ್ತು ತೇಜಸ್ವಿ ಅವರಲ್ಲಿ ಬ್ರಾಹ್ಮಣ ವಿರೋಧವು ರೂಕ್ಷವಾಗಿಯೂ ಪ್ರಕಟವಾಗುತ್ತ ಹೋಯಿತು. ಶೂದ್ರ ಜಾತಿಗಳಿಂದ ಬಂದಿದ್ದ ಲೋಹಿಯಾ ವಾದಿಗಳು–ಲಂಕೇಶ್, ತೇಜಸ್ವಿ, ಚಂಪಾ, ನಂಜುಂಡಸ್ವಾಮಿ– ನಮ್ಮ ಸಾರ್ವಜನಿಕ ಬದುಕಿನಲ್ಲಿರುವ ಜಾತೀಯತೆಯ ಬಗ್ಗೆ ಕಡೆತನಕ ಸೆನ್ಸಿಟಿವ್ ಮತ್ತು ಅನ್‌ಕಾಂಪ್ರೊಮೈಜ್ ಆಗಿದ್ದರು. ಆದರೆ ಭೂಮಾಲಿಕ ವರ್ಗದ –ಸವರ್ಣೀಯ ಎನ್ನಬಹುದಾದ ಜಾತಿಗಳ ಹಿನ್ನೆಲೆಯು ಅವರ ಜಾತಿವಿರೋಧವನ್ನು ಏಕಪಕ್ಷೀಯವಾಗಿಸಿತು.

ಅವರಿಗೆ ಬಹಳ ಸಲ ಗ್ರಾಮೀಣ ದಲಿತರ ಮತ್ತು ಕೃಷಿಕಾರ್ಮಿಕರ ಸಮಸ್ಯೆ ಮುಖ್ಯವೆಂದು ಕಾಣಲಿಲ್ಲ. ದಲಿತರ ಮೇಲಣ ದಮನಕ್ಕಿಂತ ಶೂದ್ರರ ಸಾಂಸ್ಕೃತಿಕ ಹಕ್ಕುಗಳನ್ನು ಬ್ರಾಹ್ಮಣ ವಿರೋಧೀ ನೆಲೆಯಲ್ಲಿ ಮಂಡಿಸುತ್ತಿದ್ದ ಲೋಹಿಯಾವಾದಿಗಳ ಮಿತಿಗಳು ಗೊತ್ತಾಗಿದ್ದೇ ದಲಿತ ಚಳುವಳಿ ಬಂದ ಬಳಿಕ. ಲೋಹಿಯಾವಾದಿಗಳ ಜಾತಿವಿನಾಶ ಚಳುವಳಿಯಲ್ಲಿ ದಲಿತರ ಭಾಗವಹಿಸುವಿಕೆಯಿಲ್ಲ ಎಂಬುದು ಗಮನಾರ್ಹ. ಕರ್ನಾಟಕದ ಲೋಹಿಯಾವಾದಿಗಳಲ್ಲಿ ದೇವನೂರ ಮಹಾದೇವರ ಹೆಸರು ಏಕೈಕವೆಂದು ತೋರುವುದು. ಲೋಹಿಯಾ ಅವರು ಮತ್ತೆಮತ್ತೆ ಕಾಳಜಿಯಿಂದ ಆಲೋಚಿಸಿದ ಸಮುದಾಯವಾದ ಮುಸ್ಲಿಮರೂ ಕರ್ನಾಟಕದ ಲೋಹಿಯಾವಾದಿ ಚಳುವಳಿ – ರಾಜಕಾರಣದಲ್ಲಿ ತಮ್ಮನ್ನು ಗುರುತಿಸಿಕೊಳ್ಳಲಿಲ್ಲ. ಇದಕ್ಕೆ ಕಾರಣ, ಕಾಂಗ್ರೆಸ್ಸಿನಲ್ಲಿ ಬಹುತೇಕ ಭಾರತೀಯ ಮುಸ್ಲಿಮರು ಗುರುತಿಸಿಕೊಂಡಿದ್ದುದು, ಮತ್ತು ಲೋಹಿಯಾವಾದಿಗಳ ಜತೆ ಬಲಪಂಥೀಯರು ಇದ್ದುದು ಇರಬೇಕು.

3

ಲೋಹಿಯಾ ಇಂಗ್ಲಿಷ್ ತೊಲಗಿಸಿ ಚಳುವಳಿಯನ್ನು ಆರಂಭಿಸಿದವರಷ್ಟೆ. ಇದು ಕೂಡ ಗಾಂಧಿಯವರ ಮಾತೃಭಾಷೆ ಪರವಾದ ಚಿಂತನೆಯಿಂದ ಹುಟ್ಟಿದ್ದು. ಕರ್ನಾಟಕದಲ್ಲಿ ಅನೇಕರಿಗೆ ಈ ವಾದವು ಪ್ರಿಯವಾಗಿತ್ತು. ಅದರಲ್ಲೂ ವೈಯಕ್ತಿಕವಾಗಿ ಇಂಗ್ಲಿಷಿನಿಂದ ಹಿಂಸೆ ಅನುಭವಿಸಿದ್ದ ತೇಜಸ್ವಿ, ಕೋಣಂದೂರು ಲಿಂಗಪ್ಪ, ಕಡಿದಾಳು ಮುಂತಾದವರಿಗೆ ಲೋಹಿಯಾವಾದದ ಈ ನಿಲುವು ಬಹಳ ಹಿಡಿಸಿತು. ಲಂಕೇಶ್ ಇಂಗ್ಲಿಷ್ ಅಧ್ಯಾಪಕರಾಗಿ

ಶೂದ್ರರು ಜಾತಿಪದ್ಧತಿಯು ತಮ್ಮ ಸಾಮಾಜಿಕ ಚಲನೆಯನ್ನು ನಿಯಂತ್ರಿಸಿರುವ ಸಂಸ್ಥೆಯೆಂದು ತಿಳಿದಿರುವ ಕಾರಣದಿಂದ, ಅವರಿಗೆ ಲೋಹಿಯಾವಾದವು ಸಹಜವಾಗಿ ಪರ್ಯಾಯ ವೆನಿಸಿತು. ಆದರೆ ಜಾತಿಪದ್ಧತಿಯ ಬಗ್ಗೆ ಕಟುವಾದ ನಿಲುವಿದ್ದ ಅನೇಕ ಬ್ರಾಹ್ಮಣರು ಕೂಡ ಲೋಹಿಯಾವಾದವನ್ನು ಒಪ್ಪಿಕೊಂಡಿದ್ದು ಮಹತ್ವದ ಸಂಗತಿ. ಬಹುಶಃ ಅವರಲ್ಲಿ ಅನೇಕರಿಗಾದರೂ ಲೋಹಿಯಾವಾದವು ತಮ್ಮನ್ನು ಬಿಡುಗಡೆ ಮಾಡಿಕೊಳ್ಳುವ ಒಂದು ಸನ್ನೆಯೂ ಆಗಿತ್ತು. ಈ ದೃಷ್ಟಿಯಿಂದ ಕೆ.ವಿ.ಸುಬ್ಬಣ್ಣನವರು ಹವ್ಯಕ ಸಮ್ಮೇಳನ ವಿರೋಧಿಸಿ ಬರೆದ ಪತ್ರ ಚಾರಿತ್ರಿಕವಾಗಿ ಮಹತ್ವದ್ದಾಗಿದೆ.

ಪಟ್ಟ ಪಾಡುಗಳನ್ನು ಬರೆದುಕೊಂಡರು. ಮಾತೃಭಾಷೆಗಳಲ್ಲಿ ಮಾತಾಡುವುದು ಮತ್ತು ಬರೆಯುವುದು ಇಲ್ಲಿ ತಾತ್ವಿಕ ಬದ್ಧತೆಯ ವಿಷಯವಾಗಿತ್ತು. ಇದು ಪರೋಕ್ಷವಾಗಿ ಅವರ ಕನ್ನಡಪರ ಚಳುವಳಿಗೆ ಪ್ರೇರಣೆ ಕೊಟ್ಟಿತು.

ವಿಶೇಷವೆಂದರೆ, ಹೆಚ್ಚಿನ ಲೋಹಿಯಾವಾದಿ ಲೇಖಕರು (ಲಂಕೇಶ್, ಚಂಪಾ, ಅಡಿಗ, ಅನಂತಮೂರ್ತಿ) ಕನ್ನಡದಲ್ಲಿ ಬರೆಯುವ ಇಂಗ್ಲಿಷ್ ಪ್ರಾಧ್ಯಾಪಕರು ಮತ್ತು ಕನ್ನಡಪರ ಚಳುವಳಿಯವರು. ಈ ಹಿನ್ನೆಲೆಯಲ್ಲಿ ಅನಂತಮೂರ್ತಿ ಅವರ 'ಇಂಗ್ಲಿಷ್ ಬ್ರಾಹ್ಮಣ ಮತ್ತು ಕನ್ನಡ ಶೂದ್ರ', ಅಡಿಗರ 'ಮಣ್ಣಿನ ವಾಸನೆ' ಲೇಖನಗಳನ್ನು ಗಮನಿಸಬಹುದು. ಅನೇಕ ಲೋಹಿಯಾವಾದಿ ತರುಣರಿಗೆ ಪ್ರಭಾವ ಬೀರಿದ್ದ ಕುವೆಂಪು ಕೂಡ ಮಾತೃ ಭಾಷಾವಾದಿ ಎಂಬುದು ಗಮನಾರ್ಹ. ಲೋಹಿಯಾ ಮತ್ತು ಕುವೆಂಪು ಅವರು ಪರಸ್ಪರ ಭೇಟಿಯಾದಾಗ ಚರ್ಚಿಸಿದ ವಿಷಯ ಕೂಡ ಮಾತೃಭಾಷೆಯದೇ ಆಗಿತ್ತು. ಸಮಾಜವಾದಿ ಪಕ್ಷದಿಂದ ಗೆದ್ದು ಹೋದ ಜೆ.ಎಚ್. ಪಟೇಲರು ಸಂಸತ್ತಿನಲ್ಲಿ ಮೊಟ್ಟಮೊದಲು ಕನ್ನಡದಲ್ಲಿ ಮಾತನಾಡಿದ್ದರ ಹಿಂದೆ ಕುವೆಂಪು ಮತ್ತು ಲೋಹಿಯಾರ ಪ್ರೇರಣೆಯಿದೆ. ಇದನ್ನು ದೊಡ್ಡ ಚಾರಿತ್ರಿಕ ವಿದ್ಯಮಾನ ಎಂದು ಕುವೆಂಪು ಅವರು ಸಂಭ್ರಮಿಸಿದರು. ಈ ಹಿನ್ನೆಲೆಯಲ್ಲಿ ಅವರ 'ನಮಗೆ ಬೇಕಾದ ಇಂಗ್ಲಿಷು' ಲೇಖನವು ಚಾರಿತ್ರಿಕ ಮಹತ್ವದ ಚಿಂತನೆಯನ್ನು ಒಳಗೊಂಡಿದೆ.

4

ಲೋಹಿಯಾ ಬಹಳ ಕಾಳಜಿಯಿಂದ ಚಿಂತನೆ ಮಾಡಿದ ಸಮುದಾಯವೆಂದರೆ ಮಹಿಳೆಯರದ್ದು. ಲೋಹಿಯಾ ಬರೆದ 'ಸೌಂದರ್ಯ ಮತ್ತು ಮೈಬಣ್ಣ' ಲೇಖನವು ಮಹಿಳಾ ಚಿಂತನೆಯಲ್ಲಿ ತನ್ನ ಪ್ರಭಾವ ಬೀರಿದೆ. ಆದರೂ ಕರ್ನಾಟಕದ ಲೋಹಿಯಾವಾದಿ ಚಳುವಳಿಗಳಲ್ಲಿ ಮಹಿಳೆಯರ ಭಾಗವಹಿಸುವಿಕೆ ಬಹಳ ಕಡಿಮೆ. ಪೊನ್ನಮ್ಮಾಳ್ ಮುಂತಾದ ಕೆಲವರಷ್ಟೆ ಕಾಣುತ್ತಾರೆ. ಲೋಹಿಯಾ ಅವರಲ್ಲಿ ಮಹಿಳೆಯರ ಸೌಂದರ್ಯದ ಬಗ್ಗೆ ಲೋಲುಪತೆಯಲ್ಲದ ಆರಾಧನೆಯಿತ್ತು. ಮಹಿಳೆಯರ ಚೆಲುವಿನ ಬಗ್ಗೆ ಸೌಂದರ್ಯಾತ್ಮಕ ದೃಷ್ಟಿಕೋನವು ಅವರನ್ನು ದೈಹಿಕವಾಗಿ ನೋಡುವ ಮತ್ತು ಬಳಸಿಕೊಳ್ಳುವ ದೃಷ್ಟಿಗಿಂತ ಬೇರೆಯಾದುದು. ಮಹಿಳೆಯರ ಚೈತನ್ಯ ಶಕ್ತಿಯನ್ನು ತನ್ನ ಸಂಕುಚಿತ ಮನೋಭಾವದಿಂದ ಭಾರತೀಯ ಸಮಾಜವು ಬಳಸಿಕೊಳ್ಳಲು ಆಗುತ್ತಿಲ್ಲವೆಂದು ಲೋಹಿಯಾ ಪರಿತಪಿಸುತ್ತಿದ್ದರು.

ದ್ರೌಪದಿ, ಸೀತೆಯರ ಬಗೆಗಿನ ಅವರ ವಿಶ್ಲೇಷಣೆಗಳು ಅದ್ಭುತ ಸಾಂಸ್ಕೃತಿಕ ಒಳನೋಟಗಳಿಂದ ಕೂಡಿವೆ. ಆದರೆ ಕರ್ನಾಟಕದ ಅನೇಕ ಲೋಹಿಯಾವಾದಿಗಳು ಮಹಿಳೆಯರನ್ನು ಸಂಗಾತಿಯನ್ನಾಗಿ ನೋಡುವುದರ ಹಾಗೂ ಅವರನ್ನು ಲೈಂಗಿಕ ವಸ್ತುವಾಗಿ ಗ್ರಹಿಸುವುದರ ನಡುವೆ ವ್ಯತ್ಯಾಸ ಮಾಡಿಕೊಳ್ಳಲಿಲ್ಲ. ಅನೇಕರು ಹೆಣ್ಣನ್ನು ದೇಹಪ್ರಧಾನವಾಗಿ ನೋಡುವ ಮಿತಿಯಿಂದ ತಪ್ಪಿಸಿಕೊಳ್ಳಲಿಲ್ಲ. ಲೋಹಿಯಾವಾದದಿಂದ ಪ್ರಭಾವಿತರಾದ ಅನೇಕ ಲೇಖಕರಲ್ಲಿ ಕುವೆಂಪು, ಕಾರಂತರ ಹಾಗೆ ಒಂದು ದೊಡ್ಡ ಚೈತನ್ಯಶೀಲ ಸ್ತ್ರೀಪಾತ್ರಗಳನ್ನು ಕಡೆಯುವುದಕ್ಕೆ ಆಗಲಿಲ್ಲ. ತೇಜಸ್ವಿ ಸಾಹಿತ್ಯದಲ್ಲಿ ಬಹಳ ಮುಖ್ಯವಾದ ಸ್ತ್ರೀಪಾತ್ರಗಳೇ ಇಲ್ಲ. ಅನಂತಮೂರ್ತಿ ಅವರಿಗೆ ಸಂದರ್ಶನವೊಂದರಲ್ಲಿ ಅವರ ಕಾದಂಬರಿ ಪಾತ್ರಗಳಲ್ಲಿ ಯಾಕೆ ಮಹಿಳೆಯರು ನಾಯಕಿಯರಾಗಿ ಕಾಣುವುದಿಲ್ಲ ಎಂದು ಕೇಳಿದಾಗ, ಅದಕ್ಕವರು ಮಹಿಳೆಯರು ತಮ್ಮ ಕಾದಂಬರಿಗಳಲ್ಲಿ ಸಂಕೇತಗಳಾಗಿ ಬರುತ್ತಾರೆ ಎಂದು ಉತ್ತರಿಸಿದ್ದನ್ನು ನೆನೆಯಬಹುದು.

ಲೋಹಿಯಾವಾದಿ ಚಿಂತಕರು ವ್ಯಕ್ತಿವಿಶಿಷ್ಟ ಸಿದ್ಧಾಂತವನ್ನು ನಂಬಿದವರೂ, ನೆಹರೂ ವಿರುದ್ಧ ಲೋಹಿಯಾ ಸಾರಿದ್ದ ಯುದ್ಧಗಳಿಂದ ತರಬೇತಿ ಪಡೆದವರೂ ಆಗಿದ್ದು, ಕನ್ನಡ ಚಿಂತನೆಯಲ್ಲಿ ನಿರ್ಮಿಸಿದ ಒಂದು ವಾಗ್ವಾದದ ವಾತಾವರಣವು, ಮುಖ್ಯವಾಗಿದೆ. ಚಂಪಾ–ಅನಂತಮೂರ್ತಿ, ಲಂಕೇಶ್– ಚಂಪಾ, ಲಂಕೇಶ್–ನಂಜುಂಡಸ್ವಾಮಿ, ಲಂಕೇಶ್–ತೇಜಸ್ವಿ, ನಂಜುಡಸ್ವಾಮಿ–ಕಡಿದಾಳ್ ಶಾಮಣ್ಣ, ಗೋಪಾಲಗೌಡರು ಮತ್ತು ನೀಲಗಂಗಯ್ಯರ ನಡುವೆ ವಾಗ್ವಾದಗಳು ನಡೆದವು. ಬುದ್ಧಿವಂತರೂ ವ್ಯಕ್ತಿವಿಶಿಷ್ಟವಾದಿಗಳೂ ಆಗಿದ್ದ ಲೋಹಿಯಾವಾದಿಗಳು ಜಗಳ ಮಾಡುವುದರಲ್ಲಿ ಪ್ರಸಿದ್ಧರಾಗಿದ್ದರು.

ವೈಯಕ್ತಿಕವಾಗಿ ಜೆ.ಎಚ್. ಪಟೇಲರ ಹೆಣ್ಣಿನ ಹುಚ್ಚು ಒಂದು ದಂತಕತೆಯಾಗಿತ್ತು. ಬಹುರಾಷ್ಟ್ರೀಯ ಕಂಪನಿಗಳು ಬೆಂಗಳೂರಿನಲ್ಲಿ ಸೌಂದರ್ಯ ಸ್ಪರ್ಧೆ ನಡೆಸಬೇಕೆಂದು ನಿರ್ಧರಿಸಿದಾಗ ಪಟೇಲರು ರಾಜ್ಯದ ಮುಖ್ಯಮಂತ್ರಿಗಳಾಗಿದ್ದರು. ಸ್ಪರ್ಧೆಯ ಹಿಂದಿನ ಮಾರುಕಟ್ಟೆ ಅರ್ಥಶಾಸ್ತ್ರವನ್ನು ಅರ್ಥಮಾಡಿಕೊಳ್ಳದೆ, ಅರ್ಥವಾದರೂ ಅದನ್ನು ಲೆಕ್ಕಿಸದೆ, ಅವರು ಅದನ್ನು ಬೆಂಬಲಿಸಿದರು. ಸ್ತ್ರೀವಾದಿಗಳು ಹಾಗೂ ಪ್ರಗತಿಪರರು ಇದರ ವಿರುದ್ಧ ಮಾಡಿದ ಪ್ರತಿಭಟನೆಗಳನ್ನು ಕೇವಲವಾಗಿ ಕಂಡರು. ಅನೇಕ ಪ್ರಗತಿಪರರು ಆಗ ಸೆರೆಮನೆಗೆ ಹೋಗಬೇಕಾಯಿತು. ಚಂಪಾ ಅವರು ಪಟೇಲರ ನಿಲುವನ್ನು ರಸಿಕತೆ ಎಂಬರ್ಥದಲ್ಲಿ ಸಮರ್ಥಿಸಿದರು. ಇದು ಸಂಕ್ರಮಣದ ಸಂಪಾದಕೀಯದಲ್ಲಿ ದಾಖಲಾಗಿದೆ. ಚಂಪಾ ಒಂದು ಸಭೆಯಲ್ಲಿ ನನಗೆ ಇರುವುದು ಒಂದು ಸ್ಕೂಟರು ಮತ್ತು ಒಬ್ಬ ಹೆಂಡತಿ ಎಂದು ಹೇಳಿ ಸ್ತ್ರೀವಾದಿಗಳ ಆಕ್ರೋಶಕ್ಕೆ ಕಾರಣವಾಗಿದ್ದರು. ಸಣ್ಣಪುಟ್ಟ ಎನಿಸುವ ಈ ಘಟನೆಗಳು ನವ್ಯದ ನೋಡುವ ದೃಷ್ಟಿಕೋನದ ಪರಿಮಿತಿಯೊ, ಅವರ ವೈಯಕ್ತಿಕ ಮನೋಭಾವದ ಫಲವೊ, ಅಥವಾ ಕರ್ನಾಟಕ ಲೋಹಿಯಾವಾದಿ ರಾಜಕಾರಣದಲ್ಲಿ ನಿಹಿತವಾಗಿದ್ದ ಲಕ್ಷಣವೊ ತಿಳಿಯುವುದಿಲ್ಲ. ಬಹುಶಃ ಬೇರೆ ಪಕ್ಷಗಳಿಗೆ ಹೋಲಿಸಿದರೆ, ಕರ್ನಾಟಕದ ಲೋಹಿಯಾವಾದಿ ಸಾಂಸ್ಕೃತಿಕ ರಾಜಕಾರಣವು ಹೆಚ್ಚು ಪುರುಷವಾದಿಯಾಗಿತ್ತು.

ಲೋಹಿಯಾವಾದಿ ಚಿಂತಕರು ವ್ಯಕ್ತಿವಿಶಿಷ್ಟ ಸಿದ್ಧಾಂತವನ್ನು ನಂಬಿದವರೂ, ನೆಹರೂ ವಿರುದ್ಧ ಲೋಹಿಯಾ ಸಾರಿದ್ದ ಯುದ್ಧಗಳಿಂದ ತರಬೇತಿ ಪಡೆದವರೂ ಆಗಿದ್ದು, ಕನ್ನಡ ಚಿಂತನೆಯಲ್ಲಿ ನಿರ್ಮಿಸಿದ ಒಂದು ವಾಗ್ವಾದದ ವಾತಾವರಣವು, ಮುಖ್ಯವಾಗಿದೆ. ಚಂಪಾ–ಅನಂತಮೂರ್ತಿ, ಲಂಕೇಶ್– ಚಂಪಾ, ಲಂಕೇಶ್–ನಂಜುಂಡಸ್ವಾಮಿ, ಲಂಕೇಶ್–ತೇಜಸ್ವಿ, ನಂಜುಡಸ್ವಾಮಿ–ಕಡಿದಾಳ್ ಶಾಮಣ್ಣ, ಗೋಪಾಲಗೌಡರು ಮತ್ತು ನೀಲಗಂಗಯ್ಯರ ನಡುವೆ ವಾಗ್ವಾದಗಳು ನಡೆದವು. ಬುದ್ಧಿವಂತರೂ ವ್ಯಕ್ತಿವಿಶಿಷ್ಟವಾದಿಗಳೂ ಆಗಿದ್ದ ಲೋಹಿಯಾವಾದಿಗಳು ಜಗಳ ಮಾಡುವುದರಲ್ಲಿ ಪ್ರಸಿದ್ಧರಾಗಿದ್ದರು.

ಪರಸ್ಪರ ತಾತ್ವಿಕ ಭಿನ್ನಮತಗಳ ಮೂಲಕ ಒಂದು ಉಜ್ವಲವಾದ ವಾಗ್ವಾದದ ವಾತಾವರಣವನ್ನು ಅವರು ಸೃಷ್ಟಿಸಿದ್ದರು. ಕುವೆಂಪು ಕುರಿತಂತೆ ಅನಂತಮೂರ್ತಿ ಮತ್ತು ತೇಜಸ್ವಿಯವರ ಭಿನ್ನಮತಗಳು ಒಂದು ಅಪೂರ್ವವಾದ ವಾಗ್ವಾದಕ್ಕೆ ಕಾರಣವಾದವು. ಈಗಲೂ ಅನಂತಮೂರ್ತಿಯವರಿಗೆ ಉತ್ತರಿಸುತ್ತ ತೇಜಸ್ವಿಯವರು ಬರೆದ 'ಕರ್ನಾಟಕ ಸಂಸ್ಕೃತಿ ವಿಶ್ಲೇಷಣೆ'ಯು ತನ್ನೆಲ್ಲ ಶೂದ್ರವಾದಿ ನಿಲುವಿನ ಪರಿಮಿತಿಗಳೊಂದಿಗೆ, ಒಂದು ಅಪರೂಪದ ಚಿಂತನೆಯಾಗಿದೆ. ಅಡಿಗರು ಲಂಕೇಶ್ ಅನಂತಮೂರ್ತಿ ಅವರೆಲ್ಲ ಸೇರಿ ಹುಬ್ಬಳ್ಳಿ ಸಾಹಿತ್ಯ ಸಮ್ಮೇಳನದ ವಿರುದ್ಧ ಏರ್ಪಡಿಸಿದ ಜಾಗೃತಸಾಹಿತ್ಯ ಸಮ್ಮೇಳನದಲ್ಲಿ, ಸುಬ್ಬಣ್ಣನವರು, ಜಾಗೃತ ಸಾಹಿತ್ಯ ಸಮ್ಮೇಳನದಲ್ಲಿ ಇಟ್ಟುಕೊಂಡು ಸಾಹಿತ್ಯದ ಶ್ರೇಷ್ಠತೆಯ ಪರಿಕಲ್ಪನೆಯನ್ನು ತೀವ್ರವಾಗಿ ಖಂಡಿಸಿ 'ಶ್ರೇಷ್ಠತೆಯ ವ್ಯಸನ' ಎಂಬ ಪ್ರಬಂಧ ಮಂಡಿಸಿದರು. ಇದು ಕೂಡ ಹೀಗೆ ತಾತ್ವಿಕ ಭಿನ್ನಮತದಿಂದ ಹುಟ್ಟಿದ ಅಪರೂಪದ ಚಿಂತನೆಯಾಗಿದೆ.

ತೇಜಸ್ವಿ ಕೂಡ ಜಾಗೃತ ಸಮಾವೇಶವನ್ನು ವಿರೋಧಿಸಿ ಹೊರನಡೆದರು. ಗೋಪಾಲಗೌಡರು ಕೂಡ ಕೊನೆಯ ದಿನಗಳಲ್ಲಿ ಭೂ ಮಾಲೀಕರ ಜತೆ ಸಂಬಂಧ ಹೊಂದಿದ್ದಾರೆ. ಹೋರಾಟ ಕಟ್ಟುವುದರಲ್ಲಿ ನಿರಾಸಕ್ತಿ ಹೊಂದಿದ್ದಾರೆ ಎಂದು ಅವರ ಸಂಗಾತಿಗಳು ಆಪಾದಿಸಿ ದೂರವುಳಿದರು. ಲಂಕೇಶ್ ರೈತಸಂಘದ ಬಗ್ಗೆ ಸದಾ ಟೀಕಿಸುತ್ತಿದ್ದರು. ಅವರು ಕಟ್ಟಿದ ಪ್ರಗತಿ ರಂಗದ ಜತೆ ನಂಜುಂಡಸ್ವಾಮಿ ಮುಂತಾದವರು ಸೇರಲಿಲ್ಲ. ಇದೇ ತರಹ ನಂಜುಂಡಸ್ವಾಮಿಯವರು ಕಟ್ಟಿದ ರೈತ ಸಂಘಟನೆಯಲ್ಲಿ ಅವರ ಬಹುಕಾಲದ ಸಂಗಾತಿ ಕಡಿದಾಳು ಶಾಮಣ್ಣ ಇರಲಿಲ್ಲ. ಪ್ರಖರ ವೈಚಾರಿಕತೆ ಮತ್ತು ರಾಜಕೀಯ ಪ್ರಜ್ಞೆಯನ್ನು ಇಟ್ಟುಕೊಂಡಿದ್ದ ನಂಜುಂಡಸ್ವಾಮಿಯವರಲ್ಲಿ, ಜಾತಿ ಮತ್ತು ಕುಟುಂಬದ ಹಿನ್ನೆಲೆಯಿಂದಲೊ ಸ್ವಭಾವದಲ್ಲೇ ಇದ್ದ ಗುಣವೊ, ಒಂದು ಬಗೆಯ ಊಳಿಗಮಾನ್ಯ ದರ್ಪವಿತ್ತು. ಇವೆಲ್ಲ ಘಟನೆಗಳು ಲೋಹಿಯಾವಾದಿಗಳಲ್ಲಿ ಪರಸ್ಪರ ಸಾಮ್ಯಗಳಿಗಿಂತ ಭಿನ್ನಮತ ಮತ್ತು ವೈರುಧ್ಯಗಳೇ ಹೆಚ್ಚಿದ್ದುದನ್ನು ಸೂಚಿಸುತ್ತದೆ.

ಕೆಲವೊಮ್ಮೆ ಈ ಭಿನ್ನಮತಗಳು ಸೈದ್ಧಾಂತಿಕವಾಗಿದ್ದವು ಎನ್ನುವುದಕ್ಕಿಂತ ವೈಯಕ್ತಿಕವಾಗಿದ್ದವು. ಅವು ವ್ಯಕ್ತಿನಿಂದೆಯ ಆಕ್ರಮಣದ ಮೊನಚನ್ನು ಕೂಡ ಪಡೆದಿರುತ್ತಿದ್ದವು. ಲಂಕೇಶ್ ಮತ್ತು ತೇಜಸ್ವಿಯವರು ಪರಸ್ಪರ ಮಾತುಬಿಟ್ಟು ತೀರಿಕೊಂಡರು. ವ್ಯಕ್ತಿಪ್ರತಿಷ್ಠೆ, ಹಠಮಾರಿತನಗಳು, ಕರ್ನಾಟಕದಲ್ಲಿ ಲೋಹಿಯಾವಾದಿಗಳು ಸಮಾನ ಆಸಕ್ತಿಗಾಗಿ ಒಂದುಗೂಡಿ ಕೆಲಸಮಾಡುವ ಅವಕಾಶಗಳನ್ನು ಕಡಿಮೆಮಾಡಿದವು. ಕಾಗೋಡು ಸತ್ಯಾಗ್ರಹ, ಹೆಬ್ಬಳ್ಳಿ ಭೂ ಹೋರಾಟ, ಸಂಡೂರು ಭೂ ಹೋರಾಟಗಳನ್ನು ಬಿಟ್ಟರೆ, ಅವರು ಒಗ್ಗೂಡಿ ಚಳುವಳಿಯನ್ನು ಕಟ್ಟಿದ ಸಂದರ್ಭಗಳೇ ಕಡಿಮೆ. ಈ ಮೂರು ಹೋರಾಟಗಳು ಕೆಲವು ವ್ಯಕ್ತಿಗಳ ಮೇಲೆ ಯಶಸ್ವಿಯಾಗಿವೆಯೇ ಹೊರತು, ಸಮಾಜವಾದಿ ಪಕ್ಷದ ಬದ್ಧತೆಯಿಂದಲ್ಲ.

(45ನೇ ಪುಟಕ್ಕೆ)

ಪ್ರಭುತ್ವದ ದಮನಕಾರಿ ನೀತಿ ಮತ್ತು ಪ್ರತಿಹಿಂಸೆ ಒಂದು ಪುನರಾವಲೋಕನ

ಜಿ. ಎಸ್. ದಸ್ತಾಪೂರ

ಕಟಕಟೆಯ ಕಿತಾಬಿನ ಹಾಳೆ ನನ್ನವು
ಹಿಡಿದ ಲೇಖನಿಯ ಶಾಯಿಗೂ ನನ್ನ ನೆತ್ತರಿನ ಗುಣ
ಇನ್ನು ತೀರ್ಪು ನನ್ನಿಚ್ಛೆಯಂತೆ ಬರೆದುಕೊಂಡಲ್ಲಿ
ಪ್ರತಿಸಲ ನಾನೇಕೆ ಆಶ್ಚರ್ಯಪಡಲಿ?
ತಮಾಷೆಯೆಂದರೆ ಇಷ್ಟು ಹೇಳಲೂ ನನಗೆ
ಸುತ್ತಲೂ ಭದ್ರತೆ, ನನಗೋ ತುಕ್ಕು ತಕ್ಕಡಿಯಡಿ
ಪುಕ್ಕಲು ಆಯಸ್ಕಾಂತದ ನೆನಪು.

ಜಿಂಬಾಬ್ವೆ ಪ್ರಭುತ್ವ 3ವರ್ಷದ ಮಗುವನ್ನು ಉಗ್ರಗಾಮಿ ಎಂದು ಘೋಷಿಸಿ ಶಿಕ್ಷೆಯನ್ನು ವಿಧಿಸಿದ ಸಂದರ್ಭದಲ್ಲಿ ಕವಿ ರಮೇಶ ಅರೋಲಿ ಬರೆದ ಈ ಸಾಲುಗಳು ಪ್ರಪಂಚದ ತಥಾಕಥಿತ ಅತಿ ದೊಡ್ಡ ಪ್ರಜಾಪ್ರಭುತ್ವ ಎನಿಸಿಕೊಂಡಿರುವ ಭಾರತ ಪ್ರಭುತ್ವದ ಧೋರಣೆಯ ಪ್ರತಿ ಶೋಷಿತ ಸಮುದಾಯದ ಕೂಗನ್ನು ಪ್ರತಿನಿಧಿಸುವಂತಿದೆ. ಇತ್ತೀಚೆಗೆ ಆರೋಪಿತ ಎನ್‌ಕೌಂಟರ್‌ನಲ್ಲಿ ನಕ್ಸಲ್ ನಾಯಕ ಕಾಮ್ರೇಡ್ ಆಜಾದ್‌ನ ಕೊಲೆ ಭಾರತದ "ಪ್ರಜಾ" ಪ್ರಭುತ್ವದ ಅಸ್ತಿತ್ವವನ್ನು ಪ್ರಶ್ನಿಸುತ್ತಿದೆ. "Operation Green Hunt" (ಹಸಿರು ಬೇಟೆ) ಅಡಿಯಲ್ಲಿ ಪ್ರಭುತ್ವ ಯಾರನ್ನಾದರೂ ಕೊಲ್ಲಬಹುದು ಎನ್ನುವುದಕ್ಕೆ ಈ ಘಟನೆ ಮೂಕ ಸಾಕ್ಷಿಯಾಗಿದೆ. ಸರ್ಕಾರಿ ಭಾಷೆಯಲ್ಲಿ "ಇಸ್ಲಾಮಿಕ್ ಭಯೋತ್ಪಾದಕ" ಎಂದು ದೂಷಿಸಲು ಕನಿಷ್ಠ ಆತನು ಮುಸ್ಲಿಂ ಆಗಿರಬೇಕು. ಆದುದರಿಂದ ಪ್ರಭುತ್ವದ ಅಮಾನುಷತೆಯ ಗಾಳಕ್ಕೆ ವ್ಯಾಪ್ತಿಯಿದೆ.

ಆದರೆ ಪ್ರಭುತ್ವದ ಒಪ್ಪಲಾಸಾಧ್ಯವಾದ ಧೋರಣೆಯನ್ನು ಪ್ರಶ್ನಿಸುವ ಯಾರನ್ನು ಬೇಕಾದರೂ ಪ್ರಭುತ್ವ ನಕ್ಸಲ್/ಮಾವೋವಾದಿ, ಅಥವಾ ನಕ್ಸಲ್ ಅನುಕಂಪವಾದಿ ಎಂದು ಕೊಲ್ಲಬಹುದು.ಕಾಮ್ರೇಡ್ ಆಜಾದ್ ಜೊತೆಗೆ ಕೊಲೆಯಾದ ಪತ್ರಕರ್ತ ಪಾಂಡೆ ಈ ದೇಶದ ಆಂತರಿಕ ಭದ್ರತೆಗೆ ಮಾರಕವಾಗಿದ್ದನೆ? ಕೆಲವು ಮಾಧ್ಯಮಗಳು ಪಾಂಡೆಯು ಪತ್ರಕರ್ತನೋ ಅಥವಾ ಮಾವೋವಾದಿಯಾಗಿದ್ದನೋ ಎನ್ನುವುದರ ಕುರಿತ ಒಣ ಚರ್ಚೆ ಪ್ರಸ್ತುತ ಸಮಾಜದ ಕ್ರೌರ್ಯವನ್ನು ಬಿಂಬಿಸುತ್ತದೆ. ಇದು ಹೇಗಿದೆಯೆಂದರೆ ಒಂದು ವೇಳೆ ಪಾಂಡೆ ಮಾವೋವಾದಿಯಾಗಿದ್ದರೆ ಪೋಲೀಸರಿಂದಾದ ಕೊಲೆ ನ್ಯಾಯಸಮ್ಮತ ಎನ್ನುವಂತಿದೆ. ಪ್ರತಿಯೊಬ್ಬ ಮನುಷ್ಯನಿಗೆ ತನ್ನದೆ ಆದ ಗೌರವಾನ್ವಿತ ಜೀವನ ನಡೆಸುವ ಹಕ್ಕನ್ನು ಸಂವಿಧಾನವು ಕೊಟ್ಟಿದೆ. ಪ್ರತಿಯೊಬ್ಬ ಆರೋಪಿಗೂ ತನ್ನ ಪ್ರಕರಣವನ್ನು ಪ್ರಸ್ತಾಪಿಸುವ ಅವಕಾಶ ಸಂವಿಧಾನದ ಮೂಲಭೂತ ಹಕ್ಕುಗಳು ಕೊಟ್ಟಿವೆ. ಆದರೆ, ಆಜಾದ್ ಪ್ರಕರಣದಲ್ಲಿ ಆಗಿದ್ದು ಏನು?

ಸ್ವಾಮಿ ಅಗ್ನಿವೇಶಾನಂದರೊಂದಿಗೆ ಆಜಾದ್ ಸರ್ಕಾರದೊಂದಿಗಿನ ಮಾತುಕತೆ ಕುರಿತು ನಿರಂತರ ಸಂಪರ್ಕದಲ್ಲಿದ್ದರೆಂದು ಸ್ವತ: ಸ್ವಾಮಿಗಳು ಹೇಳಿದ್ದಾರೆ. ಉನ್ನತ ಮೂಲಗಳಿಂದ ಆದೇಶವಿಲ್ಲದೆ ಆಜಾದ್‌ನಂತಹ ನಾಯಕನನ್ನು "ಎನ್‌ಕೌಂಟರ್"ನಲ್ಲಿ ಕೊಲ್ಲಲು ಸಾಧ್ಯವಿಲ್ಲ. ಒಂದುಕಡೆ, ಮಾತುಕತೆಗೆ ಮುಂಚೆ ನಕ್ಸಲರು ಹಿಂಸೆ ತ್ಯಜಿಸಬೇಕೆನ್ನುವ ಪ್ರಭುತ್ವ, ಆರೋಪಿಗೆ ಸಂವಿಧಾನದತ್ತ ಮೂಲಭೂತ ಹಕ್ಕನ್ನು ಕೊಡದಾಯಿತು. ಆಜಾದ್ ಕೊಲೆ ಸಾಕೇತ್‌ನನ್ನು ನೆನಪಿಸುತ್ತದೆ. ಯಾವುದೆ ಆರೋಪ ಹೊಂದಿರದ ಸಾಕೇತ್‌ನನ್ನು ಕರ್ನಾಟಕ ಪೋಲೀಸರು ನಿರ್ದಾಕ್ಷಿಣ್ಯವಾಗಿ ಕೊಂದು ಶವವನ್ನು ತಾವೆ ಅಗ್ನಿಗೆ ಕೊಟ್ಟಿದ್ದರು. "ಇನಿತ ಸುಟ್ಟು; ಕತ್ತರಿಸಿ ಗಲ್ಲಿಗೇರಿಸಿದವರ ದಫನ್ನಿಗೆ ಜನ ಸೇರದಂತೆ ಆದೇಶಿಸಬಲ್ಲಿರಿ ನೀವು". (ರಮೇಶ ಅರೋಲಿ). ನಕ್ಸಲ್‌ರ ವಿರುದ್ಧ ಪ್ರಕರಣಗಳಿದ್ದರೆ ಅವರನ್ನು ನ್ಯಾಯಾಲಯಕ್ಕೆ ತಂದು ಅವರ ಅಪರಾಧಗಳನ್ನು ಸಾಬೀತುಪಡಿಸುವ ದಾಖಲೆ ಸಲ್ಲಿಸಿ ಶಿಕ್ಷೆ ಕೊಡಿಸಬಹುದಲ್ಲವೆ?

ಇಲ್ಲ. ಪ್ರಭುತ್ವ "ಹೆಚ್ಚೆಂದರೆ ತುಪಾಕಿ ಎದೆಗೇರಿಸಿ ತುಂಡರಿಸಬಲ್ಲಿರಿ ನೀವು, ಇಲ್ಲ, ಎನ್‌ಕೌಂಟರಿನಲಿ ಸಾವ ನಿರೀಕ್ಷಿಸಬಲ್ಲಿರಿ



ಸ್ವಾಮಿ ಅಗ್ನಿವೇಶಾನಂದರೊಂದಿಗೆ ಆಜಾದ್ ಸರ್ಕಾರದೊಂದಿಗಿನ ಮಾತುಕತೆ ಕುರಿತು ನಿರಂತರ ಸಂಪರ್ಕದಲ್ಲಿದ್ದರೆಂದು ಸ್ವತ: ಸ್ವಾಮಿಗಳು ಹೇಳಿದ್ದಾರೆ. ಉನ್ನತ ಮೂಲಗಳಿಂದ ಆದೇಶವಿಲ್ಲದೆ ಆಜಾದ್‌ನಂತಹ ನಾಯಕನನ್ನು "ಎನ್‌ಕೌಂಟರ್"ನಲ್ಲಿ ಕೊಲ್ಲಲು ಸಾಧ್ಯವಿಲ್ಲ. ಒಂದು ಕಡೆ, ಮಾತುಕತೆಗೆ ಮುಂಚೆ ನಕ್ಸಲರು ಹಿಂಸೆ ತ್ಯಜಿಸಬೇಕೆನ್ನುವ ಪ್ರಭುತ್ವ, ಆರೋಪಿಗೆ ಸಂವಿಧಾನದತ್ತ ಮೂಲಭೂತ ಹಕ್ಕನ್ನು ಕೊಡದಾಯಿತು. ಆಜಾದ್ ಕೊಲೆ ಸಾಕೇತ್‌ನನ್ನು ನೆನಪಿಸುತ್ತದೆ. ಯಾವುದೆ ಆರೋಪ ಹೊಂದಿರದ ಸಾಕೇತನನ್ನು ಕರ್ನಾಟಕ ಪೋಲೀಸರು ನಿರ್ದಾಕ್ಷಿಣ್ಯವಾಗಿ ಕೊಂದು ಶವವನ್ನು ತಾವೆ ಅಗ್ನಿಗೆ ಕೊಟ್ಟಿದ್ದರು.

"ನೀವು" (ರಮೇಶ ಅರೋಲಿ). ಭಗತಸಿಂಗ್ ಯಾವ ರೀತಿ ನ್ಯಾಯಾಲಯವನ್ನು ತನ್ನ ಸಿದ್ಧಾಂತವನ್ನು ಪ್ರಚುರ ಪಡಿಸಲು – ಬ್ರಿಟಿಷ್ ಸಾಮ್ರಾಜ್ಯದ ವಿರುದ್ಧದ ಹೋರಾಟಕ್ಕೆ ಬಳಸಿಕೊಂಡಿದ್ದನೋ, ಹಾಗೆ ಎಲ್ಲಿ ಈ ನಕ್ಸಲರು ನ್ಯಾಯಾಲಯದಲ್ಲಿ ಪ್ರಭುತ್ವವನ್ನು ಬೆತ್ತಲೆ ಮಾಡುವರೆಂಬ ಭಯವೋ? ಈ ರೀತಿ ಎನ್‌ಕೌಂಟರ್‌ಗಳಲ್ಲಿ ಕೊಲೆ ಮಾಡಿದರೆ ನಕ್ಸಲ್ ಚಟುವಟಿಕೆಗಳು ಬೆಳೆಯುವ ಸಾಧ್ಯತೆಗಳೆ ಹೆಚ್ಚು. 1967ರಲ್ಲಿ ನಕ್ಸಲ್ ಎಂಬ ಚಿಕ್ಕಹಳ್ಳಿಯಲ್ಲಿ ಶೋಷಕ ಜಮೀನ್ದಾರಿಕೆ ವಿರುದ್ಧ ಬಂಡೆದ್ದ ರೈತರ ಚಳುವಳಿ ಇಂದು ನಕ್ಸಲ್/ಮಾವೋ ಚಳುವಳಿ ಎಂದು ದೇಶದ ಸುಮಾರು 25 ರಾಜ್ಯಗಳಲ್ಲಿ ಹರಡಿ ಕೊಂಡಿದೆ.

ಕಾಮ್ರೇಡ್ ಆಜಾದ್ ಹತ್ಯೆ ಮಾತುಕತೆಗೆ ಸಿದ್ಧರಾಗುತ್ತಿದ್ದ ನಕ್ಸಲರನ್ನು ಪ್ರತಿಹಿಂಸೆಗೆ ಪ್ರಚೋದಿಸದಿರಲಾರದು. ನಕ್ಸಲ್ ನಾಯಕರು ಈ ಕುರಿತು ಈಗಾಗಲೆ ಹೇಳಿಕೆಗಳನ್ನು ಕೊಟ್ಟಿದ್ದಾರೆ. ತಮ್ಮ ಅಸ್ಪಷ್ಟ ನಿರ್ಣಯಗಳಿಂದ ಹಣಕಾಸು ಮಂತ್ರಾಲಯಕ್ಕೆ ಒಂದು "ಗತಿ" ಕಾಣಿಸಿದ ಚಿದಂಬರಂ ಈಗ ಗೃಹಖಾತೆಯನ್ನು ಸಂಕಷ್ಟಕ್ಕೆ ತಳ್ಳಿದರೆ ಆಶ್ಚರ್ಯಪಡಬೇಕಾಗಿಲ್ಲ. ಅಮೇರಿಕಾದಲ್ಲಿನ "ರಿಯಲ್ ಎಸ್ಟೇಟ್ ಗುಳ್ಳೆ' ಒಡೆದು ವಿಶ್ವ ಆರ್ಥಿಕ ಸಂಕಷ್ಟ ಎದುರಾದಾಗ ಅದನ್ನು ನಿರ್ವಹಿಸಲಾಗದ ಚಿದಂಬರಂ ಅವರನ್ನು ಗೃಹಖಾತೆಗೆ ವರ್ಗಾಯಿಸಲಾಯಿತು.

ಹಾರ್ವರ್ಡ್ ವಿಶ್ವವಿದ್ಯಾಲಯದಲ್ಲಿ "ಅಭ್ಯಾಸ" ಮಾಡಿರುವ ಚಿದುಗೆ ಬೇರುಮಟ್ಟದ ಸಮಸ್ಯೆಗಳು ತಿಳಿಯುವುದಾದರು ಹೇಗೆ? ಅರ್ಥಶಾಸ್ತ್ರದ "ಟ್ರಿಕಲ್ ಡೌನ್" ಎಂಬ ಅಪ್ರಸ್ತುತ ಸಿದ್ಧಾಂತವನ್ನು 'ನೆಚ್ಚಿಕೊಂಡಿರುವ' ಚಿದು ಮತ್ತು ಪಟಾಲಂಗೆ ಆದಿವಾಸಿಗಳು "ಅಭಿವೃದ್ಧಿ" ಗೆ ತೊಡಕಾಗಿ ಕಂಡುಬರುತ್ತಿದ್ದಾರೆ. ಇವರ ಬೆಂಬಲಕ್ಕೆ ನಿಂತ ನಕ್ಸಲರು ಈ ದೇಶದ ಆಂತರಿಕ ಭದ್ರತೆಗೆ ಮಾರಕವಾಗಿ ಕಂಡುಬರುತ್ತಿದ್ದಾರೆ. ಗೃಹಖಾತೆಯ ಜವಾಬ್ದಾರಿಯುತ ಸ್ಥಾನದಲ್ಲಿರುವ ಚಿದಂಬರಂ ತಮ್ಮ ಮಾತಿನ ಬಗ್ಗೆ ಪ್ರಬುದ್ಧತೆ ಮತ್ತು ಬದ್ಧತೆ ತೋರಿಸಿರುವ ಉದಾಹರಣೆಗಳಿಲ್ಲ. ಒಮ್ಮೆ ಮಾವೋವಾದಿಗಳನ್ನು ಹಿಂಸೆ ತ್ಯಜಿಸಲು ಕರೆನೀಡುವ ಚಿದು, ಅದೇ ಸಮಯದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ CRPFನ್ನು ಕಳುಹಿಸುತ್ತಾರೆ. ದೆಹಲಿಯಲ್ಲಿ ಯುದ್ಧ ವಿರಾಮ ಮಾಡಲಾಗುವುದೆಂದು ಹೇಳಿ, ತಮಿಳುನಾಡಿನಲ್ಲಿ ತಮ್ಮ ಹುಟ್ಟುಹಬ್ಬದಂದು 'ನನ್ನ ರಕ್ತದ ಕೊನೆ ಹನಿಯವರೆಗೂ ನಕ್ಸಲರ ವಿರುದ್ಧ ಹೋರಾಡುವುದಾಗಿ 'ವೀರಾ'ವೇಶದಲ್ಲಿ! ಮಾತಾಡುತ್ತಾರೆ. ಪ್ರಭುತ್ವದ ದಮನಕಾರಿ ನೀತಿ ಮತ್ತು ಪ್ರತಿಹಿಂಸೆಯ ಕುರಿತು ಪುನರ್ವಾಲೋಕಿಸುವ ಅವಶ್ಯಕತೆ ಇದೆ.

ಈ ದೇಶಕ್ಕೆ ಸ್ವಾತಂತ್ರ್ಯ ಬಂದು ಆರು ದಶಕಗಳೇ ಕಳೆದರು ಇನ್ನೂ ಈ ದೇಶದ ಕಟ್ಟ ಕಡೆಯ ಮನುಷ್ಯ ಕನಿಷ್ಠ ಮೂಲಭೂತ ಸೌಲಭ್ಯಗಳಿಗಾಗಿ ಪರದಾಡುವಂತಾಗಿದೆ. ಆರಿಸಿದ ಸರ್ಕಾರಗಳು ಕೇವಲ ಅಧಿಕಾರದ ಲಾಲಸೆಗೆ ಬಿದ್ದು ಎಂಥ ನಾಚಿಕೆಗೇಡು ಪರಿಸ್ಥಿತಿ ತಲುಪಿವೆ ಎಂಬುದನ್ನು ಪ್ರತಿದಿನ ಪತ್ರಿಕೆ ಮತ್ತು ಸಮೂಹ ಮಾಧ್ಯಮಗಳಲ್ಲಿ ನಾವೆಲ್ಲ ಓದುತ್ತಿದ್ದೇವೆ, ನೋಡುತ್ತಿದ್ದೇವೆ. ಪ್ರಪಂಚದಲ್ಲಿ ದೊಡ್ಡ ಪ್ರಜಾಪ್ರಭುತ್ವ ವ್ಯವಸ್ಥೆಯೆನಿಸಿರುವ ಇಲ್ಲಿ ದಿನನಿತ್ಯ ಎಲ್ಲಾ ಕ್ಷೇತ್ರಗಳಲ್ಲೂ ಪ್ರತಿಭಟನೆಗಳು ನಡೆಯುತ್ತಿವೆ. – ಈ ಹೋರಾಟಗಳನ್ನು ಹತ್ತಿಕ್ಕಲು ಸರ್ಕಾರಗಳು ನಾನಾ ತಂತ್ರಗಳನ್ನು ಹೆಣೆಯುತ್ತಿವೆ. ಇನ್ನು ಹಿಂದುಳಿದ, ಅಲ್ಪಸಂಖ್ಯಾತ ದಲಿತ-ಗಿರಿಜನರ ಬದುಕಂತು

ಈ ದೇಶಕ್ಕೆ ಸ್ವಾತಂತ್ರ್ಯ ಬಂದು ಆರು ದಶಕಗಳೇ ಕಳೆದರು ಇನ್ನು ಈ ದೇಶದ ಕಟ್ಟ ಕಡೆಯ ಮನುಷ್ಯ ಕನಿಷ್ಠ ಮೂಲ ಭೂತ ಸೌಲಭ್ಯಗಳಿಗಾಗಿ ಪರದಾಡು ವಂತಾಗಿದೆ. ಆರಿಸಿದ ಸರ್ಕಾರಗಳು ಕೇವಲ ಅಧಿಕಾರದ ಲಾಲಸೆಗೆ ಬಿದ್ದು ಎಂಥ ನಾಚಿಕೆಗೇಡು ಪರಿಸ್ಥಿತಿ ತಲುಪಿವೆ ಎಂಬುದನ್ನು ಪ್ರತಿದಿನ ಪತ್ರಿಕೆ ಮತ್ತು ಸಮೂಹ ಮಾಧ್ಯಮಗಳಲ್ಲಿ ನಾವೆಲ್ಲ ಓದುತ್ತಿದ್ದೇವೆ, ನೋಡುತ್ತಿದ್ದೇವೆ.

ಮತ್ತಷ್ಟು ಸಂಕಷ್ಟಕ್ಕೀಡಾಗುತ್ತಿದೆ. ಕೇವಲ ಬಾಯಿ ಮಾತಿನ ಅಭಿವೃದ್ಧಿ ಮಂತ್ರ ಜಪಿಸುತ್ತಿರುವ ಕೇಂದ್ರ / ರಾಜ್ಯ ಸರ್ಕಾರಗಳ ಇತ್ತೀಚಿನ ಘೋಷಣೆಗಳನ್ನೇ ನೋಡಿದರೆ...

ವಿಶೇಷ ಆರ್ಥಿಕ ವಲಯಗಳ ಸೃಷ್ಠಿ, ಸಾಂಪ್ರದಾಯಿಕ ಬೀಜಗಳ ಬದಲಾಗಿ ಬಿ.ಟಿ ಬೀಜಗಳ ಮಾರಾಟ, ಫಲವತ್ತತೆ ಹಾಳುಮಾಡುವ ರಸಗೊಬ್ಬರ, ಕಳಪೆಮಟ್ಟದ ಕೀಟನಾಶಕ, ಕಾರ್ಪೋರೇಟ್‌ಗಳಿಗೆ ಕೋಟ್ಯಾಂತರ ತೆರಿಗೆ ವಿನಾಯಿತಿ.. ಹೀಗೆ. ಈ ರೀತಿಯಾದ ನೀತಿಗಳು ರೈತರ ಆತ್ಮಹತ್ಯೆಗೆ, ಬಡವರನ್ನು ಇನ್ನೂ ಬಡತನಕ್ಕೆ ತಳ್ಳಿ ಸಮಾಜದಲ್ಲಿ ಭಯ, ಅತಂತ್ರತೆ, ಅಭದ್ರತೆ ಸೃಷ್ಠಿಸುತ್ತಿವೆ. ಸ್ವಾತಂತ್ರ್ಯ ನಂತರದ 60 ವರ್ಷಗಳಲ್ಲಿ ಕೆಲವೇ ಕೆಲವು ಪ್ರದೇಶಗಳನ್ನು ಹೊರತುಪಡಿಸಿದರೆ, ಅನೇಕ ಪ್ರದೇಶಗಳು ತೀರಾ ಹಿಂದುಳಿದಿವೆ. ಆಶ್ಚರ್ಯವೆಂದರೆ ಚತ್ತೀಸ್‌ಘಡ, ಮಧ್ಯಪ್ರದೇಶ, ಬಿಹಾರ, ಉತ್ತರಪ್ರದೇಶ, ತೆಲಂಗಾಣ, ವಿಧರ್ಭ ಸೇರಿದಂತೆ ಹೈದ್ರಾಬಾದ್-ಕರ್ನಾಟಕ ನೈಸರ್ಗಿಕ ಸಂಪನ್ಮೂಲಗಳಿಂದ ಕೂಡಿದ್ದರೂ ಅಭಿವೃದ್ಧಿ ದೂರದ ಮಾತಾಗಿದೆ.

* 60ವರ್ಷಗಳಲ್ಲಿ ಈ ಪ್ರದೇಶಗಳ ಅಭಿವೃದ್ಧಿ ಕಡೆಗಣಿಸಿದ ಪ್ರಭುತ್ವ ಈಗ ಒಮ್ಮಿಂದೊಮ್ಮೆಲೆ ಈ "ಅಭಿವೃದ್ಧಿ"ಯ ಜ್ಞಾನೋದಯಕ್ಕೆ ಕಾರಣವೇನು?
* ದೇಶದ ಸಂಪತ್ತು ಲೂಟಿ ಮಾಡಲು ಬರುವ ವಿದೇಶಿ ಕಂಪನಿಗಳಿಗೆ ತಡೆಯೊಡ್ಡಿರುವ ಹಲವಾರು ಜನಪರ ಚಳುವಳಿಗಳಲ್ಲಿ ನಕ್ಸಲ್ ಚಳುವಳಿ ಒಂದು. ಅಪಾರ ಜನ ಬೆಂಬಲವಿರುವ ಈ ಚಳುವಳಿ ಸಕ್ರಿಯವಾಗಿರುವ ಪ್ರದೇಶಗಳನ್ನು ಮಾತ್ರ ಸರ್ಕಾರ ಅಭಿವೃದ್ಧಿ ಪಡಿಸಲು ಯಾಕೆ ಆಸಕ್ತಿ ತೋರುತ್ತಿದೆ?
* ನಕ್ಸಲರು ಈ ಪ್ರದೇಶಕ್ಕೆ ಹೋಗುವುದಕ್ಕಿಂತ ಮುಂಚೆ 60ವರ್ಷಗಳಿಂದ ಸರ್ಕಾರ ಏನು ಮಾಡುತ್ತಿತ್ತು?

ಮಾವೋವಾದಿ/ನಕ್ಸಲರ ನಿರ್ಮೂಲನೆಗಾಗಿ ಕೇಂದ್ರ ಸರ್ಕಾರ, Operation Green Huntನ್ನು ಪ್ರಾರಂಭಿಸಿರುವುದು ತಿಳಿದೆ ಇದೆ. ಈಗಾಗಲೆ ಕೇಂದ್ರದ CRPF ದಲಿತ-ಆದಿವಾಸಿ-ಬುಡಕಟ್ಟು ಜನರಿಂದ ಕೂಡಿದ ನಕ್ಸಲ್ ಪ್ರಾಬಲ್ಯ ಹೊಂದಿರುವ ರಾಜ್ಯಗಳಾದ ಚತ್ತೀಸ್ ಗಢ, ಮಧ್ಯ ಪ್ರದೇಶ, ಆಂಧ್ರ ಪ್ರದೇಶ, ಒರಿಸ್ಸಾ, ಬಿಹಾರದ ಪ್ರದೇಶಗಳಲ್ಲಿ ಬೀಡುಬಿಟ್ಟಿವೆ. ಇಲ್ಲಿ CRPFನ ಮುಖ್ಯ ಕಾರ್ಯ ಆದಿವಾಸಿಗಳನ್ನು ಕಾನೂನು ಬಾಹಿರವಾಗಿ ಕೊಲ್ಲುವುದು – ಆದಿವಾಸಿ ಮಹಿಳೆಯರ ಮೇಲೆ ಅತ್ಯಾಚಾರವೆಸಗುವುದು. ಈ Operation Green Hunt ಗೆ ಪ್ರಭುತ್ವ ಕೊಡುತ್ತಿರುವ ಕಾರಣ: "ನಕ್ಸಲ್ ಪೀಡಿತ ಪ್ರದೇಶಗಳು ಅತ್ಯಂತ ಹಿಂದುಳಿದಿದ್ದು ಆ ಪ್ರದೇಶದ ಆದಿವಾಸಿ-ಬುಡಕಟ್ಟು ಜನರ ಜೀವನ ಹಸನುಗೊಳಿಸಲು "ಅಭಿವೃದ್ಧಿ" ಅವಶ್ಯಕ. ಈ ಅಭಿವೃದ್ಧಿಗೆ ಮಾವೋವಾದಿ ನಕ್ಸಲರು ತಡೆಯೊಡ್ಡುತ್ತಿದ್ದಾರೆ".

ಅಭಿವೃದ್ಧಿ ಎಲ್ಲಾ ಕಡೆ ಮತ್ತು ಎಲ್ಲರಿಗಾಗಿ, ವಿಶೇಷವಾಗಿ ಶೋಷಿತ ಸಮುದಾಯ ಮತ್ತು ವರ್ಗಗಳಾದ ದಲಿತ, ಆದಿವಾಸಿ-ಬುಡಕಟ್ಟು ಜನರ, ಅನಕ್ಷರಸ್ತರ, ರೈತ ಮತ್ತು ಕೂಲಿ ಕಾರ್ಮಿಕರಿಗಾಗಿ ಆಗಬೇಕು. ಈ ರೀತಿಯ ಅಭಿವೃದ್ಧಿಗೆ ನಕ್ಸಲರು ಅಡ್ಡಿಪಡಿಸಿದರೆ ಅದು ಸರ್ವಥಾ ಒಪ್ಪತಕ್ಕದ್ದಲ್ಲ. ಆದರೆ ಈ ದೇಶದ ಪ್ರಭುತ್ವ ಬಯಸುತ್ತಿರುವುದು ಇಂತಹ ಅಭಿವೃದ್ಧಿಯಲ್ಲ, ಬದಲಾಗಿ ನವ ವಸಾಹತುಶಾಹಿ ಅಭಿವೃದ್ಧಿ. ನಕ್ಸಲ್ 'ಪೀಡಿತ' ಪ್ರದೇಶಗಳು ಅತ್ಯಂತ ಸಂಪದ್ಭರಿತ ಖನಿಜ ಮತ್ತು ಇತರೆ ನೈಸರ್ಗಿಕ ಸಂಪನ್ಮೂಲಗಳಿಂದ ಕೂಡಿವೆ. ಈ ಶ್ರಿಮಂತ ನೆಲದ ಮೇಲೆ ಕಡು ಬಡವರಾದ, "ಇಂಗ್ಲಿಷ್" ಬರದ ಆದಿವಾಸಿ-ಬುಡಕಟ್ಟು ಜನರು ಬದುಕುತ್ತಿದ್ದಾರೆ.

ಕೇಂದ್ರ ಸರ್ಕಾರವು ಸುಮಾರು 6,00,000 ಕೋಟಿ ರೂಪಾಯಿಗೆ ವಿದೇಶಿ ಕಂಪನಿಗಳೊಂದಿಗೆ ಈ ಪ್ರದೇಶಗಳಲ್ಲಿ ಗಣಿಗಾರಿಕೆಗೆ ಸಹಿ ಹಾಕಿದೆ. ಈ ಜಾಗತಿಕ ಲೂಟಿಕೋರರು ಆದಿವಾಸಿಗಳನ್ನು ಈ ಪ್ರದೇಶಗಳಿಂದ ಖಾಲಿಮಾಡಿಸಲು ಸರ್ಕಾರದ ಮೇಲೆ ಒತ್ತಡ ಹೇರುತ್ತಿದ್ದಾರೆ. ಅದಕ್ಕೆಯೆ ಅಮೇರಿಕಾ ಮತ್ತು ಜಾಗತಿಕ ಸಂಸ್ಥೆಗಳ ಏಜೆಂಟರಂತೆ ವರ್ತಿಸುವ ದೇಶದ "ಘನ" 'ಸನ್ಮಾನ್ಯ ಪ್ರಧಾನ ಮಂತ್ರಿ ಮತ್ತು ಗೃಹಮಂತ್ರಿಗಳಿಗೆ ಒಮ್ಮೆಲೆ ನಕ್ಸಲ್ ಸಮಸ್ಯೆ ದೇಶದ ಆಂತರಿಕ ಭದ್ರತೆಗೆ ಮಾರಕವಾಗಿ ಕಂಡುಬರುತ್ತಿದೆ. ನವ ವಸಾಹತುಶಾಹಿ ಏಜೆಂಟರು ಭಾರತವನ್ನು ವಿಶ್ವಮಾರುಕಟ್ಟೆಯಲ್ಲಿ ಸಂಪೂರ್ಣ ಹರಾಜುಹಾಕಲು ತಯಾರಾಗಿದ್ದಾರೆ. ಜಾಗತೀಕರಣದ ರೂಪದಲ್ಲಿ ಕಾಲಿಟ್ಟಿರುವ ನವ ವಸಾಹತುಶಾಹಿ, ಭಾರತವನ್ನು ಆಫ್ರಿಕಾ ದೇಶಗಳಿಗಿಂತ ಬಡರಾಷ್ಟ್ರವನ್ನಾಗಿಸುವುದರಲ್ಲಿ ಸಂಶಯವಿಲ್ಲ. ಕೇಂದ್ರ ಸರ್ಕಾರಕ್ಕೆ ಈ ಪ್ರದೇಶಗಳಲ್ಲಿನ ನೈಸರ್ಗಿಕ ಸಂಪತ್ತಿನ ಮೇಲೆ ಕಣ್ಣಿದೆಯೇ ಹೊರತು ಬುಡಕಟ್ಟು ಜನರ ಅಭಿವೃದ್ಧಿಯಲ್ಲ.

ವಿದೇಶಿ ಕಂಪನಿಗಳೊಂದಿಗೆ ಮತ್ತು ದೇಶದ ಬಂಡವಾಳಶಾಹಿಗಳೊಂದಿಗೆ ಸರ್ಕಾರ ಮಾಡಿಕೊಂಡಿರುವ ಒಪ್ಪಂದದ ಕರುಡನ್ನು ಬಹಿರಂಗಪಡಿಸುತ್ತಿಲ್ಲ. ಈ ಒಪ್ಪಂದದಿಂದ ಅಲ್ಲಿರುವ ಆದಿವಾಸಿ ಜನರಿಗೆ ಹೇಗೆ ಉಪಯೋಗವಾಗುತ್ತದೆ? ಇದಕ್ಕೆ ಪ್ರಭುತ್ವದ ಹತ್ತಿರ ಉತ್ತರವಿಲ್ಲ. ಆದಿವಾಸಿಗಳು ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುತ್ತಿರುವ ಚತ್ತೀಸ್‌ಗಢ, ಮಧ್ಯಪ್ರದೇಶ, ಆಂಧ್ರಪ್ರದೇಶ, ಒರಿಸ್ಸಾ, ಬಿಹಾರದಲ್ಲಿ ಹೆಚ್ಚಿನ ಪ್ರಮಾಣದ ಬಾಕ್ಸೈಟ್ (ಅಲ್ಯೂಮಿನಿಯಂ) ಇದೆ. ಇದರಿಂದ ಆದಿವಾಸಿಗಳಿಗೆ ಪಾತ್ರೆಗಳನ್ನು ತಯಾರಿಸಿ ಕೊಡಲಾಗುವುದೆಂದು ನಾವು ಊಹಿಸಿದರೆ ಅದು ತಪ್ಪು. ಇದನ್ನು ಬಾಂಬ್ ತಯಾರಿಸಲು ಬಳಸಲು ಅಮೇರಿಕಾ ಕಂಪನಿಗಳು ತುದಿಗಾಲಲ್ಲಿ ನಿಂತಿವೆ.

(ಬಾಕ್ಸೈಟ್ ಬಾಂಬ್ ತಯಾರಿಕೆಯಲ್ಲಿ ಬೇಕಾಗುವ ಪ್ರಮುಖ ವಸ್ತು). ದೇಶದ ಅಮೂಲ್ಯ ನೈಸರ್ಗಿಕ ಸಂಪತ್ತು ಮತ್ತು ವಿದೇಶಿ-ದೇಶಿ ಲೂಟಿಕೋರರ ಮಧ್ಯೆ ಆದಿವಾಸಿಗಳು ನಿಂತಿದ್ದಾರೆ. ಈ ಕಾರಣಕ್ಕೆ ಆದಿವಾಸಿಗಳು ನಕ್ಸಲರ ಬೆಂಬಲ ಪಡೆಯುತ್ತಿದ್ದಾರೆ. ಬ್ರಿಟಿಷ್ ಸಾಮ್ರಾಜ್ಯ ಭಾರತದಲ್ಲಿ ವಿಸ್ತರಣೆಗೊಳ್ಳುವಾಗ ಆದಿವಾಸಿಗಳ ಹೊರ

ತಾಗಿ "ಮುಖ್ಯವಾಹಿನಿ"ಯ ಎಲ್ಲ ಸಂಸ್ಥಾನಗಳು ಒಂದರ ಮೇಲೊಂದು ತಲೆಬಾಗಿದವು. ಕರ್ನಾಟಕದ ಮೈಸೂರು ಒಡೆಯರಂತು ಬ್ರಿಟಿಷ್ ಸಾಮ್ರಾಜ್ಯವಾದದ ಬೂಟನ್ನು ತಲೆಯ ಮೇಲೆ ಹೊತ್ತರು(ಸಾಕಿ). ಆದರೆ ಇಂದು ವಿವಿಧ ರಾಜ್ಯಗಳಲ್ಲಿ ಪ್ರಭುತ್ವದ ಹಸಿರು ಬೇಟೆಯ ಭಯ ದಲ್ಲಿ ಬದುಕುತ್ತಿರುವ ಆದಿವಾಸಿಗಳು ಎಂದೂ ಬ್ರಿಟಿಷರಿಗೆ ಶರಣಾಗಲಿಲ್ಲ. ಅರುಂಧತಿರಾಯ್ ಹೇಳುವ ಹಾಗೆ ದೇಶದ ದುರಂತವೆಂದರೆ ದೇಶದ ಸಂಪನ್ಮೂಲದ ರಕ್ಷ ಣೆಗಾಗಿ ದೇಶದ ಕಡು ಬಡವರು ಜಾಗತಿಕ ಲೂಟಿ ಕೋರರ ವಿರುದ್ಧ ಹೋರಾಡುತ್ತಿದ್ದಾರೆ. ಮಧ್ಯಮ ವರ್ಗ ಮತ್ತು ನವ ಮಧ್ಯಮ ವರ್ಗ ಎಂದಿನಂತೆ ಅಲ್ಪ ಲಾಭಾ ಕ್ಕಾಗಿ ಹಾತೊರೆಯುತ್ತಿದೆ ಮತ್ತು ಜಾಗತೀಕರಣವನ್ನು ಅಭಿವೃದ್ಧಿಯ ಏಕೈಕ ಮಾರ್ಗವೆಂಬಂತೆ ಸಮರ್ಥಿಸುತ್ತಿದೆ.

ಒಂದು ಪ್ರದೇಶದ ಅಭಿವೃದ್ಧಿ ಸಲುವಾಗಿ ಪ್ರಭುತ್ವ ಕಳುಹಿಸಿಕೊಡಬೇಕಾದುದು ವೈದ್ಯರನ್ನು, ಶಿಕ್ಷಕರನ್ನು. ಆದರೆ ಸರ್ಕಾರ ಕಳುಹಿಸುವುದು ಪೊಲೀಸರನ್ನು, ಸೇನೆ ಯನ್ನು. ಇದು ಅಭಿವೃದ್ಧಿಯೆ? ಸಾಮಾಜಿಕ-ಆರ್ಥಿಕ-ರಾಜಕೀಯ ಸಮಸ್ಯೆಗಳನ್ನು ಈ ರೀತಿ 'ರಕ್ಷಣಾ ಕೇಂದ್ರಿತ" ವಿಧಾನದಿಂದ ಬಗೆಹರಿಸಲು ಹೋಗಿ ಸಣ್ಣ ಸಮಸ್ಸೆಗಳಾದ ಕಾಶ್ಮೀರ, ಈಶಾನ್ಯ ರಾಜ್ಯಗಳ ಪ್ರತ್ಯೇಕತೆಯ ಕೂಗು, ಗೂರ್ಕಾ ಪ್ರಶ್ನೆ - ಇಂದು ಬಗೆಹರಿಯದ ಸಮ ಸ್ಯೆಗಳಾಗಿ ಪರಿಣಮಿಸಿವೆ.

ಇಲ್ಲಿನ ಜನರಿಗೆ ಭಾರತವೆಂದರೆ ಕಾಣಿಸುವುದು ಕೇವಲ CRPF, Indian Army, BSF. ಇಲ್ಲಿನ ಮಹಿಳೆ ಯರಿಗೆ ಪೊಲೀಸ್-ಭಾರತೀಯ ಸೇನೆ ಗೊತ್ತಿರುವುದು ಕಾಮುಕ ಅತ್ಯಾಚಾರಿಗಳ ರೂಪದಲ್ಲಿ ಮಾತ್ರ. Armed Force Act, POTA, UAPA ಕಾಯ್ದೆಗಳಡಿಯಲ್ಲಿ ಅಮಾಯಕ ಅಲ್ಪಸಂಖ್ಯಾತ ಮುಸ್ಲಿಮರನ್ನು, ದಲಿತ-ಆದಿವಾಸಿಗಳನ್ನು ಹಿಂಸಿಸುವುದು, ಕಾನೂನು ಬಾಹಿರ "ಎನ್‌ಕೌಂಟರ್"ಗಳಲ್ಲಿ ಕೊಲ್ಲುವುದು ಪ್ರಜಾಸತ್ತಾತ್ಮಕ ದೇಶದಲ್ಲಿ ಮಾನವ ಹಕ್ಕುಗಳ ಉಲ್ಲಂಘನೆಯಲ್ಲವೆ?

ರಾಜ್ಯದ ಸಂಪದ್ಭರಿತ ಮಲೆನಾಡಿನಲ್ಲಿ ನಕ್ಸಲ್ ಸಮಸ್ಯೆ ನೆಪದಲ್ಲಿ ಬುಡಕಟ್ಟು ಜನರ ಪ್ರತಿ ಮನೆಗಳನ್ನು ಶೋಧಿಸಲಾಗುತ್ತಿದೆ. ವಿನಾಕಾರಣ ಅಮಾಯಕರಿಗೆ ಕಿರು ಕುಳ ಕೊಡಲಾಗುತ್ತಿದೆ. ಅದೇ ರೀತಿ 'ಶಂಕಿತ' ನಕ್ಸಲ ರನ್ನು ಅನಧಿಕೃತ ಬಂಧನದಲ್ಲಿ ಇಡುತ್ತಿರುವುದು ಪತ್ರಿಕೆ ಗಳಲ್ಲಿ ವರದಿಯಾಗಿದೆ. ಇಂತಹ ಘಟನೆಗಳು ಈ ದೇಶ ದಲ್ಲಿ ಪ್ರಜಾಪ್ರಭುತ್ವ ಅಸ್ತಿತ್ವದಲ್ಲಿದೆಯೇ ಎಂಬ ಅನು ಮಾನ ಮೂಡಿಸುತ್ತದೆ. ದೇಶದ ಪೊಲೀಸ್ - ಸೇನೆಯ ಮಾನವೀಕರಣವಾಗಲು ಇನ್ನೂ ನೂರು ವರ್ಷಗಳಾದರು ಬೇಕಾಗಬಹುದೇನೊ. ಇದೇ ರಾಜ್ಯದಲ್ಲಿ ದಲಿತರನ್ನು ಜೀವಂತ ಸುಟ್ಟ (ಕಂಬಾಲಹಳ್ಳಿ ಪ್ರಕರಣ) ಮಹಿಳೆ ಯರನ್ನು ನಗ್ನಗೊಳಿಸಿ ಅವಮಾನಿಸಿದ, ಅತ್ಯಾಚಾರವೆಸ ಗಿದ, ದಲಿತರನ್ನು ಬಹಿಷ್ಕರಿಸಿದವರಿಗೆ ತಮ್ಮ ಅಳಿ ಯಂದರ ಹಾಗೆ ನೋಡಿಕೊಳ್ಳುವ ಪೊಲೀಸ್ (ಪ್ರಭುತ್ವ) ರಿಗೆ ಯಾವುದೆ [ವಿಶೇಷ] ಕಾನೂನುಗಳು ನೆನಪಿಗೆ ಬರುವುದಿಲ್ಲ. ರಾಜ್ಯದ ಸಂಪನ್ಮೂಲವನ್ನು ಹಾಡುಹಗಲೆ ಲೂಟಿ ಮಾಡುತ್ತಿರುವವರು ಈ ರಾಜ್ಯದ ಗಣಿ ಮಂತ್ರಿ ಗಳು ಇವರಾರೂ ಈ ದೇಶದ ಪ್ರಜಾಪ್ರಭುತ್ವಕ್ಕೆ, ಅಭಿವೃ ದ್ಧಿಗೆ, ಆಂತರಿಕ ಭದ್ರತೆಗೆ ಮಾರಕವಾಗಿ ಪ್ರಧಾನ ಮಂತ್ರಿ ಮತ್ತು ಗೃಹಮಂತ್ರಿಗೆ ಕಂಡುಬರುತ್ತಿಲ್ಲ.

ಆದಿವಾಸಿಗಳಿಗೆ ಕಾಡಿನ ಮೇಲಿರುವ ಸಾಂಪ್ರದಾ ಯಿಕ ಹಕ್ಕು ಅವರ ಜನ್ಮಸಿದ್ಧ ಹಕ್ಕಾಗಿದೆ. ಶತಮಾನಗ ಳಿಂದ ಕಾಡಿನೊಂದಿಗೆ, ಕಾಡಿನಲ್ಲಿ ವನ್ಯಜೀವಿಗಳೊಂದಿಗೆ ಬದುಕುತ್ತಿರುವ ಅವರಿಂದಲೆ ದೇಶದ ಸಂಪತ್ತು ಉಳಿ ದಿದೆ. ನಕ್ಸಲ್ ಚಳುವಳಿಗೆ ಕೆಳವರ್ಗದ, ದಲಿತರ ಮತ್ತು ಆದಿವಾಸಿಗಳ ಬೆಂಬಲವಿದೆ. ಈ ಸಮುದಾಯಗಳನ್ನು ದೇಶದ ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆ 'ರಚನಾತ್ಮಕ ಹಿಂಸೆ'ಗೆ ಗುರಿಪಡಿಸಿದುದೆ ಇದಕ್ಕೆ ಕಾರಣ. ಕೆಲವು ಗಾಂಧಿವಾದಿಗಳು - ಸ್ಥಾವರ ಲೋಹಿಯವಾದಿಗಳು ನಕ್ಸ ಲರು ಹಿಂಸೆ ಬಿಟ್ಟು ಅಹಿಂಸಾತ್ಮಕ ಪ್ರಜಾತಾಂತ್ರಿಕ ಹೋರಾಟದ ಮೂಲಕ ಹೋರಾಟ ಮಾಡಬೇಕೆಂದು ತಮ್ಮದಂತ ಗೋಪುರಗಳಲ್ಲಿ ಕುಳಿತು ಪ್ರವಚನ ಕೊಡು ತ್ತಿರುತ್ತಾರೆ.

ಸತ್ಯಾಗ್ರಹ ಮೂಲಕ ಸಮಸ್ಯೆ ಕುರಿತು ಗಮನ ಸೆಳೆಯಬೇಕೆಂಬುದು ಇವರ ಆಂಬೋಣ. ದಿನಾಲು ಉಪವಾಸವಿರುವವರಿಗೆ ಎಂಥ ಸತ್ಯಾಗ್ರಹ. ನಕ್ಸಲರು ಶಾಲೆಗಳನ್ನು ಧ್ವಂಸ ಮಾಡುತ್ತಾರೆ, ಅವರು ಅಭಿವೃದ್ಧಿ ವಿರೋಧಿ ಎಂದೆಲ್ಲ ಕೆಲವರು ವಾದ ಮಾಡುತ್ತಾರೆ. ನಕ್ಸ ಲರು ಪ್ರಬಲವಾಗಿರುವ ಪ್ರದೇಶಗಳಲ್ಲಿ ಪೊಲೀಸರು ಮತ್ತು ಕೇಂದ್ರ ದಳ ಶಾಲೆಗಳನ್ನು ತಮ್ಮ ಚೌಕಿ ಮಾಡಿ ಕೊಂಡಿದ್ದಾರೆ. ಅದಕ್ಕೆ ಅವು ನಕ್ಸಲರ ದಾಳಿಗೆ ಗುರಿಯಾ ಗುತ್ತವೆ. ಈ ಅಂಶವನ್ನು ಏಕೆ ಮರೆಮಾಚಲಾಗುತ್ತದೆ. ಮಣಿಪುರ ಮತ್ತು ಇತರೆ ಈಶಾನ್ಯ ರಾಜ್ಯಗಳಲ್ಲಿ ಕೇಂದ್ರ ದಳ ಮತ್ತು ಸೈನ್ಯಕ್ಕೆಂದೆ ಸೇನೆಯ ಚೌಕಿ ಪಕ್ಕದಲ್ಲೆ ವೇಶ್ಯಾ ಗೃಹವಿದ್ದುದು ಗೃಹಮಂತ್ರಿ ಚಿದಂಬರಂಗೆ ಗೊತ್ತಿಲ್ಲವೆ.

ಇಂದು ದೇಶದ ನಾನಾ ಭಾಗದಲ್ಲಿ ಕೆಳವರ್ಗದ ಸಮಸ್ಯೆಗಳನ್ನು ಕೇಳುವ ಪ್ರಜಾತಾಂತ್ರಿಕ ವ್ಯವಸ್ಥೆಯ ಯಾವುದೆ ಸಂಸ್ಥೆಗಳು ಇಲ್ಲ. ನರ್ಮದಾ ಅಣೆಕಟ್ಟಿನಲ್ಲಿ ಜಮೀನು ಕಳೆದುಕೊಂಡು ಪುನರ್ವಸತಿ ಕಲ್ಪಿಸಬೇಕೆಂದು ಮೇಧಾ ಪಾಟ್ಕರ್ ನೇತೃತ್ವದಲ್ಲಿ ಹೋರಾಡುತ್ತಿರುವವರು ನ್ಯಾಯಾಲಯದ ಮೊರೆ ಹೋದರೆ, ನ್ಯಾಯಾಲಯ ಅಣೆಕಟ್ಟು ಮುಂದುವರೆಸಲು ಸರ್ಕಾರಕ್ಕೆ ಆದೇಶ ಕೊಟ್ಟು ಪುನರ್ವಸತಿಯ ಸಮಸ್ಯೆಯ ಬಗ್ಗೆ ಮೌನ ವಹಿಸಿತು. ಅದೇ ರೀತಿ ಇಡಿ ಕರ್ನಾಟಕದ ಜನರೆ ಅಕ್ರಮ ಗಣಿಗಳ ವಿರುದ್ಧ ಮಾತನಾಡುವಾಗ ಸರ್ವೋಚ್ಚ ನ್ಯಾಯಾಲಯ ಜನಾರ್ಧನ ರೆಡ್ಡಿಯ ಗಣಿ ವ್ಯವಹಾರ ಮುಂದುವರೆಸಲು ಹೇಳಿತು. ಆದಿವಾಸಿಗಳು ತಮ್ಮ ಸಮಸ್ಯೆಗಳನ್ನು ಎಲ್ಲಿ, ಯಾರಿಗೆ ಹೇಳಬೇಕು? ಇವರನ್ನು ಹೇಗಾದರೂ ಮಾಡಿ ದಮನಿಸಬೇಕೆಂಬ ಪ್ರಭುತ್ವದ ಬಳಿಯೆ ಅಥವಾ ದಂತ ಗೋಪುರದಲ್ಲಿ ಕುಳಿತು ಮಾತಾಡುವ ಸ್ಥಾವರ ವಾದಿಗ ಳಲ್ಲಿಯೆ? 30 ವರ್ಷಗಳಲ್ಲಿ ಇವರಿಗಾಗಿ ದುಡಿದವರು ನಕ್ಸಲರು.

ಒಂದು ಪ್ರದೇಶದ ಅಭಿವೃದ್ಧಿ ಸಲುವಾಗಿ ಪ್ರಭುತ್ವ ಕಳುಹಿಸಿಕೊಡಬೇಕಾದುದು ವೈದ್ಯರನ್ನು, ಶಿಕ್ಷಕರನ್ನು. ಆದರೆ ಸರ್ಕಾರ ಕಳುಹಿಸುವುದು ಪೊಲೀಸರನ್ನು, ಸೇನೆ ಯನ್ನು. ಇದು ಅಭಿವೃದ್ದಿಯೆ? ಸಾಮಾ ಜಿಕ-ಆರ್ಥಿಕ-ರಾಜಕೀಯ ಸಮಸ್ಯೆಗಳನ್ನು ಈರೀತಿ 'ರಕ್ಷಣಾ ಕೇಂದ್ರಿತ" ವಿಧಾನ ದಿಂದ ಬಗೆಹರಿಸಲು ಹೋಗಿ ಸಣ್ಣ ಸಮ ಸ್ಸೆಗಳಾದ ಕಾಶ್ಮೀರ, ಈಶಾನ್ಯ ರಾಜ್ಯಗಳ ಪ್ರತ್ಯೇಕತೆಯ ಕೂಗು, ಗೂರ್ಕಾ ಪ್ರಶ್ನೆ - ಇಂದು ಬಗೆಹರಿಯದ ಸಮಸ್ಯೆಗಳಾಗಿ ಪರಿಣಮಿಸಿವೆ

ಅದಕ್ಕೆ ಆದಿವಾಸಿಗಳು ನಕ್ಸಲರ ಬೆಂಬಲಕ್ಕೆ ನಿಂತಿ ರುವುದು ಸಹಜವೆ. ಭೂಮಿ ಇಲ್ಲದಿರುವುದು, ಭೂ ಸುಧಾರಣೆಗಳ ಸಂಪೂರ್ಣ ವಿಫಲತೆ, ಕನಿಷ್ಠ ಕೂಲಿ ಸಿಗ ದಿರುವುದು, ಉಳ್ಳವರು ಸಮುದಾಯದ ಸಂಪನ್ಮೂಲಗ ಳನ್ನು ಕಸಿದುಕೊಳ್ಳುತ್ತಿರುವುದು, ಸಂಪನ್ಮೂಲಗಳ ಕೇಂದ್ರಿ ಕರಣ, ದಲಿತರ ಮತ್ತು ಆದಿವಾಸಿಗಳಿಗೆ ಸಾಮಾಜಿಕ ನ್ಯಾಯ ಮತ್ತು ಗೌರವಾನ್ವಿತ ಬದುಕಿನ ನಿರಾಕಾರಣೆ ಮತ್ತು ಅರಣ್ಯಮೇಲಿನ ಆದಿವಾಸಿಗಳ ಹಕ್ಕುಚ್ಯುತಿ ಮತ್ತು ಅರಣ್ಯದಿಂದ ಹೊರಹಾಕುವಿಕೆ, "ಯೋಜನೆ"ಗಳಿಂದ ನಿರಾಶ್ರಿತರಾದವರಿಗೆ ಪುನರ್ವಸತಿ ಕಲ್ಪಿಸದಿರುವುದು ಜನ ರಲ್ಲಿ ಹತಾಶೆ ಉಂಟುಮಾಡಿದ್ದು ಶಸ್ತ್ರಾಸ್ತ್ರ ಹೋರಾಟಕ್ಕೆ ಶೋಷಿತರನ್ನು ಪ್ರೇರೆಪಿಸುತ್ತಿದೆ. ನಕ್ಸಲ್ ಹೋರಾಟದಲ್ಲಿ ಪ್ರತ್ಯಕ್ಷವಾಗಿ ಪರೋಕ್ಷವಾಗಿ ಪಾಲ್ಗೊಳ್ಳುತ್ತಿರುವ ಶೋಷಿ ತರೆಲ್ಲರಿಗೂ ಮಾವೋನ ಬಗ್ಗೆಯಾಗಲಿ, ಅಥವಾ ಮಾರ್ಕ್ಸ್-ಲೆನಿನ್ ಸಿದ್ಧಾಂತವಾಗಲಿ, ಚೈನಾದಲ್ಲಿ ಆದ ಸಾಂಸ್ಕೃತಿಕ ಚಳುವಳಿ, ಲಾಂಗಮಾರ್ಚ ಯಾವುದೂ ತಿಳಿ ದಿಲ್ಲ. ಆದರೆ ತಮ್ಮ ಹಕ್ಕುಗಳಿಗಾಗಿ, ಪ್ರಭುತ್ವದ ಹಿಂಸೆಯ ವಿರುದ್ಧ ಹೋರಾಟಕ್ಕೆ ಮಾವೋವಾದಿಗಳ ಬೆಂಬಲವೆ ಸೂಕ್ತ ಎಂದು ಅವರಿಗೆ ಅನಿಸಿದೆ.

ಜನ ಬೆಂಬಲವಿರುವ ನಕ್ಸಲ್ ಚಳುವಳಿಯನ್ನು 'ರಕ್ಷಣಾ ಕೇಂದ್ರಿತ', 'ಕಾನೂನು-ಸುವ್ಯವಸ್ಥೆ' ಸಮಸ್ಯೆಯ ದೃಷ್ಟಿಯಿಂದ ನೋಡದೆ 'ದಯವಿರಬೇಕು ಸಕಲರಲ್ಲಿ' ಎನ್ನುವ ಹಾಗೆ ಮಾನವೀಯ ನೆಲೆಗಟ್ಟಿನಿಂದ ಪ್ರಜಾಸತ್ತಾ ತ್ಮಕ ವ್ಯವಸ್ಥೆಯ ಪರಿಧಿಯಲ್ಲಿ ನಕ್ಸಲ್ ಪ್ರಶ್ನೆಗೆ ಉತ್ತರ ಕಂಡು ಹಿಡಿಯಬೇಕು. ತೀವ್ರಗಾಮಿ ಪೀಡಿತ ಪ್ರದೇಶಗ ಳಲ್ಲಿನ ಅಭಿವೃದ್ಧಿ ಸವಾಲುಗಳ ಅಧ್ಯಯನ ಮಾಡಲು ಯೋಜನಾ ಆಯೋಗ ವಿವಿಧ ಕ್ಷೇತ್ರಗಳಲ್ಲಿನ ಪರಿಣಿ ತರನ್ನೊಳಗೊಂಡ (ಪೊಲೀಸ್ ಅಧಿಕಾರಿಗಳು ಕೂಡ ಈ ಸಮಿತಿಯಲ್ಲಿದ್ದರು!) ಸಮಿತಿ 2006ರಲ್ಲಿಯೆ ತನ್ನ ವರದಿ ಸಲ್ಲಿಸಿದೆ. ಈ ಸಮಿತಿ ರಕ್ಷಣಾ ಕೇಂದ್ರಿತ ವಿಧಾನ ಕೈಬಿಟ್ಟು 'ಬಹುಮುಖ ವಿಧಾನ" (Multipronged) ವನ್ನು ಅನುಸರಿಸಲು ಶಿಫಾರಿಸ್ಸಿಸಿದೆ. ನಕ್ಸಲ್ ಚಳುವಳಿ ಒಂದು ರಾಜಕೀಯ ಚಳುವಳಿಯಾಗಿದ್ದು, ಭೂರಹಿತ ಮತ್ತು ಬಡ ರೈತ-ಕಾರ್ಮಿಕ ಮತ್ತು ದಲಿತ ಆದಿವಾಸಿ ಸಮುದಾಯಗಳಲ್ಲಿ ಬಲಿಷ್ಠ ತಳಪಾಯವಿದೆ.

ಸಾಮಾಜಿಕ ನ್ಯಾಯ, ಸಮಾನತೆ, ರಕ್ಷಣೆ ಮತ್ತು ಸ್ಥಳಿಯ ಅಭಿವೃದ್ಧಿಗಾಗಿ ನಕ್ಸಲ್ ಚಳುವಳಿ ಹೋರಾಟದ ಮಾರ್ಗವಾಗಿ ಜನರಿಗೆ ಕಂಡುಬರುತ್ತಿದೆ ಎಂಬುದು ಸಮಿ ತಿಯ ಅಭಿಪ್ರಾಯ. 1991ರಿಂದಿಚೆಗೆ ಕೈಗೊಂಡ ಉದಾರಿ ಕೃತ ಆರ್ಥಿಕ ನೀತಿಗಳೆ ಸಾಮಾಜಿಕ ಅಸಮಾನತೆಯು ಮತ್ತಷ್ಟು ಉಲ್ಬಣಗೊಳ್ಳಲು ಕಾರಣವೆಂದು ಸಮಿತಿ ಸ್ಪಷ್ಟ ವಾಗಿ ಹೇಳಿದೆ. ಈ ಪ್ರದೇಶಗಳ ಸಮಸ್ಯೆಗಳನ್ನು ನಿವಾರಿ ಸಲು ಸರ್ಕಾರದ ವಿವಿಧ ಕಾರ್ಯಕ್ರಮಗಳ ಸರಿಯಾದ ಸಂಯೋಜನೆ - ಅನುಷ್ಠಾನ, ಭೂಸುಧಾರಣೆ, ಆದಿವಾಸಿ ಗಳ ನೈಸರ್ಗಿಕ ಹಕ್ಕುಗಳ ರಕ್ಷಣೆಗೆ ಶಿಫಾರಸ್ಸು ಮಾಡಿದೆ.

ಎಲ್ಲಕ್ಕಿಂತ ಮುಖ್ಯವಾಗಿ ಎನ್‌ಕೌಂಟರಗಳ ಮೇಲೆ ನಿಷೇಧ ಹ್ಯಲು ಒತ್ತಾಯಿಸಿದೆ.

ಸಮಿತಿ ವರದಿ ಸಲ್ಲಿಸಿ ಸುಮಾರು ನಾಲ್ಕು ವರ್ಷಗಳಾದರೂ ಪ್ರಭುತ್ವ ಈ ಸಮಿತಿಯ ಕುರಿತು ಯಾವುದೆ ಕ್ರಮ ಇಲ್ಲಿಯವರೆಗೆ ಕೈಗೊಂಡಿಲ್ಲ. ಕಿರಿತ್ ಪಾರೇಖ ಸಮಿತಿಯ ಪೆಟ್ರೋಲ್ ದರ ಉದಾರೀಕರಣವನ್ನು ತಕ್ಷಣ ಜಾರಿಗೆ ತಂದ ಸರ್ಕಾರ, ಕೇಂದ್ರ ಯೋಜನಾ ಆಯೋಗದ ಪರಿಣಿತ ಸಮಿತಿಯ ಶಿಫಾರಸ್ಸುಗಳ ಬಗ್ಗೆ ವಹಿಸಿರುವ 'ದಿವ್ಯ ಮೌನ'ದ ಬಗ್ಗೆ ಎಲ್ಲರಿಗೂ ತಿಳಿಯದಿರಲಾರದು. ಎನ್‌ಕೌಂಟರ್ ಎಲ್ಲಾ ಅಪರಾಧಗಳಿಗೆ ಪರಿಹಾರವಾದರೆ ಗಂಭಿರ ಆರೋಪಗಳನ್ನು ಎದುರಿಸುತ್ತಿರು ರಾಜಕೀಯ ನಾಯಕರು ಮತ್ತು ಅವರ ಮಕ್ಕಳನ್ನು, ನ್ಯಾಯಾಲಯದಿಂದ ಶಿಕ್ಷೆಗೊಳಗಾದರೂ ಹೊರಗೆ ಮೆರೆಯುತ್ತಿರುವ ಸಿನೆಮಾ ತಾರೆಯರನ್ನು ಏಕೆ ಎನ್‌ಕೌಂಟರಿನಲ್ಲಿ ಹೊಡೆದಾಕಬಾರದು? ಗುಜರಾತಿನಲ್ಲಿ ನಡೆದ ಶಾಬುದ್ಧಿನ್ ಆರೋಪಿತ ನಕಲಿ ಎನ್‌ಕೌಂಟರ್ ಬಗ್ಗೆ ಕಾಂಗ್ರೆಸ್ ನೇತೃತ್ವದ ಕೇಂದ್ರ ಸರ್ಕಾರ ಗಂಭೀರವಾಗಿ ವಿಚಾರಣೆಗಾಗಿ ಸಿ.ಬಿ.ಐನ್ನು ಛೂ ಬಿಟ್ಟಿದೆ.

ಆದರೆ ಆಜಾದ್ ಮತ್ತು ಪಾಂಡೆ ಕುರಿತು ಇದೆ ಸರ್ಕಾರ ಯಾಕೆ ಮೌನವಾಗಿದೆ? 3 ತಿಂಗಳ ಹಿಂದೆಯೆ ಸರ್ವೋಚ್ಚ ನ್ಯಾಯಾಲಯ ಪಪ್ಪು ಯಾದವನನ್ನು ಬಂಧಿಸಲು ಆದೇಶ ಕೊಟ್ಟರೂ ಇಲ್ಲಿವರೆಗೆ ಯಾಕೆ ಬಂಧಿಸಿಲ್ಲ? ಶಾಬುದ್ಧಿನ್ ಪ್ರಕರಣವನ್ನು ತನ್ನ ರಾಜಕೀಯ ವಿರೋಧಿ ವಿರುದ್ಧ ಕಾಂಗ್ರೆಸ್ ಬಳಸುತ್ತಿರುವ ದಾಳ. ಹಾಗೆ ಪಪ್ಪು ಯಾದವನ ಹೆಂಡತಿ ಕಾಂಗ್ರೆಸ್‌ನಲ್ಲಿರುವುದು. ಗೃಹಖಾತೆ ವಹಿಸಿಕೊಂಡಿರುವ ಚಿದಂಬರಂ ಈ ಕುರಿತು ಮಾತನಾಡುವುದೆ ಇಲ್ಲ. ಮುಂಬಯಿ ಮೇಲೆ ದಾಳಿಮಾಡಿದ ಕಸಬ್‌ನ ರಕ್ಷಣೆಯ ಮೇಲೆ ಸಾವಿರಾರು ಕೋಟಿ ರೂಪಾಯಿಗಳ ಖರ್ಚು ಏಕೆ? ಹಳೆಯ ಪ್ರಕರಣಗಳನ್ನು ಕೈಗೆ ಎತ್ತಿಕೊಳ್ಳುತ್ತಿರುವ ಚಿದು, ಬಾಬ್ರಿ ಮಸೀದಿ ಧ್ವಂಸ ಪ್ರಕರಣದ ಆರೋಪಿಗಳ ಪ್ರಕರಣವನ್ನು ಯಾಕೆ ಮುಟ್ಟುತ್ತಿಲ್ಲ? ತಮ್ಮ ಪಕ್ಷದವರಲ್ಲಿ ಕೆಲವರು ಗ್ರೀನ್ ಹಂಟ್ ಕುರಿತು ಟೀಕಿಸುವಾಗ ಏಕೆ ಆರ್.ಎಸ್. ಎಸ್. ಮತ್ತು ಬಿ.ಜೆ.ಪಿ ಚಿದು ಮೇಲೇ ಹೊಗಳಿಕೆಯ ಮಳೆಯನ್ನೇ ಸುರಿಸುತ್ತಿವೆ? "ಮೆದುಳುಗಳಿಗೆ ಹೃದಯ ತರಬೇತಿ ಒಂದು ವಿದ್ರೋಹ, ಕಟಕಟೆಯಲ್ಲಿ ನಿಂತ ಕಾಡುಗಳಿಗೆ ಏನೆಂದು ಉತ್ತರಿಸಬಲ್ಲಿರಿ ನೀವು" (ರಮೇಶ ಅರೋಲಿ).

ಆಜಾದ್ ಹತ್ಯೆ ನ್ಯಾಯಸಮ್ಮತವಲ್ಲ ಎಂಬ ಮಮತಾ ಬ್ಯಾನರ್ಜಿಯ ಹೇಳಿಕೆ ಕುರಿತು ರಾಜ್ಯಸಭೆಯಲ್ಲಿ ಹೇಳಿಕಿಸೆಕೊಡುತ್ತಾ ಚಿದಂಬರಂ, ನಕ್ಸಲ್ ಹೋರಾ ಟಕ್ಕೆ ಬೆಂಬಲ ವ್ಯಕ್ತಪಡಿಸುವ ಹೇಳಿಕೆಗಳು ಕಾನೂನು ಬಾಹಿರ ಎಂದು ಹೇಳಿದ್ದಾರೆ. ಆದರೆ ಹಾರ್ವರ್ಡ್ 'ವ್ಯಾಸಂಗತ' ಗೃಹಮಂತ್ರಿಗಳಿಗೆ ಗೊತ್ತಿಲ್ಲ "ಕಾಯಿದೆ ಗಳನ್ನು ಹೊರಡಿಸಿ ನಿಷೇಧಿಸಲಾಗದು ನಿಟ್ಟುಸಿರು". ಅದಕ್ಕೆ "ಜಗದ ಎಂಥ ಕಲ್ಲಿನ ಮೇಲಾದರು ಕೆತ್ತಿಸು, ಸಿಕ್ಕ ತುಪಾಕಿಯ ಮೇಲಿನ ಬೆರಳ ನಿಶಾನೆ ಕೇವಲ ಮೂರು ವರುಷದ ನನ್ನದೆ ಎಂದು!

ಆಧಾರ ಗ್ರಂಥಗಳು

ರಮೇಶ ಅರೋಲಿ: ಎಳೆಯ ಪಾಪದ ಹೆಸರು ನಿಮ್ಮಿಚ್ಚೆಯಂತೆ ಇಟ್ಟುಕೊಳ್ಳಿ – ಕವನ ಸಂಕಲನ

Saki: Making History. Vol. II

F. Fanon: Wretched of the Earth

□

ಕಾವ್ಯ

ಬೇಲಿಯ ಮೇಲಿನ ಹೂ...



ಬೇಲಿಯ ಮೇಲಿನ ಹೂವು ನಾನು
ಯಾರ ಪೂಜೆಗೂ ಸಲ್ಲದವಳು
ಇನ್ನಾರ ಮುಡಿಗೂ ಏರದವಳು
ನಡೆವವರ ಕಾಲಡಿಗೆ ಸಿಕ್ಕು
ಮಣ್ಣು ಹುಡಿಯಾದವಳು

ಕಾಡು ಮೇಡುಗಳಲ್ಲಿ ನಾನರಳಿ
ನಗವಾಗ
ಬೀಸು ಗಾಳಿಯ ಮೈಹೊಕ್ಕು
ಪರಿಮಳಿಸುವಾಗ
ನಕ್ಕು ಬೆರೆಗಾದವರು
ಇಂದು ನನಗೇಕಿಲ್ಲ?

ಯಾರ ಬಳಿಯಲ್ಲಿ ನಾನು
ಬಾಯ್ದೆರೆದು ಕೇಳಿಲ್ಲ
ಬೊಗಸೆ ನೀರನು ತಂದು
ಹೊಯ್ಯಿರೆಂದು
ನಾನುಟ್ಟಿ ನಾನರಳಿ ಇವರ
ಪಾದಕೆ ದೂಳ

ಎಲ್ಲರಂತೆ ನನಗೆ ಏಕಿಲ್ಲ
ಅಗ್ಗಳಿಕೆ
ನಿಮ್ಮ ತೋಟದಲ್ಲಿರುವ
ಕುಸುಮಗಳಂತೆ.

○ ಮಲ್ಲಿಕಾರ್ಜುನ ಗುಮ್ಮಗೋಳ

ಗೋಹತ್ಯೆ, ಸುಪ್ರೀಂ ಕೋರ್ಟು ಮತ್ತು ಸಂವಿಧಾನ:

ಹಸಿಸುಳ್ಳುಗಳು ಮತ್ತು ಅರ್ಧ ಸತ್ಯಗಳು

ಶಿವಸುಂದರ್

ಬಿಜೆಪಿ ಪಕ್ಷದ ಪ್ರಣಾಳಿಕೆ, ಸಂವಿಧಾನ ಮತ್ತು ತತ್ವ ಸಿದ್ಧಾಂತಗಳು ನಿಂತಿರುವುದೇ ಹಸಿಸುಳ್ಳುಗಳು ಮತ್ತು ಅರ್ಧಸತ್ಯಗಳ ಮೇಲೆ. ಆದರೆ ಹಿಟ್ಲರನ ಪಕ್ಕಾ ಅನುಯಾಯಿಗಳಾಗಿರುವ ಈ ಆಧುನಿಕ ಫ್ಯಾಸಿಸ್ಟರು ಸುಳ್ಳುಗಳನ್ನೇ ಸಾವಿರ ಬಾರಿ ಪಲುಕುತ್ತಾ ಅದನ್ನೇ ಪರಮಸತ್ಯವೆಂದು ಜನರನ್ನು ನಂಬಿಸಿ ದಾರಿ ತಪ್ಪಿಸುತ್ತಿದ್ದಾರೆ. ಇವರು ಎಂಥಾ ನೀತಿಹೀನ ಮತ್ತು ಲಜ್ಜೆಗೆಟ್ಟ ಸುಳ್ಳುಕೋರರು ಎಂದರೆ ತಮ್ಮ ಅನುಕೂಲಕ್ಕೆ ತಕ್ಕಂತೆ ಇತಿಹಾಸವನ್ನೂ, ಸಂವಿಧಾನವನ್ನೂ ಮತ್ತು ಕೋರ್ಟುಗಳ ತೀರ್ಮಾನಗಳನ್ನೂ ತಿರುಚಬಲ್ಲರು ಮತ್ತು ಹಸಿಹಸಿ ಸುಳ್ಳುಗಳನ್ನು ಹೇಳಬಲ್ಲರು.

ಇದೀಗ ತಮ್ಮ ಈ ಗೋಬೆಲ್ಸ್ ಶಸ್ತ್ರಾಸ್ತ್ರಗಳನ್ನು ಅವರು ಸಂಪೂರ್ಣ ಗೋಹತ್ಯಾ ನಿಷೇಧಕ್ಕಾಗಿ ನಡೆಸುತ್ತಿರುವ ಪ್ರಚಾರದಲ್ಲಿ ಬಳಸಿಕೊಳ್ಳುತ್ತಿದ್ದಾರೆ. ಕರ್ನಾಟಕ ಜನತೆಯ ಸತತ ಪ್ರತಿರೋಧ ಮತ್ತು ನಿರಂತರ ಹೋರಾಟಕ್ಕೆ ಮಣಿದು ಸಂಪೂರ್ಣ ಗೋಹತ್ಯೆ ನಿಷೇಧಕ್ಕಾಗಿ ಬಿಜೆಪಿ ಸರ್ಕಾರ ತರುತ್ತಿರುವ ಮಸೂದೆಯನ್ನು ರಾಜ್ಯಪಾಲರು "ಶಾಸನವಾಗಲು ಅನರ್ಹವಾಗಿರುವ ಮತ್ತು ದೇಶದ ಜನತೆಯ ಮೂಲಭೂತ ಹಕ್ಕುಗಳಿಗೆ ಚ್ಯುತಿ ತರುವ ಅಂಶಗಳಿವೆ" ಎಂಬ ಟಿಪ್ಪಣಿಯೊಂದಿಗೆ ರಾಷ್ಟ್ರಪತಿಯವರ ಅವಗಾಹನೆಗಾಗಿ ಕಳಿಸಿಕೊಟ್ಟಿದ್ದಾರೆ. ಇದಾಗಿ ವಾರಗಳೇ ಉಳಿದಿದ್ದರೂ ಸುಮ್ಮನಿದ್ದ ಬಿಜೆಪಿ ಉಪಚುನಾವಣೆಗಳು ಘೋಷಣೆಯಾದೊಡನೆ ಸತ್ತ ಗೋವನ್ನು ಬಡಿದೆಬ್ಬಿಸಿ ತಮ್ಮ ಚುನಾವಣಾ ಪ್ರಚಾರಕ್ಕೆ ಅಟ್ಟಿಕೊಂಡು ಬರುತ್ತಿದ್ದಾರೆ. ಈ ಮೊದಲು ತಮ್ಮ ಸಾಧನೆಯ ಆಧಾರದ ಮೇಲೆ ಜನರ ಬಳಿ ಹೋಗುತ್ತೇವೆ ಎನ್ನುತ್ತಿದ್ದ ಈ ಕೋಮುವಾದಿಗಳು ತಮ್ಮ ಸಾಧನಾ ಸಮಾವೇಶಕ್ಕೆ ಜನರು ಬರುವುದೇ ಕಷ್ಟ ಎಂಬುದು ಅರ್ಥವಾದೊಡನೆ ಗೋಹತ್ಯೆ ನಿಷೇಧ ಎಂಬ ಕೋಮುವಾದಿ ವಿಷಯವನ್ನೇ ಎಲೆಕ್ಷನ್ ಅಜೆಂಡಾ ಮಾಡುತ್ತಿದ್ದಾರೆ.

ಈ ನಿಟ್ಟಿನಲ್ಲಿ ಸೆಪ್ಟೆಂಬರ್ 1ರಿಂದ ಸೆಪ್ಟೆಂಬರ್ 5ರವರೆಗೆ ರಾಜ್ಯಾದ್ಯಂತ ಹೋರಾಟ – ಪ್ರದರ್ಶನಗಳನ್ನೂ ಮತ್ತು ಸೆಪ್ಟೆಂಬರ್ 6ರಂದು ಬೆಂಗಳೂರಿನಲ್ಲಿ ಬೃಹತ್ ಸಮಾವೇಶವನ್ನೂ ಆಯೋಜಿಸಿದ್ದಾರೆ. ಆ ಮೂಲಕ ಈ ಮಸೂದೆಯನ್ನು ವಿರೋಧಿಸುವ ಪಕ್ಷಗಳು ಹಿಂದೂ ವಿರೋಧಿಗಳೆಂದೂ ಮತ್ತು ತಾವು ಮಾತ್ರ ಹಿಂದೂಪರ ಪಕ್ಷವೆಂದೂ ಪ್ರಚಾರ ಮಾಡುತ್ತಾ ಹಿಂದೂ ಓಟ್ ಬ್ಯಾಂಕನ್ನು ತನ್ನೆಡೆಗೆ ಸೆಳೆದುಕೊಳ್ಳುವ ತನ್ನ ಹಳೆ ತಂತ್ರಕ್ಕೆ ಮರಳಿದೆ. ಆದರೆ ಈ ಪ್ರಚಾರದಲ್ಲಿ ಸಂವಿಧಾನದ ಬಗ್ಗೆ ಮತ್ತು ಕೋರ್ಟು ಹಾಗೂ ಕಾನೂನುಗಳ ಬಗ್ಗೆ ಹತ್ತು ಹಲವು ಸುಳ್ಳುಗಳನ್ನು ಮತ್ತು ಅಪವ್ಯಾಖ್ಯಾನಗಳನ್ನೂ ಬಿಜೆಪಿ ಮಾಡುತ್ತಿದೆ. ಹೀಗಾಗಿ ಗೋಹತ್ಯೆ ನಿಷೇಧ ಕುರಿತು ಬಿಜೆಪಿ ನಡೆಸುತ್ತಿರುವ ಪ್ರಚಾರದಲಿ ಇರುವ ಹಸಿಸುಳ್ಳುಗಳನ್ನು ಮತ್ತು ಅರ್ಧಸತ್ಯಗಳನ್ನೂ ಬಯಲುಗೊಳಿಸುವ ತುರ್ತು ಅಗತ್ಯವಿದೆ.

ಮೊದಲನೆಯದಾಗಿ ಸದರಿ ಮಸೂದೆಯನ್ನು "ಗೋಹತ್ಯಾ

ಗೋಹತ್ಯೆ ಮಸೂದೆಯನ್ನು ವಿರೋಧಿಸುವ ಪಕ್ಷಗಳು ಹಿಂದೂ ವಿರೋಧಿಗಳೆಂದೂ ಮತ್ತು ತಾವು ಮಾತ್ರ ಹಿಂದೂಪರ ಪಕ್ಷವೆಂದೂ ಪ್ರಚಾರ ಮಾಡುತ್ತಾ ಹಿಂದೂ ಓಟ್ ಬ್ಯಾಂಕನ್ನು ತನ್ನೆಡೆಗೆ ಸೆಳೆದುಕೊಳ್ಳುವ ತನ್ನ ಹಳೆ ತಂತ್ರಕ್ಕೆ ಬಿಜೆಪಿ ಸರ್ಕಾರ ಮರಳಿದೆ. ಆದರೆ ಈ ಪ್ರಚಾರದಲ್ಲಿ ಸಂವಿಧಾನದ ಬಗ್ಗೆ ಮತ್ತು ಕೋರ್ಟು ಹಾಗೂ ಕಾನೂನುಗಳ ಬಗ್ಗೆ ಹತ್ತು ಹಲವು ಸುಳ್ಳುಗಳನ್ನು ಮತ್ತು ಅಪವ್ಯಾಖ್ಯಾನಗಳನ್ನೂ ಬಿಜೆಪಿ ಮಾಡುತ್ತಿದೆ. ಹೀಗಾಗಿ ಗೋಹತ್ಯೆ ನಿಷೇಧ ಕುರಿತು ಬಿಜೆಪಿ ನಡೆಸುತ್ತಿರುವ ಪ್ರಚಾರದ ಇರುವ ಹಸಿಸುಳ್ಳುಗಳನ್ನು ಮತ್ತು ಅರ್ಧಸತ್ಯಗಳನ್ನೂ ಬಯಲುಗೊಳಿಸುವ ತುರ್ತು ಅಗತ್ಯವಿದೆ.

"ನಿಷೇಧ ಮಸೂದೆ" ಎಂದು ಕರೆಯುತ್ತಿರುವುದೇ ತಪ್ಪು. 1964ರಲ್ಲಿ ಕರ್ನಾಟಕ ಸರ್ಕಾರ ಗೋಹತ್ಯೆಯನ್ನು ನಿಷೇಧಿಸಲು ಕಾಯಿದೆಯನ್ನು ಮಾಡಿತ್ತು. ಅದರ ಹೆಸರು "Karna taka Prevention of Cow slaughter and Preservation of Cattle Act-1964" ("ಕರ್ನಾಟಕ ಗೋಹತ್ಯಾ ನಿಷೇಧ ಮತ್ತು ಜಾನುವಾರು ಸಂರಕ್ಷಣಾ ಕಾಯಿದೆ"). ಈ ಕಾಯಿದೆಯ ಪ್ರಕಾರ ಹಸು ಮತ್ತು ಕರುಗಳನ್ನು ಹೊರತು ಪಡಿಸಿ 12 ವರ್ಷಕ್ಕೆ ಮೇಲ್ಪಟ್ಟ ದನ, ಗೂಳಿ, ಎಮ್ಮೆ ಮತ್ತು ಕೋಣಗಳನ್ನು ಸೂಕ್ತ ಪರವಾನಗಿಯೊಂದಿಗೆ ಕಡಿಯಬಹುದಾಗಿತ್ತು. ಅಂದರೆ ಸ್ಪಷ್ಟವಾಗಿ ಕಾಣುವಂತೆ 1964ರ ಕಾನೂನಿನಲ್ಲೇ ಗೋಹತ್ಯಾ ನಿಷೇಧದ ಎಲ್ಲಾ ಅಂಶ ಗಳೂ ಇದ್ದವು. ವಾಸ್ತವವಾಗಿ 1964ರ ಈ ಕಾನೂನೂ ಸಹ ಸಮಸ್ಯಾತ್ಮಕವಾಗಿದ್ದು ಅದನ್ನೇ ಪ್ರಶ್ನಿಸಬೇಕಾದ ಅಗತ್ಯವಿದೆ. ವಿಷಯ ಹೀಗಿರುವಾಗ 2009ರ ಫೆಬ್ರವರಿಯಲ್ಲಿ ಬಿಜೆಪಿ ಸರ್ಕಾರ ಈ ಮೂಲ ಕಾಯಿದೆಗೆ ಕೆಲವು ತಿದ್ದುಪಡಿಗಳನ್ನು ತರಲು ಯತ್ನಿಸಿತು. ಅದರಲ್ಲಿ ಮುಖ್ಯವಾದದ್ದು ಖಾಸಗಿ ವ್ಯಕ್ತಿಗಳನ್ನು ಸಹ ಗೋಹತ್ಯಾ ನಿಷೇಧ ಕಾಯಿದೆಯನ್ನು ಜಾರಿಗೆ ತರಲು ಅಧಿಕೃತವಾಗಿ ನೇಮಿಸುವುದು ಮತ್ತು ಈ ಕಾಯಿದೆಯನ್ವಯ ಜಿಲ್ಲಾ ಕೋರ್ಟೇ ಈ ವಿಷಯದಲ್ಲಿ ಅಂತಿಮ ಅಪೀಲು ಎಂಬುದು ಬಹು ಮುಖ್ಯವಾದ ಮತ್ತು ಅತ್ಯಂತ ಅಪಾಯಕಾರಿಯಾದ ತಿದ್ದುಪಡಿಗಳಾಗಿತ್ತು. ಇದರ ವಿರುದ್ಧವೇ ರಾಜ್ಯಾದ್ಯಂತ ಜನವರಿ ಪೆಬ್ರವರಿ ತಿಂಗಳಲ್ಲಿ ಜನತೆ ಹೋರಾಟ ಪ್ರಾರಂಭಿಸಿದ್ದರು.

ಇದನ್ನೆಲ್ಲಾ ಗಮನಿಸಿದ ಬಿಜೆಪಿ ಸರ್ಕಾರ ಕಾನೂನು ಪಂಡಿತರ ಸಲಹೆಯನ್ನೂ ತೆಗೆದುಕೊಂಡು 2010ರ ಮಾರ್ಚ್ 4ರಂದು ಈ ತಿದ್ದುಪಡಿ ಮಸೂದೆಯನ್ನು ವಾಪಸ್ ತೆಗೆದುಕೊಂಡು ಅದರ ಬದಲಿಗೆ "Karnataka Preveneti on of Slaughter And Preservation of Cattle Bill-2010" ("ಕರ್ನಾಟಕ ಜಾನುವಾರು ಹತ್ಯಾ ನಿಷೇಧ ಮತ್ತು ಸಂರಕ್ಷಣಾ ಕಾಯಿದೆ-2010") ಎಂಬ ಮಸೂದೆಯನ್ನು ಮಾರ್ಚ್ 10ರಂದು ಸದನದಲ್ಲಿ ಮಂಡಿಸಿತು ಮತ್ತು ವಿರೋಧ ಪಕ್ಷಗಳ ಒಕ್ಕೊರಲ ವಿರೋಧದ ನಡುವೆಯೂ ಮಾರ್ಚ್ 19ರಂದು ಮಂಜೂರಾತಿ ಪಡೆದುಕೊಂಡಿತು. ನಂತರ ಅದನ್ನು ವಿಧಾನ ಪರಿಷತ್ತಿನಲ್ಲೂ ಮಂಡಿಸಲಾಯಿತಾದರೂ ಆಗ ಬಿಜೆಪಿಗೆ ಪರಿಷತ್ತಿನಲ್ಲಿ ಬಹುಮತವಿರಲಿಲ್ಲವಾದ್ದರಿಂದ ಅದನ್ನು ಚರ್ಚೆಗೆ ಆಗಲೇ ತರಲಿಲ್ಲ. ಜೂನ್ ತಿಂಗಳಲ್ಲಿ ವಿಧಾನ ಪರಿಷತ್ತಿಗೆ ಚುನಾವಣೆಗಳು ನಡೆದು ಅಲ್ಲಿಯೂ ಬಿಜೆಪಿಗೆ ಬಹುಮತ ಸಿಕ್ಕ ಮೇಲೆ ಸಕಲ ವಿರೋಧದ ನಡುವೆಯೂ ಅಲ್ಲಿಯೂ ಈ ಮಸೂದೆಯನ್ನು ಸರ್ಕಾರ ಪಾಸು ಮಾಡಿಸಿಕೊಂಡಿತು.

ಹೀಗಾಗಿ ಈಗ ಬಿಜೆಪಿ ಸರ್ಕಾರ ತರಬೇಕೆಂದಿರುವುದು ಕೇವಲ "ಗೋಹತ್ಯಾ ನಿಷೇಧ" ಮಸೂದೆಯಲ್ಲ. ಬದಲಿಗೆ ಕರ್ನಾಟಕ ಜಾನುವಾರು ಹತ್ಯಾ ನಿಷೇಧ ಮತ್ತು ಸಂರಕ್ಷಣಾ ಕಾಯಿದೆ-2010! ಇಲ್ಲಿ ಜಾನುವಾರು ಎಂದರೆ ಗೋವು ಮಾತ್ರವಲ್ಲ. ಹಸು, ದನ, ಕರುಗಳು ಮತ್ತು ಇವುಗಳ ಜೊತೆಗೆ ಎಮ್ಮೆ, ಕೋಣಗಳನ್ನು ಸೇರಿಸಿ ಜಾನುವಾರು ಎಂದು ಕರೆಯಲಾಗಿದೆ. ಹೀಗಾಗಿ ಇದು ಕೇವಲ ಗೋಹತ್ಯಾ ನಿಷೇಧ ಮಸೂದೆಯಲ್ಲ. ಬದಲಿಗೆ ಎಲ್ಲಾ ಜಾನುವಾರುಗಳ ಹತ್ಯೆಯನ್ನೂ ನಿಷೇಧಿಸುವ ಕಾಯಿದೆಯಾಗಿದೆ. ಮಾತ್ರವಲ್ಲ ಈ ಯಾವುದೇ ಪ್ರಾಣಿಗಳ ಮಾಂಸವನ್ನು ತಿನ್ನುವುದನ್ನೂ ಈ ಮಸೂದೆ ಶಿಕ್ಷಾರ್ಹ

ಬಿಜೆಪಿ ಸರ್ಕಾರ ತರಬೇಕೆಂದಿರುವುದು ಕೇವಲ "ಗೋಹತ್ಯಾ ನಿಷೇಧ" ಮಸೂದೆಯಲ್ಲ. ಬದಲಿಗೆ ಕರ್ನಾಟಕ ಜಾನುವಾರು ಹತ್ಯಾ ನಿಷೇಧ ಮತ್ತು ಸಂರಕ್ಷಣಾ ಕಾಯಿದೆ-2010! ಇಲ್ಲಿ ಜಾನುವಾರು ಎಂದರೆ ಗೋವು ಮಾತ್ರವಲ್ಲ. ಹಸು, ದನ, ಕರುಗಳು ಮತ್ತು ಇವುಗಳ ಜೊತೆಗೆ ಎಮ್ಮೆ, ಕೋಣಗಳನ್ನು ಸೇರಿಸಿ ಜಾನುವಾರು ಎಂದು ಕರೆಯಲಾಗಿದೆ. ಹೀಗಾಗಿ ಇದು ಕೇವಲ ಗೋಹತ್ಯಾ ನಿಷೇಧ ಮಸೂದೆಯಲ್ಲ. ಬದಲಿಗೆ ಎಲ್ಲಾ ಜಾನುವಾರುಗಳ ಹತ್ಯೆಯನ್ನೂ ನಿಷೇಧಿಸುವ ಕಾಯಿದೆಯಾಗಿದೆ. ಮಾತ್ರವಲ್ಲ ಈ ಯಾವುದೇ ಪ್ರಾಣಿಗಳ ಮಾಂಸವನ್ನು ತಿನ್ನುವುದನ್ನೂ ಈ ಮಸೂದೆ ಶಿಕ್ಷಾರ್ಹ ಅಪರಾಧವನ್ನಾಗಿಸುತ್ತದೆ.

ಅಪರಾಧವನ್ನಾಗಿಸುತ್ತದೆ. ಅಂದರೆ ಇದು ಕೇವಲ ಹತ್ಯೆಯನ್ನು ನಿಷೇದಿಸುವ ಮಸೂದೆಯಲ್ಲ. ಬದಲಿಗೆ ಇಲ್ಲಿ ಜಾನುವಾರು ಎಂದು ಕರೆಯಲ್ಪಡುವ ಯಾವುದೇ ಪ್ರಾಣಿಗಳ ಮಾಂಸವನ್ನು ತಿನ್ನುವುದನ್ನೇ ನಿಷೇಧಿಸುತ್ತದೆ.

ಎರಡನೆಯದಾಗಿ ಈ ಮಸೂದೆಯನ್ನು ಸರ್ಕಾರ ರೈತರ ಹಿತದೃಷ್ಟಿಯಿಂದಲೇ ತರುತ್ತಿದೆ ಎಂಬ ಬಿಜೆಪಿಯ ಬಹುಮುಖ್ಯ ಅಪಪ್ರಚಾರ. ಈ ಜಾನುವಾರು ಸಂರಕ್ಷಣಾ ಮಸೂದೆಯಲ್ಲಿರುವ ಪ್ರತಿ ಕಲಮೂ ರೈತರನ್ನು ಬೀದಿ ಪಾಲು ಮಾಡುತ್ತದೆ ಮತ್ತು ಜೈಲುಪಾಲು ಮಾಡುತ್ತದೆ.

ಈ ಕಾಯಿದೆಯ ಅತಿಘೋರ ರೈತವಿರೋಧೀ ಅಂಶವು ಮಸೂದೆಯ ಸೆಕ್ಷನ್ (8)ರಲ್ಲಿದೆ. ಅದರ ಪ್ರಕಾರ ಈ ಮಸೂದೆಯು ಕಾನೂನಾದರೆ "ಜಾನುವಾರುಗಳನ್ನು ಕೊಲ್ಲುವ ಉದ್ದೇಶದಿಂದ ಮಾರುವುದು, ಕೊಳ್ಳುವುದು, ಅಥವಾ ಪರಭಾರೆ ಮಾಡುವುದುನ್ನು ನಿಷೇಧಿಸುತ್ತದೆ". ಅದನ್ನು ಶಿಕ್ಷಾರ್ಹ ಅಪರಾಧವನ್ನಾಗಿಸುತ್ತದೆ. ಅಂದರೆ ಇನ್ನುಮುಂದೆ ಮುದಿಗೊಡ್ಡಾಗಿರುವ ದನಗಳನ್ನು ಪರಭಾರೆ ಮಾಡುವ ರೈತನೂ ಅಪರಾಧಿಯಾಗಲಿದ್ದಾನೆ. ಏಕೆಂದರೆ ಸೆಕ್ಷನ್ (8)ರ ವಿವರಣೆಯ ಪ್ರಕಾರ ದನಗಳನ್ನು ಕೊಲ್ಲುವ ಉದ್ದೇಶಕ್ಕೆ ಮಾರಿದರೆ ಮಾತ್ರವಲ್ಲ ಆ ದನಗಳನ್ನು ಕೊಲ್ಲುವ ಉದ್ದೇಶಕ್ಕೆ ಕೊಳ್ಳಲಾಗುತ್ತಿದೆ ಎಂದು "ಗೊತ್ತಾದ್ದರೆ, ಅಥವಾ ದನಗಳನ್ನು ಕೊಲ್ಲಲೆಂದೇ ಕೊಳ್ಳಲಾಗುತ್ತಿದೆ ಎಂದು ನಂಬುವ ಕಾರಣವಿದ್ದೂ" ಮಾರಿದರೂ ಸಹ ಈ ಕಾಯಿದೆ ಅದನ್ನು ಶಿಕ್ಷಾರ್ಹ ಅಪರಾಧವನ್ನಾಗಿಸುತ್ತದೆ. ಆದರೆ ರೈತನಿಗೆ ಗೊತ್ತಿದ್ದೂ ಮಾರಿದ್ದಾನೆ ಎಂಬುದನ್ನು ಮತ್ತು ಕೊಲ್ಲಲೆಂದು ಕೊಳ್ಳಲಾಗುತ್ತಿದೆ ಎಂದು ನಂಬುವ ಕಾರಣವಿತ್ತು ಎಂಬುದನ್ನು ನಿರ್ಧರಿಸುವವರು ಯಾರು? ಅಪರಾಧವನ್ನು ತಡೆಗಟ್ಟಲು ಬರುವ ಸಬ್ ಇನ್‌ಸ್ಪೆಕ್ಟರ್ ಅಥವಾ ಇತರ ಅಧಿಕಾರಿಗಳು! ಅಂದರೆ ಈಗಾಗಲೇ ಆತ್ಮಹತ್ಯೆಯ ಅಂಚಿನಲ್ಲಿರುವ ರೈತನ ಬದುಕು ಪೊಲೀಸ್ ಅಧಿಕಾರಿಗಳ ಮತ್ತು ಸರ್ಕಾರದ ಮರ್ಜಿಗೆ ಬೀಳುತ್ತದೆ.

ಇದರಿಂದಲೇ ಈ ಪುರೋಹಿತರ ಸರ್ಕಾರಕ್ಕೆ ರೈತ ಬದುಕಿನ ಕಷ್ಟಗಳ ಬಗ್ಗೆ ಕಿಂಚಿತ್ತೂ ಅರಿವಿಲ್ಲವೆಂಬುದು ಗೊತ್ತಾಗುತ್ತದೆ. ಒಂದು ಹಾಲುಕೊಡುವ ಹಸು ಅಥವಾ ಉಳುಮೆಗೆ ಹೆಗಲಾಗುವ ದನ ಎರಡೂ ರೈತನ ಬದುಕನ್ನು ಪೋಷಿಸುತ್ತದೆ. ಆದರೆ ಹಾಲು ಕೊಡದ ಹಸು ಮತ್ತು ಉಳುಮೆಗೆ ಈಡಾಗದ ದನವನ್ನು ಸಾಕುವುದು ಈಗಾಗಲೇ ಸಾಯುತ್ತಾ ಬದುಕಿರುವ ರೈತನಿಗೆ ಎಷ್ಟು ಹೊರೆಯಾಗುತ್ತದೆಂಬುದರ ಅರಿವೇ ಈ ಸರ್ಕಾರಕ್ಕಿಲ್ಲ. ಸರ್ಕಾರದ ಅಂಕಿಅಂಶಗಳ ಪ್ರಕಾರ ನಮ್ಮ ಹಳ್ಳಿಗಾಡಿನಲ್ಲಿ ಬದುಕುತ್ತಿರುವ ಮುಕ್ಕಾಲುವಾಸಿ ಜನರ ದಿನದ ಸರಾಸರಿ ಆದಾಯ ಕೇವಲ 20ರೂಪಾಯಿ. ಇದರಲ್ಲಿ ಮನೆಮಂದಿಯೆಲ್ಲಾ ಮೂರುಹೊತ್ತು ಅರೆಹೊಟ್ಟೆ ಊಟಮಾಡಲೂ ಆಗುವುದಿಲ್ಲ. ಇದರ ಜೊತೆಗೆ ಯಾವರೀತಿಯಲ್ಲೂ ಉಪಯೋಗವಿಲ್ಲದ ದನ-ಹಸುಗಳನ್ನು ಸಾಕಬೇಕೆಂದರೆ ದಿನಕ್ಕೆ ಏನಿಲ್ಲವೆಂದರೂ 30-50ರೂ ಖರ್ಚಾಗುತ್ತದೆ. ಇದನ್ನು ಭರಿಸುವವರು ಯಾರು?

ಅದಕ್ಕಿಂತ ಮುಖ್ಯವಾದದ್ದು ಮತ್ತೊಂದಿದೆ. ಗೊಡ್ಡಾದ ದನ-ಹಸುಗಳನ್ನು ಮಾರದಿದ್ದರೆ ಬೇಸಾಯಕ್ಕೆ ಬೇಕಾದ ಹೊಸ ಜಾನುವಾರುಗಳನ್ನು ಕೊಂಡುಕೊಳ್ಳಲು ರೈತನಿಗೆ ಎಲ್ಲಿಂದ ದುಡ್ಡು ಬರಬೇಕು? ಒಂದು ಕಡೆ ಗೊಡ್ಡಾದ ದನಗಳನ್ನೂ ಸಾಕಬೇಕು. ಮತ್ತೊಂದು ಕಡೆ ಬೇಸಾಯ ಮುಂದುವರೆಸಲು ಬೇಕಾದ ಹೊಸ ರಾಸುಗಳನ್ನು ಕೊಳ್ಳಲೂ ಹಣವಿಲ್ಲ. ಈ ಇಕ್ಕಟ್ಟಿನ ಸಂದರ್ಭದಲ್ಲಿ ರೈತ ಒಂದು ವೇಳೆ ದನವನ್ನು ಮಾರಿದರೆ ಅವನನ್ನು ಮುಲಾಜಿಲ್ಲದೆ ಜೈಲಿಗೆ ಹಾಕಿ ಎನ್ನುತ್ತದೆ ಈ ಕಾಯಿದೆ!

ಇಷ್ಟು ಮಾತ್ರವಲ್ಲ. ಈ ರಾಜ್ಯದ ಬಹುಪಾಲು ರೈತರು ಕೃಷಿಯೊಂದಿಗೆ ಉಪಕಸುಬಾಗಿ ಹೈನುಗಾರಿಕೆಯನ್ನು ಅವಲಂಬಿಸಿದ್ದಾರೆ. ಹೈನುಗಾರಿಕೆಯಲ್ಲಿ ಹೆಚ್ಚು ಹಾಲು ಕೊಡದ ನಾಟಿ ಹಸುಗಳಿಗಿಂತ ಜರ್ಸಿ-ಸೀಮೆ ಹಸುಗಳನ್ನೇ ಅವಲಂಬಿಸಿದ್ದಾರೆ. ಇವುಗಳು ಹಾಲನ್ನು ಜಾಸ್ತಿ ಕೊಟ್ಟರೂ ಕೊಡದಿದ್ದರೂ ನಾಟಿ ಹಸುಗಳ ಮೂರುಪಟ್ಟು ಮೇವನ್ನು ತಿನ್ನುತ್ತವೆ. ಎಲ್ಲಿಯತನಕ ಅವು ಹಾಲನ್ನು ಕೊಡುತ್ತಿರುತ್ತವೋ ಅಲ್ಲಿಯವರೆಗೆ ಅವುಗಳನ್ನು ಸಾಕುವುದು ಅಷ್ಟು ಕಷ್ಟವಲ್ಲ. ಆದರೆ ಒಮ್ಮೆ ಅವು ಗೊಡ್ಡಾದ ನಂತರ ಅವುಗಳು ಮೇವು ತಿನ್ನುವ ಪ್ರಮಾಣವೇನೂ ಕಡಿಮೆಯಾಗುವುದಿಲ್ಲ. ಹೀಗಾಗಿ ಆದಾಯವಿರಲಿ, ಇಲ್ಲದಿರಲಿ ರೈತ ಆ ಸೀಮೆಹಸುಗಳನ್ನು ಸಾಕಲೇಬೇಕೆಂದರೆ ರೈತಾಪಿಯ ಕುಟುಂಬದ ಆರ್ಥಿಕತೆಯ ಮೇಲೆ ಎಂಥಾ ದುಷ್ಪರಿಣಾಮ ಬೀರಬಹುದೆಂಬುದನ್ನು ಸರ್ಕಾರ ಯೋಚಿಸಿದೆಯೇ?

ಅಲ್ಲದೆ ಈ ಸೀಮೆಹಸುಗಳ ಗಂಡುಕರುಗಳು ಬೇಸಾಯದ ಬಳಕೆಗೆ ಬರುವುದಿಲ್ಲ. ಹಾಲನ್ನೂ ಕೊಡುವುದಿಲ್ಲ. ಮೇವನ್ನು ಮಾತ್ರ ನಾಟಿ ಹಸುಗಳ ಮೂರುಪಟ್ಟು ತಿನ್ನುತ್ತಲೇ ಇರುತ್ತವೆ. ಇವನ್ನು ರೈತ ಮಾರದಿದ್ದರೆ ಅವನಿಗೆ ಬರುವ ಲಾಭವೆಲ್ಲಾ ಇವುಗಳನ್ನು ಸಾಕಲೆಂದೇ ಖರ್ಚಾಗುತ್ತದೆ. ಅಥವಾ ಅದಕ್ಕಿಂತ ಜಾಸ್ತಿಯಾಗುತ್ತದೆ. ಈ ಕಷ್ಟಗಳಿಂದ ತಪ್ಪಿಸಿಕೊಳ್ಳಲು ರೈತನೇನಾದರೂ ಗಂಡು ಕರುವನ್ನು ಮಾರಿದರೆ ಈ ಕಾಯಿದೆಯ ಪ್ರಕಾರ ಜೈಲುಶಿಕ್ಷೆ ಕಟ್ಟಿಟ್ಟಬುತ್ತಿ!

ಈ ಮಸೂದೆಯೇನಾದರೂ ಶಾಸನವಾದರೆ ಮೇಲೆ ಹೇಳಿದ ಯಾವುದೇ ಸಂದರ್ಭದಲ್ಲೂ ರೈತನನ್ನು

ಸ್ಥಳೀಯ ಸಬ್ ಇನ್ಸ್‌ಪೆಕ್ಟರ್ ಬಂಧಿಸಬಹುದು. ಈ ಮಸೂದೆಯ ಪ್ರಕಾರ ಇವೆಲ್ಲವೂ ಶಿಕ್ಷಾರ್ಹ ಅಪರಾಧವಾದ್ದರಿಂದ ಅವು ಜಾಮೀನು ರಹಿತ ಅಪರಾಧಗಳಾಗಿವೆ. ಇವುಗಳಿಗೆ ಜಿಲ್ಲಾ ಕೇಂದ್ರಗಳಲ್ಲಿರುವ ಪ್ರಥಮ ದರ್ಜೆ ಜುಡಿಷಿಯಲ್ ಮ್ಯಾಜಿಸ್ಟ್ರೇಟ್ ನ್ಯಾಯಾಲದಲ್ಲೇ ಜಾಮೀನು ಸಿಗಲು ಸಾಧ್ಯ. ಅಂದರೆ ಒಮ್ಮೆ ರೈತನನ್ನು ಯಾವುದಾದರೂ ಹಳ್ಳಿಯಲ್ಲಿ ಮೇಲಿನ ಆರೋಪದಲ್ಲಿ ಬಂಧಿಸಿದರೆ ಅವನನ್ನು ಜಿಲ್ಲಾ ಕೇಂದ್ರಕ್ಕೆ ಕರೆತರಬೇಕು. ಅಂದರೆ ಸುಮ್ಮನೆ ಅನುಮಾನದ ಮೇಲೆ ಬಂಧನವಾದರೂ ಕನಿಷ್ಠ ಎರಡು ಮೂರು ದಿನಗಳವರೆಗೆ ಜಾಮೀನು ಸಿಗುವುದಿಲ್ಲ. ಈಗಾಗಲೇ ಸಂಕಷ್ಟದಲ್ಲಿರುವ ರೈತ ಜಿಲ್ಲಾ ಕೇಂದ್ರದಲ್ಲಿ ವಕೀಲರಿಗೆ ದುಬಾರಿ ಫೀಸು ತೆತ್ತು ಜಾಮೀನು ಮಾಡಿಸಿಕೊಳ್ಳಬೇಕು. ಇನ್ನಷ್ಟು ಸಾಲದ ಬಲೆಯಲ್ಲಿ ಸಿಲುಕಿಕೊಳ್ಳಬೇಕು. ಇಷ್ಟಾದರೂ ಎಷ್ಟು ರೈತರಿಗೆ ಸಾಧ್ಯ?

ರೈತರ ಕಷ್ಟ ಇಲ್ಲಿಗೇ ಮುಗಿಯಲಿಲ್ಲ. ಈ ಮಸೂದೆಯ ಅಂಶಗಳು ರೈತನು ಆತ್ಮಹತ್ಯೆ ಮಾಡಿಕೊಳ್ಳುವ ತನಕ ಬಿಡುವಂತೆ ಕಾಣುವುದಿಲ್ಲ. ಈಗಾಗಲೇ ವಿವರಿಸಿದಂತೆ ರೈತ ಮುದಿಗೊಡ್ಡು ದನಗಳನ್ನು ಯಾವ ಕಾರಣಕ್ಕೂ ಮಾರುವಂತಿಲ್ಲ. ಹಾಗಿದ್ದರೇ ಅವುಗಳನ್ನು ಏನು ಮಾಡಬೇಕು? ಈ ಮಸೂದೆಯ ಸೆಕ್ಷನ್ (18)ರ ಪ್ರಕಾರ ಇಂಥಾ ದನಗಳನ್ನು ನೋಡಿಕೊಳ್ಳಲು ಸರ್ಕಾರ ಅಥವಾ ಸರ್ಕಾರೇತರ ಸಂಸ್ಥೆ ಆಶ್ರಮಗಳನ್ನು ಸ್ಥಾಪಿಸುತ್ತವೆ. ರೈತರು ತಮ್ಮ ಗೊಡ್ಡುದನಗಳನ್ನು ಕಡ್ಡಾಯವಾಗಿ ಈ ಆಶ್ರಮದಲ್ಲೇ ಬಿಡಬೇಕು. ಅಷ್ಟುಮಾತ್ರವಲ್ಲ.ಅವುಗಳನ್ನು ನೋಡಿಕೊಳ್ಳಲು ರೈತ ಸರ್ಕಾರ ಅಥವಾ ಆ ಸಂಸ್ಥೆ ನಿಗದಿಪಡಿಸಿದಷ್ಟು ಶುಲ್ಕ ಪಾವತಿಸಬೇಕಾಗುತ್ತದೆ!

ತಮ್ಮ ಮಕ್ಕಳ ಶಾಲಾ ಫೀಸನ್ನೆ ಪಾವತಿಸಲಾಗದಷ್ಟು ಸಂಕಷ್ಟದಲ್ಲಿರುವ ರೈತ ಈ ಶುಲ್ಕವನ್ನು ಹೇಗೆ ಭರಿಸಬಲ್ಲ? ಒಂದು ವೇಳೆ ರೈತ ಅಷ್ಟು ಶುಲ್ಕವನ್ನು ಪಾವತಿಸಲಾಗದಿದ್ದರೆ ಏನು ಮಾಡುವುದು? ಆಗಲೂ ರೈತ ಅಪರಾಧಿಯಾಗಿಬಿಡುವನೇ?

ಈ ಹಸಿರುಶಾಲು ಹೊದ್ದ ಸರ್ಕಾರ ತನ್ನ ಕುರುಡು ಕೋಮುವಾದದಿಂದ ಈ ಯಾವುದೇ ಪ್ರಶ್ನೆಗಳಿಗೆ ಉತ್ತರ ಕೊಡುತ್ತಿಲ್ಲ!

ಅಕಸ್ಮಾತ್ ರೈತ ಬದುಕಿನ ಬೇಗುದಿ ತಡೆಯದೆ ತನ್ನ ದನಗಳನ್ನು ಮಾರೇಬಿಟ್ಟರೆ ಎಷ್ಟು ಶಿಕ್ಷೆ? ಈ ಮಸೂದೆಯ ಸೆಕ್ಷನ್ (12)ರಲ್ಲಿ ಯಾವ ಯಾವ ಅಪರಾಧಕ್ಕೆ ಎಷ್ಟೆಷ್ಟು ಶಿಕ್ಷೆಯೆಂಬುದನ್ನು ನಿಗದಿಪಡಿಸುತ್ತದೆ. ಸೆಕ್ಷನ್ 4 ರಡಿ ಎಸಗಲಾಗುವ ಅಪರಾಧಕ್ಕೆ ಅಂದರೆ ಜಾನುವಾರು ಹತ್ಯೆ ಮಾಡಿದ ಅಪರಾಧಕ್ಕೆ 1ವರ್ಷದಿಂದ 7ವರ್ಷದವರೆಗೆ ಜೈಲು ಶಿಕ್ಷೆ ಮತ್ತು 25,000ರೂ.ಗಳಿಂದ 1,00,000 ರೂ.ವರೆಗೆ ಜುಲ್ಮಾನೆಯನ್ನೂ ವಿಧಿಸಬಹುದಾಗಿದೆ. ಭಯೋತ್ಪಾದನೆ, ಉದ್ದೇಶ ಪೂರ್ವಕ ಕೊಲೆ, ಬಲಾತ್ಕಾರ, ಕಳ್ಳಸಾಗಣೆ, ಭ್ರಷ್ಟಾಚಾರಗಳಿಗೂ ಈ ಪ್ರಮಾಣದ ಶಿಕ್ಷೆಯನ್ನು ಇಂಡಿಯನ್ ಪೀನಲ್ ಕೋಡ್ ವಿಧಿಸುವುದಿಲ್ಲ.

ಅದೇ ರೀತಿ ಈ ಮಸೂದೆಯಡಿ ಎಸಗಲಾಗುವ ಇತರ ಅಪರಾಧಗಳಿಗೆ-ಎಂದರೆ ದನದ ಸಾಗಾಟ ಮಾಡುವುದು, ಹಸು-ದನವನ್ನು ಮಾರಾಟ ಮಾಡುವುದು, ದನದ ಮಾಂಸ ತಿನ್ನುವುದು, ತಿನ್ನಲು ಪ್ರೋತ್ಸಾಹಿಸುವುದು ಹಾಗೂ ಇನ್ನಿತರ ಅಪರಾಧಗಳಿಗೆ ಒಂದು ವರ್ಷದಿಂದ ಮೂರು ವರ್ಷದ ಸಜೆ ಮತ್ತು 10,000 ರೂ –25,000 ರೂ.ವರೆಗೆ ಜುಲ್ಮಾನೆ ವಿಧಿಸಬಹುದಾಗಿದೆ.

ಮುಖ್ಯಮಂತ್ರಿ ಯಡಿಯೂರಪ್ಪನವರು ರೈತರಿಗೆ ಗೋವುಗಳನ್ನು ಸಾಕುವುದು ಕಷ್ಟವಾದರೆ ಅವರಿಗೆ ಶೇ.6ರ ಬಡ್ಡಿಯಲ್ಲಿ 70,000ರೂ ಸಾಲವನ್ನು ನೀಡುವುದಾಗಿ ಹೇಳಿದ್ದಾರೆ. ಆದರೆ ಇದು ರೈತನ್ನು ಇನ್ನಷ್ಟು ಸಾಲಗಾರನ್ನನ್ನಾಗಿ ಮಾಡುವ ಹುನ್ನಾರವೇ ಹೊರತು ಬಚಾವು ಮಾಡುವ ಉಪಾಯವಲ್ಲ. ಏಕೆಂದರೆ ಯಾವುದೇ ರೀತಿ ರೈತನ ಆದಾಯವನ್ನು ಹೆಚ್ಚಿಸದೆ ಅವರ ವೆಚ್ಚವನ್ನು ಮಾತ್ರ ಹೆಚ್ಚಿಸುವ ಅನುಪಯುಕ್ತ ಹಸು ಅಥವಾ ದನಗಳನ್ನು ಸಾಕಲು ಸಾಲ ಮಾಡುವುದರಿಂದ ರೈತನ ಸಾಲ ಮತ್ತು ಬವಣೆ ಇನ್ನಷ್ಟು ಹೆಚ್ಚಾಗುತ್ತದೆಯೇ ವಿನಃ ಕಡಿಮೆಯಾಗುವುದಿಲ್ಲ.

ಅಂದರೆ ಸಾರಾಂಶದಲ್ಲಿ ಇದರ ಅರ್ಥವೇನೆಂದರೆ ರೈತ ತನ್ನೆಲ್ಲಾ ಕಷ್ಟವನ್ನು ನುಂಗಿಕೊಂಡು ಹೇಗಾದರೂ ಬೇಸಾಯದಲ್ಲಿ ಮುಂದುವರೆಯುವುದೇ ದೊಡ್ಡ ಅಪರಾಧ. ಹೀಗಾಗಿ ಮಾನ್ಯ ಯಡಿಯೂರಪ್ಪನವರ ಬಿಜೆಪಿ ಸರ್ಕಾರದಲ್ಲಿ ಈ ನಾಡಿನ ಎಲ್ಲಾ ರೈತರೂ ಇಂದಲ್ಲ ನಾಳೆ ಜೈಲು ಸೇರುವುದನ್ನು ತಪ್ಪಿಸಲಾಗುವುದಿಲ್ಲ!! ಏಕೆಂದರೆ ಈ ಸರ್ಕಾರಕ್ಕೆ ಕುರುಡು ಕೋಮುದ್ವೇಷ ಬಿಟ್ಟರೆ ಬೇರೆ ಅಜೆಂಡಾಗಳೇ ಇಲ್ಲ. ರೈತನ ಕಷ್ಟ ಅರ್ಥವಾಗುವುದೂ ಇಲ್ಲ. ತಮ್ಮ ಗುಪ್ತ ಕೇಸರಿ ಅಜೆಂಡಾವನ್ನು ಜಾರಿಗೆ ತರಲು ಈ ಬಿಜೆಪಿ ಸರ್ಕಾರ ಇಡೀ ರೈತಾಪಿ ಸಮುದಾಯವನ್ನೇ ಆತ್ಮಹತ್ಯೆ ಮಾಡಿಕೊಳ್ಳಲು ದೂಡುತ್ತಿದೆ ಅಥವಾ ಸೆರೆಮನೆಗೆ ದೂಡುತ್ತಿದೆ.

ಇತ್ತೀಚೆಗೆ ಮುಖ್ಯಮಂತ್ರಿ ಯಡಿಯೂರಪ್ಪನವರು ರೈತರಿಗೆ ಗೋವುಗಳನ್ನು ಸಾಕುವುದು ಕಷ್ಟವಾದರೆ ಅವರಿಗೆ ಶೇ.6ರ ಬಡ್ಡಿಯಲ್ಲಿ 70,000ರೂ ಸಾಲವನ್ನು ನೀಡುವುದಾಗಿ ಹೇಳಿದ್ದಾರೆ. ಆದರೆ ಇದು ರೈತನ್ನು ಇನ್ನಷ್ಟು ಸಾಲಗಾರನ್ನನ್ನಾಗಿ ಮಾಡುವ ಹುನ್ನಾರವೇ ಹೊರತು ಬಚಾವು ಮಾಡುವ ಉಪಾಯವಲ್ಲ. ಏಕೆಂದರೆ ಯಾವುದೇ ರೀತಿ ರೈತನ ಆದಾಯವನ್ನು ಹೆಚ್ಚಿಸದೆ ಅವರ ವೆಚ್ಚವನ್ನು ಮಾತ್ರ ಹೆಚ್ಚಿಸುವ ಅನುಪಯುಕ್ತ ಹಸ ಅಥವಾ ದನಗಳನ್ನು ಸಾಕಲು ಸಾಲ ಮಾಡುವುದರಿಂದ ರೈತನ ಸಾಲ ಮತ್ತು ಬವಣೆ ಇನ್ನಷ್ಟು ಹೆಚ್ಚಾಗುತ್ತದೆಯೇ ವಿನಃ ಕಡಿಮೆಯಾಗುವುದಿಲ್ಲ.

ಮೂರನೆಯದಾಗಿ ಇದೇ ಬಗೆಯ ಕಾಯಿದೆ ಗುಜರಾತ್, ಮಧ್ಯಪ್ರದೇಶ, ಚತ್ತೀಸ್‌ಘಡ ಇತ್ಯಾದಿ ಏಳು ರಾಜ್ಯಗಳಲ್ಲಿ ಅಸ್ತಿತ್ವದಲ್ಲಿದೆಯೆಂಬ ಅರ್ಧ ಸತ್ಯ. ಈ ರಾಜ್ಯಗಳಲ್ಲಿ ಇರುವುದು ಸಂಪೂರ್ಣ "ಗೋ ಸಂತತಿ" ಹತ್ಯಾ ನಿಷೇಧದ ಕಾಯಿದೆಯೇ ವಿನಃ ಎಮ್ಮೆ, ಕೋಣಗಳನ್ನೂ ಒಳಗೊಂಡಂತೆ "ಸಕಲ ಜಾನುವಾರು" ಹತ್ಯಾ ನಿಷೇಧ ಕಾಯಿದೆಯಲ್ಲ.

ನಾಲ್ಕನೆಯದಾಗಿ ಗುಜರಾತಿನಲ್ಲಿ ಜಾರಿಗೆ ಬಂದಿರುವ ಇದೇ ಬಗೆಯ ಕಾಯಿದೆಯನ್ನು ಸುಪ್ರೀಂಕೋರ್ಟಿನ ಏಳು ಸದಸ್ಯರ ಸಾಂವಿಧಾನಿಕ ಪೀಠ ಎತ್ತಿಹಿಡಿದಿದೆ ಎನ್ನುವ ಅಪಪ್ರಚಾರ. ವಾಸ್ತವ ಇದಕ್ಕೆ ತದ್ವಿರುದ್ಧವಾದದ್ದು. 1994ರಲ್ಲಿ ಆಗಿನ ಗುಜರಾತ್ ಸರ್ಕಾರವೇ ಆವರೆಗೆ ಅಸ್ತಿತ್ವದಲ್ಲಿದ್ದ "Bombay Animal Preservation Act"ಗೆ ತಿದ್ದುಪಡಿ ತರಲು Bombay Animal Preservation (Gujarat Amendment) Act, 1994 ಕಾಯಿದೆಯನ್ನು ಜಾರಿಗೆ ತಂದಿತು. ಅದರಲ್ಲಿನ ಸೆಕ್ಷನ್ 2ರಲ್ಲಿ ಆವರಗೆ ಹಸುವಿನ ಹತ್ಯೆಯ ಸಂಪೂರ್ಣ ನಿಷೇಧ ಎಂಬ ಕಡೆ ದನ, ಗೂಳಿಗಳನ್ನು ಸೇರಿಸಿತ್ತು. ಅಂದರೆ ಸಾರಾಂಶದಲ್ಲಿ ಅದು ಸಂಪೂರ್ಣ "ಗೋ ಸಂತತಿ" ಹತ್ಯಾ ನಿಷೇಧದ ಆಶಯವನ್ನೂ ಹೊಂದಿತ್ತೇ ವಿನಃ ಎಮ್ಮೆ, ಕೋಣಗಳನ್ನೂ ಒಳಗೊಂಡಂತ ಸಕಲ ಜಾನುವಾರುಗಳ ಹತ್ಯಾ ನಿಷೇಧವನ್ನೂ ಅದು ಆಶಯದಲ್ಲೂ ಹೊಂದಿರಲಿಲ್ಲ.

ಆದರೆ ಈ ಕಾಯಿದೆಯೂ ಹಲವಾರು ಸಂವಿಧಾನ ವಿರೋಧಿ ಅಂಶಗಳನ್ನು ಒಳಗೊಂಡಿತ್ತು. ಆ ಕಾರಣದಿಂದಲೇ ಖುರೇಷಿ ಸಮುದಾಯದವರು ಹೈಕೋರ್ಟಿನಲ್ಲಿ ಇದರ ವಿರುದ್ಧ ಹಾಕಿದ್ದ ಅಪೀಲನ್ನು ಎತ್ತಿಹಿಡಿದ ಗುಜರಾತ್ ಹೈಕೋರ್ಟು ಈ ಮಸೂದೆ ಸಂವಿಧಾನ ವಿರೋಧಿ ಎಂದು ಆ ಕಾಯಿದೆಯನ್ನು ರದ್ದುಗೊಳಿಸಿತ್ತು. ನಂತರ ಮೋದಿ ಹಯಾಮಿನಲ್ಲಿ ಕೆಲವು ಚಡ್ಡಿ ಸಂಘಟನೆಗಳು ಈ ಪ್ರಕರಣವನ್ನು 2002ರಲ್ಲಿ ಸುಪ್ರೀಂಕೋರ್ಟಿಗೆ ಕೊಂಡೊಯ್ದರು. ಈ ಪ್ರಕರಣದಲ್ಲಿ ಹಲವಾರು ಸಂವಿಧಾನಾತ್ಮಕ ಅಂಶಗಳಿರುವುದರಿಂದ ಇದನ್ನು ಏಳು ನ್ಯಾಯಾಧೀಶರ ಬೆಂಚಿಗೆ ವರ್ಗಾಯಿಸಲಾಯಿತು.

ಅಂತಿಮವಾಗಿ ಸುಪ್ರೀಂಕೋರ್ಟಿನ ಏಳು ಜನರ ಪೀಠದಲ್ಲಿ ಆರು ನ್ಯಾಯಾಧೀಶರು 1994ರ "ಗುಜರಾತ್ ಕಾಯಿದೆ"ಯನ್ನು ಎತ್ತಿ ಹಿಡಿದದ್ದು ನಿಜ. ಅದು "ಗೋ ಸಂತತಿ ಹತ್ಯಾ ನಿಷೇಧ"ವನ್ನೇ ವಿನಃ"ಸಂಪೂರ್ಣ ಜಾನುವಾರು ಹತ್ಯೆ ನಿಷೇಧ"ವನ್ನಲ್ಲ. ಏಕೆಂದರೆ ಗುಜರಾತ್ ಕಾಯಿದೆಯಲ್ಲೇ ಸಂಪೂರ್ಣ ಜಾನುವಾರು ಹತ್ಯಾ ನಿಷೇಧದ ಪ್ರಸ್ತಾಪವಿರಲಿಲ್ಲ. ಅಷ್ಟು ಮಾತ್ರವಲ್ಲ. ಈ ಮಸೂದೆಯಲ್ಲಿ ಎಮ್ಮೆ ಮತ್ತು ಕೋಣಗಳನ್ನು ಕಡಿಯುವುದರ ಬಗ್ಗೆ ನಿಷೇಧವಿಲ್ಲದಿದ್ದರಿಂದಲೇ "ಸಂಪೂರ್ಣ ಗೋ ಸಂತತಿ ಹತ್ಯಾ ನಿಷೇಧ"ಕ್ಕೆ ಸುಪ್ರೀಂ ಕೋರ್ಟು ಅನುಮತಿ ನೀಡಿದೆ. ತಾನು ಈ ನಿರ್ಣಯಕ್ಕೆ ಬರಲು ಕಾರಣವೇನೆಂದು ಸ್ಪಷ್ಟಪಡಿಸುತ್ತಾ ಸಾಂವಿಧಾನಿಕ ಪೀಠದ ಮುಖ್ಯ ನ್ಯಾಯಾಧೀಶರಾದ ನ್ಯಾಯಮೂರ್ತಿ ಲಹೋಟಿಯವರು:

"In the present case, we find the issue relates to a total prohibition imposed on the slaughter of cow and her progeny. The ban is total with regard to the slaughter of one particular class of cattle. The ban is not on the total activity of butchers (kasais); they are left free to slaughter cattle other than those specified in the Act. It is not that the writ petitioner respondents survive only by slaughtering cow progeny. They can slaughter animals other than cow progeny and carry on their business activity." ((2005) 8 SCC 534).) ಎಂದು ಸ್ಪಷ್ಟವಾಗಿ ತಮ್ಮ ನಿರ್ಣಯದಲ್ಲಿ ಉಲ್ಲೇಖಿಸಿದ್ದಾರೆ.

ಅಂದರೆ: "ಗುಜರಾತಿನ ಕಾಯಿದೆಯು ಜಾನುವಾ

ರುಗಳಲ್ಲಿ ಗೋ-ಸಂತತಿಯೆಂಬ ಒಂದು ವಿಭಾಗದ ಹತ್ಯೆಯನ್ನು ಮಾತ್ರ ನಿಷೇಧಿಸುತ್ತದೆಯೇ ಹೊರತು ಸಂಪೂರ್ಣ ಜಾನುವಾರು ಹತ್ಯೆಯನ್ನಲ್ಲ. ಇದು ಕಸಾಯಿಗಳ ವೃತ್ತಿಯ ಮೇಲೆ ಸಂಪೂರ್ಣ ನಿಷೇಧವನ್ನೇನೂ ಹೇರುವುದಿಲ್ಲ. ಅವರು ಈ ಮಸೂದೆಯಲ್ಲಿ ಉಲ್ಲೇಖಿತವಲ್ಲದ ಇತರೆ ಜಾನುವಾರುಗಳ ಹತ್ಯೆಯನ್ನು ಮುಂದುವರೆಸಬಹುದು. ಏಕೆಂದರೆ ಅವರು ಗೋಸಂತತಿಯ ಹತ್ಯೆಯನ್ನು ಮಾಡುವುದರಿಂದ ಮಾತ್ರ ತಮ್ಮ ವ್ಯಾಪಾರ-ವಹಿವಾಟನ್ನು ಮಾಡಬೇಕೆಂದಿಲ್ಲ. ಗೋ-ಸಂತತಿಯಲ್ಲದ ಇತರ ಜಾನುವಾರುಗಳನ್ನು ಹತ್ಯೆ ಮಾಡುವ ಮೂಲಕ ಅವರು ತಮ್ಮ ವ್ಯಾಪಾರವನ್ನು ಮುಂದುವರೆಸಬಹುದು".

ಅಲ್ಲದೆ ಈ ಬಹುಸಂಖ್ಯಾತ ನಿರ್ಣಯಕ್ಕೆ ವಿರೋಧ ವ್ಯಕ್ತಪಡಿಸಿದ ಏಳನೇ ನ್ಯಾಯಾಧೀಶರಾದ ಜಸ್ಟೀಸ್ ಮಾಥುರ್‌ರವರು ಗೋಹತ್ಯೆ ನಿಷೇಧದ ಮಸೂದೆಯಲ್ಲಿ ದನ ಮತ್ತು ಗೂಳಿಗಳ ಹತ್ಯೆಯ ನಿಷೇಧವನ್ನೂ ಸೇರಿಸಿದ್ದಕ್ಕೆ ತೀವ್ರ ವಿರೋಧವನ್ನು ವ್ಯಕ್ತಪಡಿಸಿ ತಮ್ಮ ಪ್ರತ್ಯೇಕ ನಿರ್ಣಯ ನೀಡಿದ್ದರು. ಹೀಗಾಗಿ ಸುಪ್ರೀಂಕೋರ್ಟಿನ ಸಾಂವಿಧಾನಿಕ ಪೀಠದ ನಿರ್ಣಯ "ಸಂಪೂರ್ಣ ಗೋ ಸಂತತಿ ಹತ್ಯಾ ನಿಷೇಧ"ವನ್ನು ಎತ್ತಿ ಹಿಡಿದಿದೆಯೇ ವಿನಃ "ಸಂಪೂರ್ಣ ಜಾನುವಾರು ಹತ್ಯಾ ನಿಷೇಧ"ವನ್ನಲ್ಲ. ಹೀಗಾಗಿ ಸುಪ್ರೀಂಕೋರ್ಟಿನ ಸಾಂವಿಧಾನಿಕ ಪೀಠ ತಾವು ತಂದಿರುವ ಮಸೂದೆಯ ಪರವಾದ ತೀರ್ಮಾನವನ್ನು ನೀಡಿದೆ ಎಂಬುದು ಶುದ್ಧ ಸುಳ್ಳು.

ಐದನೆಯದಾಗಿ ಅದೇ ತೀರ್ಮಾನದಲ್ಲಿ ಸಾಂವಿಧಾನಿಕ ಪೀಠ ಸತ್ತ ದನಗಳ ಚರ್ಮ ಮತ್ತಿತ್ಯಾದಿಗಳನ್ನು ಬಳಸಿಕೊಳ್ಳಲು ಸಂಪೂರ್ಣ ಪರವಾನಗಿ ನೀಡಿದೆ:

"In so far as trade in hides, skins and other allied things (which are derived from the body of dead animal) are concerned, it is not necessary that the animal must be slaughtered to avail these things. The animal, whose slaughter has been prohibited, would die a natural death even otherwise and in that case their hides, skins and other parts of body would be available for trade and industrial activity based thereon."

ಅಂದರೆ "ದನದ ಚರ್ಮ, ಹಾಗು ದೇಹದ ಇತರ ಭಾಗಗಳ ವ್ಯಾಪಾರವನ್ನು ಕುರಿತಂತೆ ಹೇಳುವುದಾದರೆ ಇವುಗಳ ವ್ಯಾಪಾರ ನಡೆಸಬೇಕೆಂದರೆ ಅವುಗಳನ್ನು ಹತ್ಯೆ ಮಾಡಲೇ ಬೇಕೆಂದೇನೂ ಇಲ್ಲ. ಹೇಗಿದ್ದರೂ ಅವು ಸಹಜ ಸಾವನ್ನಪ್ಪುವುದರಿಂದ ಅವುಗಳ ಚರ್ಮ ಮತ್ತು ದೇಹದ ಇತರ ಭಾಗಗಳ ವ್ಯಾಪಾರ ಹಾಗೂ ಕೈಗಾರಿಕಾ ಚಟುವಟಿಕೆಗಳಿಗೆ ಏನೂ ಬಾಧಕವಾಗುವುದಿಲ್ಲ."

ಆದರೆ ಕರ್ನಾಟಕದ ಬಿಜೆಪಿ ಸರ್ಕಾರದ ಮಸೂದೆಯ ಸೆಕ್ಷನ್ 5 ದನದ ಮಾಂಸವನ್ನು ವ್ಯಾಪಾರ ಮಾಡುವುದಿರಲಿ ಅದನ್ನು ಇಟ್ಟುಕೊಳ್ಳುವುದನ್ನೇ ಶಿಕ್ಷಾರ್ಹ ಅಪರಾಧವನ್ನಾಗಿ ಮಾಡುತ್ತದೆ. ಹೀಗಾಗಿ ಈ ಕಾರಣಕ್ಕೂ ಬಿಜೆಪಿ ಮಸೂದೆಗೆ ಸುಪ್ರೀಂಕೋರ್ಟಿನ ಬೆಂಬಲವಿಲ್ಲ.

ಐದನೆಯದಾಗಿ ಅಂಬೇಡ್ಕರ್ ಅವರ ಅಧ್ಯಕ್ಷತೆಯಲ್ಲಿ ರಚಿಸಿದ ಸಂವಿಧಾನವೂ ಸಹ ಸಂಪೂರ್ಣ ಗೋಹತ್ಯಾ ನಿಷೇಧದ ಪರವಾಗಿದೆ ಎಂಬ ಮತ್ತೊಂದು ಸುಳ್ಳು.

ಸಂವಿಧಾನದ ರಚನಾ ಸಭೆಯಲ್ಲಿ ಸಂಪೂರ್ಣ ಗೋಹತ್ಯಾ ನಿಷೇಧವನ್ನು ಮೂಲಭೂತ ಹಕ್ಕನ್ನಾಗಿಯೇ ಮಾಡಬೇಕೆಂಬ ಒತ್ತಾಯವನ್ನು ಕೆಲವು ಹಿಂದೂ ಮಹಾಸಭಾ ಮತ್ತು ಕಾಂಗ್ರೆಸ್ ಸದಸ್ಯರು ಮಾಡಿದ್ದು ನಿಜ. ಆದರೆ ಅಂಬೇಡ್ಕರ್‌ರವರ ಸತತ ವಾದ ಮತ್ತು ಪರಿಶ್ರಮದಿಂದಾಗಿ ಈ ಉಗ್ರವಾದಿಗಳು ತಮ್ಮ ನಿಲುವಿನಿಂದ ಕೊನೆಗೂ ಹಿಂದೆ ಸರಿದದ್ದು ಈಗ ಇತಿಹಾಸ. ಇದಲ್ಲದೆ ಅಂಬೇಡ್ಕರ್‌ರವರು ತಮ್ಮ ಬರಹದಲ್ಲಿ ಉದ್ದಕ್ಕೂ ದನದ ಮಾಂಸ ಭಕ್ಷಣೆಯನ್ನು ಕೀಳಾಗಿ ಚಿತ್ರಿಸಿದ ಬ್ರಾಹ್ಮಣ್ಯದ ಕುತಂತ್ರವನ್ನು ಉದ್ದಕ್ಕೂ ಬಯಲುಗೊಳಿಸುತ್ತಲೇ ಬಂದಿದ್ದಾರೆ. ಇಂಥಾ ಜನನಾಯಕ, ಮಹಾನ್ ದಾರ್ಶನಿಕ ಬುದ್ಧವಾದಿ ಅಂಬೇಡ್ಕರ್‌ರನ್ನು ಈ ಹಿಂದೂತ್ವವಾದಿಗಳು ತಮ್ಮ ಗೋವು ಮಾತ್ರ ಪವಿತ್ರ ಎಂಬ ಪ್ರಚಾರಕ್ಕೆ ಬಳಸಿಕೊಳ್ಳುತ್ತಿರುವುದೇ ಅವರ ಕೀಳು ಮನಸ್ಸಿಗೆ ಒಂದು ನಿದರ್ಶನ.

ಈ ಎಲ್ಲಾ ಚರ್ಚೆಗಳ ಹಿನ್ನೆಲೆಯಲ್ಲಿ ಗೋ ಸಂರಕ್ಷಣೆ ಮತ್ತು ಹತ್ಯಾ ನಿಷೇಧದ ಬಗ್ಗೆ ಸಂವಿಧಾನದಲ್ಲಿ 48ನೇ ಕಲಮನ್ನು ಸೇರಿಸಲಾಯಿತು. ಅದು ಹೇಳುವುದಿಷ್ಟು:

"The State shall endeavour to organise agriculture and animal husbandry on modern and scientific lines and shall, in particular, take steps for preserving and improving the breeds, and prohibiting the slaughter, of cows and calves and other milch and draught cattle."

ಅಂಬೇಡ್ಕರ್ ಅವರ ಅಧ್ಯಕ್ಷತೆಯಲ್ಲಿ ರಚಿಸಿದ ಸಂವಿಧಾನವೂ ಸಹ ಸಂಪೂರ್ಣ ಗೋಹತ್ಯಾ ನಿಷೇಧದ ಪರವಾಗಿದೆ ಎಂಬುದು ಮತ್ತೊಂದು ಸುಳ್ಳು. ಸಂವಿಧಾನದ ರಚನಾ ಸಭೆಯಲ್ಲಿ ಸಂಪೂರ್ಣ ಗೋಹತ್ಯಾ ನಿಷೇಧವನ್ನು ಮೂಲಭೂತ ಹಕ್ಕನ್ನಾಗಿಯೇ ಮಾಡಬೇಕೆಂಬ ಒತ್ತಾಯವನ್ನು ಹಿಂದೂ ಮಹಾಸಭಾ ಮತ್ತು ಕಾಂಗ್ರೆಸ್ ಸದಸ್ಯರು ಮಾಡಿದ್ದು ನಿಜ. ಆದರೆ ಅಂಬೇಡ್ಕರ್‌ರವರ ಸತತ ವಾದ ಮತ್ತು ಪರಿಶ್ರಮದಿಂದಾಗಿ ಈ ಉಗ್ರವಾದಿಗಳು ತಮ್ಮ ನಿಲುವಿನಿಂದ ಕೊನೆಗೂ ಹಿಂದೆ ಸರಿದದ್ದು ಈಗ ಇತಿಹಾಸ. ಇದಲ್ಲದೆ ಅಂಬೇಡ್ಕರ್‌ರವರು ತಮ್ಮ ಬರಹದಲ್ಲಿ ಉದ್ದಕ್ಕೂ ದನದ ಮಾಂಸ ಭಕ್ಷಣೆಯನ್ನು ಕೀಳಾಗಿ ಚಿತ್ರಿಸಿದ ಬ್ರಾಹ್ಮಣ್ಯದ ಕುತಂತ್ರವನ್ನು ಬಯಲುಗೊಳಿ ಸುತ್ತಲೇ ಬಂದಿದ್ದಾರೆ. ಅಂಬೇಡ್ಕರ್‌ರನ್ನು ಈ ಹಿಂದೂತ್ವ ವಾದಿಗಳು ತಮ್ಮ ಗೋವು ಮಾತ್ರ ಪವಿತ್ರ ಎಂಬ ಪ್ರಚಾರಕ್ಕೆ ಬಳಸಿಕೊಳ್ಳುತ್ತಿರುವುದೇ ಅವರ ಕೀಳು ಮನಸ್ಸಿಗೆ ಒಂದು ನಿದರ್ಶನ.

ಅಂದರೆ "ದೇಶದ ಕೃಷಿಕ್ಷೇತ್ರ ಮತ್ತು ಪಶುಸಂಗೋಪನೆಯನ್ನು ಆಧುನಿಕ ಮತ್ತು ವೈಜ್ಞಾನಿಕ ನೆಲೆಯಲ್ಲಿ ಪುನರ್‌ಸಂಘಟಿಸಬೇಕು ಹಾಗೂ ಪ್ರಭುತ್ವವು ಗೋವು ಮತ್ತು ಇತರ ಹಾಲು ಕರೆಯುವ ಮತ್ತು ಕೃಷಿ ಉಪಯೋಗಿ ಜಾನುವಾರುಗಳ ಹತ್ಯೆಯನ್ನು ತಡೆಗಟ್ಟಲು ಕಾನೂನನ್ನು ರಚಿಸಬೇಕು." ಎಂದಷ್ಟೇ ಹೇಳುತ್ತದೆ. ಸ್ಪಷ್ಟವಾಗಿ ಕಾಣುವಂತೆ ಈ ಕಲಮಿನಲ್ಲಿ ಹಾಲು ಕರೆಯುವ ಹಸುಗಳು ಮತ್ತು ಕೃಷಿಗೆ ಉಪಯೋಗಕಾರಿ ಜಾನುವಾರುಗಳನ್ನು ರಕ್ಷಿಸಬೇಕೆಂಬ ಆಶಯವಿದೆಯೇ ವಿನಃ ರೈತರಿಗೆ ಉಪಯೋಗಕ್ಕೆ ಬರದ ಗೋವನ್ನಾಗಲೀ, ಇತರ ಜಾನುವಾರುಗಳನ್ನಾಗಲೀ ಪವಿತ್ರವೆಂಬ ಅಥವಾ ಅನುಕಂಪದ ದೃಷ್ಟಿಯಿಂದ ಸಾಕಲೇಬೇಕೆಂಬ ಆದೇಶವಿಲ್ಲ.

ಇದರ ಬಗ್ಗೆಯೂ ಸುಪ್ರೀಂ ಕೋರ್ಟು ತನ್ನ ಸ್ಪಷ್ಟವಾದ ವ್ಯಾಖ್ಯಾನ ನೀಡಿದೆ. 1959ರ ಮೊಹಮ್ಮದ್ ಹನೀಫ್ ಖುರೇಷಿ ಮತ್ತು ಬಿಹಾರ ರಾಜ್ಯದ ಪ್ರಕರಣ (AIR 1959 SCR 629)ದಲ್ಲಿ ನಿರ್ಣಯವನ್ನು ನೀಡುವಾಗ ವರಿಷ್ಠ ನ್ಯಾಯಾಲಯವು ಈ ಬಗ್ಗೆ ಹೀಗೆ ಹೇಳಿದೆ:

" (i) that a total ban on the slaughter of cows of all ages and calves of cows and calves of she-buffaloes, male or female, was quite reasonable and valid and is in consonance with the Directive Principles laid down in Article 48; (ii) that a total ban on the slaughter of she-buffaloes or breeding bulls or working bullocks (cattle as well as buffaloes) as long as they are capable of being used as milch or draught cattle was also reasonable and valid; and (iii) that a total ban on slaughter of she-buffaloes, bulls and bullocks (cattle or buffalo) after they ceased to be capable of yielding milk or of breeding or working as draught animals could not be supported as reasonable in the interests of the general public and was invalid."

ಪ್ರಸ್ತುತ ಆರ್ಥಿಕ ಸಂದರ್ಭದಲ್ಲಿ ಉಪಯೋಗಕ್ಕೆ ಬಾರದ ಜಾನುವಾರುಗಳು ಸಮಾಜಕ್ಕೆ ಒಂದು ಹೊರೆಯಾಗುತ್ತದಾದ್ದರಿಂದ ಅದು ಸಾರ್ವಜನಿಕ ಹಿತಾಸಕ್ತಿಗೆ ವಿರುದ್ಧವಾಗಿದೆ. ಹೀಗಾಗಿ ಸಂಪೂರ್ಣ ಜಾನುವಾರು ಹತ್ಯಾ ನಿಷೇಧ ಸಾಧ್ಯವಿಲ್ಲ ಎಂಬ ತಮ್ಮ ನಿಲುವನ್ನು ಸ್ಪಷ್ಟಪಡಿಸುತಾ ಮುಖ್ಯ ನ್ಯಾಯಮೂರ್ತಿ ಸಿ.ಆರ್. ದಾಸ್‌ರವರು ಮೂರು ಮುಖ್ಯಾಂಶಗಳನ್ನು ಪ್ರಸ್ತಾಪಿಸಿದ್ದರು.

"1. ಎಲ್ಲಾ ವಯಸ್ಸಿನ ಹಸುಗಳ ಮತ್ತು ಎಲ್ಲಾ ಕರುಗಳ ಹತ್ಯೆಯ ಮೇಲಿನ ನಿಷೇಧ ಸಿಂಧುವಾದದ್ದು. 2. ಹಾಲು ನೀಡುವ ಎಮ್ಮೆಗಳ ಮತ್ತು ಉಳುವ ಯೋಗ್ಯ ಎತ್ತುಗಳ ಹತ್ಯೆಯ ಮೇಲಿನ ನಿಷೇಧವೂ ಸರಿಯಾದದ್ದೇ. 3. ಆದರೆ ಹಾಲು ನೀಡದ ಎಮ್ಮೆಗಳ ಮತ್ತು ಉಳುಮೆಗೆ ಸಹಕಾರಿಯಾಗದ ಎತ್ತು ಮತ್ತು ದನಗಳ ಹತ್ಯೆಯ

(49ನೇ ಪುಟಕ್ಕೆ)

ಯು. ಎಸ್. ಸಂಗನಾಳಮಠ

ನಕ್ಸಲ್‌ಬಾರಿ ಎಂಬುಂದು ಪಶ್ಚಿಮ ಬಂಗಾಳದ ಡಾರ್ಜಿಲಿಂಗ್ ಜಿಲ್ಲೆಯ ಸಿಲಿಗುರಿ ಪ್ರದೇಶದಲ್ಲಿ ಗುಡ್ಡಬೆಟ್ಟಗಳ ತಪ್ಪಲ ಲ್ಲಿರುವ ಒಂದು ಪುಟ್ಟ ಗ್ರಾಮ. ಪ್ರಶಾಂತವಾಗಿದ್ದ ಈ ಪ್ರದೇಶದಲ್ಲಿ ೧೯೬೭ ರಲ್ಲಿ ಬಾಂಬು ಗುಂಡು ಗಳ ಸಪ್ಪಳ ಕೇಳಲಾ ರಂಭಿಸಿತು. ೧೯೬೨ರ ಚೈನಾ ಯುದ್ಧದಲ್ಲಿ ಮಾವೋ ನಾಯಕತ್ವದ ಸೇನೆ ೯೦೦೦೦ ಚ.ಕೀಮಿ ಪ್ರದೇಶವನ್ನು ಆಕ್ರಮಿಸಿ ಕೊಂಡಿತು. ಭಾರತ ಕಮ್ಯುನಿಸ್ಟ್‌ಪಕ್ಷ ಚೀನಾದ ಕೆಂಪು ಸೇನೆ ಯನ್ನು ಮುಕ್ತಿ ಸೇನೆ ಎಂದು ಸ್ವಾಗತಿಸಿತು. ಚೀನಾ ಸೇನೆ ನಿರ್ಗಮಿ ಸಿದ ನಂತರ ಭಾರತದ ಕಮ್ಯುನಿಸ್ಟ್ ಪಕ್ಷ ೧೯೬೪ರಲ್ಲಿ CPI (ಸೋವಿಯತ್ ಬಣ) CPM (ಚೀನಾ ಬಣ) ಎಂದು ಇಬ್ಭಾಗವಾ ಯಿತು. ೧೯೬೭ರಲ್ಲಿ ಭಾರತದ ೯ ರಾಜ್ಯಗ ಳಲ್ಲಿ ಕಾಂಗ್ರೆಸೇತರ ಪಕ್ಷಗಳು ಜಯಿಸಿದವು ಪ. ಬಂಗಾಳ ಕೇರಳ ಗಳಲ್ಲಿ CPI ಪಕ್ಷ ಅಧಿಕಾರಕ್ಕೆ ಬಂದಿತು. ಇದು CPM ಪಕ್ಷವನ್ನು ಮಾನ್ಯ ಮಾಡಲಿಲ್ಲ.

ಅಹಿಂಸೆಯಿಂದ ಹಿಂಸೆಯನ್ನು ಜಯಿಸಿದ ಈ ದೇಶದಲ್ಲಿ ಮತ್ತೆ ಹಿಂಸೆಯ ತಾಂಡವ, ಪ್ರಜಾಪ್ರಭುತ್ವದ ಹೆಸರಿನಲ್ಲಿ ಹಿಂಸೆ, ವಾಣಿಜ್ಯದ ಹೆಸರಿನಲ್ಲಿ ಹಿಂಸೆ, ಮತ-ಧರ್ಮಗಳ ಹೆಸರಿನಲ್ಲಿ ಹಿಂಸೆ, ವಿಜ್ಞಾನದ ಹೆಸರಿನಲ್ಲಿ ಹಿಂಸೆ, ದುರ್ಬಲರ ಮೇಲೆ ಹಿಂಸೆ ಹೀಗೇಕೆ,? ಹಿಂಸೆಯ ಹಾದಿಗೆ ಸನ್ನಿವೇಶವೇ? ಪರಿಸ್ಥಿತಿಯೇ,? ಸಬಲತೆಯೇ,? ಅಧಿಕಾರ ಚಲಾಯಿಸುವಿಕೆಯೇ,? ಹೋರಾಟಕ್ಕೆ ಒಂದು ವಾಮ ಮಾರ್ಗವೇ? ಎಂಬಿತ್ಯಾದಿ ಪ್ರಶ್ನೆಗಳು ಉದ್ಭವಿಸುವವು. ಈಗ ಉದ್ಭವಿಸಿರುವ ನಕ್ಸಲ್ ಸಮಸ್ಸೆ ಬಗ್ಗೆ ಈ ಎಲ್ಲಾ ಪ್ರಸ್ತಾವನೆ ಎಂಬುದು ನಿಮಗೆ ತಿಳಿದಿದೆ. ಈ ನಾನಾತರಹದ ಹಿಂಸೆಯ ಮರ್ತುಲದಲ್ಲಿ ನಕ್ಸಲರು ಕೇವಲ ಹವ್ಯಾಸಿಗಳು ನಿಮಿತ್ತಮಾತ್ರರು. ಯಾರು ಈ ನಕ್ಸಲೀಯರು.?

ನಕ್ಸಲ್‌ಬಾರಿ ಎಂಬುಂದು ಪಶ್ಚಿಮ ಬಂಗಾಳದ ಡಾರ್ಜಿಲಿಂಗ್ ಜಿಲ್ಲೆಯ ಸಿಲಿಗುರಿ ಪ್ರದೇಶದಲ್ಲಿ ಗುಡ್ಡಬೆಟ್ಟಗಳ. ತಪ್ಪಲಲ್ಲಿರುವ ಒಂದು ಪುಟ್ಟ ಗ್ರಾಮ. ಪ್ರಶಾಂತವಾಗಿದ್ದ ಈ ಪ್ರದೇಶದಲ್ಲಿ 1967ರಲ್ಲಿ ಬಾಂಬು ಗುಂಡುಗಳ ಸಪ್ಪಳ ಕೇಳಲಾರಂಭಿಸಿತು. 1962ರ ಚೈನಾ ಯುದ್ಧದಲ್ಲಿ ಮಾವೋ ನಾಯಕತ್ವದ ಸೇನೆ 90000 ಚ.ಕೀಮಿ ಪ್ರದೇಶವನ್ನು ಆಕ್ರಮಿಸಿಕೊಂಡಿತು. ಭಾರತ ಕಮ್ಯುನಿಸ್ಟ್‌ಪಕ್ಷ ಚೀನಾದ ಕೆಂಪುಸೇನೆಯನ್ನು ಮುಕ್ತಿ ಸೇನೆ ಎಂದು ಸ್ವಾಗತಿಸಿತು. ಚೀನಾ ಸೇನೆ ನಿರ್ಗಮಿಸಿದ ನಂತರ ಭಾರತದ ಕಮ್ಯುನಿಸ್ಟ್ ಪಕ್ಷ 1964ರಲ್ಲಿ CPI (ಸೋವಿಯತ್ ಬಣ) CPM(ಚೀನಾ ಬಣ) ಎಂದು ಇಬ್ಭಾಗವಾಯಿತು. 1967ರಲ್ಲಿ ಭಾರತದ 9 ರಾಜ್ಯಗಳಲ್ಲಿ ಕಾಂಗ್ರೆಸೇತರ ಪಕ್ಷಗಳು ಜಯಿಸಿದವು. ಪ.ಬಂಗಾಳ ಕೇರಳದಲ್ಲಿ CPI ಪಕ್ಷ ಅಧಿಕಾರಕ್ಕೆ ಬಂದಿತು. ಇದು CPM ಪಕ್ಷವನ್ನು ಮಾನ್ಯ ಮಾಡಲಿಲ್ಲ. ಆಗ ತನ್ನ ಚೀನಾ ಮಾವೋ ನಿಷ್ಠೆಯನ್ನು ಸಾಬೀತು ಮಾಡಲು ಬಂಗಾಳದ ನಕ್ಸಲ್‌ಬಾರಿಯಲ್ಲಿ ಜನಹಿತ ವಿರೋಧಿ ಗಳ ವಿರುದ್ಧ ಸಶಸ್ತ್ರ ಬಂಡಾಯ ನಡೆಸುವಂತೆ ತೀವ್ರಗಾಮಿಗಳನ್ನು CPI ಪಕ್ಷ ಪ್ರೋತ್ಸಾಹಿಸಿತು. ಹೀಗೆ ನಕ್ಸಲ್‌ಬಾರಿಯಲ್ಲಿ ನಕ್ಸಲ್ ವಾದ ಜನಿಸಿತು. 1967ರ ಮೇ ತಿಂಗಳಲ್ಲಿ ಈ ಪ್ರದೇಶದ ಜಮಿನುದಾರನೊಬ್ಬ ನ್ಯಾಯಾಲಯ ನೀಡಿದ ರಕ್ಷಣೆಯ ಹೊರತಾಗಿಯೂ ಬಡ ರೈತನೊಬ್ಬನನ್ನ ಹೊಲಮನೆಯಿಂದ ಹೊರದೂಡಿದ ಪ್ರಸಂಗ ರೈತರನ್ನೂ ರೊಚ್ಚಿಗೆಬ್ಬಿಸಿತು. ಜಮಿನುದಾರನನ್ನ ತಡೆದು ನಿಲ್ಲಿಸಿದರು, ಚಹಾ ತೋಟದ ಮಾಲಿಕನ ಇದೇ ತರಹದ ವರ್ತನೆಗೆ ಅವನ ವಿರುದ್ಧ ಪ್ರತಿಭಟನೆ ಮಾಡಿದರು. ಈ ಸಂದರ್ಭದಲ್ಲಿ ಉಂಟಾದ ಘರ್ಷಣೆಯಲ್ಲಿ ಪೊಲೀಸ್ ಪೇದೆ ಸಾವಿಗೀಡಾದನು. ಆಗ ಪೊಲೀಸರು ಹೆಚ್ಚಿನ ಸಂಖ್ಯೆಯಲ್ಲಿ ಬಂದು ಹೆಂಗಸರು, ಮಕ್ಕಳ ಮೇಲೆ ಗುಂಡಿನ ದಾಳಿ ಮಾಡಿದರು. 9 ಜನರನ್ನು ಗುಂಡಿಕ್ಕಿ ಕೊಂದರು ಈ ಪ್ರಕರಣ ರೈತ ಸಮುದಾಯದ ನಕ್ಸಲ್‌ಬಾರಿ ದಂಗೆಗೆ ನಾಂದಿಯಾಯಿತು. ಆ ಪ್ರದೇಶದ ಮಾರ್ಕ್ಸವಾದಿ ಕಮ್ಯುನಿಸ್ಟರು ಜಮಿನುದಾರರ ಮನೆಗೆ ಮುತ್ತಿಗೆ ಹಾಕಿ ಸಂಗ್ರಹಿಸಿದ ಧಾನ್ಯಗಳನ್ನು ಬಡವರಿಗೆ ಹಂಚಿದರು ಮತ್ತು ಸಾಲಪತ್ರಗಳನ್ನು ಹರಿದು ಹಾಕಿದರು, ಸ್ಥಳಿಯ ಜನರೇ ಚಿಕ್ಕ ಚಿಕ್ಕ ಕಾವಲು ಪಡೆ ರಚಿಸಿ ರಕ್ಷಣಾಗಾರರಾದರು. ದೇಶ ವಿದೇಶದಲ್ಲಿ ಪ್ರಚಾರ– ಆಯಿತು. ಹಿಂಸೆಯನ್ನು ಪ್ರತಿ ಪಾದಿಸುವ ಒಂದು ಆಂದೋಲನ ಎನಿಸಿತು. ಚಾರು ಮಜುಂದಾರ ನಾಯಕ ಎನಿಸಿದ್ದ, ಈತನ ಶಿಷ್ಯ ಕಮ್ಯುನಿಸ್ಟ್ ಪಕ್ಷದ ನಿಷ್ಠೆಯ ಕಾರ್ಯಕರ್ತ ಕನುಸನ್ಯಾಲ್ ಈತ ಕ್ರಾಂತಿಕಾರಿ.



ಕ್ಯೂಬಾದಲ್ಲಿ 1928ರಲ್ಲಿ ಹುಟ್ಟಿ ಅರ್ಜೆಂಟೆನಾದಲ್ಲಿ ಬೆಳೆದು ಸಶಸ್ತ್ರ ಕ್ರಾಂತಿಯಲ್ಲಿ ಗೆರಿಲ್ಲಾಯುದ್ಧ ತಂತ್ರವನ್ನು ಪ್ರತಿಪಾದಿಸಿದ ಡಾ. ಚೆಗುವೆರಾ (Chie Guevara) ನಕ್ಸಲಿಯರಿಗೆ ನಾಯಕ. ಈತನ ಕ್ರಾಂತಿತತ್ವ ಈ ರೀತಿ ಇದೆ. ಹೊಡೆತ ಕೊಟ್ಟು ಓಡಿರಿ, ಅಡಗಿಕೊಳ್ಳಿ ಪುನಃ ಹೊಡೆದು ಓಡಿರಿ, ನಿಮ್ಮ-ಶತ್ರು ಬಳಲಿ ಬೆಂಡಾಗುವವರೆಗೆ ಹೊಡೆದು ಓಡಿ ಅಡಗುವ ನಿಮ್ಮ ತಂತ್ರ ಮುಂದುವರಿಯುತ್ತಿರಲಿ.[-hit, run,hide. run,hide until you wear down you enemies] ಚಾರು ಮಜುಂದಾರ್ ಹೋರಾಟಕ್ಕೆ ಜನ ಸಾಮಾನ್ಯರನ್ನೂ ಅಣಿಮಾಡಿದ್ದನು. ಜನರ ಪ್ರಜಾಸತ್ತಾತ್ಮಕ ಕ್ರಾಂತಿಯನ್ನು ಸಾಧಿಸಬೇಕಾದರೆ ಸೈನಿಕ ಶಕ್ತಿಯ ಗ್ರಾಮೀಣ ನೆಲೆಯನ್ನು ಕಟ್ಟಿಕೊಂಡು, ನಗರಗಳಿಗೂ ಆವರಿಸುವಂತೆ ಮಾಡುವದು ಅದರ ಉದ್ದೇಶ.

ನಕ್ಸಲಿಯತೆಗೆ ಈ ಕಾರಣಗಳನ್ನು ಗುರುತಿಸಬಹುದು–

1) ನಕ್ಸಲ್‌ಬಾರಿ ಪ್ರದೇಶದ ವನವಾಸಿಗಳ ತೀವ್ರವಾದ ಆರ್ಥಿಕ ಅಸಂತೃಪ್ತಿ, ಬೆಳೆಯುತ್ತಿರುವ ಜನಸಂಖ್ಯೆಗೆ ಹಳೆಯ ಮಾದರಿಯ ಬೇಸಾಯದ ಉತ್ಪಾದನೆ ಸಾಕಾಗದಿರುವದು.

2) ಅರಣ್ಯಗಳ ರಷ್ಟ್ರೀಕರಣ ದಿಂದ, ಸರಕಾರದ ಅನುಮತಿ ಇಲ್ಲದೇ ಅರಣ್ಯ ಹುಟ್ಟುವಳಿ (ಮುಖ್ಯವಾಗಿ ದಿಮ್ಮಿಗಳನ್ನು ಕಡಿಯುವದು) ಪಡೆಯುವದು ದುಸ್ತರವಾಯಿತು,

3) ಆರ್ಥಿಕ ಕಷ್ಟಕ್ಕೆ ಸಿಲುಕಿದ ವನವಾಸಿಗಳು ಹೆಚ್ಚು ಬಡ್ಡಿದರದ ಸಾಲವನ್ನು ಜಮಿನುದಾರರಿಂದ ಪಡೆದು ತೀರಿಸಲಾಗದೇ ಜಮಿನನ್ನೇ ಒತ್ತೆ ಇಟ್ಟು ಹತಾಶರಾದರು.

4)ಕೆಲವು ಕೃಷಿ ಕಾರ್ಮಿಕರಿಗೆ ಈ ಹಿಂದೆ ಕೊಟ್ಟಿದ್ದ ಭಕ್ಷೀಸ್ ಭೂಮಿಯನ್ನು ಭೂ ಮಾಲಿಕರು ಕೇಳಿದ್ದರಿಂದ ಅವರಿಬ್ಬರ ನಡುವೆ ಘರ್ಷಣೆ ಪ್ರಾರಂಭವಾಯಿತು.

5)ಉಗ್ರಗಾಮಿ ಮಾರ್ಕ್ಸಿ ಸ್ವರ ಬೆಂಬಲ ಭೂಮಿ ಕಳೆದು ಕೊಂಡವರಿಗೆ ಲಭಿಸಿತು.

6)ಪ.ಬಂಗಾಳ ಸರ್ಕಾರ ಭೂಗರಿಷ್ಠಮಿತಿ ಕಾಯಿದೆ ಜಾರಿಗೆ ತಂದ ನಂತರ ಭೂಮಾಲಿಕರು 25ಎಕರೆ ಗಿಂತ ಹೆಚ್ಚು ಹೊಂದಿದ್ದ ಅಧಿಕ ಭೂಮಿಯನ್ನು ತಮ್ಮ ಸಂಬಂಧಿತರ ಹೆಸರಿನಲ್ಲಿ

ಹಿಂಸೆ ಪರಿಹಾರದ ಮಾರ್ಗವಲ್ಲ

ವರ್ಗಾವಣೆ ಮಾಡಿದಾಗ, ರೈತರು, ಮಾವೋ ಮಾದರಿಯ ಭೂಗ್ರಹಣ ಆಂದೋಲನ ಪ್ರಾರಂಭಿಸಿದರು. ಈ ಆಂದೋಲನವೇ ನಕ್ಸಲ್ ಬಾರಿ ಆಂದೋಲನಕ್ಕೆ ಕಾರಣ.

ಈ ಹಿನ್ನೆಲೆಯಲ್ಲಿ ಆಂದೋಲನ ಪಸರಿಸುತ್ತ ಆರಂಭದ ನೆಲೆಗಳನ್ನು ಆಂಧ್ರಪ್ರದೇಶ, ಮಧ್ಯಪ್ರದೇಶ, ಬಿಹಾರಗಳಲ್ಲಿ ಗುರುತಿಸಿತು, ನಂತರ ಕರ್ನಾಟಕದ ತುಂಗಾಮೂಲ ಉಳಿಸಿ, ಪಶ್ಚಿಮಘಟ್ಟ ಉಳಿಸಿ ಆಂದೋಲನಕ್ಕೆ ಕಾಲಿಟ್ಟಿತು. ನಕ್ಸಲಿಯರ ಕಾರ್ಯತಂತ್ರಗಳು ಅರಣ್ಯ ಮತ್ತು ಆದಿವಾಸಿ ನೆಲೆಗಳು. ಇವುಗಳನ್ನೂ ಗುರುತಿಸಿ ಗೆರಿಲ್ಲಾವಲಯ ಸೃಷ್ಟಿಸಿ, ನಿಯಂತ್ರಣ ಹೊಂದಿ "ವಿಮೋಚಿತ ಪ್ರದೇಶ" ಎಂದು ಗುರುತಿಸುವುದು, ಹಾಗೆ ವ್ಯಾಪ್ತಿ ಹೆಚ್ಚಿಸುತ್ತ ನಗರ ಪ್ರದೇಶಗಳನ್ನು ಸುತ್ತುವರಿದ ನಂತರ ರಾಜಕೀಯ ನಿಯಂತ್ರಣ ಸಾಧಿಸುವುದು. [CPI ಮಂದಗಾಮಿ ಬಲಪಂಥೀಯರಾದರೆ, CPM ತೀವ್ರಗಾಮಿ ಎಡಪಂಥೀಯರು, ಕ್ರಾಂತಿಕಾರಿ ಸಶಸ್ತ್ರ ಬಂಡಾಯಗಳಲ್ಲಿ ನಂಬಿಕೆ ಇದ್ದವರು. ತಮ್ಮನ್ನು CPIM+L ಅಂದರೆ ಮಾರ್ಕಿಸ್ಟ್ ಲೆನಿನಿಸ್ಟ್, ಎಂದು ಕರೆದುಕೊಂಡರು.]

ಪಶ್ಚಿಮಘಟ್ಟ ಉಳಿಸಿ ಆಂದೋಲನ ಕುದುರೆಮುಖ ರಾಷ್ಟ್ರೀಯ ಉದ್ಯಾನವನದ ವಿರುದ್ಧ ಹೋರಾಟದ ಮೂಲಕ ನಕ್ಸಲರುಕರ್ನಾಟಕಕ್ಕೆ ಪ್ರವೇಶಿಸಿದರು. ಮೊದಲನೆಯದು ವೈಚಾರಿಕ ತಳಹದಿ ಆದರೆ, ಎರಡನೆಯದು ವನವಾಸಿಗಳ ಬೆಂಬಲ ಒದಗಿಸಿತು, ವೈಚಾರಿಕ ತಳಹದಿಗೆ ಪೂರಕವಾಗಿ ತುಂಗಾಮೂಲ ಉಳಿಸಿ ಹೋರಾಟ, ಕಳಸೇಶ್ವರ ದೇವಸ್ಥಾನದ ಇನಾಂ ಭೂಮಿವಶದ ವಿರುದ್ಧ ಹೋರಾಟ, ಗಂಗ ಡಿಕಲ್ಲು–ನೆಲ್ಲಿಬೀಡು ಗಣಿಗಾರಿಕೆಯ ವಿರುದ್ಧ ಹೋರಾಟ ನಡೆದಿವೆ, ಇವು ಯಾವ ಫಲ ಕೊಟ್ಟಿರುವದಿಲ್ಲ, ನಂತರ 2002ರ ಡಿಸೆಂಬರ್‌ರಂದು ನಡೆದ, ಮೆಣಸಿನಹಾಡ್ಯ ಮತ್ತು ಇತರ ಪ್ರಕರಣಗಳು ಅವ್ಯಹತವಾಗಿ ಸಾಗಿವೆ.

ನಗರದ ನಕ್ಸಲೀಯ ಗಣ್ಯರ, ಗ್ರಾಮೀಣ ಹಿನ್ನಲೆಯ ಬಡಜನರ ವಿಚಾರಗಳು ಬೇರೆ ಬೇರೆ ಆದವು. ಅವರ ನಡುವೆ ಸಮಾನ ಸ್ಪಂದನ ಇರಲಿಲ್ಲ. ನಕ್ಸಲೀಯರಲ್ಲಿ ಮಾರ್ಕ್ಸ್‌ವಾದಿ, ಲೆನಿನ್‌ವಾದಿ, ಮಾವೋವಾದಿ, ಎಂಬ ಬಣಗಳಾಗಿವೆ. ರಾಜಕೀಯ ಅಧಿಕಾರದಾಹ ಉಂಟಾಗಿದೆ.

ನಕ್ಸಲರೊಂದಿಗೆ ದೇಶದ ರಾಜಕೀಯ ಪಕ್ಷಗಳ ಮುಖಂಡರೂ ಸಂಬಂಧ ಹೊಂದಿರುವದು ಅಪಾಯಕಾರಿ ಬೆಳವಣಿಗೆ. ನಕ್ಸಲ್ ಪ್ರಾಬಲ್ಯವುಳ್ಳ ರಾಜ್ಯಗಳಲ್ಲಿ ಗ್ರಾಮಪಂಚಾಯಿತಿ ಚುನಾವಣೆಗಳಿಂದ ಹಿಡಿದು ಲೋಕಸಭಾ ಚುನಾವಣೆಗಳ ಫಲಿತಾಂಶಗಳನ್ನು ನಕ್ಸಲಿಯರೇ ನಿರ್ಧರಿಸುತ್ತಾರೆ. ಚುನಾವಣೆಯಲ್ಲಿ ಜಯಗಳಿಸಿದ ಪಕ್ಷ ಸ್ವಭಾವಿಕವಾಗಿ ನಕ್ಸಲಿಯರಿಗೆ ಮೃದು ಧೋರಣೆಯನ್ನು ಅನುಸರಿಸುತ್ತದೆ. ಬಿಹಾರ, ಆಂಧ್ರ ಉತ್ತಮ ಉದಾಹರಣೆ.

ಕರ್ನಾಟಕದ ಕೆಲವು ಸಮಸ್ಸೆಗಳಿಗೆ ಪರಿಹಾರವನ್ನು ಹೀಗೂ ಸೂಚಿಸಬಹುದು.

ಪಶ್ಚಿಮ ಘಟ್ಟದ ಕರಾವಳಿ–ಮಲೆನಾಡನ್ನು ಕಾರ್ಮಿಕರಿಗೆ ಕಾಫಿ–ಅಡಿಕೆ ಧಾರಣೆ ಕುಸಿತವಾದಾಗ ಸರಕಾರ ಅವರ ಸಮಸ್ಸೆಗಳನ್ನು ತಕ್ಷಣ ಪರಿಹರಿಸಬೇಕು. ರಾಷ್ಟ್ರೀಯ ಹೆದ್ದಾರಿ ನಿರ್ಮಾಣ ಮಾಡುವಾಗ ಜಮೀನು ಬಿಟ್ಟುಕೊಡುವ ಕೃಷಿಕನಿಗೆ ಪುನರ್‌ವಸತಿ, ಪರಿಹಾರ ಕಾರ್ಯಗಳನ್ನು ಸರಕಾರ ನಿರ್ವಹಿಸಬೇಕು. ಮಲೆನಾಡು ಪ್ರದೇಶದ ಜೀವನಾವಶ್ಯಕತೆಗಳನ್ನು ಪೂರೈಸಬೇಕು. ತರಬೇತಿ ಹೊಂದಿದ ಸಶಸ್ತ್ರ ಹೊಂದಿದ ಕಾಡಿನ ವಾಸಕ್ಕೆ ಗಂಡೆದೆವುಳ್ಳ ಪೊಲೀಸ್ ಪಡೆಯನ್ನು ನಿಯೋಜಿಸಬೇಕು.

ಪಶ್ಚಿಮಘಟ್ಟ ಉಳಿಸಿ ಆಂದೋಲನ ಕುದುರೆಮುಖ ರಾಷ್ಟ್ರೀಯ ಉದ್ಯಾನವನದ ವಿರುದ್ಧ ಹೋರಾಟದ ಮೂಲಕ ನಕ್ಸಲರುಕರ್ನಾಟಕಕ್ಕೆ ಪ್ರವೇಶಿಸಿದರು. ಮೊದಲನೆಯದು ವೈಚಾರಿಕ ತಳಹದಿ ಆದರೆ, ಎರಡನೆಯದು ವನವಾಸಿಗಳ ಬೆಂಬಲ ಒದಗಿಸಿತು, ವೈಚಾರಿಕ ತಳ ಹದಿಗೆ ಪೂರಕವಾಗಿ ತುಂಗಾಮೂಲ ಉಳಿಸಿ ಹೋರಾಟ, ಕಳಸೇಶ್ವರ ದೇವಸ್ಥಾನದ ಇನಾಂ ಭೂಮಿವಶದ ವಿರುದ್ಧ ಹೋರಾಟ, ಗಂಗಡಿಕಲ್ಲು–ನೆಲ್ಲಿ ಬೀಡು ಗಣಿಗಾರಿಕೆಯ ವಿರುದ್ಧ ಹೋರಾಟ ನಡೆದಿವೆ, ಇವು ಯಾವ ಫಲ ಕೊಟ್ಟಿರುವದಿಲ್ಲ, ನಂತರ 2002ರ ಡಿಸೆಂಬರ್‌ರಂದು ನಡೆದ, ಮೆಣಸಿನ ಹಾಡ್ಯ ಇತರ ಪ್ರಕರಣಗಳು ಅವ್ಯಹತವಾಗಿ ಸಾಗಿವೆ. ನಗರದ ನಕ್ಸಲೀಯ ಗಣ್ಯರ, ಗ್ರಾಮೀಣ ಹಿನ್ನಲೆಯ ಬಡಜನರ ವಿಚಾರಗಳು ಬೇರೆ ಬೇರೆ ಆದವು.

ಕಾಲೇಜು, ಹಾಸ್ಟಲ್‌ಗಳಲ್ಲಿ ಅದಷ್ಟು ಮಟ್ಟಿಗೆ ಹೊರಗಿನವರ ಪ್ರವೇಶಕ್ಕೆ ಆಸ್ಪದ ಕೊಡಬಾರದು, ಗಿರಿಜನರಿಗಾಗಿ ವಸತಿ ಶಾಲೆ, ಚಿಕಿತ್ಸಾಲಯ(ಸಂಚಾರಿ) ವಯಸ್ಕರ ಶಿಕ್ಷಣ ತೆರೆಯಬೇಕು. ನಕ್ಸಲ್ ಪೀಡಿತ ಪ್ರದೇಶಗಳಿಗೆ ವಿಶೇಷ ಅಧಿಕಾರಿಯನ್ನು ಜಿಲ್ಲಾಧಿಕಾರಿ ಮತ್ತು ಪೊಲೀಸ್ ಅಧಿಕಾರಿಗೆ ಸಹಾಯ ಸಹಕಾರ ನೀಡುವಂತೆ ನೇಮಿಸಬೇಕು.

ನಕ್ಸಲ್‌ವಾದಿಗಳು ಭಯೋತ್ಪಾದಕರೇ ಬಿನ್‌ಲ್ಯಾಡನ್‌ನ ಅಲ್‌ಕೈದಾ, ಲಷ್ಕರ್–ಏ–ತೋಯ್ಬಾ, ಇವೆರಡೂ ನಕ್ಸಲ್ ವಾದವನ್ನು ಕೆಲ ಮಟ್ಟಿಗೆ ಹೋಲುತ್ತವೆ ಎರಡೂ ಭೂಗತ, ರಹಸ್ಯ ಹಿಂಸಾತ್ಮಕ ಚಟುವಟಿಕೆಯಲ್ಲಿ ತೊಡಗಿದ್ದ ಸಂಘಟನೆಗಳು ನೇಪಾಳದಲ್ಲಿ ಮಾವೋವಾದಿಗಳು ಭಾರತಕ್ಕೆ ವಿದೇಶಿ ಶಸ್ತ್ರಾಸ್ತ್ರಗಳನ್ನು ಕಳಿಸುವ ಪ್ರಯತ್ನ ಮಾಡುತ್ತಿದ್ದಾರೆ ಎಂಬ ವದಂತಿ ಇದೆ.

ಇಂದು ಬುದ್ಧಿಜೀವಿ, ಮಾಧ್ಯಮಗಳ ಒಂದು ವರ್ಗ ಬಡವರ ದಲಿತರ ಶೋಷಿತರ ಪರವಾಗಿ ಸರಕಾರ ಪೊಲೀಸರಿಂದಾಗುವ ದೌರ್ಜನ್ಯಗಳ ವಿರುದ್ಧ ಹೋರಾಡುವದು ನಕ್ಸಲೀಯರ ಗುರಿ ಎಂದು ಅವರ ಹಿಂಸೆ ಬಲಿದಾನಗಳ ಮುಖವಾಡ ಹಾಕುವ ಪ್ರಯತ್ನ ಕಂಡುಬರುತ್ತದೆ. ಬಡವರ ಶೋಷಿತರ ಉದ್ಧಾರದ ಗುತ್ತಿಗೆಯನ್ನು ಮಾರ್ಕ್ಸ್, ಲೆನಿನ್, ಮಾವೋ ಅವರಿಂದ ಪಡೆದಿದ್ದೇವೆ ಎಂದು ಹೇಳುವಲ್ಲಿ ಯಾವ ಅರ್ಥವಿಲ್ಲ, ಹಿಂಸೆ, ಕೊಲೆಗಡುಕರಿಗೆ ರಕ್ಷಣೆ ನೀಡುವ ನಕ್ಸಲಿಯರನ್ನು ಭಯೋತ್ಪಾದಕರೆಂದು ಪರಿಗಣಿಸಿ ಕಾನೂನಿನ ಚೌಕಟ್ಟಿನ ಅಡಿಯಲ್ಲಿ ವಿಚಾರಣೆ ನಡೆಸಿ ಶಿಕ್ಷಿಸಬೇಕು.

ಜಾಗತೀಕರಣ, ಖಾಸಗೀಕರಣ, ಉದಾರೀಕರಣ ಸುಳಿಯಲ್ಲಿ ಕೆಲವೇ ಮಂದಿಗೆ ಲಾಭವಾಗಿದ್ದರಿಂದ, ನಿರುದ್ಯೋಗದಿಂದ ನಿರಾಶರಾಗಿರುವ ಕೆಲವು ಯುವಕರು ಹೊಸ ಅವಕಾಶಗಳನ್ನು ಪಡೆಯಲಾಗದೆ, ಪರಂಪರೆಯ ಜೀವನಕ್ರಮಕ್ಕೆ ಒಳಗಾಗದೇ ಗೊಂದಲಕ್ಕೆ ಒಳಗಾಗಿ ನಕ್ಸಲಿಯ ಪಂಥಕ್ಕೆ ಆಕರ್ಷಿತರಾಗುವ ಅನಿವಾರ್ಯತೆಗೆ ಒಳಗಾಗಿದ್ದಾರೆ.

ಸಾಮಾಜಿಕ ಜಾಗೃತಿಯಿಂದ, ನ್ಯಾಯದಿಂದ, ರಾಜಕೀಯ ಇಚ್ಛಾಶಕ್ತಿಯಿಂದ, ರಾಷ್ಟ್ರೀಯ ಹಿತಾಸಕ್ತಿಗಳ ಕಾರ್ಯಯೋಜನೆಯಿಂದ ಈ ಸಮಸ್ಯೆಯನ್ನು ಬಗೆಹರಿಸಲು ಸಾಧ್ಯ. ಮಾಧ್ಯಮದವರು ಭಯೋತ್ಪಾದಕರ ಪ್ರಚಾರ ಅಪಪ್ರಚಾರ ತಂತ್ರಗಳಿಗೆ ಬಲಿಯಾಗದಂತೆ ನೋಡಿಕೊಳ್ಳಬೇಕು. ಮಾನವ ಹಕ್ಕುಗಳ ಅನುಷ್ಠಾನಕ್ಕೆ ಸರಕಾರವು ಆದ್ಯಗಮನ ಕೊಡಬೇಕು. ವೈಚಾರಿಕರ ಸೋಗಿನಲ್ಲಿರುವ ಅವಕಾಶವಾದಿಗಳ ಬಗ್ಗೆ ಪ್ರಬಲ ಕ್ರಮಗಳನ್ನು ರೂಪಿಸಬೇಕು. ನಕ್ಸಲರು ಹೇಗೆ ಆದಿವಾಸಿಗಳನ್ನು ಶೋಷಿತರನ್ನು ತಮ್ಮ ಸಿದ್ಧಾಂತವನ್ನು ಸ್ವೀಕರಿಸಲು ಯೋಗ್ಯ ಎಂದು ಭಾವಿಸುತ್ತಾರೆ ಹಾಗೆ ನಕ್ಸಲರನ್ನು ತಮ್ಮ ಸರಕು ಎಂದು ತಿಳಿಯುವ ಅಂತರಾಷ್ಟ್ರೀಯ ಹಿಂಸಾಪ್ರಿಯರು ಇರುತ್ತಾರೆ. ಈ ಅಂಶವನ್ನು ವಿಚಾರಿಸಿದಾಗ ಹಿಂಸೆಯೆ ಎಲ್ಲದಕ್ಕೂ ಪರ್ಯಾಯ ಮಾರ್ಗವಲ್ಲ ಎಂಬ ಸತ್ಯ ಹೊರಗೆ ಬೀಳುವದು, ವಿಧಾಯಕ ಮಾರ್ಗ ಈಗ ನಮಗೆ ಬೇಕಾಗಿದೆ. □

ಸಿಸ್ಟರ್ ನಿವೇದಿತಾ; ಶರಣೆ ನಿವೇದಿತಾ...

–೩–

ಜ್ಯೋತಿ ಗುರುಪ್ರಸಾದ್

ಸುಮಾರು ೧೯೭೫ ರ ಸಮಯ. ಆಗ ತಾನೇ ಹೆಣ್ಣು ಮಕ್ಕಳಿಗಾಗಿ ಇಂಗ್ಲೀಷ್ ಮೀಡಿಯಂ ಪ್ರೌಢಶಾಲೆ ಆರಂಭವಾದ ಹೊಸತು, ಇಂಗ್ಲೀಷ್ ಮೀಡಿಯಂ ಸೇರುವ ಹುಡುಗಿಯರ ಸಂಖ್ಯೆ ಕಡಿಮೆ ಇದ್ದ ಕಾರಣ ನಮಗೆ ಪ್ರತ್ಯೇಕ ಕೋಣೆಯಲ್ಲಿ ಪಾಠ ಮಾಡದೆ ಹುಡುಗರ ಕೋಣೆಯಲ್ಲೇ ಮೊದಲ ಮೂರು ಬೆಂಚುಗಳನ್ನು ಹುಡುಗಿಯರಿಗಾಗಿ ಮೀಸಲಿರಿಸಿ ಕೂರಿಸುವ Co-education ಆರಂಭವಾಗಿತ್ತು. ನಮ್ಮ ನಿವೇದಿತಾ ಧೈರ್ಯ ಸರಿಯೆನಿಸುತ್ತ ಹುಡುಗರಾದರೇನು? ಅವರೂ ನಮ್ಮ ಸಹಪಾಠಿಗಳು ತಾನೇ? ಎಂಬ ಒಂದು ಆರಾಮ ಸ್ಥಿತಿ ಮೂಡಲು ಆರಂಭವಾದ ಕಾಲವದು, ಈ ನಿವೇದಿತಾ ಹೀಗೆ ಹದಿ ಹರೆಯದ ಹುಡುಗಿಯಾಗಿದ್ದರೂ ಒಂದು ಆರೋಗ್ಯಕರ ಧೈರ್ಯ ಸ್ವಭಾವದ ವ್ಯಕಿಯಾಗಿ ರೂಪುಗೊಳ್ಳುವಂಥ ವ್ಯಕ್ತಿಯಾಗಿದ್ದಳಲ್ಲವೇ.?

ನಿವೇದಿತಾ' ಎಂದ ಕೂಡಲೇ ನನಗೆ ಮೊದಲಿಗೆ ನೆನಪಾಗುವುದು ನನ್ನ ಬಾಲ್ಯ ಕಾಲದ ಗೆಳತಿಯೊಬ್ಬಳ ಹೆಸರು. ತಕ್ಷಣ ಅವಳೊಡನೆ ಕಳೆದ ನನ್ನ ಪ್ರೌಢಶಾಲೆಯ ದಿನಗಳು ನೆನಪಿಗೆ ಬಂದು ಅವಳ ಚಿತ್ರ ಆಗ ಅವಳಿದ್ದಂತೆಯೇ ಯಥಾವತ್ತಾಗಿ ಕಣ್ಮುಂದೆ ಬರುತ್ತದೆ. ಐದು ಕಾಲಿನ ಬಿಗಿಯಾದ ಸಂಪ್ರದಾಯಿಕವಾದ ಎರಡು ದಪ್ಪ ಉದ್ದನೆಯ ಜಡೆಯನ್ನು ಹಾಕಿಕೊಂಡಿರುತ್ತಿದ್ದಳು. ಎತ್ತರದ ಹುಡುಗಿ, ಎತ್ತರಕ್ಕೆ ತಕ್ಕಂತೆ ಮೈಕಟ್ಟು, ತ್ರೋ ಬಾಲ್, ಕ್ಕೋ ಕ್ಕೋ ಎಲ್ಲವನ್ನೂ ಆಡುವಷ್ಟು ಬಲಶಾಲಿಯಾಗಿದ್ದಳು. ಹಲ್ಲುಬ್ಬಿದ್ದರೂ ಅದಕ್ಕೆ ಹಿಂದಕ್ಕೆ ಹೋಗುವ ತಂತಿ ಜೋಡಣೆಯನ್ನು ಮಾಡಿಸಿಕೊಂಡು ಆರಾಮವಾಗಿ ಮಾತನಾಡುತ್ತಿದ್ದಳೆಂಬ ನೆನಪು. ಟಿ.ನರಸೀಪುರದ ವಿದ್ಯೋದಯ ಶಾಲೆಯಲ್ಲಿ ನಮ್ಮದು ಕೋ ಎಜುಕೇಶನ್, ಇಂಗ್ಲೀಷ್ ಮೀಡಿಯಂ. ಹುಡುಗಿಯರ ಸಂಖ್ಯೆ ಕಡಿಮೆ. ನಾವು ಅನೇಕರು ಹುಡುಗರ ಬಳಿ ಮಾತಾಡಬೇಕಾದ ಸಂದರ್ಭವನ್ನು ಯಾಕೆ ಸುಮ್ಮನೆ ರಗಳೆ ಎಂದು ತಪ್ಪಿಸಿಕೊಳ್ಳುತ್ತಿದ್ದರೆ ನಮ್ಮ ನಿವೇದಿತಾ ಗಟ್ಟಿ ಧ್ವನಿಯಲ್ಲೇ "ನಾವೆಲ್ಲಾ ಕ್ಲಾಸ್‌ಮೇಟ್ಸ್‌ತಾನೇ? ಅಗತ್ಯವಿರುವಾಗ ಎಲ್ಲರೊಡನೆಯೂ ಮಾತಾಡ್ಲೇಬೇಕಪ್ಪ" ಎಂದು ಮುಜುಗರವಿಲ್ಲದೆ ನಮ್ಮೊಡನೆ ಮಾತಾಡುವಂತೆ ಮತ್ತು ಜಗಳವಾಡುವಂತೆ ಹುಡುಗರೊಡನೆಯೂ ಜಗಳವಾಡುತ್ತ ಹಿತ ಮತ್ತು ಮಿತದ ಸಲಿಗೆಯಿಂದಿರುತ್ತ ಇಡೀ ವಾತಾವರಣವನ್ನು ಆರೋಗ್ಯವಾಗಿಡುತ್ತಿದ್ದ ಧೈರ್ಯದ ಹುಡುಗಿಯಾಗಿಯೇ ನೆನಪಾಗುತ್ತಾಳೆ!

ಅದು ಸುಮಾರು 1975ರ ಸಮಯ. ಆಗ ತಾನೇ ಹೆಣ್ಣು ಮಕ್ಕಳಿಗಾಗಿ ಇಂಗ್ಲೀಷ್ ಮೀಡಿಯಂ ಪ್ರೌಢಶಾಲೆ ಆರಂಭವಾದ ಹೊಸತು. ಇಂಗ್ಲೀಷ್ ಮೀಡಿಯಂ ಸೇರುವ ಹುಡುಗಿಯರ ಸಂಖ್ಯೆ ಕಡಿಮೆ ಇದ್ದ ಕಾರಣ ನಮಗೆ ಪ್ರತ್ಯೇಕ ಕೋಣೆಯಲ್ಲಿ ಪಾಠ ಮಾಡದೆ ಹುಡುಗರ ಕೋಣೆಯಲ್ಲೇ ಮೊದಲ ಮೂರು ಬೆಂಚುಗಳನ್ನು ಹುಡುಗಿಯರಿಗಾಗಿ ಮೀಸಲಿರಿಸಿ ಕೂರಿಸುವ Co-education ಆರಂಭವಾಗಿತ್ತು. ನಮ್ಮ ನಿವೇದಿತಾ ಧೈರ್ಯ ಸರಿಯೆನಿಸುತ್ತ ಹುಡುಗರಾದರೇನು? ಅವರೂ ನಮ್ಮ ಸಹಪಾಠಿಗಳು ತಾನೇ? ಎಂಬ ಒಂದು ಆರಾಮ ಸ್ಥಿತಿ ಮೂಡಲು ಆರಂಭವಾದ ಕಾಲವದು, ಈ ನಿವೇದಿತಾ ಹೀಗೆ ಹದಿ ಹರೆಯದ ಹುಡುಗಿಯಾಗಿದ್ದರೂ ಒಂದು ಆರೋಗ್ಯಕರ ಧೈರ್ಯ ಸ್ವಭಾವದ ವ್ಯಕ್ತಿಯಾಗಿ ರೂಪುಗೊಳ್ಳುವಂಥ ವ್ಯಕ್ತಿಯಾಗಿದ್ದಳಲ್ಲವೇ? ಇಂಥ ಒಂದು ಸುಲಲಿತ ನಿರುಮ್ಮಳ ದಿಟ್ಟ ಮನಸ್ಥಿತಿ ಇಂದು ಪ್ರತಿಯೊಂದು ಹೆಣ್ಣಿಗೂ ಬಾಲ್ಯದಿಂದಲೇ ಅಗತ್ಯವಿದೆಯಲ್ಲವೇ? ಎಂದು ಈಗ ವಿಶ್ಲೇಷಿಸಬೇಕೆನಿಸುತ್ತದೆ. ಅವಳು "ತ.ರಾ.ಸು. ನಮ್ಮ ದೊಡ್ಡಪ್ಪ ಗೊತ್ತಾ?" ಎಂದು ಹೆಮ್ಮೆಯಿಂದ ಹೇಳುತ್ತಿದ್ದಳು.

ಅಗ್ರಹಾರದಲ್ಲಿ ಅವರ ಮನೆಯಿತ್ತು. ಸಾಹಿತಿ ತ.ರಾ.ಸು. ಸಂಬಂಧಿ ಎಂದು ಗೊತ್ತಿದ್ದರೂ ನಾವುಗಳು ತ.ರಾ.ಸು. ಕಾದಂಬರಿಗಳನ್ನು ಆಗ ಓದಿ ತಿಳಿದುಕೊಂಡಿರದಿದ್ದ ಕಾರಣ ಅಂಥ ವಿಶೇಷವೇನೂ ಅನಿಸುತ್ತಿರಲಿಲ್ಲ. ಅಷ್ಟು ದಪ್ಪಕ್ಕೆ–ಎತ್ತರಕ್ಕೆ ನಿವೇದಿತಾ ಇದ್ದರೂ ಅವರ ಮನೆಯಲ್ಲಿ ಅವಳಿಗೆ ಉದ್ದನೆಯ ಲಂಗ ಹಾಕಿಕೊಳ್ಳಬೇಕೆಂಬ ಯಾವ ಒತ್ತಡವನ್ನೂ ಹೇರದೆ ನಾವೆಲ್ಲಾ ಸಣ್ಣಕ್ಕಿರುವವರು ಹಾಕಿಕೊಳ್ಳುತ್ತಿದ್ದ ಮಂಡಿವರೆಗಿನ ಲಂಗ (ಸ್ಕರ್ಟ್)ವನ್ನೇ ಅವಳಿಗೂ ಹಾಕಲು ಅನುವು ಮಾಡಿಕೊಟ್ಟಿದ್ದರು.

ಒಟ್ಟಿನಲ್ಲಿ ನಿವೇದಿತಾ ಎಂದರೆ ಖುಷಿಯ–ಧೈರ್ಯದ–ಆರೋಗ್ಯದ ಹುಡುಗಿ ಎಂದು ವ್ಯಾಖ್ಯೆ ಕೊಡಬಹುದು. ಅವಳು ತನ್ನ ಹೆಸರನ್ನು 'ಸಿಸ್ಟರ್ ನಿವೇದಿತಾ' ಹೆಸರಿನಿಂದ ಇಂಪ್ರೆಸ್ ಆಗಿ ದೊಡ್ಡವರು ಇಟ್ಟ ಹೆಸರು. "ಚೆನ್ನಾಗಿದೆ ಅಲ್ವಾ?" ಎನ್ನುತ್ತಿದ್ದಳು. "ತುಂಬಾ ಚೆನ್ನಾಗಿದೆ" ಎನ್ನುತ್ತಿದ್ದೆವು. ಆಮೇಲೆ 'ಸಿಸ್ಟರ್ ನಿವೇದಿತಾ' ಪಾಠವೂ ಬಂದಿತು. ಅವಳ ಸೇವಾ ಮನೋಭಾವದ ಕಾರಣ ಅವಳು ದೊಡ್ಡ ವ್ಯಕ್ತಿ ಅನಿಸುತ್ತಿತ್ತು. ಇಂಥ ಹೆಸರನ್ನು ನನ್ನ ಸಹಪಾಠಿಗಿಟ್ಟು ಅವಳನ್ನು ಇಷ್ಟು ಚೆನ್ನಾಗಿಯೂ ಬೆಳೆಸುತ್ತಿರುವ ಅವರ ಮನೆಯವರು ಒಳ್ಳೆಯವರು ಎಂದೆನಿಸುತ್ತಿತ್ತು – ಮನೆಯೊಳಗೆ ಹೋಗಿ ಅವಳ ಮನೆಯವರನ್ನೆಲ್ಲಾ ನೋಡಿರದಿದ್ದರೂ! ಆ ನಂತರದ ಬೇಸಿಗೆ ರಜೆಯ ನಂತರ ಮತ್ತೆ ಅವಳು ಸಿಗಲೇ ಇಲ್ಲ.

ಅವಳ ತಂದೆಯ ಉದ್ಯೋಗ ನಿಮಿತ್ತವೋ ಏನೋ ಬೇರೆ ಊರಿಗೆ ಹೋಗಿಬಿಟ್ಟಿರಬೇಕು, ಅವಳನ್ನು ಭೇಟಿಯಾಗುವ ಯಾವ ಸಂಪರ್ಕವೂ ಮತ್ತೆ ಒದಗಿ ಬರಲೇ ಇಲ್ಲ. ಆದರೆ ನಿವೇದಿತಾ ಎಂಬ ಶಬ್ದ ಕಿವಿಗೆ ಬೀಳುವಾಗಲೆಲ್ಲಾ ಬಾಲ್ಯದ ಗೆಳತಿಯ ಒಂದು ಸವಿ ನೆನಪು ತೇಲಿ ತೇಲಿ ಹೋಗುತ್ತದೆ. ಆ ನಂತರ ಈ ಶಬ್ದದ ಅರ್ಥವನ್ನೂ ಬಗೆಯುತ್ತೇನೆ. ನಿವೇದಿತಾ ಎಂದರೆ 'ಸೇವೆಗೆ ಅರ್ಪಿಸಿಕೊಳ್ಳುವವಳು' ಎಂದರ್ಥ. 'ಸಮರ್ಪಣಾ ಮನೋಭಾವದವಳು' ಎಂಬ ಒಂದು ಗಹನವಾದ ಅರ್ಥ. ಇದಕ್ಕೆ ಸರಿ ಸಮಾನವಾಗಿ ಹುಡುಗನಿಗೆ ಯಾವ ಹೆಸರಿದೆ ಎಂದು ಯೋಚಿಸುತ್ತೇನೆ. ಊಹೂಂ ಹೊಳೆಯುವುದಿಲ್ಲ! 'ಸಿಸ್ಟರ್ ನಿವೇದಿತಾ'ಳ ಬಗೆಗೆ ಓದಿದ ಪಾಠ ನೆನಪು ಮಾಡಿಕೊಳ್ಳುತ್ತೇನೆ.

1867 ರಿಂದ 1911 ರವರೆಗೆ ಬದುಕಿದ್ದ ಸಿಸ್ಟರ್ ನಿವೇದಿತಾಳ ಮೊದಲ ಹೆಸರು ಮಾರ್ಗರೆಟ್ ಎಲಿಜಬತ್ ನೋಬಲ್ ಎಂಬುದಾಗಿತ್ತು. ಅವಳೊಬ್ಬ ಆಂಗ್ಲೋ ಐರಿಶ್ ಸಮಾಜ ಸೇವಕಿಯಾಗಿದ್ದಳು. ಜೊತೆಗೆ ಒಬ್ಬ ಲೇಖಕಿಯೂ, ಶಿಕ್ಷಕಿಯೂ ಮತ್ತು ಸ್ವಾಮಿ ವಿವೇಕಾನಂದರ ಶಿಷ್ಯೆಯೂ ಆದವಳು. ಆಕೆ ವಿವೇಕಾನಂದರನ್ನು 1895ರಲ್ಲಿ ಭೇಟಿಯಾಗಿ ಅವರ ವ್ಯಕ್ತಿತ್ವದಿಂದ – ಉಪನ್ಯಾಸದಿಂದ ಪ್ರಭಾವಿತಳಾಗಿ 1898ರಲ್ಲಿ ಭಾರತಕ್ಕೆ ಪ್ರಯಾಣ ಬೆಳೆಸಿ ಕಲ್ಕತ್ತೆಯಲ್ಲಿ ನೆಲೆ ನಿಂತಳು. ವಿವೇಕಾನಂದರು ಅವಳಿಗೆ ಬ್ರಹ್ಮಚರ್ಯೆಯ ದೀಕ್ಷೆಯನ್ನಿತ್ತು 'ನಿವೇದಿತಾ' ಎಂಬ ಹೆಸರಿನ್ನಿಟ್ಟರು 'dedicated to god' ದೇವರ ಸೇವೆಗೆ ಮುಡುಪಾದವಳು ಎಂಬರ್ಥದಲ್ಲಿ ಮಾರ್ಗರೆಟ್ ಎಲಿಜಬತ್ ಆಗಿದ್ದ ಹೆಣ್ಣು ಮಗಳೊಬ್ಬಳು ಇಲ್ಲಿ ಭಾರತದಲ್ಲಿ' ನಿವೇದಿತಾ' ಎಂಬ ಹೆಸರಿ

ನಿಂದ ನಾಮಕರಣಗೊಂಡಳು. ಮೆರಿ ಇಸಬೆಲ್ ಹಾಗೂ ಸಾಮ್ಯುಯೆಲ್ ರಿಚ್‌ಮಂಡ್ ನೋಬಲ್ ದಂಪತಿಗಳ ಮಗಳಾಗಿ ಐರ್‌ಲ್ಯಾಂಡಲ್ಲಿ ಜನ್ಮ ತಳೆದವಳವಳು, 'ಮನುಷ್ಯ ಕುಲಕ್ಕೆ ಸಲ್ಲಿಸುವ ಸೇವೆಯೇ ದೇವರಿಗೆ ಸಲ್ಲಿಸುವ ನಿಜವಾದ ಸೇವೆ' ಎಂಬ ಪಾಠವನ್ನು ಅವರ ತಂದೆಯಿಂದ ಅವಳು ಮುಖ್ಯವಾಗಿ ಕಲಿತಿದ್ದಳು.

ಈ ಪಾಠ ಅವಳಲ್ಲಿ ಬಹಳ ದೊಡ್ಡ ಪರಿಣಾಮವನ್ನುಂಟು ಮಾಡಿತ್ತು. ಅವಳಿಗೆ ಸಂಗೀತ ಹಾಗೂ ಇತರ ಕಲೆಗಳ ಬಗೆಗೂ ಬಹಳ ಆಸಕ್ತಿಯಿತ್ತು. ಅವಳು ತನ್ನ ವಿದ್ಯಾಭ್ಯಾಸವನ್ನು ಮುಗಿಸಿದ ಮೇಲೆ ಶಿಕ್ಷಕಿಯ ಉದ್ಯೋಗವನ್ನು ಆರಿಸಿಕೊಂಡು ಹತ್ತು ವರ್ಷಗಳ ಕಾಲ 1884 ರಿಂದ 1994ರವರೆಗೆ ಉತ್ತಮ ಶಿಕ್ಷಕಿಯಾಗಿ ಕರ್ತವ್ಯ ನಿರ್ವಹಿಸಿದಳು. ಅವಳೊಬ್ಬ 'ಹುಟ್ಟು ಶಿಕ್ಷಕಿ' ಎನ್ನುವಂತೆ ಅವಳ ಶಿಕ್ಷಕಿತನ ಅವಳಲ್ಲಿ ವರಪ್ರದಾನವಾಗಿತ್ತು, ಅವಳಿಗೆ ಕ್ರಮೇಣ ಗೌತಮಬುದ್ಧನ ಬೋಧನೆಗಳಲ್ಲಿ ಆಸಕ್ತಿ ಹುಟ್ಟಿಕೊಂಡಿತ್ತು. ಈ ಸಂದರ್ಭದಲ್ಲೆ ಅವಳಿಗೆ ಸ್ವಾಮಿ ವಿವೇಕಾನಂದರ ಭೇಟಿಯಾಯಿತು. 'ಅಜ್ಞಾನ – ಸ್ವಾರ್ಥಗಳೇ ನಮ್ಮ ದುಃಖಗಳಿಗೆ ದಾರಿಯಾಗುತ್ತವೆ' ಎಂಬ ವಿವೇಕಾನಂದರ ಉಪನ್ಯಾಸದ ಮಾತು ಅವಳ ಮನಸ್ಸಿಗೆ ನಾಟಿತು. ವಿವೇಕಾನಂದರ ಪ್ರಭಾವ ಅವಳಲ್ಲಿ ಗಮನಾರ್ಹ ಪರಿವರ್ತನೆಯನ್ನು ತಂದಿತು. ಅವಳಲ್ಲಿರುವ ಸೇವಾ ಮನೋಭಾವದ ಕಿಡಿಯನ್ನೂ–ಅಭಿಲಾಷೆಯನ್ನು ಗುರುತಿಸಿದ ಸ್ವಾಮಿ ವಿವೇಕಾನಂದರಿಗೆ ಅವಳ ಭವಿಷ್ಯದ ಪಾತ್ರ ಭಾರತದಲ್ಲೇ ಮುಂದುವರೆಯುವುದು ಸರಿಯೆನ್ನಿಸಿತು. ಹೀಗೆ ನಿವೇದಿತಾ ಭಾರತದ ಸನ್ಯಾಸಿನಿಯಾದ ಮೊದಲ ಪಾಶ್ಚಾತ್ಯ ಮಹಿಳೆ ಎನಿಸಿಕೊಂಡಳು.

1898ರಲ್ಲೇ ಅವಳು ಕನಿಷ್ಠ ವಿದ್ಯಾಭ್ಯಾಸವೂ ಇಲ್ಲದ ಸಮಾಜದ ತಳಮಟ್ಟದ ಹೆಣ್ಣು ಮಕ್ಕಳಿಗಾಗಿ ಶಾಲೆಯೊಂದನ್ನು ಆರಂಭಿಸಿದಳು. ಅನೇಕ ಪರಹಿತದ ಕೆಲಸಗಳಲ್ಲಿ ತನ್ನನ್ನು ತೊಡಗಿಸಿಕೊಂಡಳು. ಹೆಣ್ಣು ಮಕ್ಕಳ ಜೀವನಮಟ್ಟ ಸುಧಾರಿಸಬೇಕೆಂದು ಭಾರತದ ಮಹಿಳೆಯರಿಗಾಗಿ ಜಾತ್ಯಾತೀತ ನೆಲೆಯಲ್ಲಿ ಕೆಲಸ ಮಾಡಿದಳು. ನಿವೇದಿತಾ ಅನೇಕ ಬುದ್ಧಿಜೀವಿಗಳಿಗೂ, ಕಲಾವಿದರಿಗೂ ಒಳ್ಳೆಯ ಸ್ನೇಹಿತೆಯಾಗಿದ್ದಳು. ವಿಶ್ವಕವಿ ರವೀಂದ್ರನಾಥ ಠಾಗೋರರು, ವಿಜ್ಞಾನಿ ಜಗದೀಶ ಚಂದ್ರಭೋಸ್ ದಂಪತಿ, ಮುಂತಾದವರು ಅವಳ ಸ್ನೇಹವಲಯದಲ್ಲಿದ್ದರು. ಭಾರತದಲ್ಲಿ ನಿಜವಾದ ಚಿತ್ರಕಲೆಯ ಅಭಿವೃದ್ಧಿಗೆ ಸ್ಫೂರ್ತಿಯಾದವರಲ್ಲಿ ನಿವೇದಿತಾಕೂಡ ಒಬ್ಬಳು. ಕ್ರಮೇಣ ಆಕೆ ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಆಸಕ್ತಿ ಹೊಂದಿದಳು. ಶ್ರೀ ಅರವಿಂದರ ಸಂಸರ್ಗಕ್ಕೆ ಬಂದಳು.

ಭಾರತದ ಸ್ವಾತಂತ್ರ್ಯ ಸಂಗ್ರಾಮ ಚಳುವಳಿಯಲ್ಲಿ ತನ್ನನ್ನು ತಾನು ಗಹನವಾಗಿ ತೊಡಗಿಸಿಕೊಂಡಿದ್ದರಿಂದ ರಾಮಕೃಷ್ಣ ಮಠದೊಂದಿಗಿದ್ದ ತನ್ನ ಸನ್ಯಾಸಿನಿಯ ಅಧಿಕಾರದ ಕೊಂಡಿಯನ್ನು ಅನಿವಾರ್ಯವಾಗಿ ಕಳಚಿಕೊಂಡಳು. ಬ್ರಿಟಿಷ್ ಸರ್ಕಾರ ತನ್ನ ಕಾರಣದಿಂದಾಗಿ ಅನಗತ್ಯವಾಗಿ ಮಠದ ನೆಮ್ಮದಿಯನ್ನು ಹಾಳು ಮಾಡುವುದು ಅವಳಿಗೆ ಇಷ್ಟವಿರಲಿಲ್ಲ. ಪಾಶ್ಚಾತ್ಯ ಸಂಜಾತೆಯಾಗಿ–ವಿವೇಕಾನಂದರ ಶಿಷ್ಯೆಯೂ ಆಗಿ ಗುರುತಿಸಿಕೊಂಡಿದ್ದ ಸಹೋದರಿ ನಿವೇದಿತಾಳಿಗೆ ಇತರ ಭಾರತೀಯರಿಂದ ಸಾಧ್ಯವಾಗಿರದ ಅನೇಕ ಸಮುದಾಯಮುಖಿ ಕೆಲಸಗಳನ್ನು ಮಾಡಲು ಸಾಧ್ಯವಾಯಿತು. ದಣಿವಿಲ್ಲದ ಅರ್ಪಣಾ ಮನೋಭಾವದಿಂದ ಕಾರ್ಯ ನಿರ್ವಹಿಸಿದ ಕೀರ್ತಿ ಈ ನಿವೇದಿತಾಳಿಗೆ ಸಲ್ಲುತ್ತದೆ. ಅದಕ್ಕೆ ಇರಬೇಕು 'ನಿವೇದಿತಾ' ಎಂಬ ಈ ಹೆಸರು ಇವಳ ನಂತರ ಇವಳ ವ್ಯಕ್ತಿತ್ವದ ಆಕರ್ಷಣೆಯಿಂದಲೇ ಚಾಲ್ತಿಗೆ ಬಂತು ಹೆಸರಿಡುತ್ತಿದ್ದ ಪೋಷಕರಿಗೂ ಕೂಡ ಇವಳ ಸಫಲತೆ ತಿಳಿದಿತ್ತು ಅನಿಸುತ್ತದೆ.

ಈ ಮಾಹಿತಿಗಳಿಗನುಗುಣವಾಗಿ ಸಿಸ್ಟರ್ ನಿವೇದಿತಾಳ ವ್ಯಕ್ತಿತ್ವವನ್ನು ಈಗ ವಿಮರ್ಶಿಸುವಾಗ ನನಗೆ ಈಕೆಯೊಬ್ಬ ಸ್ವತಂತ್ರ ಮನೋಭಾವದ ತನ್ನಿಚ್ಛೆಯಂತೆ ಸರಿಯಾದ ನಿರ್ಧಾರ ತೆಗೆದುಕೊಳ್ಳುವ ಕರುಣೆ, ಅನುಕಂಪ ತುಂಬಿದ ಹೃದಯದ ಒಬ್ಬ ಪ್ರಬುದ್ಧ ಮಹಿಳೆ ಎನಿಸುತ್ತದೆ. ಮತ್ತು ಆಗಿನ ಕಾಲಕ್ಕೇ ಅವಳಿಗೆ ಇಂಥ ಚಿಂತನೆಯ ನೆಲೆ ಸಾಧ್ಯವಾಗುವಂಥ ಪೂರಕ ವಾತಾವರಣ ದೊರೆತಿದ್ದು ಕೂಡ ದೊಡ್ಡ ಸಂಗತಿ.

ಈಗ ಇತ್ತೀಚೆಗೆ ನಮಗೆಲ್ಲಾ ಸುದ್ದಿ ಮಾಧ್ಯಮಗಳ ಮೂಲಕ ಗೊತ್ತಾಗಿರುವ 'ಶರಣೆ ನಿವೇದಿತಾ ತಾಯಿ' ಎಂಬ ನಿವೇದಿತಾಳ ಕಥೆಯನ್ನು ನೆನೆಯುವೆ. ಶರಣತತ್ವವೆಂಬುದು 12ನೇ ಶತಮಾನದಲ್ಲೇ ಕರ್ನಾಟಕದಲ್ಲಾದ – ವಚನ ಸಾಹಿತ್ಯ ಸುಗ್ಗಿ ಕಾಲದ ಆಧ್ಯಾತ್ಮಿಕ ಕ್ರಾಂತಿ 'ಸತಿಪತಿಗಳೊಂದಾದ ಭಕ್ತಿ' ದೇವನಿಗೆ ಹೆಚ್ಚು ಹಿತ ಎಂಬ ದೃಷ್ಟಿಯಲ್ಲಿ 'ಶರಣ ಸತಿ–ಲಿಂಗ ಪತಿ' ಎಂಬ ಅನನ್ಯತೆಯ ಭಕ್ತಿ ಮಾರ್ಗಕೂಡ ಸ್ಥಾನ ಪಡೆಯಿತು. ಸಮಾಜ ಸೇವೆಯನ್ನು ಮಾಡಲು ಸಂಸಾರಿಯಾಗಿರಬಾರದು–ಸನ್ಯಾಸಿಯಾಗಿರಬೇಕು ಎಂಬ ಈ ಕಟ್ಟುಪಾಡು ಶರಣ ಮಾರ್ಗದಲ್ಲಿ ಇಲ್ಲ. ಅದಕ್ಕೇ ಬಸವ ಪಥದ ಶರಣ ಮಾರ್ಗ ಒಂದು ವೈಚಾರಿಕ ಮಾರ್ಗ. ಅನುಭವ ಮಂಟಪ ಅಲ್ಲಮ–ಅಕ್ಕ ಇವರ ಬಗ್ಗೆ ತಿಳಿಯುವಾಗಲೆಲ್ಲಾ ಅವರ ಆಧ್ಯಾತ್ಮ ಪ್ರೇಮದ ಗಹನತೆಗಾಗಿ ಆವರಿಸಿಕೊಂಡ ಆ ಪ್ರಯೋಗಶೀಲತೆಗಾಗಿ– ಅವರುಗಳು ಶರಣಾಗಿ ಹುಟ್ಟಿಸಿದ ಆ ಅಮೋಘ ಸಹಜ ಸುಂದರ ಸಾಹಿತ್ಯಕ್ಕಾಗಿ ಕೃತಜ್ಞತೆ ಸಲ್ಲಿಸುತ್ತ ಮನಸ್ಸು ಶರಣಾಗುತ್ತದೆ. ಅಕ್ಕ ಮಹಾದೇವಿ ದಿಟ್ಟ ಮಹಿಳೆಯಾಗಿ ಒಲ್ಲದ ಗಂಡನನ್ನು ಧಿಕ್ಕರಿಸಿ ಶರಣ ಮಾರ್ಗದಲ್ಲಿ ಅನುರಕ್ತಳಾಗಿ ತನ್ನಿಚ್ಛೆಯ ಪತಿ 'ಚೆನ್ನ ಮಲ್ಲಿಕಾರ್ಜನ'ನ ಸಾನಿಧ್ಯಕ್ಕಾಗಿ ಹಾತೊರೆದು ಅದಕ್ಕಾಗಿ–ಆ ಸತ್ಯಾನ್ವೇಷಣೆಗಾಗಿ ತನ್ನ ಜೀವನವನ್ನೇ ಮುಡಿಪಾಗಿಟ್ಟು ಹೋರಾಡುತ್ತ

ಎನ್ನ ಮಾಯದ ಮದವ ಮುರಿಯಯ್ಯ
ಎನ್ನ ಕಾಯದ ಕತ್ತಲೆಯ ಕಳೆಯಯ್ಯ
ಎನ್ನ ಜೀವದ ಜಂಜಡವಾ ಮಾಣಿಸಯ್ಯ
ಎನ್ನ ಸುತ್ತಿಹ ಪ್ರಪಂಚವ ಬಿಡಿಸಾ ಅಯ್ಯ
ನಿಮ್ಮ ಧರ್ಮ ಚೆನ್ನಮಲ್ಲಿಕಾರ್ಜುನಯ್ಯ ದೇವಾ...

ಎನ್ನುತ್ತ ವಚನಾಮೃತವನ್ನು ಉಣಿಸಿ ಕನ್ನಡದ ಮೊಟ್ಟ ಮೊದಲ ಕವಯಿತ್ರಿಯಾಗಿ ಅಮರವಾಗಿರುವವಳು.

ಇಂಥ ಶರಣ ಮಾರ್ಗ ಪ್ರಶ್ನಿಸುವುದನ್ನು –ವೈಚಾರಿಕ ನಿರ್ಧಾರವನ್ನು ಅನುಮೋದಿಸುತ್ತದೆಯೇ ವಿನಃ 'ಸನ್ಯಾಸತ್ವ' ವೆಂಬ ಪಟ್ಟವನ್ನು ಶರಣರಿಗೆ ಕಡ್ಡಾಯವೆನ್ನುವುದಿಲ್ಲ. ಶರಣನಾದವನು ಸಂಸಾರಿಯಾದರೂ–ಸನ್ಯಾಸಿಯಾದರೂ ಸರಿಯಾದ ಮಾರ್ಗದಲ್ಲೇ ಇರುತ್ತಾನೆ. ವಿರಕ್ತಿಯೆಂಬುದು ತಾನಾಗಿ ಹುಟ್ಟಿದರೆ ಸನ್ಯಾಸತ್ವ ಸ್ವೀಕರಿಸುವುದು ಅವಸಾಯ್ಕೆ, ವಿರಕ್ತಿಯೆಂಬುದು ಉದ್ಭವವಾಗಿಬಿಟ್ಟರೆ ಹೊಸದಾಗಿ ಸ್ವೀಕರಿಸುವ ಮಾತೆಲ್ಲಿ ಬಂತು?! ಆದರೆ ಈಗ ಆಗಿರುವ ಈ 'ಮಠ–ಮಾನ್ಯ'ಗಳ ಕಟ್ಟು ಕಟ್ಟಳೆಯ ರಾಜಕಾರಣದ ನೆರಳಲ್ಲಿ ಜಂಗಮ ರೂಪಿ ಸತ್ಯ ಉಸಿರುಗಟ್ಟುತ್ತಿದೆಯೇ ಅನಿಸುತ್ತದೆ. ಆದರೂ ಮುರುಘಾಮಠದಂಥ ಮಠಗಳಲ್ಲಿ ಈ ಜಂಗಮ ಮಾರ್ಗದ ಸತ್ಯಕ್ಕೆ ಆಯುಷ್ಯ ದೊರೆಯುತ್ತಿದೆಯೆಂದೂ ಅನಿಸುತ್ತಿದೆ.

ಇಷ್ಟೆಲ್ಲಾ ಚಿಂತಿಸಲು ಕಾರಣವಾಗಿದ್ದು ಇತ್ತೀಚೆಗೆ ಪೀಠ ತ್ಯಜಿಸಿ ಮದುವೆಯಾಗಿ ಬದಲಾವಣೆಯ ಹೊಸ ಗಾಳಿಯೊಂದನ್ನು ಪರಿಸರದಲ್ಲಿ ಬೀಸುವಂತೆ ಮಾಡಿದೆ 'ನಿವೇದಿತಾ' ಎಂದು ನಾಮಾಂಕಿತಗೊಂಡಿದ್ದ ಹೆಣ್ಣು ಮಗಳು. ಇವಳು ತನ್ನ ಅನುಭವಗಳೆಲ್ಲಾ ಪಕ್ವವಾದಾಗ ತನ್ನಿಚ್ಛೆಯಂತೆ ವಿರಕ್ತಿಗೆ ತನ್ನನ್ನೊಡ್ಡಿಕೊಂಡು ವಿರಕ್ತಿ ಪಟ್ಟವನ್ನು ಏರಿದವಳಲ್ಲ. ಅವಳ ಅನಾಥ ಪ್ರಜ್ಞೆ ನಿರಾಶ್ರಿತತೆ – ಪ್ರೀತಿಗಾಗಿ ಹುಡುಕಾಟವೇ ಅವಳನ್ನು ಚಿತ್ರದುರ್ಗದ ಮುರುಘಾಮಠಕ್ಕೆ ಕರೆದುಕೊಂಡು ಬಂದು ನೈತಿಕ ಬೆಂಬಲವನ್ನು ಕೋರುವಂತೆ ಮಾಡಿತು. ಅಲ್ಲಿಯ ಕ್ರಮದಂತೆ ಮುರುಘಾ ಮಠಾಧೀಶರು ಇವಳಲ್ಲಿದ್ದ ಜನೋಪಕಾರಿ ನಿಲುವುಗಳನ್ನು ಗುರುತಿಸಿ–ಮೆಚ್ಚಿ ಎಲ್ಲಾ ಜಾತಿಯವರಿಗೂ ಜೊತೆಗೆ ಮಹಿಳೆಯರಿಗೂ ನೀಡುವಂತೆ ಹೊಸ ಪರಂಪರೆಗನುಗುಣವಾಗಿ ನಿವೇದಿತಾಳಿಗೂ ದೀಕ್ಷೆ ನೀಡಿಬಿಟ್ಟರು.

ಜೊತೆಗೆ ಮುರುಘಾಮಠದ ಮರಿಮಠವಾದ ಶಿರಸಿಯಲ್ಲಿನ ಮಠವೊಂದಕ್ಕೆ ಶರಣೆ ನಿವೇದಿತಾಳನ್ನು ಪೀಠಾಧಿಪತಿಯನ್ನಾಗಿಯೂ ನೇಮಿಸಲಾಯಿತು. ಉದ್ದೇಶ ಒಳ್ಳೆಯದಿದ್ದರೂ ನಿವೇದಿತಾಳ ಮನಸ್ಥಿತಿಗೆ – ವಯಸ್ಸಿಗೆ ಈ 'ಪೀಠ'ದ ಒಡೆತನ ಭಾರವಾಗಿಬಿಟ್ಟಿತು. ಆ ಪೀಠಕ್ಕೆ ಮಸಿ ಬಳಿಯದಂತೆ ತನ್ನಿಂದಾಗುವ ಒಳ್ಳೆಯ ಕೆಲಸಗಳನ್ನು ಮಾಡಿ ಪೀಠವನ್ನು ಬೆಳೆಸಿದ್ದಾಳೆ.

ಆದರೂ ಹರೆಯದ ಭಾರವಿದ್ದ ನಿವೇದಿತಾಳಿಗೆ – ಜೊತೆಗೆ ಮಠದ ಪರಿಸರದಲ್ಲೂ ತಾನು ಒಂಟಿ ಎಂಬ ಭಾವ ಕಾಡಾಲಾರಂಭಿಸಿದ ನಿವೇದೀತಾಳಿಗೆ ಮಠದ ಒಳಗಿನ ಸನ್ಯಾಸಿನಿಯ ಕೇಸರಿ ಉಡುಪಿನ ಕಟ್ಟು ಕಟ್ಟಳೆಯ ಬಾಳು ಸಾಕು ಅನಿಸಿದೆ. ಸದ್ಯ ಆಕೆಗೆ ತನ್ನ ಹೆಸರಿನ ಅರ್ಥಕ್ಕೆ ತಕ್ಕಂತೆ ಪ್ರಾಣತ್ಯಾಗ ಮಾಡಬೇಕೆಂಬ ದುರಾಲೋಚನೆ ಹುಟ್ಟಿಕೊಳ್ಳದಿದ್ದುದೇ ಶರಣ ಮಾರ್ಗದ ಒಂದು ಹೊಸ ಅಲೆಯ ತತ್ವ! ಏಕೆಂದರೆ ಇತ್ತೀಚೆಗೆ ಇಲ್ಲಿಯೇ ಹತ್ತಿರದ ಊರಲ್ಲಿ ಮದುವೆಯಾಗಿ ಒಂದು ವರ್ಷದ ವೇಳೆಗೇ ವರದಕ್ಷಿಣೆ ತರಲಿಲ್ಲವೆಂಬ ಕಾರಣಕ್ಕೆ ಹಿಂಸೆ ಕೊಟ್ಟರೆಂದು ಅಧೀರಳಾಗಿ 'ನಿವೇದಿತಾ' ಎಂಬ ಹೆಸರಿನ ಸಾಮಾನ್ಯ ಗೃಹಿಣಿಯೊಬ್ಬಳು ಆತ್ಮಹತ್ಯೆ ಮಾಡಿಕೊಂಡು ತಲ್ಲಣ ತಂದಿದ್ದಾಳೆ.

ಅಂಥಹುದರಲ್ಲಿ ತನಗೆ ಮಾನಸಿಕವಾಗಿ ಸಮಬಲ ನೆನಿಸುವ ಚೇತನ್ ಎಂಬ ಯುವಕನೊಡನೆ ಸಂಗಾತಿಯಾಗಿ ಬದುಕಲು ಮಠ ತೊರೆದು ಹೋಗಿರುವ ನಿವೇದಿತಾಳನ್ನು ಅಭಿನಂದಿಸಲೇಬೇಕು, ಜೊತೆಗೆ ಈ ದಿಟ್ಟ ಹೆಜ್ಜೆಯನ್ನು ಪೋಷಿಸಿ ಪ್ರಬುದ್ಧತೆಯನ್ನು ಮೆರೆದ ಮುರುಘಾ ಮಠದ ಸ್ವಾಮಿಗಳ ನಿರ್ಧಾರವನ್ನೂ. ಈ ನಿಟ್ಟಿನಲ್ಲಿ ಚೇತನ್ ತಾಯಿ ನಿವೇದಿತಾ ದಾಂಪತ್ಯಕ್ಕೆ ಒಡ್ಡುವ ಅಡೆತಡೆಗಳು ಅವರ ರಾಜಕಾರಣದ–ಪುರುಷ ಪ್ರಧಾನ ಸಮಾಜದ ವೈಪರೀತ್ಯವೆನಿಸುತ್ತದೆಯೇ ವಿನಃ ತಾಯಿಹೃದಯದ ಸಮರ್ಥನೆಯೆನಿಸುವುದಿಲ್ಲ. 'ನಿವೇದಿತಾ' ಎನ್ನುವ ಹೆಣ್ಣು ಮಗಳ ಪಾತ್ರ ವೈಚಾರಿಕ ಅಳತೆಗೋಲಿನ ಅವಳಿಚ್ಛೆಯ ಜೀವನಕ್ಕೆ ಸಲ್ಲುವ ಒಲವಾಗಿ ಆತ್ಮ ಗೌರವವಾಗಿ ಅರಳಬೇಕು.. ಅಲ್ಲವೇ.? □

ಲಿಂಗ ತಾರತಮ್ಯದ ವಿರಾಟ್ ದರ್ಶನ!



ಡಾ. ಟಿ.ಆರ್. ಚಂದ್ರಶೇಖರ್

ಪ್ರಸ್ತಾವನೆ

ನಮ್ಮ ಸಾಮಾಜಿಕ ಸಂದರ್ಭದಲ್ಲಿ ವಿವಾಹವೆಂಬ ಸಂಸ್ಥೆಯ ಮತ್ತು ಸಂತಾನೋತ್ಪತ್ತಿ ಎಂಬ ಕರ್ತವ್ಯದ ಸಂಬಂಧವಿಲ್ಲದೆ ಮಹಿಳೆಯರನ್ನು ಪರಿಭಾವಿಸಿಕೊಳ್ಳುವುದು ಸಾಧ್ಯವಿಲ್ಲ. ಅಷ್ಟರ ಮಟ್ಟಿಗೆ ಮಹಿಳೆಯರನ್ನು ಜೈವಿಕತೆಯು ಆವರಿಸಿಕೊಂಡು ಬಿಟ್ಟಿದೆ. ಅವಳಿಗೆ ಸಾಮಾಜಿಕ ಅಸ್ತಿತ್ವವನ್ನು ನೀಡಲು ಸಮಾಜ ಹಿಂಜರಿಯುತ್ತಿದೆ. ಸಮಾಜವೇಕೆ ಜ್ಞಾನ ಶಿಸ್ತುಗಳೂ ಕೂಡ ಲಿಂಗ ಸಂಬಂಧ ಕುರಿತಂತೆ ಸ್ಪಷ್ಟ ನಿಲವನ್ನು ತಳೆಯುವುದರಲ್ಲಿ ವಿಫಲವಾಗಿವೆ. ಈ ಕುರಿತಂತೆ ತನ್ನ ಪ್ರಸಿದ್ಧ ಪ್ರಬಂಧವೊಂದರಲ್ಲಿ ಅಮರ್ತ್ಯಸೇನ್(1990) 'ಅಭಿವೃದ್ಧಿ ಸಿದ್ಧಾಂತಗಳನ್ನು ಕುರಿತ ಅಧ್ಯಯನಗಳನ್ನು ಪರಾಮರ್ಶಿಸಿದರೆ ಅಲ್ಲಿ ಮಹಿಳೆಯರನ್ನು ಒಂದು ಪ್ರತ್ಯೇಕ ಪ್ರಮುಖ ಚರ್ಚೆಯ ಸಂಗತಿಯಾಗಿ ಪರಿಗಣಿಸುವುದರ ಬಗ್ಗೆ ಹಿಂಜರಿಕೆಯಿರುವುದು ತಿಳಿಯುತ್ತದೆ' ಎಂದು ಬರೆದಿದ್ದಾನೆ. ಸಂತಾನೋತ್ಪತ್ತಿ, ತಾಯಿತನ, ಗೃಹಿಣಿತನ, ಸಂಗೋಪನಾ ದುಡಿಮೆಗಳನ್ನು ಬಿಟ್ಟು ಮಹಿಳೆಗೆ ಅಸ್ತಿತ್ವವೇ ಇಲ್ಲವಾಗಿಬಿಟ್ಟಿದೆ. ಈ ದೃಷ್ಟಿಯಿಂದ ಆಧುನಿಕವೆನ್ನುವ ಆಧುನಿಕ ಸಮಾಜಗಳೂ ಸಾಂಪ್ರದಾಯಿಕವೇ!. ಸಂತಾನೊತ್ಪತ್ತಿ-ಸಂಗೋಪನೆಗಳ ಚೌಕಟ್ಟಿನಲ್ಲಿ ಮಾತ್ರ ಮಹಿಳೆಯರನ್ನು ಗುರುತಿಸುವ ಸೀಮಿತ – ತಾರತಮ್ಯವಾದಿ ದೃಷ್ಟಿಕೋನವು ಆಧುನಿಕ ಪೂರ್ವದಲ್ಲೂ ಇತ್ತು, ಆಧುನಿಕ ಮತ್ತು ಅದುನಿಕೋತ್ತರ ಕಾಲದಲ್ಲೂ ಇದೆ.

ಲಿಂಗ ತಾರತಮ್ಯವೆನ್ನುವುದು ನಮ್ಮ ದೇಶಕ್ಕೆ ಅಥವಾ ನಮ್ಮ ರಾಜ್ಯಕ್ಕೆ ವಿಶಿಷ್ಟವಾದ ಸಂಗತಿಯೇನಲ್ಲ. ಅದು ಸಾರ್ವತ್ರಿಕ ಸಂಗತಿಯಾಗಿದೆ. ಇದು ಪ್ರಾಚೀನ ಕಾಲದಲ್ಲಿ ಇತ್ತು. ಊಳಿಗಮಾನ್ಯ ವ್ಯವಸ್ಥೆಯಲ್ಲಿತ್ತು. ಬಂಡವಾಳಶಾಹಿ ಮತ್ತು ಸಮಾಜವಾದಿ ವ್ಯವಸ್ಥೆಯಲ್ಲಿ ಅದು ಇದೆ. ಮುಂದೆ ಇದು ಇಲ್ಲವಾಗಿಬಿಡುತ್ತದೆ ಎಂದು ಹೇಳಲು ಬರುವುದಿಲ್ಲ. ಮಹಿಳೆಯರನ್ನು ಸಾಧನವಾಗಿ, ಉಪಕರಣವಾಗಿ ಮಾತ್ರವೇ ಪರಿಭಾವಿಸಿಕೊಂಡು ಬರಲಾಗಿದೆ. ಈ ಬಗೆಯನ್ನು ಅಮರ್ತ್ಯಸೇನ್ 'ಪೇಶೆಂಟ್ಸ್ ದೃಷ್ಟಿಕೋನ'ವೆಂದು(1999) ಕರೆದರೆ ಕೃಷ್ಣಕುಮಾರ್(2010) ಇದನ್ನು 'ಉಪಕರಣವಾದಿ ದೃಷ್ಟಿಕೋನ'ವೆಂದು ಕರೆಯುತ್ತಾನೆ. ಮಹಿಳೆಯರ ಕರ್ತೃತ್ವದ ಪಾತ್ರವನ್ನು ಒಪ್ಪಿಕೊಳ್ಳಲು ಸಮಾಜಗಳು ಸಿದ್ಧವಿಲ್ಲ. ಈ ಪೇಶೆಂಟ್ಸ್ ದೃಷ್ಟಿಕೋನವು ಹೊಸ ಹೊಸ ರೂಪದಲ್ಲಿ ಇಂದಿಗೂ ಸಮಾಜದಲ್ಲಿ ಗಟ್ಟಿಗೊಳ್ಳುತ್ತಾ ನಡೆದಿದೆ. ಅನೇಕ ಸ್ತ್ರೀವಾದಿಗಳು ಪ್ರತಿಪಾದಿಸುವಂತೆ ಪುರುಷಶಾಹಿಯು ಬೇರೆ ಬೇರೆ ರೂಪದಲ್ಲಿ ಮಹಿಳೆಯರನ್ನು ಇಂದಿಗೂ ಕಾಡುತ್ತಿದೆ.

ನಮ್ಮ ಸಮಾಜದ ಸಂದರ್ಭದಲ್ಲಿ ಅದು ಸಾಮಜಿಕೀಕರಣದ ರೂಪದಲ್ಲಿ ಲಿಂಗ ತಾರತಮ್ಯವನ್ನು ಊರ್ಜಿತಗೊಳಿಸುತ್ತಿದೆ. ಸಾಮಾಜಿಕೀಕರಣವೆನ್ನುವುದು ಪುರುಷಶಾಹಿಯು ಮಹಿಳೆಯರ ಮೇಲೆ ಹೇರಿರುವ ಒಂದು ಕ್ರಮ. ಅದು ಸಮಾಜದಲ್ಲಿ ಮಹಿಳೆಯರು ಹೇಗೆ ನಡೆದುಕೊಳ್ಳಬೇಕು, ಹೇಗೆ ಮಾತನಾಡಬೇಕು, ಅವರ ಚಲನ-ವಲನ ಹೇಗಿರಬೇಕು, ಅವರು ಹೇಗೆ ಉಡುಪು ಧರಿಸಬೇಕು ಮುಂತಾದ ಸಂಗತಿಗಳನ್ನು ಮಹಿಳೆಯರಿಗೆ ವಿಧಿಸುತ್ತದೆ.

ಈ ಬಗೆಯ ಪುರುಷಶಾಹಿತ್ವವು ಇಂದು ನಮ್ಮ ಸಮಾಜದಲ್ಲಿ ಮಹಿಳೆಯರನ್ನು ಕೇವಲ ಮಕ್ಕಳನ್ನು ಹೆರುವ ಯಂತ್ರವನ್ನಾಗಿ, ಸಂತಾನೋತ್ಪತ್ತಿ ಸಾಧನವಾಗಿ ಪರಿಭಾವಿಸಿಕೊಳ್ಳುತ್ತದೆ. ಇಲ್ಲಿ ಮಹಿಳೆಯರನ್ನು ಎರಡು ನೆಲೆಯಲ್ಲಿ ನೋಡಲಾಗುತ್ತದೆ. ಮೊದಲನೆಯದು ತಾಯಿಯಾಗಿ, ಅಂದರೆ ಸಂತಾನೋತ್ಪತ್ತಿ ಸಾಧನವಾಗಿ ಮತ್ತು ಎರಡನೆಯದು ವೈವಾಹಿಕ ಸಂಸ್ಥೆಯ ಗ್ರಾಹಕಳಾಗಿ ಮಾತ್ರ ಅವಳನ್ನು ನೋಡಲಾಗುತ್ತದೆ. ಈ ಬಗೆಯ ಸಾಮಾಜಿಕೀಕರಣದಿಂದಾಗಿ ಮಹಿಳೆಯರನ್ನು ಅಭಿವೃದ್ಧಿಯ ಸಾಧನವಾಗಿ ನೋಡಲು ಸಾಧ್ಯವಾಗುತ್ತದೆ ವಿನಾ ಅದರ ಗುರಿಯನ್ನಾಗಿ ಅಲ್ಲ. ಮಹಿಳೆಯರ ಮದುವೆಯ ವಯಸ್ಸು ಮತ್ತು ಮಹಿಳಾ ಸಾಕ್ಷರತೆಗಳನ್ನು ಆಧಾರವಾಗಿಟ್ಟುಕೊಂಡು ಕರ್ನಾಟಕದಲ್ಲಿ ಲಿಂಗ ತಾರತಮ್ಯವು ಹೇಗೆ ಗಟ್ಟಿಗೊಳ್ಳುತ್ತಾ ನಡೆದಿದೆ ಎಂಬುದನ್ನು ಪ್ರಸ್ತುತ ಟಿಪ್ಪಣಿಯಲ್ಲಿ ಚರ್ಚಿಸಲಾಗಿದೆ.

1.ಮಹಿಳೆಯರ ಮದುವೆಯ ವಯಸ್ಸು.

ಶಾಸನಾತ್ಮಕವಾಗಿ ಮಹಿಳೆಯರ ಮದುವೆಯ ವಯಸ್ಸು ಹದಿನೆಂಟು ವರ್ಷವಾದರೆ ಪುರುಷರ ಮದುವೆಯ ವಯಸ್ಸು ಇಪ್ಪತ್ತೊಂದು ವರ್ಷಗಳು. ಈ ವ್ಯತ್ಯಾಸ ಏಕೆ ಎಂಬುದಕ್ಕೆ ಉತ್ತರ ಕಂಡುಕೊಳ್ಳುವುದಿರಲಿ ಅಂತಹ ಪ್ರಶ್ನೆಯನ್ನು ಕೇಳಿಕೊಳ್ಳುವುದು ನಮಗೆ ಸಾಧ್ಯವಾಗಿಲ್ಲ. ಮಹಿಳೆಯರ ದೇಹವು ಹದಿನೆಂಟನೆಯ ವಯಸ್ಸಿನವರೆಗೆ ಸಂತಾನೋತ್ಪತ್ತಿಗೆ ಸಿದ್ಧವಾಗಿರುವುದಿಲ್ಲವೆಂದು ಹೇಳಲಾಗಿದೆ. ಹದಿನೆಂಟು ವಯಸ್ಸು ತುಂಬಿದ ಮೇಲೆ ಮಹಿಳೆಯರ ದೇಹದ ಮೂಳೆ ಮತ್ತು ಮಾಂಸ ಖಂಡಗಳು ಹಾಗೂ ಸಂತಾನೋತ್ಪತ್ತಿ ಅಂಗಾಂಗಗಳು ಪ್ರೌಢಾವಸ್ಥೆಗೆ ಬರುತ್ತವೆ. ಈಗ ಅವಳು ತಾಯಿಯಾಗಲು ಸಿದ್ಧಳಿದ್ದಾಳೆ. ಈ ಕಾರಣಕ್ಕೆ ಅವರ ಮದುವೆಯ ವಯಸ್ಸನ್ನು ಹದಿನೆಂಟಕ್ಕೆ ನಿಗದಿಪಡಿಸಲಾಗಿದೆ. ಇಲ್ಲಿ ನಾವು ಕೇಳಿಕೊಳ್ಳಬೇಕಾದ ಪ್ರಶ್ನೆಯೆಂದರೆ ಸಂತಾನೋತ್ಪತ್ತಿ ಸಂಗತಿಯನ್ನು ಬಿಟ್ಟು ಮಹಿಳೆಯರ ವಿವಾಹದ ವಯಸ್ಸನ್ನು ಪರಿಭಾವಿಸಿಕೊಳ್ಳುವುದು ಸಾಧ್ಯವೇ ಇಲ್ಲವೇ?. ಈ ದೈಹಿಕ ಸಾಮರ್ಥ್ಯ – ದೈಹಿಕ ಕರ್ತವ್ಯದ ಸಂಗತಿಗಳನ್ನು ಪುರುಷರ ವಿವಾಹ ವಯಸ್ಸಿಗೆ ಸಂಬಂಧಿಸಿದಂತೆ ಅನ್ವಯ ಮಾಡುತ್ತಿಲ್ಲ.

ಸಂತಾನೊತ್ಪತ್ತಿಯನ್ನು ಮತ್ತು ಮಹಿಳೆಯರ ದೇಹದ ಸಾಮರ್ಥ್ಯವನ್ನು ಆಧಾರವಾಗಿಟ್ಟುಕೊಂಡು ಮಹಿಳೆಯರ ಮದುವೆಯ ವಯಸ್ಸನ್ನು ಯಾಕೆ ನಿರ್ಧರಿಸಬೇಕು? ಬೇರೆ ರೀತಿಯಲ್ಲಿ ಯೋಚಿಸಲು ಬರುವುದಿಲ್ಲವೆ?. ಇಲ್ಲಿ ಮಹಿಳೆಯರ 'ದೇಹ' ಮದುವೆಯ ವಯಸ್ಸಿಗೆ ಆಧಾರವಾಗಿದೆ. ಇಲ್ಲಿ ಅವಳ ಮನಸ್ಸು, ಭಾವನೆ, ಚಿಂತನೆ, ಅವಳ ವಿಚಾರಗಳು ಗಣನೆಗೆ ಬರುವುದಿಲ್ಲ. ಒಬ್ಬ ಮಹಿಳೆಯು ತನ್ನ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವ, ಆಯ್ಕೆಯ ಸ್ವಾತಂತ್ರ್ಯವನ್ನು ಸಾಧಿಸಿಕೊಳ್ಳುವ, ಸಂತಾನೊತ್ಪತ್ತಿಯ ಬಗ್ಗೆ ತೀರ್ಮಾನ ತೆಗೆದುಕೊಳ್ಳುವ ಅಧಿಕಾರವನ್ನು ಪಡೆದುಕೊಳ್ಳುವ ನೆಲೆಯಲ್ಲಿ ಮಹಿಳೆಯರ ಮದುವೆಯ ವಯಸ್ಸನ್ನು ಪರಿಭಾವಿಸಿಕೊಳ್ಳುವುದಕ್ಕೆ ಸಾಧ್ಯವಿದೆ. ಮಹಿಳೆಯರ ದೇಹವು ಇಂತಹ ತೀರ್ಮಾನಗಳಿಗೆ ಆಧಾರವಾಗಬೇಕಿಲ್ಲ.

ಶಾಸನಾತ್ಮಕವಾಗಿ ಮಹಿಳೆಯರ ಮದುವೆಯ ವಯಸ್ಸು ಹದಿನೆಂಟು ವರ್ಷವಾದರೆ ಪುರುಷರ ಮದುವೆಯ ವಯಸ್ಸು ಇಪ್ಪತ್ತೊಂದು ವರ್ಷಗಳು. ಈ ವ್ಯತ್ಯಾಸ ಏಕೆ ಎಂಬುದಕ್ಕೆ ಉತ್ತರ ಕಂಡುಕೊಳ್ಳುವುದಿರಲಿ ಅಂತಹ ಪ್ರಶ್ನೆಯನ್ನು ಕೇಳಿಕೊಳ್ಳುವುದು ನಮಗೆ ಸಾಧ್ಯವಾಗಿಲ್ಲ. ಮಹಿಳೆಯರ ದೇಹವು ಹದಿನೆಂಟನೆಯ ವಯಸ್ಸಿನವರೆಗೆ ಸಂತಾನೋತ್ಪತ್ತಿಗೆ ಸಿದ್ಧವಾಗಿರುವುದಿಲ್ಲವೆಂದು ಹೇಳಲಾಗಿದೆ. ಹದಿನೆಂಟು ವಯಸ್ಸು ತುಂಬಿದ ಮೇಲೆ ಮಹಿಳೆಯರ ದೇಹದ ಮೂಳೆ ಮತ್ತು ಮಾಂಸ ಖಂಡಗಳು ಹಾಗೂ ಸಂತಾನೋತ್ಪತ್ತಿ ಅಂಗಾಂಗಗಳು ಪ್ರೌಢಾವಸ್ಥೆಗೆ ಬರುತ್ತವೆ. ಈಗ ಅವಳು ತಾಯಿಯಾಗಲು ಸಿದ್ಧಆದ್ದಾಳೆ. ಈ ಕಾರಣಕ್ಕೆ ಅವರ ಮದುವೆಯ ವಯಸ್ಸನ್ನು ಹದಿನೆಂಟಕ್ಕೆ ನಿಗದಿಪಡಿಸಲಾಗಿದೆ.

ಇಲ್ಲಿ ನಮ್ಮ ಮುಂದೆ ಬಂದು ನಿಲ್ಲುವ ಒಂದು ಪ್ರಶ್ನೆಯೆಂದರೆ ಯಾಕೆ ನಮ್ಮ ಸಮಾಜದಲ್ಲಿ ಬಾಲ್ಯವಿವಾಹವಲ್ಲದಿದ್ದರೂ ಅತ್ಯಂತ ಕಡಿಮೆ ವಯೋಮಾನಕ್ಕೆ ಮಹಿಳೆಯರ ಮದುವೆಯನ್ನು ಮಾಡಲಾಗುತ್ತದೆ?. ಇದರ ಉತ್ತರಕ್ಕಾಗಿ ನಾವು ತುಂಬಾ ಶ್ರಮಪಡಬೇಕಾಗಿಲ್ಲ. ಲೈಂಗಿಕತೆಯ ದೃಷ್ಟಿಯಿಂದ ಮಹಿಳೆಯರು ಶುದ್ಧವಾಗಿರಬೇಕೆಂದು ಸಮಾಜ ಬಯಸುತ್ತದೆ. ಈ ಶುದ್ಧತೆಯ ಮಾನದಂಡವೇ ಮಹಿಳೆ. ತಮ್ಮ ಹೆಣ್ಣು ಮಕ್ಕಳ ಲೈಂಗಿಕ ಶುದ್ಧತೆಯನ್ನು ಕಾಯುವ ದೃಷ್ಟಿಯಿಂದ ಪಾಲಕರು ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ಕಡಿಮೆ ವಯಸ್ಸಿಗೆ ಹೆಣ್ಣು ಮಕ್ಕಳ ಮದುವೆ ಮಾಡಿ ಮುಗಿಸಿಬಿಡುತ್ತಾರೆ. ಹೆಚ್ಚು ವರ್ಷಗಳ ಕಾಲ ಮದುವೆ ಮಾಡದೆ ಇದ್ದರೆ ಅವರ ಶುದ್ಧತೆಯನ್ನು ಕಾಯುವ ಕೆಲಸ ಪಾಲಕರದ್ದಾಗುತ್ತದೆ. ಯಾವ ವಯಸ್ಸಾದರೂ ಆಗಿರಲಿ ಮದುವೆ ಮಾಡಿಕೊಟ್ಟು ಬಿಟ್ಟರೆ ತಮ್ಮ ಜವಾಬುದಾರಿ ಮುಗಿದು ಬಿಡುತ್ತದೆ ಎಂಬುದು ಪಾಲಕರ ಮನೋಭಾವವಿದ್ದಂತೆ ಕಾಣುತ್ತದೆ.

ಮಧ್ಯಮ ವರ್ಗ, ಕೆಳ ಮಧ್ಯಮ ವರ್ಗ ಮತ್ತು ಕೆಳ ವರ್ಗದಲ್ಲಿ ಇಂತಹ ಅಭ್ಯಾಸ ವ್ಯಾಪಕವಾಗಿರುವುದನ್ನು ಕಾಣಬಹುದು. ಮದುವೆ ಮಾಡಿಕೊಟ್ಟು ಬಿಟ್ಟರೆ ಅವರ ಶುದ್ಧತೆಯನ್ನು ಕಾಯುವ ಪ್ರಮೇಯ ಪಾಲಕರಿಗಿರುವುದಿಲ್ಲ. ಮದುವೆಯೆಂಬುದು ಒಂದು ಬಂಧನವಾಗಿರುವುದರಿಂದ ಅಲ್ಲಿ ಮಹಿಳೆಯರ ಲೈಂಗಿಕ ಶುದ್ಧತೆಯನ್ನು ಕಾಯುವ ಅಗತ್ಯ ಬೀಳುವುದಿಲ್ಲ. ಅದನ್ನು ಕಾಯ್ದುಕೊಳ್ಳುವುದು ಈಗ ಮಹಿಳೆಯರ ಜವಾಬುದಾರಿಯಾಗಿ ಬಿಡುತ್ತದೆ. ಈ ಬಗೆಯ ಸಾಮಾಜಿಕ ಒತ್ತಡದಿಂದಾಗಿ ಪಾಲಕರಿಗೆ ತಮ್ಮ ಹೆಣ್ಣು ಮಕ್ಕಳನ್ನು ತಾವು ಬಯಸಿದಂತೆ ಬೆಳೆಸುವ ಸ್ವಾತಂತ್ರ್ಯವಿಲ್ಲವಾಗಿದ್ರೆ, ಹೆಣ್ಣು ಮಕ್ಕಳಿಗೂ ತಮ್ಮ ಮದುವೆಗೆ ಸಂಬಂಧಿಸಿದಂತೆ ತೀರ್ಮಾನ ತೆಗೆದುಕೊಳ್ಳುವ ಸ್ವಾತಂತ್ರ್ಯವಿಲ್ಲ.

ಈ ಮದುವೆಯ ವಯಸ್ಸು ಎಷ್ಟು ಗಂಭೀರ ಸಮಸ್ಯೆಯಾಗಿದೆ, ಸಂತಾನೋತ್ಪತ್ತಿ ಕಾರ್ಯದ ಜೊತೆಯಲ್ಲಿ ಮಹಿಳೆಯರ ಬದುಕು ಹೇಗೆ ಹೆಣೆದುಕೊಂಡು ಬಿಟ್ಟಿದೆ ಎಂಬುದರ ಮೇಲೆ ಕೆಳಗಿನ ಕೋಷ್ಟಕ ಬೆಳಕು ಚೆಲ್ಲುತ್ತದೆ. ಸಂತಾನೋತ್ಪತ್ತಿಗಾಗಿಯೇ ಮಹಿಳೆ ಇದ್ದಾಳೆ ಎಂಬ ನಂಬಿಕೆಯು ಸಮಾಜದಲ್ಲಿ ಗಾಢವಾಗಿ ನೆಲಗೊಂಡಿರುವುದನ್ನು ಕೋಷ್ಟಕದ ಮಾಹಿತಿಯಿಂದ ತಿಳಿದುಕೊಳ್ಳಬಹುದು. ಗುಲ್ಬರ್ಗಾ ವಿಭಾಗದಲ್ಲಿ ನಾಲ್ಕನೆಯ ಒಂದರಷ್ಟು ಹೆಣ್ಣು ಮಕ್ಕಳು ಹದಿನೆಂಟು ವರ್ಷಕ್ಕೆ ಮೊದಲೇ ಮದುವೆಯಾಗಿರುತ್ತಾರೆ ಮತ್ತು ಜನಿಸಿದ ಒಟ್ಟು ಮಕ್ಕಳಲ್ಲಿ ಮೂರನೆಯ ಒಂದಕ್ಕಿಂತ ಅಧಿಕ ಮಕ್ಕಳು 15–19 ವಯೋಮಾನದ ತಾಯಂದಿರಿಗೆ ಜನಿಸಿರುತ್ತವೆ. ಈ ಸಂತಾನೋತ್ಪತ್ತಿ ಒತ್ತಡದಿಂದಾಗಿ ಮತ್ತು ಮದುವೆ ಎಂಬ ಸಾಂಸ್ಕಿಕ ಕರ್ತವ್ಯದಿಂದಾಗಿ ಮಹಿಳೆಯರ ಆರೋಗ್ಯವು ಯಾವಾಗಲೂ ದುರ್ಬಲವಾಗಿರುತ್ತದೆ.

ಮೇಲಿಂದ ಮೇಲೆ ಗರ್ಭಿಣಿಯರಾಗುವುದರಿಂದ ಮಹಿಳೆಯರು ಅನೇಕ ಬಗೆಯ ಸ್ವಾತಂತ್ರ್ಯಗಳಿಂದ ವಂಚಿತರಾಗಬೇಕಾಗುತ್ತದೆ. ಅದು ಅವರ ಸಂಚಾರಕ್ಕೆ ಅಡ್ಡಿಯುಂಟು ಮಾಡುತ್ತದೆ ಮತ್ತು ಮನೆಯ ಹೊರಗಿನ ದುಡಿಮೆಯನ್ನು ಅವರು ಕೈಬಿಡಬೇಕಾಗುತ್ತದೆ. ಸಂತಾನೋತ್ಪತ್ತಿಗೆ ಮಹಿಳೆಯು ಮತ್ತೊಂದು ಹೆಸರಾಗಿರುವುದರಿಂದ, ಅವಳು ಫಲೋತ್ಪತ್ತಿಯ ಮೂಲವೂ ಆಗಿರುವುದರಿಂದ ಅವಳು ಇಂತಹ ಒತ್ತಡಗಳಿಂದ ಬಿಡುಗಡೆ ಪಡೆದುಕೊಳ್ಳುವುದು ಸುಲಭ ಸಾಧ್ಯವಲ್ಲ.

ಮಹಿಳೆಯರ ಮದುವೆಯ ವಯಸ್ಸು ಮತ್ತು ಸಂತಾನೋತ್ಪತ್ತಿ ವಿವಿರ: 2007–2008.

ಕೋಷ್ಟಕ–1.

ಸಂ ಕ್ರ	ವಿಭಾಗಗಳು ರಾಜ್ಯ	18 ವರ್ಷ ವಯಸ್ಸು ತುಂಬುವುದರೊಳಗೆ ಮದುವೆಯಾಗುವ ಮಹಿಳೆಯರ ಪ್ರಮಾಣ	ಒಟ್ಟು ಜನನಗಳಲ್ಲಿ 15–19 ವಯೋಮಾನದ ತಾಯಂದಿರಿಗೆ ಜನಿಸಿದ ಮಕ್ಕಳ ಪ್ರಮಾಣ.
1	ಬೆಂಗಳೂರು	ಶೇ17.50	ಶೇ16.20
2	ಮೈಸೂರು	ಶೇ14.10	ಶೇ12.82
3	ಬೆಳಗಾವಿ	ಶೇ21.45	ಶೇ30.00
4	ಗುಲ್ಬರ್ಗಾ	ಶೇ23.34	ಶೇ37.74
5	ರಾಜ್ಯ	ಶೇ17.36	ಶೇ24.19

ಮೂಲ: ಮೂರನೆಯ ಸುತ್ತಿನ ಡಿ.ಎಲ್.ಎಚ್. ಸಮೀಕ್ಷೆ: 2007–2008.

ಮಹಿಳೆಯರ ಮದುವೆಯ ವಯಸ್ಸನ್ನು ಹದಿನೆಂಟಕ್ಕೆ ನಿಗದಿ ಪಡಿಸಿರುವುದನ್ನು ಇಲ್ಲಿ ಪ್ರಶ್ನೆ ಮಾಡುತ್ತಿಲ್ಲ. ಆದರೆ ಆ ನಿರ್ಣಯಕ್ಕೆ ನಾವು ಬಳಸುತ್ತಿರುವ ಮಾನದಂಡದ ಬಗ್ಗೆ ಮತ್ತು ಅದನ್ನು ಸಮರ್ಥಿಸಿಕೊಳ್ಳಲು ಬಳಸುತ್ತಿರುವ ವಿವರಣೆ ಬಗ್ಗೆ ಇಲ್ಲಿ ಪ್ರಶ್ನಿಸಲಾಗಿದೆ.

ಕೋಷ್ಟಕ–1ರಲ್ಲಿ ನಮ್ಮ ರಾಜ್ಯದ ನಾಲ್ಕು ವಿಭಾಗಗಳಲ್ಲಿ ಮಹಿಳೆಯರ ಸಂತಾನೋತ್ಪತ್ತಿ ಸಂಗತಿಗೆ ಸಂಬಂಧಿಸಿದಂತೆ ಎರಡು ಮಾಹಿತಿಯನ್ನು ನೀಡಲಾಗಿದೆ.

ವಿವಾಹ ಮತ್ತು ಸಂತಾನೋತ್ಪತ್ತಿ ಎಂಬ ಸಂಗತಿಗಳು ಮಹಿಳೆಯರ ಬದುಕನ್ನು ಹೇಗೆ ಕುಬ್ಜಗೊಳಿಸಿಬಿಡುತ್ತವೆ ಮತ್ತು ಅವರ ಬದುಕಿಗೆ ಒಂದು ಸೀಮಿತ ಚೌಕಟ್ಟನ್ನು ನೀಡಿಬಿಡುತ್ತವೆ ಎಂಬುದಕ್ಕೆ ಇಲ್ಲಿನ ಅಂಕಿಅಂಶಗಳು ಸಾಕ್ಷಿಯಾಗಿವೆ. ರಾಜ್ಯದ ಗುಲ್ಬರ್ಗಾ ವಿಭಾಗದಲ್ಲಿ ಶೇ 37ರಷ್ಟು ಮಹಿಳೆಯರು 15–19 ವಯೋಮಾನದಲ್ಲಿ ತಾಯಂದಿರಾಗಿ ಬಿಟ್ಟಿರುತ್ತಾರೆ. ಅಂದರೆ ಅವರ ಶಿಕ್ಷಣ ಅಷ್ಟರ ಮಟ್ಟಿಗೆ ಮೊಟಕಾಗಿ ಬಿಡುತ್ತದೆ. ಅವರ ಸ್ವಾತಂತ್ರ್ಯಕ್ಕೆ ಸೀಮಿತ ಚೌಕಟ್ಟು ಬಂದು ಬಿಡುತ್ತದೆ. ಅದೇ ರೀತಿಯಲ್ಲಿ ಈ ವಿಭಾಗದಲ್ಲಿ ಶೇ24ರಷ್ಟು ಮಹಿಳೆಯರು 18 ನೆಯ ವಯಸ್ಸಿಗೆ ಮೊದಲೇ ವಿವಾಹವಾಗಿರುತ್ತಾರೆ. ವಿವಾಹ ಮತ್ತು ಸಂತಾನೋತ್ಪತ್ತಿಗಳು ಇಲ್ಲಿ ಮಹಿಳೆಯರ ಬದುಕನ್ನು ಸಮೃದ್ಧಗೊಳಿಸುವುದಕ್ಕೆ ಪ್ರತಿಯಾಗಿ ಅದನ್ನು ಮೂರಾಬಟ್ಟೆಯಾಗಿಸುತ್ತಿವೆ. ಮಹಿಳೆಯರ ದೈಹಿಕ ಸಂಗತಿಯ ಮೇಲೆ ನೀತಿ–ನಿರ್ಣಯ ಮಾಡುವುದಾದರೆ ಅದು ಅವರಿಗೆ ನ್ಯಾಯ ಒದಗಿಸುವುದಕ್ಕೆ ಪ್ರತಿಯಾಗಿ ಅದು ಅವರಿಗೆ ಅನ್ಯಾಯ ಮಾಡುತ್ತದೆ. ಈ ದಿಶೆಯಲ್ಲಿ 12ನೆಯ ಶತಮಾನದ ಒಬ್ಬ ವಚನಗಾರ್ತಿ ಕದಿರ ರೆಮ್ಮವ್ವೆ ಇದನ್ನು ಪರಿಭಾವಿಸಿಕೊಂಡಿರುವ ಕ್ರಮವು ನಮಗೆ ಮಾರ್ಗದರ್ಶಿಯಾಗಬಹುದು.

ಎಲ್ಲರ ಹೆಂಡಿರು ತೊಳಸಿಕ್ಕುವವರು; ಎನ್ನ ಗಂಡಂಗೆ ತೊಳಸುವುದಿಲ್ಲ.

ಎಲ್ಲರ ಗಂಡಂದಿರಿಗೆ ಬಸಿವರು; ಎನ್ನ ಗಂಡಂಗೆ ಬಸಿವುದಿಲ್ಲ.

ಎಲ್ಲ ಗಂಡಂದಿರಿಗೆ ಬೀಜವುಂಟು; ಎನ್ನ ಗಂಡಂಗೆ ಅಂಡದ ಬೀಜವಿಲ್ಲ.

ಎಲ್ಲ ಗಂಡಂದಿರು ಮೇಲೆ; ಎನ್ನ ಗಂಡ ಕೆಳಗೆ ನಾ ಮೇಲೆ

ಕದಿರರೆಮ್ಮೆಯೊಡೆಯ ಗುಮ್ಮೇಶ್ವರಾ. (ಸ.ವ.ಸಂ. 5. 664).

ಇದು ಕುತೂಹಲಕಾರಿಯಾದ ವಚನ. ಇಲ್ಲಿ ಪ್ರಜ್ಞಾಪೂರ್ವಕವಾಗಿ ರೆಮ್ಮವ್ವೆ 'ಬೀಜ' ಮತ್ತು 'ಅಂಡದ ಬೀಜ' ಪದಗಳನ್ನು ಬಳಸಿದ್ದಾಳೆ. ಅವು ಮೂಲತಃ ಸಂತಾನೋತ್ಪತ್ತಿಗೆ ಸಂಬಂಧಿಸಿದ ನುಡಿಗಳು. ಸಂತಾನೋತ್ಪತ್ತಿ ಸಂಗತಿಯನ್ನು ಅವಳು ತಿರಸ್ಕರಿಸುತ್ತಿದ್ದಾಳೆ. ಗಂಡು–ಹೆಣ್ಣಿನ ಸಂಬಂಧಗಳನ್ನು ಇಲ್ಲಿ ಮೇಲು–ಕೆಳಗೆ ಮಾಡುವ ಪ್ರಯತ್ನವನ್ನು ಅವಳು ಮಾಡುತ್ತಿದ್ದಾಳೆ. ಹೆಣ್ಣನ್ನು ಕೇವಲ ಸಂತಾನೋತ್ಪತ್ತಿಗೆ ಸಂಬಂಧಿಸಿದಂತೆ ಮಾತ್ರ ಪರಿಭಾವಿಸಿಕೊಳ್ಳುವ ಅಗತ್ಯವಿಲ್ಲ. ಅದಿಲ್ಲದೆಯೂ ಅವಳ ಬದುಕು ಸಾಧ್ಯ ಎನ್ನುವುದನ್ನು ಪ್ರಸ್ತುತ ವಚನವು ಸೂಕ್ಷ್ಮವಾಗಿ ಹೇಳುತ್ತಿದೆ. ಆದರೆ ನಮ್ಮ ಸಮಾಜವು ಇಂತಹ ಸಂಗತಿಗಳಿಗೆ ಪ್ರತಿಸ್ಪಂದಿಸುವುದಕ್ಕೆ ಪ್ರತಿಯಾಗಿ ಲಿಂಗ ಸಂಬಂಧಗಳನ್ನು ಕುರಿತಂತೆ ಪಟ್ಟಭದ್ರ ವಿಚಾರಗಳನ್ನು ಅನುಸರಿಸಿಕೊಂಡು ಬರುತ್ತಿದೆ. ಅದರಿಂದಾಗಿ ಮಹಿಳೆಯರನ್ನು ಇಂದು ಸಂತಾನೋತ್ಪತ್ತಿ ಸಂಗತಿಯನ್ನು ಬಿಟ್ಟು ಪರಿಭಾವಿಸಿಕೊಳ್ಳುವುದು ಸಾಧ್ಯವಾಗುತ್ತಿಲ್ಲ.

ಮಹಿಳೆಯರ ಸಂತಾನೋತ್ಪತ್ತಿ ಕರ್ತವ್ಯದ ಬಗ್ಗೆ ಸಮಾಜವು ಹೆಚ್ಚು ಎಚ್ಚರಿಕೆಯಿಂದಿರುತ್ತದೆ. ಆದರೆ ಆ ಸಂತಾನೋತ್ಪತ್ತಿಯ ಅಧಿಕಾರವನ್ನು ಮಹಿಳೆಯರಿಗೆ ನೀಡುವ ಬಗ್ಗೆ ಅದು ಲಿಂಗ ಸಂಬಂಧಿ ನಿಲವು ತಳೆಯುವುದಿಲ್ಲ. ಮಹಿಳಾ ಹೋರಾಟಗಾರರು 'ಸಂತಾನೋತ್ಪತ್ತಿ ಹಕ್ಕುಗಳ' ಬಗ್ಗೆ ಮಾತನಾಡುತ್ತಾರೆ. ಮದುವೆಯನ್ನು ಯಾವಾಗ ಮಾಡಿಕೊಳ್ಳಬೇಕು, ಮಕ್ಕಳನ್ನು ಯಾವಾಗ ಪಡೆಯಬೇಕು, ಎಷ್ಟು ಮಕ್ಕಳನ್ನು ಪಡೆಯಬೇಕು ಎಂಬುದನ್ನು ಮಹಿಳೆಯರೇ ನಿರ್ಧರಿಸುವ ಅಧಿಕಾರವನ್ನು ಸಂತಾನೋತ್ಪತ್ತಿ ಹಕ್ಕುಗಳೆಂದು ಕರೆಯಬಹುದು. ಈ ವಿಷಯದಲ್ಲಿ ಇಂದು ಮಹಿಳೆಯರಿಗೆ ಅಧಿಕಾರವಿಲ್ಲ. ಸಂತಾನೋತ್ಪತ್ತಿ ಹಕ್ಕುಗಳ ಬಗ್ಗೆ ಮಾತನಾಡಿದ ತಕ್ಷಣ ಎತ್ತಲಾ

ಮಹಿಳೆಯರ ಸಂತಾನೋತ್ಪತ್ತಿ ಕರ್ತವ್ಯದ ಬಗ್ಗೆ ಸಮಾಜವು ಹೆಚ್ಚು ಎಚ್ಚರಿಕೆಯಿಂದಿರುತ್ತದೆ. ಆದರೆ ಆ ಸಂತಾನೋತ್ಪತ್ತಿಯ ಅಧಿಕಾರವನ್ನು ಮಹಿಳೆಯರಿಗೆ ನೀಡುವ ಬಗ್ಗೆ ಅದು ಲಿಂಗ ಸಂಬಂಧಿ ನಿಲವು ತಳೆಯುವುದಿಲ್ಲ. ಮಹಿಳಾ ಹೋರಾಟಗಾರರು 'ಸಂತಾನೋತ್ಪತ್ತಿ ಹಕ್ಕುಗಳ' ಬಗ್ಗೆ ಮಾತನಾಡುತ್ತಾರೆ. ಮದುವೆಯನ್ನು ಯಾವಾಗ ಮಾಡಿಕೊಳ್ಳಬೇಕು, ಮಕ್ಕಳನ್ನು ಯಾವಾಗ ಪಡೆಯಬೇಕು, ಎಷ್ಟು ಮಕ್ಕಳನ್ನು ಪಡೆಯಬೇಕು ಎಂಬುದನ್ನು ಮಹಿಳೆಯರೇ ನಿರ್ಧರಿಸುವ ಅಧಿಕಾರವನ್ನು ಸಂತಾನೋತ್ಪತ್ತಿ ಹಕ್ಕುಗಳೆಂದು ಕರೆಯಬಹುದು.

ಗುವ ಆಕ್ಷೇಪವೆಂದರೆ ಅದರಿಂದ ಮಹಿಳೆಯರು ಸ್ವೇಚ್ಛಾಚಾರಿಗಳಾಗಿ ಬಿಡುತ್ತಾರೆ ಎಂಬುದಾಗಿದೆ. ಈ ಬಗೆಯ ಆಕ್ಷೇಪಗಳು ಹೊಸವೇನಲ್ಲ. ಸ್ವಾತಂತ್ರ್ಯ ಪೂರ್ವಕಾಲದಿಂದಲೂ ನಡೆದುಕೊಂಡು ಬಂದಿರುವ ಸಂಗತಿಯಾಗಿವೆ. ಮಹಿಳೆಯರಿಗೆ ಸಂಬಂಧಿಸಿದಂತೆ ಸಾಕ್ಷರತೆ ಮತ್ತು ಶಿಕ್ಷಣಗಳ ಬಗ್ಗೆ ಇಂತಹ ಗುಮಾನಿ ಯಾವಾಗಲೂ ಸಮಾಜಕ್ಕೆ ಇದ್ದೇ ಇದೆ.

ಮಹಿಳಾ ವಿಮೋಚನೆ

ಇಂದು ಮಹಿಳೆಯರು ಅನೇಕ ಬಗೆಯ ಶಾಸನಾತ್ಮಕ ರಕ್ಷಣೆ ಮತ್ತು ಸಾಮಾಜಿಕ ಭದ್ರತೆಗಳನ್ನು ಪಡೆದಿದ್ದಾರೆ. ಅವರ ಸಾಕ್ಷರತಾ ಪ್ರಮಾಣ ಏರಿಕೆಯಾಗುತ್ತಿದೆ. ಲಿಂಗ ಸಂಬಂಧಿ ಸಾಕ್ಷರತಾ ಅಂತರ ಕಡಿಮೆಯಾಗುತ್ತಿದೆ. ಶಾಲೆಯಲ್ಲಿ ಅವರ ದಾಖಲಾತಿಯು ಗಣನೀಯವಾಗಿ ಏರಿಕೆಯಾಗುತ್ತಿದೆ. ಸ್ವಸಹಾಯ ಗುಂಪು ಕಾರ್ಯಕ್ರಮದ ಮೂಲಕ ಮಹಿಳೆಯರು ಆರ್ಥಿಕವಾಗಿ ತಮ್ಮ ಕಾಲಮೇಲೆ ತಾವು ನಿಲ್ಲುವಂತಾಗಿದ್ದಾರೆ. ವರದಕ್ಷಿಣೆ, ಲೈಂಗಿಕ ಕಿರುಕುಳ, ಕೌಟುಂಬಿಕ ಹಿಂಸೆ, ಮಾನಭಂಗ ಮುಂತಾದ ಸಂಗತಿಗಳಿಗೆ ಸಂಬಂಧಿಸಿದಂತೆ ಅನೇಕ ಕಾನೂನುಗಳು ಜಾರಿಗೆ ಬಂದಿವೆ. ಈ ಭದ್ರತೆ, ರಕ್ಷಣೆ, ಪ್ರೋತ್ಸಾಹ ಮುಂತಾದವು ಮಹಿಳೆಯರು ಹೋರಾಟದ ಮೂಲಕ ಪಡೆದುಕೊಂಡ ಸಂಗತಿಗಳೇ ವಿನಾ ಸರ್ಕಾರವಾಗಲಿ ಅಥವಾ ರಾಜಕೀಯ ಪಕ್ಷಗಳಾಗಲಿ ದೊರಕಿಸಿಕೊಟ್ಟ ಸಂಗತಿಗಳಲ್ಲ.

ಲಿಂಗ ಸಮಾನತೆಯ ಸಂಗತಿಗಳು, ಮಹಿಳೆಯರ ಸ್ವಾಯತ್ತತೆಯ ಪ್ರಶ್ನೆಗಳು, ಮಹಿಳೆಯರ ಅಭಿವೃದ್ಧಿ ಮುಂತಾದವುಗಳ ಬಗ್ಗೆ ನಮ್ಮ ರಾಜಕೀಯ ಪಕ್ಷಗಳು ಹೋರಾಟ ನಡೆಸಿದ್ದು ಅಥವಾ ತಮ್ಮ ಪ್ರಣಾಳಿಕೆಯಲ್ಲಿ ಈ ಸಂಗತಿಗಳನ್ನು ಸೇರಿಸಿಕೊಂಡಿದ್ದು ಅಪರೂಪ ಅಥವಾ ಇಲ್ಲವೇ ಇಲ್ಲವೆಂದರೂ ನಡೆಯುತ್ತದೆ. ವಾಸ್ತವವಾಗಿ ಸ್ತ್ರೀವಾದಿ ಉಪಾದಿಗಳನ್ನು ರಾಜಕೀಯ ದುರೀಣರು ತಮ್ಮ ಸ್ವಾರ್ಥಕ್ಕೆ, ದುರುದ್ದೇಶಕ್ಕೆ ಬಳಸಿಕೊಂಡ ಉದಾಹರಣೆಗಳು ನಮಗೆ ದೊರೆಯುತ್ತವೆ. ನಮ್ಮ ರಾಷ್ಟ್ರೀಯ ಪಕ್ಷವೊಂದರ ಮುಂಚೂಣಿ ಮಹಿಳಾ ದುರೀಣರೊಬ್ಬರು ತಮ್ಮ ಪ್ರತಿಪಕ್ಷದ ವಿರೋಧಿಯನ್ನು(ಆಕೆ ವಿದೇಶಿ ಮೂಲದವಳು ಎಂಬ ಕಾರಣಕ್ಕೆ) ಬಗ್ಗುಬಡಿಯಲು 'ಅವರು ದೇಶದ ಪ್ರಧಾನಮಂತ್ರಿಯಾದರೆ ತಲೆ ಬೋಳಿಸಿಕೊಂಡು, ಬಿಳಿ ಸೀರೆ ಉಟ್ಟುಕೊಂಡು' ಹೋರಾಟ ನಡೆಸುವುದಾಗಿ ಅಬ್ಬರಿಸಿದ್ದು ಇನ್ನೂ ನಮ್ಮ ಮನಸ್ಸಿನಲ್ಲಿ ಹಸಿರಾಗಿದೆ. ಇಲ್ಲಿ ಲಿಂಗ ಸ್ಪಂದಿ ಸಂವೇದನೆಯಾಗಲಿ ಅಥವಾ ಪ್ರಜಾತಂತ್ರಕ್ಕೆ ಗೌರವನ್ನು ನೀಡುವ ಕ್ರಮವಾಗಲಿ ಕಂಡು ಬರುವುದಿಲ್ಲ. ಹೆಣ್ಣು ತಲೆ ಬೋಳಿಸಿಕೊಳ್ಳುವುದು ಮತ್ತು ಬಿಳಿ ಸೀರೆ ಉಟ್ಟುಕೊಳ್ಳುವುದು ನಮ್ಮ ಸಾಂಪ್ರದಾಯಿಕ ನಂಬಿಕೆ ಪ್ರಕಾರ 'ಅಮಂಗಳ'ದ ಸಂಕೇತ.

ಈ ಸಂಕೇತಗಳನ್ನು ಪುರುಷಶಾಹಿಯು ರೂಪಿಸಿ ಮಹಿಳೆಯರ ಮೇಲೆ ಹೇರಿದೆ. ಹಾಗೆ ನೋಡಿದರೆ ಈ 'ಅಮಂಗಳ'ವೆನ್ನುವುದೇ ಸ್ತ್ರೀ ತಾರತಮ್ಯವಾದಿ(ಸೆಕ್ಸಿಯಿಸ್ಟ್) ನುಡಿ. ಅಂತಹ ಸೆಕ್ಸಿಯಿಸ್ಟ್ ಸಂಗತಿಯನ್ನು ಮುಂದಿಟ್ಟುಕೊಂಡು ಅವರು ತಮ್ಮ ರಾಜಕೀಯ ವಿರೋಧಿಯ ವಿರುದ್ಧ ಹೋರಾಟ ಮಾಡುತ್ತಾರೆಂದರೆ ಇವರ ಸ್ತ್ರೀ ಸಂವೇದನೆ ಎಷ್ಟರಮಟ್ಟಿಗಿದೆ ಎಂಬುದನ್ನು ನಾವು ಊಹಿಸಿಕೊಳ್ಳಬಹುದು. ಸ್ತ್ರೀವಾದದ ಯಾವುದೇ ಸಂಗತಿಯನ್ನು ಪರಿಗಣಿಸದೆ ಸದರಿ ಮಹಿಳಾ ನಾಯಕಿ ತನ್ನ ವಿರೋಧಿಯನ್ನು ಮಣಿಸುವ ಏಕೈಕ ಉದ್ದೇಶದಿಂದ ಸ್ತ್ರೀವಾದಿ ಸಂಕೇತಗಳನ್ನು ತನ್ನ ಸ್ವಾರ್ಥಕ್ಕೆ ಬಳಸಿಕೊಂಡಿದ್ದು ರಾಜಕೀಯ ದೃಷ್ಟಿಯಿಂದ ಪ್ರತಿಗಾಮಿ. ಅದು ಸ್ತ್ರೀವಾದ ದೃಷ್ಟಿಯಿಂದ ಖಂಡನೀಯ. ಇಂತಹ ರಾಜಕೀಯ ಪಕ್ಷದಿಂದ ಮಹಿಳೆಯರು ನ್ಯಾಯವನ್ನು ನಿರೀಕ್ಷಿಸುವುದು ಅಸಾಧ್ಯ

ಮಹಿಳೆಯರ ಸಾಕ್ಷರತಾ ಪ್ರಮಾಣ ಹೆಚ್ಚುವುದರಿಂದ ಜನಸಂಖ್ಯಾ ಬೆಳವಣಿಗೆಯ ಪ್ರಮಾಣ ಕಡಿಮೆಯಾಗುತ್ತದೆ ಅಥವಾ ಕುಟುಂಬ ನಿಯಂತ್ರಣ ಸಾಧ್ಯವಾಗುತ್ತದೆ ಮತ್ತು ಅದರಿಂದ ಜನನ ಪ್ರಮಾಣವು ಕಡಿಮೆಯಾಗುತ್ತದೆ ಮುಂತಾದ ಕಾರಣಗಳನ್ನು ಇಲ್ಲಿ ನೀಡಲಾಗುತ್ತದೆ. ಇದನ್ನು ಉಪಕರಣವಾದಿ ದೃಷ್ಟಿಕೋನವೆಂದು ಕರೆಯಲಾಗಿದೆ. ಮಹಿಳೆಯರು ತಮಗಾಗಿ ಅಕ್ಷರಸ್ಥರಾಗುವ ಕ್ರಮಕ್ಕೆ ಸಮಾಜದಲ್ಲಿ ಹೆಚ್ಚು ಆಸ್ಪದವಿಲ್ಲ. ಮಹಿಳೆಯರು ಹೆಚ್ಚು ಓದಿ ಬಿಟ್ಟರೆ ಅವರು'ದಾರಿ ಬಿಟ್ಟು ಬಿಡುತ್ತಾರೆ' ಎಂಬ ನಂಬಿಕೆ ಇಂದಿಗೂ ನಮ್ಮ ಸಮಾಜದಲ್ಲಿದೆ.

ಅಮರ್ತ್ಯಸೇನ್ ಪ್ರಕಾರ ಲಿಂಗ ಸಂಬಂಧಿ ಅಧ್ಯಯನಗಳಲ್ಲಿ ನಿರ್ಲಕ್ಷ್ಯಕ್ಕೆ ಒಳಗಾಗಿರುವ ಒಂದು ಸಂಗತಿ ಯಾವುದೆಂದರೆ ಮಹಿಳೆಯರ ಕರ್ತೃತ್ವದ ಪಾತ್ರ. ಅವನ ಪ್ರಕಾರ 'ಮಹಿಳೆಯರು ಸಾಮಾಜಿಕ ಮತ್ತು ರಾಜಕೀಯ ಪರಿವರ್ತನೆಗೆ ಸ್ವತಃ ಪ್ರಯತ್ನಿಸುವ – ಅದನ್ನು ಸಾಧಿಸಿಕೊಳ್ಳುವ ಹಾಗೂ ಹಾಗೆ ಸಾಧಿಸಿಕೊಂಡ ಪರಿಣಾಮವಾಗಿ ಮಹಿಳೆಯರ–ಪುರುಷರ ಬದುಕು ಉತ್ತಮಗೊಳ್ಳುವ ಪ್ರಕ್ರಿಯೆಯೇ ಕರ್ತೃತ್ವ'. ಇದನ್ನು ಇನ್ನೊಂದು ರೀತಿಯಲ್ಲಿ ಹೇಳುವುದಾದರೆ 'ಮಹಿಳೆಯರು ತಮಗೆ ಸಂಬಂಧಿಸಿದಂತೆ ತಾವೇ ಗುರಿಗಳನ್ನು ನಿರ್ಧರಿಸಿಕೊಳ್ಳುವ – ತಮ್ಮ ಹಿತಾಸಕ್ತಿಗಳನ್ನು ತಾವೇ ರೂಪಿಸಿಕೊಳ್ಳುವ ಸಾಮರ್ಥ್ಯ ಹಾಗೂ ಅವುಗಳನ್ನು ಸಾಧಿಸಿಕೊಳ್ಳುವ ಪ್ರಕ್ರಿಯೆಯನ್ನು ಕರ್ತೃತ್ವ'ವೆಂದು ಕರೆಯಬಹುದು. ಈ ಕರ್ತೃತ್ವದ ಗುಣಗಳನ್ನು ಮಹಿಳೆಯರಲ್ಲಿ ಬೆಳೆಸುವುದರ ಮೂಲಕ ಮಹಿಳಾ ವಿಮೋಚನೆಯನ್ನು ಸಾಧಿಸಿಕೊಳ್ಳಬಹುದು.

2. ಮಹಿಳೆಯರ ಸಾಕ್ಷರತೆ

ಪುರುಷಶಾಹಿ ಪ್ರಣೀತ ಸಾಮಾಜಿಕೀಕರಣ ಮತ್ತು ಸಂತಾನೋತ್ಪತ್ತಿ ಕೇಂದ್ರಿತ ಲಿಂಗ ಸಂಬಂಧಿ ಪ್ರಣಾಳಿಕೆಗಳಿಂದಾಗಿ ಮಹಿಳೆಯರ ಸಾಕ್ಷರತೆಯು ನಮ್ಮ ಸಮಾಜದಲ್ಲಿ ಕೆಳಮಟ್ಟದಲ್ಲಿದೆ. ಸಾಕ್ಷರತೆಗೆ ಸಂಬಂಧಿಸಿದಂತೆ ಕೂಡ ಮಹಿಳೆಯರನ್ನು ಸಾಧನವಾಗಿ ಪರಿಭಾವಿಸಿಕೊಳ್ಳಲಾಗಿದೆ. ಮಹಿಳೆಯರಿಗೆ ಶಿಕ್ಷಣ ಯಾಕೆ ಬೇಕು ಎಂಬುದಕ್ಕೆ ಇರುವ ಉತ್ತರ ಬಹಳ ಕುತೂಹಲಕಾರಿಯಾಗಿದೆ. ಅದನ್ನು ಮಹಿಳೆಯರ ವ್ಯಕ್ತಿತ್ವದ ಆಧಾರದ ಮೇಲೆ ನಿರ್ಣಯಿಸುವುದಕ್ಕೆ ಪ್ರತಿಯಾಗಿ ಅದನ್ನು ಅವರು ನಿರ್ವಹಿಸುವ ದೈಹಿಕ ಕರ್ತವ್ಯದ ಆಧಾರದ ಮೇಲೆ ನಿರ್ಣಯಿಸಲಾಗುತ್ತಿದೆ. 'ಹೆಣ್ಣೊಬ್ಬಳು ಕಲಿತರೆ ಶಾಲೆಯೊಂದನ್ನು ತೆರೆದಂತೆ' ಎಂಬ ಪ್ರಸಿದ್ಧ ಘೋಷಣೆಯ ಅರ್ಥವೇನು?. 'ಮನೆಯೆ ಮೊದಲ ಪಾಠಶಾಲೆ, ತಾಯಿ ಮೊದಲ ಗುರು' ಎಂಬ ಘೋಷಣೆಯ ಅರ್ಥವೂ ಅತ್ಯಂತ ಲಿಂಗ ತಾರತಮ್ಯದಿಂದ ಕೂಡಿದೆ.

ಅಂದರೆ ಮಹಿಳೆಯ ಬದುಕು ತನಗಾಗಿ ಅಲ್ಲ ಎಂಬುದನ್ನು ಇವು ಗಟ್ಟಿಗೊಳಿಸುತ್ತವೆ. ಅವಳ ಬದುಕು ಮತ್ತೊಬ್ಬರಿಗಾಗಿ – ಮತ್ತೊಂದಕ್ಕಾಗಿ ಇದೆ ಎಂಬಂತಹ ಮೌಲ್ಯವನ್ನು ಇಂತಹ ಘೋಷಣೆಗಳು ಊರ್ಜಿತಗೊಳಿಸುತ್ತದೆ. ಮಹಿಳೆಯರು ಸಾಕ್ಷರರಾಗಬೇಕು ಎಂಬುದಕ್ಕೆ ಕೊಡುವ ಕಾರಣಗಳಲ್ಲಿ ಆಕೆಯನ್ನು ಒಬ್ಬ ವ್ಯಕ್ತಿಯನ್ನಾಗಿ ಪರಿಭಾವಿಸಿಕೊಳ್ಳುವ ಕ್ರಮಕ್ಕೆ ಪ್ರತಿಯಾಗಿ ಅವಳನ್ನು ಕುಟುಂಬದ, ಗಂಡನ, ಮಕ್ಕಳ ಹಿತಾಸಕ್ತಿಯನ್ನು ಕಾಪಾಡುವ ಒಂದು ಸಾಧನವಾಗಿ ಮಾತ್ರ ಎಂಬ ನೆಲೆಯಲ್ಲಿ ಪರಿಭಾವಿಸಿಕೊಳ್ಳುವುದು ಕಂಡು ಬರುತ್ತದೆ. ಮಹಿಳೆಯು ಅಕ್ಷರಸ್ಥಳಾದರೆ ಅವಳು ಆದರ್ಶ ತಾಯಿಯಾಗುತ್ತಾಳೆ, ಅವಳು ವಿಧೇಯ ಹೆಂಡತಿಯಾಗುತ್ತಾಳೆ ಎಂದು ನಂಬಲಾಗಿದೆ.

ಮಹಿಳೆಯರ ಸಾಕ್ಷರತಾ ಪ್ರಮಾಣ ಹೆಚ್ಚುವುದರಿಂದ ಜನಸಂಖ್ಯಾ ಬೆಳವಣಿಗೆಯ ಪ್ರಮಾಣ ಕಡಿಮೆಯಾಗುತ್ತದೆ ಅಥವಾ ಕುಟುಂಬ ನಿಯಂತ್ರಣ ಸಾಧ್ಯವಾಗುತ್ತದೆ ಮತ್ತು ಅದರಿಂದ ಜನನ ಪ್ರಮಾಣವು ಕಡಿಮೆಯಾಗುತ್ತದೆ ಮುಂತಾದ ಕಾರಣಗಳನ್ನು ಇಲ್ಲಿ ನೀಡಲಾಗುತ್ತದೆ. ಇದನ್ನು ಉಪಕರಣವಾದಿ ದೃಷ್ಟಿಕೋನವೆಂದು ಕರೆಯಲಾಗಿದೆ. ಮಹಿಳೆಯರು ತಮಗಾಗಿ ಅಕ್ಷರಸ್ಥರಾಗುವ ಕ್ರಮಕ್ಕೆ ಸಮಾಜದಲ್ಲಿ ಹೆಚ್ಚು ಆಸ್ಪದವಿಲ್ಲ. ಮಹಿಳೆಯರು ಹೆಚ್ಚು ಓದಿಬಿಟ್ಟರೆ ಅವರು 'ದಾರಿ ಬಿಟ್ಟುಬಿಡುತ್ತಾರೆ' ಎಂಬ ನಂಬಿಕೆ ಇಂದಿಗೂ ನಮ್ಮ ಸಮಾಜದಲ್ಲಿದೆ.

ಈ ಬಗೆಯ ನಂಬಿಕೆಯಿಂದಾಗಿಯೇ ಇಂದು ನಮ್ಮ ಸಮಾಜದ ಸಂದರ್ಭದಲ್ಲಿ ಸಾಕ್ಷರತೆಗೆ ಸಂಬಂಧಿಸಿದಂತೆ ತೀವ್ರ ಲಿಂಗ ಸಂಬಂಧಿ ಅಂತರ ಕಂಡು ಬರುತ್ತಿದೆ. ನಮ್ಮ ರಾಜ್ಯದಲ್ಲಿ ಮಹಿಳೆಯರ ಒಟ್ಟು ಸಾಕ್ಷರತೆಯು ಪುರುಷರ ಸಾಕ್ಷರತೆಗಿಂತ ಶೇ 19.23 ಅಂಶಗಳಷ್ಟು ಕಡಿಮೆಯಿದೆ. ರಾಜ್ಯದ ಹಿಂದುಳಿದ ಜಿಲ್ಲೆಗಳಾದ ವಿಜಾಪುರದಲ್ಲಿ ಇದು ಶೇ26.47 ಅಂಶಗಳಷ್ಟಿದ್ದರೆ ಗುಲ್ಬರ್ಗಾ ಜಿಲ್ಲೆಯಲ್ಲಿ ಈ ಅಂತರ ಶೇ 23.87 ಅಂಶಗಳಷ್ಟಿದೆ. ಕಳೆದ ಹತ್ತಾರು ವರ್ಷಗಳಿಂದ ಸರ್ಕಾರ ಮತ್ತು ಜನರು ಹೆಣ್ಣು ಮಕ್ಕಳ ಶಿಕ್ಷಣದ ಬಗ್ಗೆ ಆಸಕ್ತಿ ತಳೆದಿದ್ದರ ಪರಿಣಾಮವಾಗಿ ಲಿಂಗ ಸಂಬಂಧಿ ಸಾಕ್ಷರತಾ ಅಂತರ ಇಂದು ಕಡಿಮೆಯಾಗುತ್ತಿದೆ.

ಆದರೆ ನಾವು ವಯಸ್ಕರ ಸಾಕ್ಷರತೆಯನ್ನು(ಅಂದರೆ 15 ವರ್ಷ ಮತ್ತು ಅದಕ್ಕಿಂತಲೂ ಅಧಿಕ ವಯೋಮಾನದವರು)ತೆಗೆದುಕೊಂಡರೆ ಅಲ್ಲಿ ಲಿಂಗ ಸಂಬಂಧಿ ಸಾಕ್ಷರತಾ ಅಂತರ ರಾಜ್ಯಮಟ್ಟದಲ್ಲಿ ಶೇ24.60 ಅಂಶಗಳಷ್ಟಿದ್ದರೆ ಗುಲ್ಬರ್ಗಾ ಜಿಲ್ಲೆಯಲ್ಲಿ ಅದು ಶೇ32.17 ಅಂಶಗಳಷ್ಟಿದೆ. ಲಿಂಗ ಅಸಮಾನತೆಯು ಚಾರಿತ್ರಿಕವಾಗಿ ತೀವ್ರವಾಗಿದ್ದ ಸಂಗತಿಯನ್ನು ವಯಸ್ಕರ ಸಾಕ್ಷರತಾ ವಿವರಗಳು ತೋರಿಸುತ್ತವೆ. ನಮ್ಮ ರಾಜ್ಯದ ಒಟ್ಟು ಮಹಿಳಾ ಸಾಕ್ಷರತೆಯು 2001ರಲ್ಲಿ ಶೇ 56.87 ರಷ್ಟಿದ್ದರೆ ವಯಸ್ಕ ಮಹಿಳಾ ಸಾಕ್ಷರತೆ ಶೇ45.35 ರಷ್ಟಿತ್ತು. ಹೀಗೆ ಲಿಂಗ ತಾರತಮ್ಯದ ಪ್ರಶ್ನೆಯು ಸರಳವಾದ ಸಂಗತಿಯಲ್ಲ. ಅದರ ಮೂಲದಲ್ಲಿ ಅನೇಕ ಚಾರಿತ್ರಿಕ ಸಂಗತಿಗಳು ಕೆಲಸ ಮಾಡುತ್ತಿವೆ. ಅದನ್ನು ನಾವು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಬೇಕು.

ಸಮಸ್ಯೆಗಳನ್ನು ಅರ್ಥ ಮಾಡಿಕೊಳ್ಳುವ ಕ್ರಮವೇ ಪರಿಹಾರವನ್ನು ಕಂಡುಕೊಳ್ಳುವ ಮಾರ್ಗವಾಗಿದೆ.

ಹೀಗೆ ಮಹಿಳೆಯರನ್ನು ಅವರ ದೈಹಿಕ ಸಂಗತಿಗಳ ಆಧಾರದ ಮೇಲೆ ಅವಳಿಗೆ ಸಂಬಂಧಿಸಿದ ನಿರ್ಣಯಗಳನ್ನು ಸಮಾಜ ಮತ್ತು ಕುಟುಂಬ ತೆಗೆದುಕೊಳ್ಳುತ್ತವೆ. ಅವಳನ್ನು ಒಬ್ಬ ವ್ಯಕ್ತಿಯಾಗಿ, ತನ್ನ ಬದುಕನ್ನು ತಾನು ರೂಪಿಸಿಕೊಳ್ಳುವ ಸ್ವಾತಂತ್ರ್ಯವನ್ನು ಪಡೆದ ನಾಗರಿಕಳಾಗಿ ಮತ್ತು ಆಸೆ-ಆಕಾಂಕ್ಷೆಗಳಿರುವ ಜೀವಿಯಾಗಿ ಪರಿಭಾವಿಸಿಕೊಳ್ಳುವುದು ಇಲ್ಲಿ ಕಂಡು ಬರುವುದಿಲ್ಲ. ಹಾಗೆ ನೋಡಿದರೆ ಮಹಿಳೆಯರಿಗೆ ತಮ್ಮವೇ ಆದ ಹಿತಾಸಕ್ತಿಗಳು ಇರುವುದಿಲ್ಲವೆಂದು ಹೇಳಲಾಗುತ್ತಿದೆ. ಅವರ ಹಿತಾಸಕ್ತಿಗಳು ಗಂಡನ, ಮಕ್ಕಳ, ಕುಟುಂಬದ ಚೌಕಟ್ಟಿನಲ್ಲಿ ಬೆರೆತುಕೊಂಡು ಬಿಟ್ಟಿರುತ್ತವೆ. ಅವಳವೂ ಅನ್ನುವ, ಅಂದರೆ 'ಸ್ವ' ಅನ್ನಬಹುದಾದ ಹಿತಾಸಕ್ತಿಗಳು ಅವಳಿಗೆ ಇರುವುದಿಲ್ಲ.

ಮಹಿಳೆಯರನ್ನು ನಾವು ಪರಿಭಾವಿಸಿಕೊಂಡಿರುವ ಕ್ರಮವು ಉಪಕರಣವಾದಿಯಾದುದು ಮತ್ತು ಅದು ಸರಕು-ಸರಂಜಾಮುವಾದಿಯಾದುದು. ಮಹಿಳೆಗೆ ಸಾಕ್ಷರತೆಯು ಮಹಿಳೆಯಾಗಿ ಬೇಕು.

ಹೆಣ್ಣಾಗಿ ಅವಳನ್ನು ನೋಡುವುದು ಮುಖ್ಯ. ಆದರೆ ಅವಳನ್ನು ಮನುಷ್ಯಳನ್ನಾಗಿ ನೋಡುವ ಅಗತ್ಯವೂ ಇದೆ. ಅವಳು ಒಬ್ಬ ಮನುಷ್ಯಳು. ಮನುಷ್ಯಳಾಗುವುದಕ್ಕೆ ಅಕ್ಷರ ಜ್ಞಾನ ಬೇಕು. ಅದರಿಂದ ಅವಳು ವಂಚಿತಳಾಗಿದ್ದಾಳೆ. ಮಹಿಳೆಯರ ದೃಷ್ಟಿಯಿಂದ ಸಾಕ್ಷರತೆಗೆ ಮತ್ತು ಶಿಕ್ಷಣಕ್ಕೆ ಅವುಗಳದೇ ಆದ ಮಹತ್ವವಿರುತ್ತದೆ. ಮಹಿಳೆಯರನ್ನು ಮನುಷ್ಯರನ್ನಾಗಿ ನೋಡುವ ಕ್ರಮವನ್ನು ನಾವು ಬೆಳೆಸಬೇಕಾಗಿದೆ. ಅದು ಅವಳಿಗೆ 'ಸ್ವ'ದ ಕಲ್ಪನೆಯನ್ನು ತಂದುಕೊಡುತ್ತದೆ. 'ಸ್ವ'ದ ತ್ಯಾಗಕ್ಕೆ ಪ್ರತಿಯಾಗಿ 'ಸ್ವ'ಕ್ಕೆ ಪರವಾದ ನೆಲೆಯಲ್ಲಿ ಯೋಚಿಸುವುದು ಆಕೆಗೆ ಸಾಧ್ಯವಾಗುತ್ತದೆ.

ಅಮರ್ತ್ಯಸೇನ್ ಪ್ರಕಾರ ಸಾಕ್ಷರತೆ ಮತ್ತು ಶಿಕ್ಷಣಗಳು ಅಭಿವೃದ್ಧಿಯಲ್ಲಿ ಮೂರು ಪಾತ್ರ ನಿರ್ವಹಿಸುತ್ತವೆ:

1. ಸಾಕ್ಷರತೆ – ಶಿಕ್ಷಣ ಜನರಿಗೆ ಒಂದು ರೀತಿಯ ಆಂತರಿಕ ಸೌಂದರ್ಯವನ್ನು ನೀಡುತ್ತವೆ. ಅವು ಇಲ್ಲಿ ಆಂತರಿಕ ಮೌಲ್ಯ ವರ್ಧನೆಯ ಕೆಲಸ ಮಾಡುತ್ತವೆ.

2. ಅವು ಅಭಿವೃದ್ಧಿಯ ಅಂತರ್ಗತ-ಅವಿಭಾಜ್ಯ ಅಂಗಗಳಾಗಿವೆ. ಅಭಿವೃದ್ಧಿ ಎನ್ನುವುದು ಇವುಗಳನ್ನು ಒಳಗೊಂಡಿರಬೇಕು. ಅವುಗಳಿಲ್ಲದಿದ್ದರೆ ಅಲ್ಲಿ ಅಭಿವೃದ್ಧಿಯು ಇರಲು ಸಾಧ್ಯವಿಲ್ಲ.

3. ಅವು ಅಭಿವೃದ್ಧಿಯ ಮೌಲ್ಯಮಾಪನದ ಸೂಚಿಗಳು.

ಮಾನವ ಅಭಿವೃದ್ಧಿ ಸೂಚ್ಯಂಕದ ಮೂರು ಸೂಚಿಗಳಲ್ಲಿ ಸಾಕ್ಷರತೆ ಮತ್ತು ಶಿಕ್ಷಣ ಒಂದು ಸಂಯುಕ್ತ ಸೂಚಿಯಾಗಿದೆ. ವರಮಾನ ವರ್ಧನಾ ಅಭಿವೃದ್ಧಿಗೆ ಪ್ರತಿಯಾಗಿ ಅಮರ್ತ್ಯಸೇನ್ ಮತ್ತು ಮೆಹಬೂಬ್ ಉಲ್ ಹಕ್ ರೂಪಿಸಿರುವ ಮಾನವ ಅಭಿವೃದ್ಧಿ ಸಿದ್ಧಾಂತದಲ್ಲಿ ಶಿಕ್ಷಣ ಮತ್ತು ಸಾಕ್ಷರತೆಗೆ ಮಹತ್ವದ ಸ್ಥಾನ ನೀಡಲಾಗಿದೆ.

ಸಾಕ್ಷರತೆ ಮತ್ತು ಶಿಕ್ಷಣಗಳು ಮಹಿಳೆಯರಿಗೆ ಕರ್ತೃತ್ವದ ಅವಕಾಶವನ್ನು ಒದಗಿಸುತ್ತವೆ. ಅವಳನ್ನು ಅಭಿವೃದ್ಧಿಯ ಸಾಧನವನ್ನಾಗಿ ನೋಡುವುದರ ಜೊತೆಗೆ ಅಭಿವೃದ್ಧಿ ಗುರಿಯನ್ನಾಗಿಯೂ ನೋಡುವ ಅಗತ್ಯವನ್ನು ಸೇನ್ ಒತ್ತಿ ಹೇಳುತ್ತಿದ್ದಾನೆ. ಮಹಿಳೆಯರ ವಿವಾಹದ ವಯಸ್ಸನ್ನು ಮತ್ತು ಮಹಿಳೆಯರ ಸಾಕ್ಷರತೆ-ಶಿಕ್ಷಣವನ್ನು ಸರಕು-ಸರಂಜಾಮು ದೃಷ್ಟಿಕೋನದಿಂದ ಪರಿಭಾವಿಸಿಕೊಳ್ಳುವುದಕ್ಕೆ ಪ್ರತಿಯಾಗಿ ಜನರ ಧಾರಣಾ ಸಾಮರ್ಥ್ಯದ ವರ್ಧನೆಯ ಸಂಗತಿಗಳಾಗಿ 'ಸ್ವಾತಂತ್ರ್ಯವಾಗಿ ಅಭಿವೃದ್ಧಿ' ಎಂಬ ಸೇನ್‌ನ ಮೀಮಾಂಸೆಯ ಚೌಕಟ್ಟಿನಲ್ಲಿ ಪರಿಭಾವಿಸಿಕೊಳ್ಳುವ ಅಗತ್ಯವಿದೆ. ಮದುವೆ ಮತ್ತು ಸಂತಾನೋತ್ಪತ್ತಿ ಹಾಗೂ ಸಾಕ್ಷರತೆ ಮತ್ತು ಶಿಕ್ಷಣ ವಿಷಯಗಳಲ್ಲಿ ಮಹಿಳೆಯರಿಗೆ ಸ್ವಾತಂತ್ರ್ಯವಿಲ್ಲ. ಸಮಾಜದ ಮತ್ತು ಕುಟುಂಬದ ಅಗತ್ಯಗಳನ್ನು ಪೂರೈಸುವ ಸಾಧನವಾಗಿ ಮಹಿಳೆಯು ಬದುಕನ್ನು ಕಟ್ಟಿಕೊಳ್ಳಬೇಕಾಗಿದೆ.

ಮಹಿಳೆಯರ ಬದುಕನ್ನು ಸರಕು-ಸರಂಜಾಮು ದೃಷ್ಟಿಕೋನದಿಂದ ನೋಡಬಾರದು. ಏಕೆಂದರೆ ಅಲ್ಲಿ ಸರಕು-ಸರಂಜಾಮುಗಳ ಅನುಭೋಗವೇ ಸಮೃದ್ಧ ಬದುಕಿನ ಅಳತೆಗೋಲಾಗಿದೆ. ಆದರೆ ಸಮೃದ್ಧ ಬದುಕು ಎನ್ನುವುದು ಕೇವಲ ಸರಕು-ಸರಂಜಾಮುಗಳ ಅನುಭೋಗದಿಂದ ಬಂದು ಬಿಡುವುದಿಲ್ಲ.

ಸರಕು-ಸರಂಜಾಮುಗಳು ಬೇಕು. ಅದರ ಜೊತೆಯಲ್ಲಿ ಮಹಿಳೆಯರನ್ನು ಸೇರಿಸಿಕೊಂಡು ಜನರಿಗೆ ಸಮೃದ್ಧ ಬದುಕನ್ನು ಸಾಗಿಸಲು ಅನೇಕ ಇತರೆ ಸಂಗತಿಗಳ ಅಗತ್ಯವಿದೆ. ತಮ್ಮ ಬದುಕನ್ನು ತಾವು ಭಾವಿಸಿಕೊಂಡಂತೆ ರೂಪಿಸಿಕೊಳ್ಳುವ ಸ್ವಾತಂತ್ರ್ಯ ಮತ್ತು ಅದಕ್ಕೆ ಅಗತ್ಯವಾದ ಸಾಮರ್ಥ್ಯ, ಘನತೆಯಿಂದ ಕೂಡಿದ ಬದುಕು, ಜನಸಂಖ್ಯಾವಾಚಿಗಳಾಗಿ ಪರಿಭಾವಿಸಿಕೊಳ್ಳುವುದಕ್ಕೆ ಪ್ರತಿಯಾಗಿ ಮಹಿಳೆಯರನ್ನು ಸಾಮಾಜಿಕ ಘಟಕಗಳಾಗಿ ಪರಿಭಾವಿಸಿಕೊಳ್ಳುವ ಕ್ರಮ, ಲಿಂಗ ಸಮಾನತೆ, ಮಾನವ ಹಕ್ಕುಗಳು, ಆಸ್ತಿಯ ಹಕ್ಕು, ಮನೆವಾರ್ತೆಯನ್ನು ಗಂಡ-ಹೆಂಡತಿ ಹಂಚಿಕೊಳ್ಳುವ ಕ್ರಮ ಮುಂತಾದವು ಸಮೃದ್ಧ ಬದುಕನ್ನು ನಿರ್ಧರಿಸುವ ಸಂಗತಿಗಳಾಗಿವೆ. ಮಹಿಳೆಯರ ಬದುಕು ಎಂಬುದು ಸಂತಾನೋತ್ಪತ್ತಿಯ ಮೊತ್ತವಲ್ಲ. ಅದನ್ನು ಮೀರಿ ಅವಳ ಬದುಕಿದೆ.

ಸಂತಾನೋತ್ಪತ್ತಿಯು ಮಹಿಳೆಯರಿಗೆ ಎಷ್ಟು ಮುಖ್ಯವೋ ಅದು ಗಂಡಸರಿಗೂ ಮುಖ್ಯ. ಅವರಿಗೂ ಅದು ಸಂಬಂಧಿಸಿದೆ. ಆದರೆ ಪುರುಷರು ಸಂತಾನೋತ್ಪತ್ತಿ ಕರ್ತವ್ಯದಿಂದ ಮತ್ತು ಪಾಲಕತ್ವದ ಜವಾಬುದಾರಿಯಿಂದ ತಪ್ಪಿಸಿಕೊಳ್ಳಲು ಸಾಮಾಜಿಕೀಕರಣವನ್ನು ಬಳಸಿಕೊಳ್ಳುತ್ತಿದ್ದಾರೆ. ಈ ಸಾಮಾಜಿಕೀಕರಣವು ಪುರುಷಶಾಹಿತ್ವದ ನಿಯಂತ್ರಣದಲ್ಲಿ ನಡೆಯುವ ಒಂದು ಪ್ರಕ್ರಿಯೆಯಾಗಿದೆ. ಇದು ಅತ್ಯಂತ ಅಪಾಯಕಾರಿ ಬೆಳವಣಿಗೆಯಾಗಿದೆ. ಸಾಂಪ್ರದಾಯಿಕ ಅಭಿವೃದ್ಧಿ ಸಿದ್ಧಾಂತಗಳು ಲಿಂಗ ನಿರಪೇಕ್ಷ ಧೋರಣೆ ತಳೆದಿದ್ದರಿಂದ ಅಲ್ಲಿ ಮಹಿಳೆಯರಿಗೆ ನ್ಯಾಯ ದೊರೆಯುತ್ತಿಲ್ಲ.

ಅಮರ್ತ್ಯಸೇನ್ ಮತ್ತು ಮೆಹಬೂಬ್ ಉಲ್ ಹಕ್ ರೂಪಿಸಿರುವ ಧಾರಣಾ ಸಾಮರ್ಥ್ಯ ವರ್ಧನಾ ಅಭಿವೃದ್ಧಿ ಸಿದ್ಧಾಂತವು ಮಹಿಳೆಯರ ಸಂಗತಿಯನ್ನು ಪ್ರಜ್ಞಾಪೂರ್ವಕವಾಗಿ ಪರಿಗಣಿಸುತ್ತದೆ. ಈ ಸಿದ್ಧಾಂತದಲ್ಲಿ ಅಭಿವೃದ್ಧಿಯನ್ನು ಮಾಪನ ಮಾಡಲು ಮಾನವ ಅಭಿವೃದ್ಧಿ ಸೂಚ್ಯಂಕವಿದ್ದರೆ ಮಹಿಳೆಯರ ಅಭಿವೃದ್ಧಿಯನ್ನು ಅಳೆಯಲು ಲಿಂಗ ಸಂಬಂಧಿ ಅಭಿವೃದ್ಧಿ ಸೂಚ್ಯಂಕವಿದೆ. ಲಿಂಗ ಸಂಬಂಧಿ ಅಸಮಾನತೆ ಮತ್ತು ಮಹಿಳೆಯರ ಶೋಷಣೆ ಮುಂತಾದವು ತಮ್ಮಷ್ಟಕ್ಕೆ ತಾವು ಅಭಿವೃದ್ಧಿಯು ಉನ್ನತವಾದಂತೆ ಪರಿಹಾರವಾಗಿ ಬಿಡುತ್ತವೆ ಎಂಬುದರಲ್ಲಿ ಯಾವುದೇ ತಥ್ಯವಿಲ್ಲ ಎಂಬುದು ಇಂದು ಸ್ಪಷ್ಟವಾಗಿದೆ. ಈ ದಿಶೆಯಲ್ಲಿ ಪ್ರಜ್ಞಾಪೂರ್ವಕ ಪ್ರಯತ್ನ ನಡೆಯಬೇಕಾಗುತ್ತದೆ. □

ಕರ್ನಾಟಕ ಸಂಸ್ಕೃತಿ ಮತ್ತು ಲೋಹಿಯಾವಾದ

(29ನೇ ಪುಟದಿಂದ)

ಈ ಹಿನ್ನೆಲೆಯಲ್ಲಿ ಕಳೆದ ಅರ್ಧಶತಮಾನದ ಲೋಹಿಯಾವಾದದ ಪರಿಣಾಮಗಳು ಬಹುರೂಪಿಯಾಗಿ ಕಾಣುತ್ತವೆ. ಇದು ವ್ಯಕ್ತಿಗಳ ನೆಲೆಯಲ್ಲಿ ಮೂರು ಮಾದರಿಗಳನ್ನು ನಿರ್ಮಿಸಿತು ಎನ್ನಬಹುದು. 1. ನೈತಿಕ ವ್ಯಕ್ತಿತ್ವ ಉಳಿಸಿಕೊಂಡು, ಆದರ್ಶವಾದಿಗಳಾಗಿ, ಅಧಿಕಾರಸ್ಥ ರಾಜಕಾರಣದ ಹೊರಗೆ ಉಳಿದವರು. 2. ಆದರ್ಶಗಳಲ್ಲಿ ಮುಳುಗಿ ತಮ್ಮನ್ನು ಕಳೆದುಕೊಳ್ಳದೆ, ಅಧಿ ಕಾರಸ್ಥ ರಾಜಕಾರಣದಲ್ಲಿ ಸದಾ ಇರುವುದಕ್ಕಾಗಿ ಅವಕಾಶ ವಾದಿಗಳೂ ಆಗದೆ, ತಾತ್ವಿಕ ಪ್ರಬುದ್ಧತೆ, ಆಧುನಿಕತೆ, ವೈಚಾರಿಕವಾಗಿ ಚೂಪುತನ, ನೈತಿಕತೆ ಮೂರನ್ನೂ ಮೇಳವಿಸಿಕೊಂಡ ಚಳುವಳಿಗಾರರು.

3. ರಾಜಕೀಯ ನೈತಿಕತೆಯನ್ನು ದೊಡ್ಡ ಸಂಗತಿಯೆಂದು ಭಾವಿಸದೆ, ಬದಲುತ್ತ ಹೋದ ರಾಜಕೀಯ ಸನ್ನಿವೇಶದಲ್ಲಿ ತಮ್ಮನ್ನು ಹೊಂದಿಸಿಕೊಂಡು, ಲೌಕಿಕವಾಗಿ ಯಶಸ್ವಿಯಾಗುತ್ತ ಹೋದವರು. ಭಾರತದ ಈ ಹೊತ್ತಿನ ಬಲಪಂಥೀಯ ರಾಜಕಾರಣದ ಜತೆಗೂಡಿ ಕೆಲಸ ಮಾಡುತ್ತಿರುವವರು ಲೋಹಿಯಾ ಸಮಾಜವಾದಿಗಳು ಎಂಬುದು ಇದಕ್ಕೆ ಸಾಕ್ಷಿ. ಸಮಾನ ಆಸಕ್ತಿಗಿಂತ ಸಮಾನ ಶತ್ರುಗಳಿಗಾಗಿ ಒಂದುಗೂಡುವ ರಾಜಕಾರಣವೇ ಇದಕ್ಕೆ ಕಾರಣ. ಲೋಹಿಯಾವಾದಿಗಳಲ್ಲಿದ್ದ ಕಾಂಗ್ರೆಸ್ಸನ್ನು ವಿರೋಧಿಸುವ ನೆಗೆಟಿವಿಸಂ ಅವರನ್ನು ಅದಕ್ಕಿಂತಲೂ ಕೆಟ್ಟದಾದ ರಾಜಕೀಯ ಸಮೀಕರಣಗಳ ಜತೆ ಹೋಗುವಂತೆ ಮಾಡಿತು. ಇದು ಆರಂಭವಾಗಿದ್ದು ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ. ಆಗಿನ ಸನ್ನಿವೇಶವು ಅನೇಕ ಲೋಹಿಯಾವಾದಿಗಳನ್ನು ಬಲಪಂಥಿಯರ ಜತೆ ಕೈಜೋಡಿಸಿತು. ಇದೊಂದು ಚಾರಿತ್ರಿಕ ಅನಾಹುತವಾಗಿತ್ತು. ಇಂದಿರಾಗಾಂಧಿಯವರನ್ನು ವಿರೋಧಿಸುವುದಕ್ಕಾಗಿ ಜೆಪಿಯವರ ನೇತೃತ್ವದಲ್ಲಿ ನವನಿರ್ಮಾಣ ಚಳುವಳಿ ಆರಂಭವಾದಾಗ, ಸಾಮಾಜಿಕ ವಿಚಾರಗಳಲ್ಲಿ ಪರಸ್ಪರ ವಿರೋಧಿಗಳಾದ ಅನೇಕ ಸಮಾಜವಾದಿಗಳು ಒಂದಾದರು.

ಲಂಕೇಶ್ ಜನಸಂಘದಿಂದ ಹುರಿಯಾಳಾದ ಅಡಿಗರನ್ನು ಸಮರ್ಥಿಸುವ ಕೆಲಸ ನಡೆದಿದ್ದು ಆಗಲೇ. ನಂತರ ರೂಪುಗೊಂಡ ಜನತಾ ಪಕ್ಷದಲ್ಲಿ ಲೋಹಿಯಾ ಸಮಾಜವಾದಿಗಳು ಕೋಮುವಾದಿಗಳ ಜತೆಗೂಡಿ ಸರ್ಕಾರ ರಚಿಸಿದರು. ಮುಂದೆ ಸಂಘಪರಿವಾರವು ವಾಜಪೇಯಿ ನೇತೃತ್ವದಲ್ಲಿ ಎನ್‌ಡಿಎ ರಚಿಸಿ ಸರ್ಕಾರ ನಡೆಸಿದಾಗ, ಕರ್ನಾಟಕ ಮೂಲದ ಜಾರ್ಜ್ ಫರ್ನಾಂಡಿಸ್ ಅದರ ಸಂಚಾಲಕರಾದರು. ಕರ್ನಾಟಕದಲ್ಲೂ ಬಿಜೆಪಿ ಬೆಂಬಲಿತ ಸರ್ಕಾರಗಳಿಗೆ ಇದರಿಂದ ಭೂಮಿಕೆ ಒದಗಿತು. ಈ ಪ್ರಯೋಗಗಳು ಪರೋಕ್ಷವಾಗಿ ಗಾಂಧಿಯನ್ನು ಕೊಂದ ಕಾರಣದಿಂದ ಅಸ್ಪೃಶ್ಯವಾಗಿದ್ದ ಕೋಮುವಾದಿ ರಾಜಕಾರಣವನ್ನು, ಭಾರತದ ಪ್ರಧಾನ ಧಾರೆಯ ರಾಜಕಾರಣದಲ್ಲಿ ಪ್ರತಿಷ್ಠಾಪನೆ ಮಾಡಿದವು. ಮುಂದೆ ತಮಗೆ ಬೆಂಬಲಿಸಿ ಶಕ್ತಿಕೊಟ್ಟ ಸಮಾಜವಾದಿಗಳನ್ನು ನಾಶಮಾಡಿ ಕೋಮುವಾದವು ಪ್ರತಿಷ್ಠಿತವಾಯಿತು. ಅದರ ಫಲವನ್ನು ಕರ್ನಾಟಕವೂ ಅನುಭವಿಸುತ್ತಿದೆ. ಆದರೆ ಈ ಹೊತ್ತಿನ ಕೋಮುವಾದದ ವಿರೋಧದಲ್ಲಿಯೂ ಶಕ್ತಿರಾಜಕಾರಣದಲ್ಲಿ ಹೋಗದ ಲೇಖಕರು-ಚಿಂತಕರು ಸಕ್ರಿಯರಾಗಿದ್ದಾರೆ ಎಂಬುದು ಇದರ ಇನ್ನೊಂದು ಮುಖವಾಗಿದೆ. □

ಜಾತಿವ್ಯವಸ್ಥೆಯನ್ನು ಕೊಲ್ಲುವುದು ಹೇಗೆ?

ಚಂದ್ರಭಾನ್ ಪ್ರಸಾದ್

ದಲಿತ್ ಡೈರಿ

ಅನು: ಸತ್ಯಪ್ರಕಾಶ್ ಎಂ ಆರ್

ತಮಿಳುನಾಡಿನ ದಕ್ಷಿಣ ಭಾಗದಲ್ಲಿ ಕಳೆದ ಜೂನ್ ತಿಂಗಳಲ್ಲಿ ಎರಡು ದಲಿತ ಅಂತರ್ಜಾತಿ ವಿವಾಹಗಳು ನಡೆದಿರುವುದು ಬೆಳಕಿಗೆ ಬಂದಿದೆ. ದಿಂಡಿಗಲ್ ಜಿಲ್ಲೆಯ ದಲಿತ ಯುವಕ ನಾಗರಾಜ್ ಮತ್ತು ಮೇಲ್ಜಾತಿಯ ಯುವತಿ ಸುಮತಿ ಒಬ್ಬರನ್ನೊಬ್ಬರು ಗಾಢವಾಗಿ ಪ್ರೀತಿಸುತ್ತಿದ್ದು, ಪೋಷಕರು ತಮ್ಮ ಮದುವೆಗೆ ಅಡ್ಡಿಪಡಿಸಬಹುದೆಂಬ ಭಯದಿಂದ ಪಕ್ಕದ ಊರಿಗೆ ಓಡಿ ಹೋಗಿ ಮದುವೆಯಾದರು. ಮದುವೆಯಾಗಿ ಕೆಲವು ದಿನಗಳು ಕಳೆದ ಬಳಿಕ ವಾತಾವರಣ ತಿಳಿಯಾಗಿರಬಹುದೆಂದು ಊರಿಗೆ ಹಿಂದಿರುಗಿದಾಗ ಹುಡುಗಿಯ ಪೋಷಕರು ಇಬ್ಬರನ್ನೂ ಹಿಡಿದು ಬೇರ್ಪಡಿಸಿದರು. ಒಂದು ಮೇಕೆಯನ್ನು ಕಡಿದು ಅದರ ರಕ್ತವನ್ನು ಹುಡುಗಿಯ ಹಣೆಗೆ ಹಚ್ಚಿ ಮದುವೆ ನಡೆದಿಲ್ಲವೆಂದು ಘೋಷಿಸಿದರು. ನಂತರ ಹುಡುಗಿಯನ್ನು ಸ್ವಜಾತಿಯ ಹುಡುಗನಿಗೆ ಕೊಟ್ಟು ಮದುವೆ ಮಾಡಿದರು.

ಅದೇ ಜಿಲ್ಲೆಯಲ್ಲಿ ನಡೆದ ಇನ್ನೊಂದು ಪ್ರಕರಣದಲ್ಲಿ ದಲಿತ ಯುವಕ ಬಾಲಚಂದರ್ ಎಂಬಾತನನ್ನು ಮೇಲ್ಜಾತಿಯ ಸಂಗೀತ ಎಂಬ ಯುವತಿ ಪ್ರೀತಿಸುತ್ತಿದ್ದು ಇಬ್ಬರೂ ಊರನ್ನು ತೊರೆದು ಓಡಿಹೋಗಿ ಮದುವೆಯಾದರು. ಆದರೆ ಕೆಲವೇ ದಿನಗಳಲ್ಲಿ ಸಿಕ್ಕಿಹಾಕಿಕೊಂಡ ಇಬ್ಬರನ್ನು ಊರಿಗೆ ಮತ್ತೆ ಕರೆತರಲಾಯಿತು. ಇದಾದ ಕೆಲವು ದಿನಗಳ ಬಳಿಕ ಹುಡುಗಿ ಅಸಹಜವಾಗಿ ಸಾವನ್ನಪ್ಪಿದಳು. ಅದೃಷ್ಟವಶಾತ್ ಈ ಎರಡೂ ಪ್ರಕರಣದಲ್ಲಿ ದಲಿತ ಯುವಕರು ಬದುಕುಳಿದಿದ್ದಾರೆ. ಆಂಧ್ರಪ್ರದೇಶದ ನಿಜಾಮಾಬಾದ್ ಜಿಲ್ಲೆಯಲ್ಲಿ ರೆಡ್ಡಿ ಜಾತಿಯ ಸ್ವಪ್ನ ರೆಡ್ಡಿ ಮತ್ತು ದಲಿತ ಯುವಕ ಶಂಕರ ಶ್ರೀನಿವಾಸ್ ಒಬ್ಬರನ್ನೊಬ್ಬರು ಗಾಢವಾಗಿ ಪ್ರೀತಿಸಿ ಮದುವೆಯಾದರು. ಆದರೆ ಕೆಲವು ತಿಂಗಳ ಬಳಿಕ ಇಬ್ಬರನ್ನೂ ಸಾರ್ವಜನಿಕವಾಗಿ ನಿಲ್ಲಿಸಿ ಕಲ್ಲುಗಳನ್ನು ತೂರಿ ಕೊಲ್ಲಲಾಯಿತು.

ಕೆಲವೇ ತಿಂಗಳುಗಳ ಹಿಂದೆ ರಾಜಧಾನಿ ದೆಹಲಿಯಲ್ಲಿ ದಲಿತ ಯುವಕ ಯೋಗೇಶ್ ಕುಮಾರ್ ಎಂಬಾತ ಆಶಾ ಸೈನಿ ಎಂಬ ಮೇಲ್ಜಾತಿಯ ಹುಡುಗಿಯನ್ನು ಪ್ರೀತಿಸುತ್ತಿದ್ದ. ಆದರೆ ಹುಡುಗಿಯ ಪೋಷಕರು ಇಬ್ಬರನ್ನೂ ಮದುವೆಗೆ ಮುಂಚೆಯೇ ಭರ್ಬರವಾಗಿ ಕೊಲ್ಲಿಸಿದರು. ಅದೇ ರೀತಿ ರಾಜಧಾನಿಯಿಂದ ಕೆಲವೇ ಕಿಲೋಮೀಟರುಗಳ ಅಂತರದಲ್ಲಿರುವ ಗ್ರೇಟರ್ ನೊಯಿಡಾದಲ್ಲಿ ಸಿನಿಮೀಯ ಘಟನೆಯೊಂದು ನಡೆದಿದೆ. ಇದೇ ಜುಲೈ ತಿಂಗಳಲ್ಲಿ ದಲಿತ ಯುವಕ ಸಂಜಯ್ ಎಂಬಾತ ಪ್ರಿಯಾಂಕ ಚೋಪ್ರ ಎಂಬ ಮೇಲ್ಜಾತಿಯ ಯುವತಿಯನ್ನು ಪ್ರೀತಿಸಿ ಮದುವೆಯಾದ. ಇದರಿಂದ ರೊಚ್ಚಿಗೆದ್ದ ದಲಿತೇತರರು ಪಂಚಾಯಿತಿ ಸಭೆನಡೆಸಿ, ಪ್ರಿಯಾಂಕ ಮನೆಗೆ ಹಿಂದಿರುಗದಿದ್ದರೆ ದಲಿತರ ಮನೆಗಳಿಂದ ಹೆಣ್ಣುಮಕ್ಕಳನ್ನು ಅಪಹರಣ ಮಾಡಲಾಗುವುದೆಂದು ಎಚ್ಚರಿಕೆ ನೀಡಿದರು.

ದಲಿತ ಯುವಕರು - ಮೇಲ್ಜಾತಿಯ ಯುವತಿಯರ ನಡುವಿನ ಅಂತರ್ಜಾತಿ ವಿವಾಹದ ಘಟನೆಗಳು ಈಗ ಸುದ್ದಿಯಾಗಿ ಉಳಿದಿಲ್ಲ. ಯುವತಿಯ ಪೋಷಕರು ಪ್ರೇಮಿಗಳನ್ನು ಕೊಂದರೆ ಅದು ಸುದ್ದಿಯಾಗುತ್ತದೆ. ಭಾರತ ಸರ್ಕಾರದ ವರದಿಯೊಂದರ ಪ್ರಕಾರ 2008-09ರಲ್ಲಿ ದಲಿತರನ್ನು ಒಳಗೊಂಡ ಸುಮಾರು 5,000 ಅಂತರ್ಜಾತಿ ವಿವಾಹಗಳು ನಡೆದಿವೆ. ಮಹಾರಾಷ್ಟ್ರದಲ್ಲಿ ಅಂತರ್ಜಾತಿ ಮತ್ತು ಅಂತರ ಧಾರ್ಮಿಕ ವಿವಾಹಗಳಿಗೆ ಪ್ರೋತ್ಸಾಹ ನೀಡುವ ಪ್ರತಿಬಿಂಬ್ ಎಂಬ ವಿವಾಹದ ಬ್ಯೂರೋ ಕೂಡ ಆರಂಭವಾಗಿದೆ.

ಈಗ ಸಮಾಜ ನಮ್ಮ ನಾಡಿಮಿಡಿತಕ್ಕಿಂತ ವೇಗವಾಗಿ ಬದಲಾಗುತ್ತಿದೆ. ನಮಗೆ ಗೊತ್ತಿರುವ ಇತ್ತೀಚಿನ ಇತಿಹಾಸವನ್ನು ಗಮನಿಸಿದರೆ ಜಾತಿಯ ಬೇರುಗಳು ಅಲುಗಾಡುತ್ತಿರುವುದನ್ನು ಕಾಣಬಹುದು. ಜಾತಿ ವ್ಯವಸ್ಥೆಯ ಎರಡು ಪ್ರಮುಖ ಆಧಾರಸ್ತಂಭಗಳಾದ ರಕ್ತ ಮತ್ತು ಉದ್ಯೋಗ/ ಕಸುಬುಗಳ ಪಾವಿತ್ರ್ಯತೆ ಈಗ ಉಳಿದಿಲ್ಲ. ಜಾತಿವ್ಯವಸ್ಥೆಯ ಬೆನ್ನು ಮೂಳೆ ಈಗ ಮುರಿದಿದೆ. ಅಂತರ್ಜಾತಿ ವಿವಾಹಗಳು ಜಾತಿ ವ್ಯವಸ್ಥೆಯಷ್ಟೇ ಹಳೆಯದಾದರೂ, ಈ ಹಿಂದೆ ಅಲ್ಲೊಂದು ಇಲ್ಲೊಂದು ಅಂತರ್ಜಾತಿ ವಿವಾಹಗಳು ನಡೆಯುತ್ತಿದ್ದವು. ಕೆಲವೇ ದಶಕಗಳ ಹಿಂದೆ ಅಂತರ್ಜಾತಿ ವಿವಾಹಗಳು ನಗರಗಳಲ್ಲಿ ವಾಸಿಸುವ ಮೇಲ್ಮಧ್ಯಮ ವರ್ಗಗಳಲ್ಲಿ ಮಾತ್ರ ನಡೆಯುತ್ತಿದ್ದವು.

ಅಂತರ್ಜಾತಿ ವಿವಾಹಗಳನ್ನು ಅರ್ಥೈಸಿಕೊಳ್ಳುವಲ್ಲಿ ಮಾಹಿತಿಯ ಕೊರತೆಯಿದ್ದರೂ ಇವುಗಳನ್ನು ಈ ರೀತಿ ವಿಭಾಗೀಕರಿಸಬಹುದು. 'ವರ್ಣವ್ಯವಸ್ಥೆ'ಯೊಳಗಿರುವ ಜಾತಿ (ಉದಾ: ಬ್ರಾಹ್ಮಣ ಮತ್ತು ಶೂದ್ರ) ಗಳಲ್ಲಿ ನಡೆಯುವ ಅಂತರ್ಜಾತಿ ವಿವಾಹಗಳು. ಈ ಹಿಂದೆ ಅಂತರ್ಜಾತಿ ವಿವಾಹಗಳು ನಾಲ್ಕು ವರ್ಣಗಳ- ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ- ನಡುವೆ ಮಾತ್ರ ನಡೆಯುತ್ತಿತ್ತು. ಆದರೆ ಚತುರ್ವರ್ಣದವರು ಮತ್ತು ಅಸ್ಪೃಶ್ಯರ ನಡುವೆ ವಿವಾಹಗಳು ನಡೆಯುತ್ತಿದ್ದುದು ಕಡಿಮೆ.

ಭಾರತದ ಗ್ರಾಮೀಣ ಪ್ರದೇಶಗಳಲ್ಲಿ ಟೀ ಅಂಗಡಿಗಳಲ್ಲಿ ಈಗಲೂ ಕೂಡ ಮೂರು ಲೋಟದ ಪದ್ಧತಿ- ದಲಿತೇತರರಿಗೆ ಒಂದು, ದಲಿತರಿಗೆ ಒಂದು ಮತ್ತು ಅಪರಿಚಿತರಿಗೆ ಒಂದು ಲೋಟ- ಚಾಲ್ತಿಯಲ್ಲಿದೆ. ಕೆಲವು ಪ್ರದೇಶಗಳಲ್ಲಿ ಕ್ಷೌರಿಕರು ದಲಿತರಿಗೆ ಕ್ಷೌರ ಮಾಡುವುದಿಲ್ಲ. ಕೆಲವು ಕಡೆ ದಲಿತರು ಮಾಡಿದ ಅಡುಗೆಯನ್ನು ದಲಿತೇತರ ಮಕ್ಕಳು ತಿನ್ನುವುದಿಲ್ಲ.

ದಲಿತರನ್ನು ಈಗಲೂ ಸಮಾಜ ಇಷ್ಟು ಕ್ರೂರವಾಗಿ ನಡೆಸಿಕೊಳ್ಳುತ್ತಿದ್ದರೂ ಬಹಳಷ್ಟು ದಲಿತೇತರ ಹೆಣ್ಣುಮಕ್ಕಳು ತಮ್ಮ ಜೀವದ ಹಂಗು ತೊರೆದು ದಲಿತರನ್ನು ವಿವಾಹವಾಗುವ ಧೈರ್ಯ ಪ್ರದರ್ಶಿಸುತ್ತಾರೆ. ಭಾರತದಲ್ಲಿ ನಡೆಯುತ್ತಿರುವ ಸಾಮಾಜಿಕ ಕ್ರಾಂತಿಯನ್ನು ಇದು ಬಿಂಬಿಸುತ್ತದೆ.

ದಲಿತ ವೃತ್ತಿಪರರು, ವಿಶೇಷವಾಗಿ ಐಎಎಸ್ ಅಧಿಕಾರಿಗಳು, ಉದ್ಯಮಿಗಳು ಬೇರೆ ಜಾತಿಯ ಹೆಣ್ಣುಮಕ್ಕಳನ್ನು ಯಾವುದೇ ತೊಂದರೆಯಿಲ್ಲದೆ ವಿವಾಹವಾಗುವ ಹಲವಾರು ಉದಾಹರಣೆಗಳಿವೆ. ಆದರೆ ಇವು ಬಹುತೇಕ ನಗರಗಳಲ್ಲಿ, ದಲಿತ ಮೇಲ್ಮಧ್ಯಮ ವರ್ಗಗಳಲ್ಲಿ ಕಂಡು ಬರುವ ವಿದ್ಯಮಾನ. ಆದರೆ ಸಣ್ಣ ಪಟ್ಟಣಗಳು ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಪರಿಸ್ಥಿತಿ ಇಷ್ಟು ಸುಲಭವಾಗಿಲ್ಲ.

ಹೀಗಾಗಿ ತಮ್ಮ ಜೀವಗಳ ಹಂಗು ತೊರೆದು ಜಾತಿ ಬಂಧವನ್ನು ಕಳಚಿ ಅಂತರ್ಜಾತಿ ವಿವಾಹಗಳಿಗೆ ಮನಸು ಮಾಡುವವರು ನಿಜವಾಗಿ ಈ ದೇಶದ ಹೀರೋಗಳು. ದಲಿತ ಮತ್ತು ಇತರ ಜಾತಿಗಳ ನಡುವೆ ನಡೆಯುವ ವಿವಾಹಗಳು ಜಾತಿಗೆ

ಅಂತರ್ಜಾತಿ ವಿವಾಹಗಳನ್ನು ಅರ್ಥೈಸಿಕೊಳ್ಳುವಲ್ಲಿ ಮಾಹಿತಿಯ ಕೊರತೆಯಿದ್ದರೂ ಇವುಗಳನ್ನು ಈ ರೀತಿ ವಿಭಾಗೀಕರಿಸಬಹುದು. 'ವರ್ಣವ್ಯವಸ್ಥೆ'ಯೊಳಗಿರುವ ಜಾತಿ (ಉದಾ: ಬ್ರಾಹ್ಮಣ ಮತ್ತು ಶೂದ್ರ) ಗಳಲ್ಲಿ ನಡೆಯುವ ಅಂತರ್ಜಾತಿ ವಿವಾಹಗಳು. ಈ ಹಿಂದೆ ಅಂತರ್ಜಾತಿ ವಿವಾಹಗಳು ನಾಲ್ಕು ವರ್ಣಗಳ- ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ- ನಡುವೆ ಮಾತ್ರ ನಡೆಯುತ್ತಿತ್ತು. ಆದರೆ ಚತುರ್ವರ್ಣದವರು ಮತ್ತು ಅಸ್ಪೃಶ್ಯರ ನಡುವೆ ವಿವಾಹಗಳು ನಡೆಯುತ್ತಿದ್ದುದು ಕಡಿಮೆ. ಭಾರತದ ಗ್ರಾಮೀಣ ಪ್ರದೇಶಗಳಲ್ಲಿ ಟೀ ಅಂಗಡಿಗಳಲ್ಲಿ ಈಗಲೂ ಕೂಡ ಮೂರು ಲೋಟದ ಪದ್ಧತಿ- ದಲಿತೇತರರಿಗೆ ಒಂದು, ದಲಿತರಿಗೆ ಒಂದು ಮತ್ತು ಅಪರಿಚಿತರಿಗೆ ಒಂದು ಲೋಟ- ಚಾಲ್ತಿಯಲ್ಲಿದೆ.

ದಲಿತ ಪುರುಷರ ಆಕರ್ಷಣೆಯ ಗುಟ್ಟೇನು?

ಮಾತ್ರವಲ್ಲ ಒಟ್ಟಾರೆ ಜಾತಿವ್ಯವಸ್ಥೆಗೆ ಒಂದು ದೊಡ್ಡ ಕೊಡಲಿಪೆಟ್ಟು ನೀಡುತ್ತದೆ.

* * * * * * * * *

ಅಮೆರಿಕಾದ ಉಚ್ಚ ನ್ಯಾಯಾಲಯ 1967ರಲ್ಲಿ ತೀರ್ಪು ನೀಡುವವರೆಗೂ ಅಲ್ಲಿನ ಸುಮಾರು 17 ರಾಜ್ಯಗಳಲ್ಲಿ ಅಂತರ್-ವರ್ಣ ವಿವಾಹಗಳು ಅಪರಾಧವಾಗಿದ್ದವು. ಭಾರತದ ಮನುಧರ್ಮ ನಂಬಿರುವಂತೆ ಅಮೆರಿಕಾದ ಸಮಾಜ ಕಾಕೇಸಿಯನ್ ವರ್ಣ ಪವಿತ್ರ ಮತ್ತು ಅದ್ವಿತೀಯ ಎಂದು ಬಲವಾಗಿ ನಂಬಿತ್ತು.

ಆದರೆ ಇಂದು ಸುಮಾರು ಅರ್ಧ ಮಿಲಿಯನ್ ಮಿಶ್ರ ವರ್ಣದ ಜೋಡಿಗಳನ್ನು ನಾವು ಅಮೆರಿಕಾದಲ್ಲಿ ಕಾಣಬಹುದು. ಇವರಲ್ಲಿ ಸುಮಾರು ಶೇ. 80ರಷ್ಟು ಮಂದಿ ಕಪ್ಪು ವರ್ಣದ ಪುರುಷರಿದ್ದಾರೆ. 2005ರಲ್ಲಿ ಅಮೆರಿಕಾದಲ್ಲಿ ನಡೆದ ಶೇ. 7ರಷ್ಟು ವಿವಾಹಗಳು ಅಂತರ್-ವರ್ಣ ವಿವಾಹಗಳಾಗಿವೆ.

ಕಾಕೇಸಿಯನ್ ವರ್ಣದವರು ಮೂಲತಃ ಶೋಷಕರು, ಹೀಗಾಗಿ ಆರಂಭದಲ್ಲಿ ಅಮೆರಿಕಾ ಕೂಡ ಕೆಟ್ಟ ಮೌಲ್ಯಗಳುಳ್ಳ ದೇಶವಾಗಿತ್ತು. 1492ರಲ್ಲಿ ಕೊಲಂಬಸ್ ಅಮೆರಿಕಾ ದೇಶವನ್ನು ಅನ್ವೇಷಿಸಿದ. ಇದಾದ ಸುಮಾರು ಒಂದು ಶತಮಾನದ ಬಳಿಕ ಅಂದರೆ 1607ರಲ್ಲಿ ವರ್ಜೀನಿಯಾದ ಜೇಮ್ಸ್ ಟೌನ್ ಎಂಬ ಪ್ರದೇಶದಲ್ಲಿ ಇಂಗ್ಲಿಷರು ಮೊಟ್ಟ ಮೊದಲಿಗೆ ಬಂದು ನೆಲೆಸಿದರು. ಆಗ ಈಸ್ಟ್ ಇಂಡಿಯಾ ಕಂಪನಿ ಅಸ್ತಿತ್ವಕ್ಕೆ ಬಂದು ಕೇವಲ ಏಳು ವರ್ಷಗಳಾಗಿತ್ತು. 1619ರಲ್ಲಿ ಕಪ್ಪು ಜನರನ್ನು ಹೊತ್ತ ಮೊಟ್ಟ ಮೊದಲ ಹಡಗು ಜೇಮ್ಸ್ ಟೌನ್‌ಗೆ ಬಂದಿಳಿಯಿತು. ಅಂದರೆ ಕಪ್ಪು ಜನರ ಅಮಾನವೀಯ ಶೋಷಣೆಯ ಕಥೆ ಆರಂಭವಾಗಿದ್ದು ನಾಲ್ಕು ಶತಮಾನಗಳ ಹಿಂದೆಯಷ್ಟೆ. ಕಾಕೇಸಿಯನ್ನರು ಕಪ್ಪು ವರ್ಣದವರನ್ನು ಮನುಷ್ಯರಂತೆ ಕಾಣುತ್ತಿರಲಿಲ್ಲ.

1664ರಲ್ಲಿ ಅಮೆರಿಕಾದ ಮೇರಿಲ್ಯಾಂಡ್ ರಾಜ್ಯ ಕರಿಯರು ಮತ್ತು ಬಿಳಿಯರ ವಿವಾಹವನ್ನು ನಿಷೇಧಿಸುವ ಕಾಯ್ದೆ ಜಾರಿಗೆ ತಂದಿತು. ಇದರರ್ಥ ಏನು? ಕರಿಯರು ಅಮೆರಿಕಾ ದೇಶಕ್ಕೆ ಬಂದು ಅರ್ಧ ಶತಮಾನ ಕೂಡ ಕಳೆದಿರಲಿಲ್ಲ. ಅದಾಗಲೆ ಅಂತರ್ ವರ್ಣ ವಿವಾಹಗಳು ನಡೆಯಲಾರಂಭಿಸಿದ್ದವು. ಹೀಗಾಗಿ ಇದನ್ನು ನಿಷೇಧಿಸಲು ಕಾಯ್ದೆ ಜಾರಿಗೊಳಿಸಬೇಕಾಯಿತು. 1862ರಲ್ಲಿ ಅಮೆರಿಕಾದಲ್ಲಿ ಜೀತಪದ್ಧತಿಯನ್ನು ನಿರ್ಮೂಲನೆ ಮಾಡಲಾಯಿತು. ಅಂದರೆ ಜೀತಪದ್ಧತಿ ಜಾರಿಯಲ್ಲಿದ್ದಾಗ ಕೂಡ ಕಪ್ಪು ಜನಾಂಗದವರು ಬಿಳಿಯರನ್ನು ವಿವಾಹವಾಗುತ್ತಿದ್ದರು. ಇದರರ್ಥ ಏನು? ಕರಿಯರು ಸ್ವತಂತ್ರರಾಗಿರಲು ಅನರ್ಹರು, ಆದರೆ ಲೈಂಗಿಕ ಚಟುವಟಿಕೆಗಳಿಗೆ ಮಾತ್ರ ಬೇಕು ಎಂದೇ?

ಅಮೆರಿಕಾದಲ್ಲಿ ವರ್ಣ ಸಂಬಂಧದ ಬಗ್ಗೆ, ವಿಶೇಷವಾಗಿ ಕರಿಯರು ಮತ್ತು ಬಿಳಿಯರ ಲೈಂಗಿಕ ಮತ್ತು ವೈವಾಹಿಕ ಸಂಬಂಧದ ಬಗ್ಗೆ ಬಹಳಷ್ಟು ಸಂಶೋಧನಾ ವಿವರಗಳು ಲಭ್ಯವಿವೆ.

> **"ಅಂತರ್ಜಾಲದ ಮೂಲಕ ಈಗ ನಮಗೆ ಬೇಕಾದವರನ್ನು ಹುಡುಕುವುದು ಸುಲಭ. ಮಹಿಳೆಯರು ಕಪ್ಪು ಬಣ್ಣದ, ಎತ್ತರದ, ಸುಂದರ ಪುರುಷರನ್ನು ಬಯಸಿ ಅಂತರ್ಜಾಲದಲ್ಲಿ ಹುಡುಕಾಟ ನಡೆಸುತ್ತಾರೆ" ಎನ್ನುತ್ತಾರೆ ಸೂಸನ್. "ಕರಿಯ ಮಹಿಳೆಯರು ಬಿಳಿಯ ಪುರುಷರನ್ನು ವಿವಾಹವಾಗುವ ಸಾಧ್ಯತೆಗಿಂತ ಬಿಳಿಯ ಮಹಿಳೆಯರು ಕರಿಯ ಪುರುಷರನ್ನು ವರಿಸುವ ಸಾಧ್ಯತೆಯೇ ಹೆಚ್ಚು. ಮಹಿಳೆಯರನ್ನು ಹೇಗೆ ಆಕರ್ಷಿಸಬೇಕೆಂದು ಕರಿಯ ಪುರುಷರಿಗೆ ಗೊತ್ತು. ತಮ್ಮ ಪೌರುಷತ್ವದಮೇಲೆ ಬಿಳಿಯ ಪುರುಷರಿಗಿಲ್ಲದ ವಿಶ್ವಾಸ ಕರಿಯರಿಗಿದೆ. ಅವರಿಗೆ ತಾವು ಪುರುಷರು ಎಂಬ ಅಂಶ ನಿಜವಾಗಿಯೂ ಮನದಟ್ಟಾಗಿದೆ. ಆದರೆ ಬಿಳಿಯರು ತಾವು ಪುರುಷರೋ ಅಲ್ಲವೋ ಎಂಬ ಸತ್ಯ ತಿಳಿದುಕೊಳ್ಳಲು ಹೊಸ ಸಾಮಾಜಿಕ ಸಂಶೋಧನೆಯ ಫಲಿತಾಂಶಗಳಿಗಾಗಿ ಕಾದು ಕುಳಿತಿದ್ದಾರೆ" ಎನ್ನುತ್ತಾರೆ ಸೂಸನ್.**

"ಕರಿಯರ ಲೈಂಗಿಕತೆ ಬಿಳಿಯರಿಗಿಂತ ಅದ್ಭುತವಾಗಿದೆ" ಎಂದು ಬಿಳಿಯರು ನಂಬಿದ್ದಾರೆ ಎಂದು ಪ್ರೊ. ಡೊನಾಲ್ಡ್ ಜಿ ಮ್ಯಾಥ್ಯೂಸ್ ತಮ್ಮ 'ರಿಲಿಜನ್ ಇನ್ ಓಲ್ಡ್ ಸೌತ್' ಎಂಬ ಕೃತಿಯಲ್ಲಿ ಬರೆಯುತ್ತಾರೆ. ಕೃತಿಯಲ್ಲಿ ಡೊನಾಲ್ಡ್, ಲೈಂಗಿಕ ವಿಚಾರದಲ್ಲಿ ಕರಿಯರ ಪ್ರಾಬಲ್ಯದ ಬಗ್ಗೆ ಬಿಳಿಯರಿಗಿದ್ದ ಆತಂಕಗಳನ್ನು ದಾಖಲಿಸುತ್ತಾರೆ. ಖ್ಯಾತ ಸಮಾಜಶಾಸ್ತ್ರಜ್ಞ ಪ್ರೊ. ಕ್ಯಾಲ್ವಿನ್ 'ಸೆಕ್ಸ್ ಅಂಡ್ ರೇಸ್ ಇನ್ ಅಮೆರಿಕಾ' ಎಂಬ ಪ್ರಸಿದ್ಧ ಕೃತಿಯಲ್ಲಿ ಕೆಲವು ಆಶ್ಚರ್ಯಕರ ವಿಚಾರಗಳನ್ನು ಪ್ರಸ್ತಾಪಿಸುತ್ತಾರೆ. "ನೀಗ್ರೋಗಳ ಜೊತೆ ಲೈಂಗಿಕ ಸಂಪರ್ಕ ಹೊಂದಲಾಗದ ಬಿಳಿಯ ಮಹಿಳೆಯರು ತಮ್ಮ ಲೈಂಗಿಕ ಕಲ್ಪನೆಗಳಲ್ಲಿ ನೀಗ್ರೋಗಳಿಗೆ ಬಹುತೇಕ ದೇವರ ಸ್ಥಾನ ನೀಡಿದ್ದಾರೆ."

"ದಕ್ಷಿಣದ ಬಹುತೇಕ ಎಲ್ಲ ಮಹಿಳೆಯರು ಒಂದಲ್ಲಾ ಒಂದುಸಲ ಕರಿಯಗಂಡಸಿನ ಜೊತೆ ಲೈಂಗಿಕ ಕ್ರಿಯೆ ನಡೆಸುವ ತೀವ್ರವಾದ ಆಸೆ ಹೊಂದಿದ್ದರು ಎಂದು ನಾನು ನಿಖರವಾಗಿ ಹೇಳುತ್ತೇನೆ" ಎನ್ನುತ್ತಾರೆ ಪ್ರ ಕ್ಯಾಲ್ವಿನ್.

ಬಿಳಿಯ ಮಹಿಳೆಯರು ಕರಿಯ ಪುರುಷರನ್ನು ಯಾಕೆ ಈ ಮಟ್ಟಿಗೆ ಇಷ್ಟಪಡುತ್ತಾರೆ ಎಂದು ತಿಳಿಯಬಯಸುವವರೆಲ್ಲರೂ ಜಾಗತಿಕವಾಗಿ ಗುರುತಿಸ್ಪಡುವ ಲೇಖಕಿ ಸೂಸನ್ ಗ್ರೇನ್ ಬಾಕೋಸ್ ಅವರ 'ಸೆಕ್ಷುಯಲ್ ಸೀಕ್ರೆಟ್ಸ್: ದಿ ಅಲ್ಟಿಮೇಟ್ ಗೈಡ್ ಫಾರ್ ಎರೋಟಿಕ್' ಎಂಬ ಕೃತಿಯನ್ನು ಓದಲೇಬೇಕು.

"ಅಂತರ್ಜಾಲದ ಮೂಲಕ ಈಗ ನಮಗೆ ಬೇಕಾದವರನ್ನು ಹುಡುಕುವುದು ಸುಲಭ. ಮಹಿಳೆಯರು ಕಪ್ಪು ಬಣ್ಣದ, ಎತ್ತರದ, ಸುಂದರ ಪುರುಷರನ್ನು ಬಯಸಿ ಅಂತರ್ಜಾಲದಲ್ಲಿ ಹುಡುಕಾಟ ನಡೆಸುತ್ತಾರೆ" ಎನ್ನುತ್ತಾರೆ ಸೂಸನ್. "ಕರಿಯ ಮಹಿಳೆಯರು ಬಿಳಿಯ ಪುರುಷರನ್ನು ವಿವಾಹವಾಗುವ ಸಾಧ್ಯತೆಗಿಂತ ಬಿಳಿಯ ಮಹಿಳೆಯರು ಕರಿಯ ಪುರುಷರನ್ನು ವರಿಸುವ ಸಾಧ್ಯತೆಯೇ ಹೆಚ್ಚು. ಮಹಿಳೆಯರನ್ನು ಹೇಗೆ ಆಕರ್ಷಿಸಬೇಕೆಂದು ಕರಿಯ ಪುರುಷರಿಗೆ ಗೊತ್ತು. ತಮ್ಮ ಪೌರುಷತ್ವದ ಮೇಲೆ ಬಿಳಿಯ ಪುರುಷರಿಗಿಲ್ಲದ ವಿಶ್ವಾಸ ಕರಿಯರಿಗಿದೆ. ಅವರಿಗೆ ತಾವು ಪುರುಷರು ಎಂಬ ಅಂಶ ನಿಜವಾಗಿಯೂ ಮನದಟ್ಟಾಗಿದೆ. ಆದರೆ ಬಿಳಿಯರು ತಾವು ಪುರುಷರೋ ಅಲ್ಲವೋ ಎಂಬ ಸತ್ಯ ತಿಳಿದುಕೊಳ್ಳಲು ಹೊಸ ಸಾಮಾಜಿಕ ಸಂಶೋಧನೆಯ ಫಲಿತಾಂಶಗಳಿಗಾಗಿ ಕಾದು ಕುಳಿತಿದ್ದಾರೆ" ಎನ್ನುತ್ತಾರೆ ಸೂಸನ್. ಲೈಂಗಿಕ ಆಕರ್ಷಣೆಯ ಗುಟ್ಟನ್ನು ತಿಳಿದುಕೊಳ್ಳಲು ಸೂಸನ್ ವಿವಿಧ ದೇಶಗಳ ವಿವಿಧ ವರ್ಣಗಳ ಪುರುಷರೊಂದಿಗೆ ಲೈಂಗಿಕ ಸಂಪರ್ಕ ಹೊಂದಿದ್ದರು.

ನೋಯಿಡಾದಲ್ಲಿ ಇತ್ತೀಚೆಗೆ ಬಂದ ಸುದ್ದಿ: ದಲಿತ ಯುವಕನನ್ನು ಮದುವೆಯಾದ ಕಾರಣಕ್ಕೆ ದಲಿತೇತರ ಹೆಣ್ಣು ಮಗಳನ್ನು ಆಕೆಯ ಪೋಷಕರು ಜೀವಂತವಾಗಿ ಸುಟ್ಟು, ತುಂಡು ತುಂಡು ಮಾಡಿ ತಮ್ಮ ಹೊಲದೊಳಗೆ ಅದನ್ನು ಹಾಕಿ, ಉಳುಮೆ ಮಾಡಿ ಅವಳ ಕುರುಹೇ ಸಿಗದಂತೆ ಮಾಡಿದರು. ಪ್ರತಿದಿನ ಇಂತಹ ಹಲವಾರು ಸುದ್ದಿ ನಮ್ಮ ಕಿವಿಗೆ ಬೀಳುತ್ತವೆ. ಮೇಲ್ಜಾತಿಯ ಹುಡುಗಿಯನ್ನು ಮದುವೆಯಾಗಿದ್ದರೆ ದಲಿತ ಯುವಕನನ್ನು ಕೊಲ್ಲುವುದು ಸಾಮಾನ್ಯವಾಗಿಬಿಟ್ಟಿದೆ. ಅದೇ ರೀತಿ ದಲಿತ ಯುವಕರನ್ನು ವಿವಾಹವಾದ ಕಾರಣ ಮೇಲ್ಜಾತಿಯ ಯುವತಿಯರನ್ನು ಮರ್ಯಾದಾ ಹತ್ಯೆಯ ಹೆಸರಿನಲ್ಲಿ ಕೊಲ್ಲುವುದನ್ನು ಕೂಡ ನೋಡುತ್ತಿದ್ದೇವೆ. ಇಷ್ಟಾದರೂ ಮೇಲ್ಜಾತಿಯ ಯುವತಿಯರು ತಮ್ಮ ಕುಟುಂಬ ಮತ್ತು ಜೀವವನ್ನು ಪಣಕ್ಕಿಟ್ಟು ದಲಿತ ಯುವಕರನ್ನು ಪ್ರೀತಿಸುವುದು ಯಾಕೆ? ಅಂತಹ ಆಕರ್ಷಕ ಗುಣ ದಲಿತ ಪುರುಷರಲ್ಲೇನಿದೆ?

ಮೇಲ್ಜಾತಿಯ ಯುವತಿಯರು ದಲಿತ ಯುವಕರ ಮೇಲೆ ಆಕರ್ಷಿತರಾಗುವುದು ಏಕೆ ಎಂಬ ಬಗ್ಗೆ ದಲಿತೇತರ ಮನಃಶಾಸ್ತ್ರಜ್ಞರು, ಜೀವಶಾಸ್ತ್ರಜ್ಞರು ಮತ್ತು ಸಮಾಜಶಾಸ್ತ್ರಜ್ಞರು ಸಂಶೋಧನೆ ನಡೆಸುವ ಅಗತ್ಯತೆ ಇದೆ.

* * * * * * *

ದಶಕದ ಹಿಂದೆ 'ದಲಿತ್ ಡೈರಿ' ಆರಂಭವಾದಾಗ "ಕೆಲವು ಮಂದಿ ತಮ್ಮ ನಿರ್ಧಾರದಿಂದಲೇ ಬಡವರಾಗಿರುತ್ತಾರೆಯೇ" ಎಂಬ ಅಂಕಣವನ್ನು ಬರೆದಿದ್ದೆ. ನಗರಗಳಲ್ಲಿ ಹುಟ್ಟಿ ಬೆಳೆದ ನನ್ನ ಅನೇಕ ಸ್ನೇಹಿತರು "ಕೆಲವರು ತಮ್ಮ ಜಾತಿಯ ಕಾರಣದಿಂದ ಬಡವರಾಗಿಯೇ ಉಳಿಯಲು ನಿರ್ಧರಿಸುತ್ತಾರೆ" ಎಂಬ ನನ್ನ ವಾದವನ್ನು

"ಹುಚ್ಚುತನ"ವೆಂದು ಕರೆದರು.

"ಉತ್ತರ ಭಾರತದ ಕೆಲವು ಬ್ರಾಹ್ಮಣರು ಮತ್ತು ಠಾಕೂರ್‌ಗಳು ಬಡವರಾಗಿ ಉಳಿದಿಲ್ಲವೇ?" ಎಂಬ ನನ್ನ ಪ್ರಶ್ನೆಗೆ ಅವರೆಲ್ಲರೂ ಹೌದೆಂದು ಒಪ್ಪಿಕೊಳ್ಳುತ್ತಿದ್ದರು. "ಹಾಗಾದರೆ ಭಾರತದ ಶ್ರೇಣೀಕೃತ ಸಾಮಾಜಿಕ ವ್ಯವಸ್ಥೆಯಲ್ಲಿ ಮೇಲ್ಮಟ್ಟದಲ್ಲಿರುವ ಬ್ರಾಹ್ಮಣರು ಯಾಕೆ ಬಡವರಾಗಿದ್ದಾರೆ? ಠಾಕೂರ್‌ಗಳು ಯಾಕೆ ಬಡವರಾಗಿದ್ದಾರೆ? ಎಂಬ ಪ್ರಶ್ನೆಗೆ ಯಾರೂ ಸಮರ್ಪಕವಾಗಿ ಉತ್ತರಿಸುತ್ತಿರಲಿಲ್ಲ.

ಆಗ ನಾನು ಕೊಟ್ಟ ವಿವರಣೆ: ಬ್ರಿಟಿಷರು ಭಾರತಕ್ಕೆ ಬಂದ ನಂತರ ಹಲವಾರು ರೀತಿಯ ಬದಲಾವಣೆ ಕಾಣಿಸಿಕೊಂಡವು. ಹೊಸ ಉದ್ಯೋಗಾವಕಾಶಗಳು ಹುಟ್ಟಿಕೊಂಡವು. ಕೆಲವು ಜಾತಿ ಆಧಾರಿತ ಉದ್ಯೋಗಗಳು ಜಾತಿರಹಿತವಾದವು. ಆದರೆ ಜಾತಿ ಆಧಾರಿತ ಸಮಾಜದ ಮೂಲ ಸ್ತಂಭಗಳಾದ ಪಾವಿತ್ರ್ಯತೆ ಮತ್ತು ಕಸುಬನ್ನು ಬಿಟ್ಟು ಕೆಳಗಿಳಿಯಲು ಬ್ರಾಹ್ಮಣರು ಮತ್ತು ಠಾಕೂರ್‌ಗಳು ತಯಾರಿರಲಿಲ್ಲ. ಹೀಗಾಗಿ ಹೊಸ ಆರ್ಥಿಕ ವ್ಯವಸ್ಥೆಯಲ್ಲಿ ಸೃಷ್ಟಿಯಾದ ಉದ್ಯೋಗಗಳನ್ನು ಸ್ವೀಕರಿಸುವಲ್ಲಿ ಇವರು ಹಿಂದೇಟು ಹಾಕಿದರು. ನನ್ನ ಗ್ರಾಮದಲ್ಲಿಯೇ ಸ್ವಲ್ಪಮಟ್ಟಿಗೆ ಶಿಕ್ಷಣ ಪಡೆದಿದ್ದ ಠಾಕೂರ್‌ಗಳು ಸರ್ಕಾರಿ ಉದ್ಯೋಗಗಳಿಗೆ ಸೇರಿಕೊಳ್ಳಲಿಲ್ಲ. ಇತರರಿಗೆ ಸೇವೆ ಒದಗಿಸುವುದು ಠಾಕೂರ್ ಜಾತಿಯಲ್ಲಿ ನಿಷಿದ್ಧವಾಗಿತ್ತು. ಹೀಗಾಗಿ ಭಾರತ ಸರ್ಕಾರಕ್ಕೆ ಸೇವೆ ಸಲ್ಲಿಸಲು ಕೂಡ ಅವರು ತಯಾರಿರಲಿಲ್ಲ.

ಗ್ರಾಮೀಣ ಪ್ರದೇಶಗಳಲ್ಲಿ ಶ್ರೀಮಂತರಾಗಿರುವ ದಲಿತರ ಮನೆಗಳಲ್ಲಿ, ಹೊಲ ಗದ್ದೆಗಳಲ್ಲಿ ಕೆಲಸ ಮಾಡುವ ಬ್ರಾಹ್ಮಣ/ ಠಾಕೂರ್/ ಜಾಟ್/ ಕಮ್ಮ/ ರೆಡ್ಡಿ/ ಗೌಡ/ ಲಿಂಗಾಯತ/ ತೇವರ್/ ಪಟೇಲ್/ ಮರಾಠಾ ಜಾತಿಯ ಕೆಲಸಗಾರರಿದ್ದಾರೆಯೇ? ಭಾರತದ ಮಹತ್ವಾಕಾಂಕ್ಷೆಯ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಲಾಭ ಪಡೆಯಲು ನೊಂದಾಯಿಸಿಕೊಂಡರೆ ತಮ್ಮ ಸಾಮಾಜಿಕ ಸ್ಥಾನಮಾನಕ್ಕೆ ಧಕ್ಕೆ ಬರುತ್ತದೆ ಎಂದು ಬಹಳಷ್ಟು ಮಂದಿ ಮೇಲ್ಜಾತಿಯ ಬಡವರು ನೋಂದಣಿ ಮಾಡಿಕೊಳ್ಳುತ್ತಿಲ್ಲ ಎಂಬ ವರದಿಗಳು ಬರುತ್ತಿವೆ. ಹಸಿವಿನಿಂದ ಮುಕ್ತಿ ಪಡೆಯಲು ಬಹಳಷ್ಟು ಮಂದಿ ದಲಿತರು ರಸ್ತೆ ಬದಿಯಲ್ಲಿ ಮೊಟ್ಟೆಗಳನ್ನು ಮಾರಲು ಸಿದ್ಧರಿರುತ್ತಾರೆ. ಆದರೆ ಆರ್ಥಿಕ ದುಸ್ಥಿತಿಯಿಂದಾಗಿ ಮೇಲ್ಜಾತಿಯವರು ಗ್ರಾಮೀಣ ಪ್ರದೇಶದಲ್ಲಿ ಇಂತಹ ಕೆಲಸ ಮಾಡಲು ಸಾಧ್ಯವಿದೆಯೇ? ಅದಕ್ಕೇ ನಾನು ಹೇಳಿದ್ದು ಇವರು ತಮ್ಮ ನಿರ್ಧಾರದಿಂದಲೇ ಬಡವರಾಗಿದ್ದು ಎಂದು.

ಇನ್ನೂ ಒಬಿಸಿ ಅಥವಾ ಶೂದ್ರರ ಕಥೆ ಇನ್ನೂ ವಿಪರೀತಕ್ಕೆ ಹೋಗಿದೆ. ಐತಿಹಾಸಿಕವಾಗಿ ಸಾಮಾಜಿಕ ಶ್ರೇಣೀಕರಣದ ಬಲಿಪಶುಗಳಾದ ಶೂದ್ರರು ಶೈಕ್ಷಣಿಕ ರಂಗ, ಸರ್ಕಾರಿ ಉದ್ಯೋಗ, ಮತ್ತು ಜ್ಞಾನಾಧಾರಿತ ಕ್ಷೇತ್ರಗಳಲ್ಲಿನ ಆಧುನಿಕ ವೃತ್ತಿಗಳಲ್ಲಿ ತೊಡಗಿಸಿಕೊಂಡಿರುವುದು ಕಡಿಮೆ. ಸಾಮಾಜಿಕ ಶಾಂತಿ ಮತ್ತು ಸಮಾನತೆಯ ಹರಿಕಾರರಾದ ಡಾ. ಅಂಬೇಡ್ಕರ್ ಒಬಿಸಿಗಳಿಗೂ ಮೀಸಲಾತಿಯ ಸವಲತ್ತು ನೀಡಬೇಕೆಂದು ಸಲಹೆ ನೀಡಿದ್ದರು. ದಶಕಗಳ ಬಳಿಕ ಮಂಡಲ್ ಆಯೋಗದ ಶಿಫಾರಸ್ಸಿನ ಮೇರೆಗೆ ಈಗ ಒಬಿಸಿಗಳು ದಲಿತ/ ಆದಿವಾಸಿಗಳಂತೆಯೇ ಶಿಕ್ಷಣ ಮತ್ತು ಉದ್ಯೋಗ ಕ್ಷೇತ್ರದಲ್ಲಿ ಮೀಸಲಾತಿ ಸವಲತ್ತು ಪಡೆಯುತ್ತಿದ್ದಾರೆ. ಆದರೆ ಇತ್ತೀಚಿನ ದಿನಗಳಲ್ಲಿ ಒಬಿಸಿಗಳು ಸಕಾರಾತ್ಮಕ ಮೀಸಲಾತಿ ನೀತಿಯ ಪರಿಕಲ್ಪನೆಯನ್ನೇ ಹಾಳುಗೆಡವುತ್ತಿದ್ದಾರೆ.

ಈ ವರ್ಷ ಐಐಟಿಗಳಲ್ಲಿ 2,492 ಸೀಟುಗಳನ್ನು ಒಬಿಸಿ ವರ್ಗಕ್ಕೆ ಮೀಸಲಿರಿಸಲಾಗಿತ್ತು. ಕನಿಷ್ಠ ಅರ್ಹತೆಯನ್ನು ಶೇ. 10ರಷ್ಟು ಇಳಿಸಿದ ನಂತರ ಕೂಡ 2,023 ಸೀಟುಗಳು ಮಾತ್ರ ಭರ್ತಿಯಾದವು. ಅದೇ ರೀತಿ ದೆಹಲಿ ವಿಶ್ವವಿದ್ಯಾನಿಲಯದ ಬಹುತೇಕ ಎಲ್ಲ ಕಾಲೇಜುಗಳ ಎಲ್ಲ ವಿಷಯಗಳಲ್ಲಿ ಒಬಿಸಿಗಳ ಸೀಟುಗಳು ಅರ್ಹ ಅಭ್ಯರ್ಥಿಗಳಿಲ್ಲದೆ ಭರ್ತಿಯಾಗದೆ ಉಳಿದವು. ಈ ಸೀಟುಗಳೆಲ್ಲ ಈಗ ಮೆರಿಟ್ ವಿಭಾಗಕ್ಕೆ ಹೋಗುತ್ತವೆ. ಒಬಿಸಿಗಳು ಸಾಮಾಜಿಕ ನ್ಯಾಯವನ್ನು ಹಾಸ್ಯಾಸ್ಪದಗೊಳಿಸುತ್ತಿದ್ದಾರೆ. ಮಂಡಲ್ ಆಯೋಗದ ಅಂದಾಜಿನ ಪ್ರಕಾರ ಭಾರತದ ಒಟ್ಟು ಜನಸಂಖ್ಯೆಯಲ್ಲಿ ಶೇ. 52ರಷ್ಟು ಮಂದಿ ಒಬಿಸಿಗಳಿದ್ದಾರೆ. (ಇದರಲ್ಲಿ ಶೇ. 6ರಷ್ಟು ಮಂದಿ ಮುಸ್ಲಿಂ ಒಬಿಸಿಗಳು ಸೇರಿದ್ದಾರೆ.) ಮೀಸಲಾತಿಯ ಪ್ರಮಾಣ ಶೇ. 50ಕ್ಕಿಂತ ಹೆಚ್ಚು ಇರಬಾರದು ಎಂಬ ಸುಪ್ರೀಂಕೋರ್ಟ್ ತೀರ್ಪನ್ನು ಪಾಲಿಸುವ ಉದ್ದೇಶದಿಂದ ಮಂಡಲ್ ಆಯೋಗ ಒಬಿಸಿಗಳಿಗೆ ಶೇ. 27ರಷ್ಟು ಮೀಸಲಾತಿ ನೀಡಲು ಶಿಫಾರಸ್ಸು ಮಾಡಿತು.

ತಾಂತ್ರಿಕವಾಗಿ ನೋಡುವುದಾದರೆ ಶೈಕ್ಷಣಿಕ ಸಂಸ್ಥೆಗಳು ಮತ್ತು ಸರ್ಕಾರಿ ಉದ್ಯೋಗಗಳಲ್ಲಿ ಒಬಿಸಿಗಳಿಗೆ ಶೇ. 52ರಷ್ಟು ಮೀಸಲಾತಿ ನೀಡಬೇಕಿತ್ತು. ಒಂದು ವೇಳೆ ಶೇ. 52ರಷ್ಟು ಮೀಸಲಾತಿ ನೀಡಿದ್ದರೆ ಐಐಟಿಗಳಲ್ಲಿ 4984 ಸೀಟುಗಳು ಒಬಿಸಿಗಳಿಗೆ ಮೀಸಲಿರಬೇಕಿತ್ತು. ಹಾಗಾಗಿದ್ದರೆ ಈ ವರ್ಷ 2961 ಸೀಟುಗಳು ಭರ್ತಿಯಾಗದೆ ಉಳಿಯುತ್ತಿತ್ತು.

"ಉತ್ತರ ಭಾರತದ ಕೆಲವು ಬ್ರಾಹ್ಮಣರು ಮತ್ತು ಠಾಕೂರ್‌ಗಳು ಬಡವರಾಗಿ ಉಳಿದಿಲ್ಲವೇ?" ಎಂಬ ನನ್ನ ಪ್ರಶ್ನೆಗೆ ಅವರೆಲ್ಲರೂ ಹೌದೆಂದು ಒಪ್ಪಿಕೊಳ್ಳುತ್ತಿದ್ದರು. "ಹಾಗಾದರೆ ಭಾರತದ ಶ್ರೇಣೀಕೃತ ಸಾಮಾಜಿಕ ವ್ಯವಸ್ಥೆಯಲ್ಲಿ ಮೇಲ್ಮಟ್ಟದಲ್ಲಿರುವ ಬ್ರಾಹ್ಮಣರು ಯಾಕೆ ಬಡವರಾಗಿದ್ದಾರೆ? ಠಾಕೂರ್‌ಗಳು ಯಾಕೆ ಬಡವರಾಗಿದ್ದಾರೆ? ಎಂಬ ಪ್ರಶ್ನೆಗೆ ಯಾರೂ ಸಮರ್ಪಕವಾಗಿ ಉತ್ತರಿಸುತ್ತಿರಲಿಲ್ಲ. ಆಗ ನಾನು ಕೊಟ್ಟ ವಿವರಣೆ: ಬ್ರಿಟಿಷರು ಭಾರತಕ್ಕೆ ಬಂದ ನಂತರ ಹಲವಾರು ರೀತಿಯ ಬದಲಾವಣೆ ಕಾಣಿಸಿಕೊಂಡವು. ಹೊಸ ಉದ್ಯೋಗಾವಕಾಶಗಳು ಹುಟ್ಟಿ ಕೊಂಡವು. ಕೆಲವು ಜಾತಿ ಆಧಾರಿತ ಉದ್ಯೋಗಗಳು ಜಾತಿರಹಿತವಾದವು.

ದಲಿತ/ಆದಿವಾಸಿಗಳು ಮತ್ತು ಒಬಿಸಿಗಳನ್ನು ಹೋಲಿಕೆ ಮಾಡಿ ನೋಡಿ. ದಲಿತ/ಆದಿವಾಸಿಗಳ ಜನಸಂಖ್ಯೆ ಒಟ್ಟಾರೆ ಭಾರತದ ಜನಸಂಖ್ಯೆಯ ನಾಲ್ಕನೇ ಒಂದು ಭಾಗದಷ್ಟಿದೆ. ಆದರೆ ಇವರಿಗೆ ಸಿಗುತ್ತಿರುವ ಮೀಸಲಾತಿಯ ಪ್ರಮಾಣ ಶೇ. 22.5ರಷ್ಟು ಮಾತ್ರ. 1950ರಲ್ಲಿ ದಲಿತ/ಆದಿವಾಸಿಗಳ ಪ್ರಮಾಣ ಇಷ್ಟೇ ಇದ್ದದ್ದು. ಈ ಮೀಸಲಾತಿಯ ಪ್ರಮಾಣ ಅಸ್ತಿತ್ವಕ್ಕೆ ಬಂದು ಆರು ದಶಕಗಳು ಕಳೆದಿವೆ, ಜನಸಂಖ್ಯೆ ಕೂಡ ಹೆಚ್ಚಾಗಿದೆ. ಆದರೆ ಭಾರತ ಸರ್ಕಾರ ಮೀಸಲಾತಿಯ ಪ್ರಮಾಣವನ್ನು ಹೆಚ್ಚಿಸಿಲ್ಲ. ಇಷ್ಟಾದರೂ ಐಐಟಿಗಳಲ್ಲಿ ಮತ್ತಿತರ ಶೈಕ್ಷಣಿಕ ಸಂಸ್ಥೆಗಳಲ್ಲಿ ದಲಿತ/ಆದಿವಾಸಿಗಳಿಗೆ ಮೀಸಲಿರಿಸಿದ ಸೀಟುಗಳು ಭರ್ತಿಯಾಗುತ್ತವೆ.

ಸಾಮಾಜಿಕ ಶ್ರೇಣಿಯಲ್ಲಿ ಕೆಳಮಟ್ಟದಲ್ಲಿದ್ದು, ಐತಿಹಾಸಿಕವಾಗಿ ಶೋಷಿತರಾಗಿದ್ದರೂ ಶೂದ್ರರು (ಒಬಿಸಿಗಳು) ಗ್ರಾಮೀಣ ಭಾಗದಲ್ಲಿ ಆರ್ಥಿಕವಾಗಿ ಸದೃಢರು. ಇಲ್ಲಿ ಇವರದೇ ಪ್ರಾಬಲ್ಯ. ಆದರೂ ಕೂಡ ಭಾರತ ಸರ್ಕಾರ ನೀಡುವ ಸವಲತ್ತುಗಳನ್ನು ಒಬಿಸಿಗಳು ಪಡೆದುಕೊಳ್ಳುತ್ತಿಲ್ಲ.

ಶಿಕ್ಷಣ ರಂಗದಲ್ಲಿ ತಮಗೆ ನೀಡಲಾಗಿರುವ ಮೀಸಲಾತಿಯನ್ನು ಒಬಿಸಿಗಳು ಯಾಕೆ ಬಳಸಿಕೊಳ್ಳುತ್ತಿಲ್ಲ? ಒಬಿಸಿಗಳು ದಲಿತರಿಗಿಂತ ಹೆಚ್ಚು ಬಡವರೇ, ಶೋಷಿತರೇ? ಈ ಪ್ರಶ್ನೆಗಳಿಗೆ ಒಬಿಸಿ ವರ್ಗದ ಬುದ್ಧಿಜೀವಿಗಳು ಉತ್ತರ ನೀಡಬೇಕು.

* * * * * * * * *

ಎರಡು ವಾರಗಳ ಹಿಂದೆ ಉತ್ತರ ಪ್ರದೇಶದ ಎರಡು ಪ್ರಾಥಮಿಕ ಶಾಲೆಗಳು ಸುದ್ದಿಯಲ್ಲಿದ್ದವು. ಇಟಾವ ಮತ್ತು ಶಹಜಹಾನ್‌ಪುರ ಜಿಲ್ಲೆಗಳಿಗೆ ಸೇರಿದ ಈ ಎರಡು ಶಾಲೆಗಳಲ್ಲಿ ದಲಿತೇತರ ಮಕ್ಕಳು ದಲಿತರು ಮಾಡಿದ ಅಡುಗೆಯನ್ನು ತಿನ್ನಲು ನಿರಾಕರಿಸಿದರು. ಇಂತಹ ವರದಿಗಳು ಭಾರತದ ಮೂಲೆ ಮೂಲೆಗಳಿಂದ ಬರುತ್ತವೆ. ಇಟಾವ ಮತ್ತು ಶಹಜಹಾನ್‌ಪುರದಲ್ಲಿ ನಡೆದ ಘಟನೆಗಳು ರಾಜ್ಯಾದ್ಯಂತ – ಕೆಲವು ರಾಷ್ಟ್ರಮಟ್ಟದ ಮಾಧ್ಯಮಗಳಲ್ಲಿ ಕೂಡ ಚರ್ಚೆಯಾಯಿತು.

ಇದರಿಂದ ಎಚ್ಚೆತ್ತುಕೊಂಡ ಉತ್ತರ ಪ್ರದೇಶ ಸರ್ಕಾರ ರಾಜ್ಯದ ಎಲ್ಲ ಪ್ರಾಥಮಿಕ ಶಾಲೆಗಳಲ್ಲಿ ದಲಿತ ಅಡುಗೆಯವರು ಕಡ್ಡಾಯವಾಗಿ ಇರಬೇಕೆಂಬ ಆದೇಶವನ್ನು ಹಿಂತೆಗೆದುಕೊಂಡಿತು. ಬಹುತೇಕ ಶಾಲೆಗಳಲ್ಲಿ ದಲಿತ ಅಡುಗೆಯವರು ನೇಮಕಗೊಂಡಿದ್ದು, ಅಡುಗೆ ಕೂಡ ಮಾಡುತ್ತಿದ್ದಾರೆ. ಆದರೂ ಕೆಲವು ಶಾಲೆಗಳಲ್ಲಿ ನಡೆಯುವ ಇಂತಹ ಘಟನೆಗಳು ಶತಮಾನಗಳಿಂದ ಚಾಲ್ತಿಯ

ಸ್ವಯಂ ಬಡವರಾಗಿ ಉಳಿದವರು

ಜಾತಿ ಕ್ರಾಂತಿ

ಲ್ಲಿರುವ ಅಸ್ಪೃಶ್ಯತೆಯ ನೆನಪನ್ನು ಮರುಕಳಿಸುತ್ತದೆ.

ಆದರೆ ನಾವು ಈ ಎರಡು ಘಟನೆಗಳನ್ನು ಜಾತಿ ಆಧಾರಿತ ಸಾಮಾಜಿಕ ವ್ಯವಸ್ಥೆಯ ಹಿನ್ನೆಲೆಯಲ್ಲಿ ನೋಡಿದರೆ ಹೊಸದೊಂದು ಅದ್ಭುತವಾದ ಹೊಳಹು ನಮಗೆ ಸಿಗುತ್ತದೆ. ರಾಜ್ಯದಲ್ಲಿರುವ ಸುಮಾರು 1,81,487 ಪ್ರಾಥಮಿಕ ಶಾಲೆಗಳಲ್ಲಿ ಮಧ್ಯಾಹ್ನದ ಊಟ ಬಡಿಸಲಾಗುತ್ತಿದ್ದು, ಎಲ್ಲ ಶಾಲೆಗಳಲ್ಲಿಯೂ ದಲಿತ ಮಹಿಳೆಯರು ಅಡುಗೆ ಕೆಲಸ ಮಾಡುತ್ತಿದ್ದಾರೆ.

ಅಂದರೆ ರಾಜ್ಯದಲ್ಲಿರುವ ಸುಮಾರು 1.81 ಲಕ್ಷ ಶಾಲೆಗಳಲ್ಲಿ, ಉದಾಹರಣೆಗೆ 1,000 ಶಾಲೆಗಳಲ್ಲಿ ದಲಿತೇತರ ಮಕ್ಕಳು – ಅವರ ಪೋಷಕರು ದಲಿತರು ಮಾಡಿದ ಅಡುಗೆ ತಿನ್ನಲು ನಿರಾಕರಿಸುತ್ತಿದ್ದಾರೆ ಎಂದಿಟ್ಟುಕೊಳ್ಳಿ. ನಿಜವಾಗಿಯೂ ದಲಿತೇತರು ಆಹಾರ ನಿರಾಕರಿಸಿದ್ದು ಸುದ್ದಿಯಾಗಬಾರದಿತ್ತು. ಬದಲಿಗೆ ಸದ್ದಿಲ್ಲದೆ ನಡೆಯುತ್ತಿರುವ ಒಂದು ಬೃಹತ್ ಸಾಮಾಜಿಕ ಕ್ರಾಂತಿ ಸುದ್ದಿಯಾಗಬೇಕಿತ್ತು. "ಕೆಲವೊಂದು ಘಟನೆಗಳನ್ನು ಬಿಟ್ಟರೆ ಉತ್ತರ ಪ್ರದೇಶದ ಎಲ್ಲ ಶಾಲೆಗಳಲ್ಲಿಯೂ ದಲಿತೇತರ ಮಕ್ಕಳು ದಲಿತರು ಮಾಡಿದ ಅಡುಗೆಯನ್ನು ಸ್ವೀಕರಿಸಿದ್ದಾರೆ." ಇದು ನಿಜವಾದ ಸುದ್ದಿ.

ಪತ್ರಕರ್ತರು ತಾವು ವರದಿ ಮಾಡುತ್ತಿರುವ ವಿಷಯದ ಬಗ್ಗೆ ಸೂಕ್ತ ಜ್ಞಾನ ಹೊಂದಿರಬೇಕು. ಪರಿಣತಿಯ ಈ ಯುಗದಲ್ಲಿ ವಿಜ್ಞಾನ, ಪರಿಸರ, ಆರ್ಥಿಕ ವಿಚಾರ, ರಾಜಕೀಯ ಹೀಗೆ ವಿವಿಧ ವಿಷಯಗಳಲ್ಲಿ ಪರಿಣತಿ ಸಾಧಿಸಿರುವ ಪತ್ರಕರ್ತರಿದ್ದಾರೆ. ಪತ್ರಕರ್ತರಿಗೆ ತಮ್ಮದೇ ಬೀಟ್‌ಗಳಿರುತ್ತವೆ ಕೆಲವರಿಗೆ ಕಾಂಗ್ರೆಸ್, ಕೆಲವರಿಗೆ ಬಿಜೆಪಿ, ಎಡಪಕ್ಷಗಳು, ಓಬಿಸಿ ಪಕ್ಷಗಳು, ಪ್ರಾಂತೀಯ ಪಕ್ಷಗಳು ಹೀಗೆ. ಆದರೆ ಯಾವುದೇ ಸುದ್ದಿ ಸಂಸ್ಥೆಗಳಲ್ಲಿ ದಲಿತ ಪಕ್ಷಗಳು – ದಲಿತರ ಬೀಟ್ ಇಲ್ಲ. ಪತ್ರಕರ್ತರು ಜಾತಿ – ಅಸ್ಪೃಶ್ಯತೆಯಲ್ಲಿ ಪರಿಣತಿ ಹೊಂದಲು ಸಿದ್ಧರಿದ್ದಾರೆಯೇ?

ಈ ಘಟನೆಯನ್ನು ವರದಿ ಮಾಡಿದ ಯುವ ಪತ್ರಕರ್ತರನ್ನು ನಾವು ದೂಷಿಸುವಂತಿಲ್ಲ. ಜಾತಿ ಆಧಾರಿತ ವಿಚಾರಗಳನ್ನು ವರದಿ ಮಾಡುವ ನಿಟ್ಟಿನಲ್ಲಿ ಅವರಿಗೆ ಯಾವುದೇ ತರಬೇತಿ ನೀಡಿರುವುದಿಲ್ಲ. ಬಹುತೇಕ ಯಾವುದೇ ಮಾಧ್ಯಮ ಸಂಸ್ಥೆಗಳಲ್ಲಿ ಜಾತಿ, ಜಾತಿ ಆಧಾರಿತ ತಾರತಮ್ಯ, ಮತ್ತು ಇದರ ಐತಿಹಾಸಿಕ ಆಯಾಮದ ಬಗ್ಗೆ ಪಾಠ ಮಾಡಲಾಗುವುದಿಲ್ಲ. ಪ್ರತಿಭೆಯ ಮೇಲೆ ಅಪಾರ ನಂಬಿಕೆ ಇರಿಸಿಕೊಂಡಿರುವ ಬಹುತೇಕ ಸಂಪಾದಕರು ಕೂಡ ಜಾತಿ ಆಧಾರಿತ ವಿಚಾರಗಳನ್ನು ಸಮರ್ಪಕವಾಗಿ ನಿಭಾಯಿಸಲು ಸೋಲುತ್ತಾರೆ.

ಈ ಎರಡು ಶಾಲೆಗಳಲ್ಲಿನ ದಲಿತೇತರ ಮಕ್ಕಳ ಜಾತಿವಾದಿ ಧೋರಣೆಯನ್ನು ಒಟ್ಟಾರೆ ರಾಜ್ಯದ ಎಲ್ಲ ಶಾಲೆಗಳ ಪ್ರಾತಿನಿಧಿಕ ಸ್ವರೂಪ ಎಂದು ನಾವು ಪರಿಗಣಿಸುವುದಾದರೆ ರಾಜ್ಯದಲ್ಲಿ ಈ ವೇಳೆಗಾಗಲೇ ಸಂಪೂರ್ಣ ಅಶಾಂತಿ ನೆಲೆಸಿ ಗಲಭೆಗಳಾಗಬೇಕಿತ್ತು. ಆದರೆ ಹಾಗಾಗಲಿಲ್ಲ.

ಹಳ್ಳಿಯಲ್ಲಿಯೇ ಹುಟ್ಟಿದ ನನಗೂ ಅಸ್ಪೃಶ್ಯತೆಯ ಹಲವಾರು ಅನುಭವಗಳಾಗಿವೆ. ನನ್ನ ಕುಟುಂಬ, ಗ್ರಾಮದಲ್ಲಿ ಆರ್ಥಿಕವಾಗಿ ಸದೃಢವಾಗಿದ್ದರೂ ದಲಿತೇತರರು ಆಯೋಜಿಸುತ್ತಿದ್ದ ಸಾರ್ವಜನಿಕ ಸಮಾರಂಭಗಳಲ್ಲಿ

1990ರ ನಂತರ ದೇಶಾದ್ಯಂತ ಮುಕ್ತವಾಗಿ ರೂಪಾಯಿ ಚಲಾವಣೆಯಾದುದರಿಂದ ದಲಿತರ ಕೈಗೂ ಹಣ ಬಂತು. ಒಂದು ಉತ್ತಮವಾದ ಭೋಜನ ಮಾಡಲು ಉ.ಪ್ರದೇಶದ ದಲಿತರು ಈಗ ದಲಿತೇತರರ ಮದುವೆ – ತಿಥಿಗೆ ಕಾಯಬೇಕಾಗಿಲ್ಲ. ಈಗ ದಲಿತರು ಉತ್ತಮವಾದ ಆಹಾರ ಸೇವಿಸಲಾರಂಭಿಸಿದ್ದಾರೆ. ದಲಿತೇತರರ ಸಾರ್ವಜನಿಕ ಭೋಜನಗಳಿಗೆ ಹೋಗಲು ನಿರಾಕರಿಸುತ್ತಾರೆ. ದಲಿತೇತರರಿಗೆ ಇದರಿಂದ ಇರಿಸು ಮುರಿಸಾಗಿರುವುದು ನಿಜ.

ಪ್ರತ್ಯೇಕವಾಗಿ ಕುಳಿತು ಊಟ ಮಾಡಿದ ಅನುಭವ ನನಗೂ ಇದೆ. ಉತ್ತರ ಪ್ರದೇಶದಲ್ಲಿ ಮಕ್ಕಳ ಮದುವೆ, ಹಿರಿಯರ ತಿಥಿ ಮತ್ತಿತರ ಕಾರ್ಯಗಳಲ್ಲಿ ಸಾರ್ವಜನಿಕ ಭೋಜನ ಏರ್ಪಡಿಸುವುದು ಈಗಲೂ ಚಾಲ್ತಿಯಲ್ಲಿದೆ.

1990ರ ನಂತರ ದೇಶಾದ್ಯಂತ ಮುಕ್ತವಾಗಿ ರೂಪಾಯಿ ಚಲಾವಣೆಯಾದುದರಿಂದ ದಲಿತರ ಕೈಗೂ ಹಣ ಬಂತು. ಒಂದು ಉತ್ತಮವಾದ ಭೋಜನಮಾಡಲು ಉತ್ತರ ಪ್ರದೇಶದ ದಲಿತರು ಈಗ ದಲಿತೇತರರ ಮದುವೆ ಅಥವಾ ತಿಥಿಗೆ ಕಾಯಬೇಕಾಗಿಲ್ಲ. ಈಗ ದಲಿತರು ಉತ್ತಮವಾದ ಆಹಾರ ಸೇವಿಸಲಾರಂಭಿಸಿದ್ದಾರೆ. ದಲಿತೇತರರ ಸಾರ್ವಜನಿಕ ಭೋಜನಗಳಿಗೆ ಹೋಗಲು ನಿರಾಕರಿಸುತ್ತಾರೆ. ದಲಿತೇತರರಿಗೆ ಇದರಿಂದ ಇರಿಸು ಮುರಿಸಾಗಿರುವುದು ನಿಜ.

ಉತ್ತರ ಪ್ರದೇಶದ ಸಮಾಜದಲ್ಲಿ ಈಗ ನಡೆಯುತ್ತಿರುವ ವಿದ್ಯಮಾನ ಆಸಕ್ತಿದಾಯಕವಾದುದು. ಮಾಯಾವತಿ ಅವರು ರಾಜ್ಯದಲ್ಲಿ ಗೆಲುವು ಸಾಧಿಸಿದ ಬಳಿಕ ರಾಜ್ಯದ ರಾಜಕಾರಣ ಬದಲಾದರೂ ಸಾಮಾಜಿಕ ವ್ಯಾಕರಣ ಹಾಗೆಯೇ ಉಳಿದಿದೆ. ರಾಜಕೀಯ ಬದಲಾವಣೆ ತ್ವರಿತವಾಗಿ ಘಟಿಸಬಹುದು. ಆದರೆ ಸಾಮಾಜಿಕ ಬದಲಾವಣೆ ಯಾವಾಗಲೂ ಮಂದಗತಿಯಲ್ಲಿ ನಡೆಯುತ್ತದೆ. ಆದರೆ ಡಾ. ಅಂಬೇಡ್ಕರ್ ಅವರು ಹೇಳುವಂತೆ ಸಾಮಾಜಿಕ ಬದಲಾವಣೆಯಿಂದ ಹೊರತಾದ ರಾಜಕೀಯ ಬದಲಾವಣೆಗಳಿಗೆ ಅರ್ಥವಿಲ್ಲ. ಉತ್ತರ ಪ್ರದೇಶದಲ್ಲಿ ಸಾಮಾಜಿಕ ಬದಲಾವಣೆಗಳು ರಾಜಕೀಯ ರಂಗದ ಚಹರೆಯನ್ನು ಬದಲಾಯಿಸಿಬಿಟ್ಟಿದೆ.

ಎಲ್ಲ ರಾಷ್ಟ್ರಗಳು, ಸಮಾಜಗಳು ಬದಲಾಗುವಂತೆ ಭಾರತ ಕೂಡ ಬದಲಾಗುತ್ತಿದೆ. ಬದಲಾವಣೆಯ ಬಿರುಗಾಳಿಯಿಂದ ತಪ್ಪಿಸಿಕೊಳ್ಳಲು ಜಾತಿವ್ಯವಸ್ಥೆಗೂ ಕೂಡ ಸಾಧ್ಯವಾಗದು. ಉತ್ತರ ಪ್ರದೇಶ ಅಥವಾ ಭಾರತ ಈಗ ಜಾತಿರಹಿತವಾಗಿದೆ ಎಂದು ನಾನು ಹೇಳುತ್ತಿಲ್ಲ. ಆದರೆ ಜಾತಿ ವ್ಯವಸ್ಥೆಯಲ್ಲಿ ಸ್ಪಷ್ಟವಾದ ಬಿರುಕುಗಳು ಕಾಣಿಸಿಕೊಂಡಿರುವುದನ್ನಂತೂ ನಾನು ಅಲ್ಲಗಳೆಯುವುದಿಲ್ಲ. □

ಹಸಿಸುಳ್ಳುಗಳು ಮತ್ತು ಅರ್ಧ ಸತ್ಯಗಳು

(37ನೇ ಪಟದಿಂದ)

ಮೇಲಿನ ನಿಷೇಧವೂ ಸಾರ್ವಜನಿಕ ಹಿತಾಸಕ್ತಿಯ ದೃಷ್ಟಿಯಿಂದ ಸರಿಯಾದದ್ದಲ್ಲ."

ಇದರ ಬಗ್ಗೆ 2005ರಲ್ಲಿ ಏಳು ಸದಸ್ಯರ ಸಾಂವಿಧಾನಿಕ ಪೀಠ ಇದರ ಬಗ್ಗೆ ತನ್ನ ಅಭಿಪ್ರಾಯವನ್ನು ಬದಲಾಯಿಸಿದ್ದು ನಿಜ. ಆದರೆ ಅದಕ್ಕೆ ಕಾರಣ ಗುಜರಾತ್ ಸರ್ಕಾರ ಒದಗಿಸಿದ ಸುಳ್ಳುಪೊಳ್ಳು ಅಂಕಿಅಂಶಗಳನ್ನೇ. ಗುಜರಾತ್ ಸರ್ಕಾರ ದನ ಮತ್ತು ಹಸುಗಳನ್ನು ಸಾಯುವತನಕ ಗಂಜಲ ಮತ್ತು ಸಗಣಿ ಹಾಕುತ್ತವೆ. "ಪ್ರತಿ ಹಸು ಮತ್ತು ದನಗಳನ್ನು ಸಾಕಲು ದಿನಕ್ಕೆ 25ರೂ ಖರ್ಚಾದರೆ ಈ ಸಗಣಿ ಮತ್ತು ಗಂಜಲ ಮಾರಿದರೆ 35ರೂ ದುಡ್ಡು ಸಿಗುತ್ತದೆ. ಆದ್ದರಿಂದ ಹಸು ಮತ್ತು ದನಗಳನ್ನು ಉಪ 'ಯುಕ್ತ ಮತ್ತು ಅನುಪಯುಕ್ತ ಎಂದು ವಿಭಾಗೀಕರಿಸುವುದೇ ತಪ್ಪು" ಎಂದು ವಾದಿಸಿತು.

ಅಲ್ಲದೇ ಪ್ರತಿ ದನವು 16 ವರ್ಷಕ್ಕೆ ಮುಂಚೆ 0.8 ಅಶ್ವಶಕ್ತಿಯಷ್ಟು ಶಕ್ತಿ ಹೊಂದಿದ್ದರೆ 16 ವರ್ಷದ ನಂತರವೂ ಸಾಯುವತನಕ 0.6ಅಶ್ವ ಶಕ್ತಿಯನ್ನು ಹೊಂದಿರುತ್ತಾದ್ದರಿಂದ ಅವು ಸಾಯುವತನಕ ಉಪಯುಕ್ತವೇ ಎಂದು ಮೋದಿರಾಜ್ಯದ ಪಶುಸಾಂಗೋಪನೆ ಇಲಾಖೆ ಕಾಗಕ್ಕ ಗುಬ್ಬಕ್ಕನ ಕಥೆ ಕಟ್ಟಿತು. ಸುಪ್ರೀಂಕೋರ್ಟಿನ ಎದಿರು ಈ ವಾದವನ್ನು ವಿರೋಧಿಸುವ ರೈತ ಸಂಘಟನೆಯಾಗಲೀ, ಮಾನವ ಹಕ್ಕು ಸಂಘಟನೆಯಾಗಲೀ ಪ್ರತಿವಾದಿಗಳಾಗಿರಲಿಲ್ಲ. ಹೀಗಾಗಿ ಸುಪ್ರೀಂಕೋರ್ಟು ಸಾಯುವತನಕವೂ ಎಲ್ಲಾ ಹಸು ಮತ್ತು ದನ ಹಾಗೂ ಗೂಳಿಗಳು ರೈತನಿಗೆ ಉಪಕಾರಿಯೇ ಆಗಿರುತ್ತವಾದ್ದರಿಂದ ದನ ಮತ್ತು ಗೂಳಿಗಳನ್ನು 16 ವರ್ಷದ ನಂತರ ಹತ್ಯೆ ಮಾಡುವುದಕ್ಕೆ ನಿಷೇಧ ಹೇರಿರುವುದು ಸೂಕ್ತವೆಂದು ಅಭಿಪ್ರಾಯಪಟ್ಟಿತು. ಆದರೆ ಒಂದು ದನವನ್ನು ಸಾಕಲು ತಗಲುವ ವೆಚ್ಚ 100 ರೂ ಅನ್ನು ಮೀರುತ್ತಿರುವ ಈ ಹೊತ್ತಿನಲ್ಲಿ ಹಾಲು ಕರೆಯದ ಮತ್ತು ಉಳುಮೆಗೆ ಸಹಾಯಕ್ಕೆ ಬರದ ಜಾನುವಾರುಗಳನ್ನು ಸಾಕುವುದು ರೈತನಿಗೆ ಎಷ್ಟು ನಷ್ಟವಾಗುತ್ತದೆ ಎಂಬುದು ಎಲ್ಲರಿಗೂ ಗೊತ್ತಿರುವ ವಿಷಯ.

ಹೀಗಾಗಿ ಸುಪ್ರೀಂಕೋರ್ಟಿನ ಈ ನಿರ್ಧಾರದ ಬುನಾದಿ ಬಿಜೆಪಿಯ ವಾದಕ್ಕೆ ವ್ಯತಿರಿಕ್ತವಾಗಿಯೇ ಇದೆ ಎನ್ನುವುದು ವಾಸ್ತವ. ಏಕೆಂದರೆ ಇಲ್ಲಿ ಕೋರ್ಟು ಸಂಪೂರ್ಣ ಗೋಸಂತತಿ ನಿಷೇಧ ಸರಿಯಾದದ್ದು ಎಂದು ಅಭಿಪ್ರಾಯಕ್ಕೆ ಬರಲು ಕಾರಣ ಅದು ಸಾಯುವ ತನಕ ರೈತನಿಗೆ ಸಹಕಾರಿ ಎಂಬ ಕಾರಣಕ್ಕೆ ಹೊರತು ಗೋವು ಮಾತ್ರ ಪವಿತ್ರ ಎಂಬ ಕಾರಣಕ್ಕಾಗಿಯಲ್ಲ. ಒಂದು ವೇಳೆ ರೈತನಿಗೆ ಮುದಿದನ ಮತ್ತು ಹಸುಗಳು ರೈತನಿಗೆ ಸಹಕಾರಿಯಲ್ಲ ಎಂದು ಕೋರ್ಟಿಗೆ ಸಾಬೀತಾದರೆ ಮುದಿ ಎಮ್ಮೆ, ಕೋಣಗಳ ಹತ್ಯೆಯ ಜೊತೆಗೆ ಮುದಿ ಹಸು ಮತ್ತು ಎತ್ತುಗಳ ಹತ್ಯೆಗೂ ಸಮ್ಮತಿ ನೀಡುವುದು ಖಚಿತ.

ಹೀಗೆ ಬಿಜೆಪಿ ಸರ್ಕಾರದ ಮಸೂದೆಗೆ ಸಂವಿಧಾನದ, ನ್ಯಾಯಾಲಯದ ಮತ್ತು ಕಾನೂನಿನ ಸಮರ್ಥನೆಯಿಲ್ಲ. ಬಿಜೆಪಿ ಸರ್ಕಾರ ಹಸಿಸುಳ್ಳುಗಳನ್ನು ಹೇಳುವ ಮೂಲಕ ಜನರನ್ನು ದಾರಿತಪ್ಪಿಸುತ್ತಿದೆ.

ಆದ್ದರಿಂದ ರೈತರ ಹಿತದೃಷ್ಟಿಯಿಂದಲೂ, ಸಂವಿಧಾನದ ಆಶಯದ ದೃಷ್ಟಿಯಿಂದಲೂ, ಸುಪ್ರಿಂ ಕೋರ್ಟಿನ ಸಾಂವಿಧಾನಿಕ ಪೀಠದ ನಿರ್ದೇಶನದ ದೃಷ್ಟಿಯಲ್ಲೂ ಈ ಮಸೂದೆ ತಿರಸ್ಕಾರಕ್ಕೆ ಯೋಗ್ಯವಾಗಿದೆ. □



ಬುದ್ಧಾಯಣ

೬೦

ಮಿತ್ರ ಹಾಗಾದರೆ ಈಗ ಏನು ಮಾಡೋಣ... !?

ಸಿ. ಹೆಚ್. ರಾಜಶೇಖರ್

ಅಂದಿನ ದಿನಗಳಲ್ಲಿ ಗೌತಮ ಬುದ್ಧರು ಸಾವಸ್ಥಿಯ ಜೇತವನದಲ್ಲಿ ತಂಗಿದ್ದರು. ಅದಕ್ಕೂ ಪೂರ್ವ ಕಾಲದಲ್ಲಿ ವಾರಣಾಸಿ ರಾಜ್ಯವನ್ನು ಬೋಧಿಸತ್ವನೆಂಬ ರಾಜನು ಆಳುತ್ತಿದ್ದನು. ಆ ಸಮಯದಲ್ಲಿ ಬೋಧಿಸತ್ವರು ಹಿಮಾಲಯದ ಕಾಡಿನಲ್ಲಿ ಜಿಂಕೆಯಾಗಿ ಹುಟ್ಟಿದ್ದರು. ಅವರು ಒಂದು ಕೊಳದ ಬಳಿ ಇದ್ದ ಪೊದೆಯಲ್ಲಿ ವಾಸಿಸುತ್ತಿದ್ದರು. ಅದೇ ಕೊಳದಲ್ಲಿ ಆಮೆಯೊಂದು ವಾಸಿಸುತ್ತಿತ್ತು. ಕೊಳದ ಬದಿ ಇದ್ದ ಮರವೊಂದರಲ್ಲಿ ಮರಕುಟಿಕ ಹಕ್ಕಿಯೊಂದು ಕೂಡ ವಾಸಿಸುತ್ತಿತ್ತು. ಈ ಮೂವರೂ ಪರಸ್ಪರ ಸ್ನೇಹಿತರಾಗಿದ್ದರು. ಒಬ್ಬರ ಬಗ್ಗೆ ಮತ್ತೊಬ್ಬರಿಗೆ ಪ್ರೀತಿ ವಿಶ್ವಾಸವಿತ್ತು.

ಬೋಧಿಸತ್ವರು ಪ್ರತಿ ದಿನ ಮೂರು ಹೊತ್ತು ನೀರು ಕುಡಿಯಲು ಅದೇ ಕೊಳಕ್ಕೆ ಬರುತ್ತಿದ್ದರು. ಆ ಸಮಯದಲ್ಲಿ ತಪ್ಪದೆ ಆಮೆ ಮತ್ತು ಮರಕುಟಿಕ ಹಕ್ಕಿಯನ್ನು ಮಾತನಾಡಿಸಿಕೊಂಡು ಹೋಗುತ್ತಿದ್ದರು. ಹೀಗಿರಲು ಅದೇ ಕಾಡಿಗೆ ಒಬ್ಬ ಶಿಕಾರಿಯು ಪ್ರತಿ ದಿನ ಬೇಟೆಗೆ ಬಂದು ಹೋಗುತ್ತಿದ್ದ. ಒಂದು ದಿನ ಈ ಕೊಳದತ್ತ ನೀರು ಕುಡಿಯಲು ಬಂದ. ಅಂತಹ ಸಂದರ್ಭದಲ್ಲಿ ಜಿಂಕೆಯ ಹೆಜ್ಜೆಯ ಗುರುತನ್ನು ಕಂಡುಹಿಡಿದ. ತಕ್ಷಣ ಆತ ನಾಳೆಗೆ ಬೇಟೆಯೊಂದು ದಕ್ಕಿತು ಎಂದು ಸಂತೋಷಗೊಂಡ. ಅಂದು ರಾತ್ರಿ ಜಿಂಕೆಯು ನೀರು ಕುಡಿಯಲು ಬರುವ ಸ್ಥಳಕ್ಕೆ ಸರಿಯಾಗಿ ಬಲೆಯೊಂದನ್ನು ಕಟ್ಟಿ ಮನೆಗೆ ಹೋದ.

ಜಿಂಕೆಯು ಎಂದಿನಂತೆ ನೀರು ಕುಡಿಯಲು ಬಂದಿತು. ರಾತ್ರಿಯ ಕತ್ತಲಿನಲ್ಲಿ ನೆಲದ ಮೇಲೆ ಹರಡಿದ್ದ ಬಲೆಯು ಕಾಣಲಿಲ್ಲ. ಬಲೆಯ ಮೇಲೆ ಕಾಲಿಟ್ಟು ಮುಂದೆ ನೆಡೆದಂತೆ ಬಲೆಯು ಹುರುಳಿನಂತೆ ಜಿಂಕೆಯು ನಾಲ್ಕೂ ಕಾಲಿಗೂ ಹೆಣೆದು ಬಂಧಿ ಯಾಗಲು ಆ ಜಿಂಕೆಯು ಮುಂದೆ ನೆಡೆಯಲಾಗದೆ ಮುಗ್ಗರಿಸಿ ನೆಲಕ್ಕೆ ಉರುಳಿತು. ಆಗಲೇ ಅದಕ್ಕೆ ತಿಳಿದದ್ದು ನಾನು ಬೇಟೆಗಾರ ಬೀಸಿದ ಬಲೆಯಲ್ಲಿ ಬಂಧಿ ಯಾಗಿದ್ದೇನೆ ಎಂ ಸತ್ಯ. ಪ್ರಾಣ ಭಯದಿಂದ ಆ ಜಿಂಕೆಯು ನಡುಗಿತು. ತಕ್ಷಣವೆ ಅದಕ್ಕೆ ತನ್ನ ಮಿತ್ರರಾದ ಆಮೆ ಮತ್ತು ಮರಕುಟಿಕ ಹಕ್ಕಿಯ ನೆನಪಾಯಿತು. ಅವರನ್ನು ಉದ್ದೇಶಿಸಿ ಸಹಾಯಕ್ಕಾಗಿ ಕೂಗಿತು. ತನ್ನ ಮಿತ್ರ ಅಪಾಯದಲ್ಲಿ ಸಿಲುಕಿರುವುದು ಖಚಿತವೆಂದು ಅರಿತು ಅವುಗಳು ತಡಮಾಡದೆ ಬಂದವು. ತಮ್ಮ ಊಹೆಯು ಸರಿಯಾಗಿತ್ತು. ಆಮೆ ಮತ್ತು ಮರಕುಟಿಗ ಹಕ್ಕಿಯು ಒಬ್ಬರ ಮುಖವನ್ನು ಒಬ್ಬರು ಪ್ರಶ್ನಾರ್ಥಕವಾಗಿ ನೋಡಿಕೊಳ್ಳುತ್ತಾ;

"ಮಿತ್ರ, ಈಗ ಏನು ಮಾಡುವುದು?" ಎನ್ನಲು ಮರಕುಟಿಕವು ಆಮೆಯನ್ನು ಉದ್ದೇಶಿಸಿ;

"ಮಿತ್ರ , ಈಗ ನಮ್ಮ ಗೆಳೆಯನಾದ ಜಿಂಕೆಯನ್ನು ನಾವು ಈ ಬಂಧನದಿಂದ ಪಾರು ಮಾಡುವುದೊಂದೆ ನಮ್ಮ ಲಕ್ಷ್ಯ ಮತ್ತು ಕರ್ತವ್ಯವಾಗಿದೆ. ಆದುದರಿಂದ ಎದೆಗುಂದಿದರೆ ಕಾರ್ಯ ಸಿದ್ಧಿಸುವುದಿಲ್ಲ. ಬೆಳಕು ಹರಿದು ಶಿಕಾರಿಯು ಬರುವ ಮುನ್ನ ನಾವು ಜಿಂಕೆಯನ್ನು ಬಲೆಯಿಂದ ಬಿಡಿಸಬೇಕು. ಆದ್ದರಿಂದ ನಿನ್ನ ಹಲ್ಲು ಹರಿತವಾಗಿ ಮತ್ತು ಗಟ್ಟಿಯಾಗಿದೆ. ನೀನು ಈ ಬಲೆಯನ್ನು ಕತ್ತರಿಸು. ನಾನು ಹಾರಿ ಹೋಗಿ ಶಿಕಾರಿಯ ಮನೆಯ ಮುಂದೆ ಕೂರುತ್ತೇನೆ. ಆತ ಮುಂಜಾನೆ ಮನೆಯಿಂದ ಹೊರಗೆ ಹೊರಡದಂತೆ ತಡೆಯುತ್ತೇನೆ" ಎನ್ನಲು, ಅದು "ಮಿತ್ರ, ಹಾಗೆಯೇ ಹಾಗಲಿ!" ಎಂದಿತು. ನಂತರ ಮರಕುಟಿಕ ಹಕ್ಕಿಯು ಆಕಾಶಕ್ಕೆ ಹಾರಿತು. ಅದು ಶಿಕಾರಿಯ ಮನೆಯ ಮುಂದಿನ ಚಾವಣಿಯ ಮೇಲೆ ಬಂದು ಕುಳಿತುಕೊಂಡಿತು.

ಪೂರ್ವದಲ್ಲಿ ಸೂರ್ಯನು ಉದಯಿಸುವ ಮುನ್ನವೆ ಶಿಕಾರಿಯು ಬೇಗ ಎದ್ದ. ಹಿಂದಿನ ರಾತ್ರಿ ತಾನು ಹಾಕಿ ಬಂದ ಬಲೆಯ ನೆನಪಾಯಿತು. ಆ ಬಲೆಗೆ ಜಿಂಕೆ ಬಿದ್ದು ಒದ್ದಾಡುತ್ತಿರುವ ದೃಶ್ಯ ಅವನ ಕಣ್ಣೆದುರು ಮೂಡಲು ಸಂತೋಷಗೊಂಡ. ಬಲೆ ಬಿಲ್ಲು ಬಾಣ ಮತ್ತು ಚೀಲವನ್ನು ಹೆಗಲ ಮೇಲೆ ಹಾಕಿಕೊಂಡು ಮನೆಯ ಮುಂಬಾಗಿಲಿ ನಿಂದ ಹೊರ ಬಂದ. ಈ ಸಮಯವನ್ನೆ ಕಾಯುತ್ತಾ ಕುಳಿತ್ತಿದ್ದ ಮರಕುಟಿಕ ಹಕ್ಕಿಯು ಬರ್ರನೆಹಾರಿ ಬಂದು ಶಿಕಾರಿಯ ಮುಖಕ್ಕೆ ಬಡಿಯಿತು. ಆತ ಗಾಬರಿಯಿಂದ ಹೆದರಿ ಹಿಂದೆ ಸರಿಯುತ್ತಾ;

"ಅಪಶಕುನ ... ಅಪಶಕುನ ... !" ಎನ್ನುತ್ತಾ ಆತ ಒಳಗೆ ಹೋಗಿ ಮತ್ತೆ ಮಲಗಿಕೊಂಡ. ಸೂರ್ಯೋದಯವಾಗಿ ಚನ್ನಾಗಿ ಬೆಳಕು ಹರಿದ ಬಳಿಕ ಆತನಿಗೆ ಎಚ್ಚರಿಕೆಯಾಯಿತು. ಅವನು ತನಗೆ ತಾನೇ ಎಂಬಂತೆ;

"ಇಂದೇಕೋ ನನ್ನ ಅದೃಷ್ಟ ಸರಿ ಇದ್ದಂತಿಲ್ಲ. ಈಗ ಮುಂಬಾಗಿಲಿಗೆ ಬದಲು ಹಿಂಬಾಗಿಲಿನಿಂದ ಹೋಗುತ್ತೇನೆ" ಎಂದು

"ಮಿತ್ರ , ಈಗ ನಮ್ಮ ಗೆಳೆಯನಾದ ಜಿಂಕೆಯನ್ನು ನಾವು ಈ ಬಂಧನದಿಂದ ಪಾರು ಮಾಡುವುದೊಂದೆ ನಮ್ಮ ಲಕ್ಷ್ಯ ಮತ್ತು ಕರ್ತವ್ಯ ವಾಗಿದೆ. ಆದುದರಿಂದ ಎದೆಗುಂದಿದರೆ ಕಾರ್ಯ ಸಿದ್ಧಿಸುವುದಿಲ್ಲ. ಬೆಳಕು ಹರಿದು ಶಿಕಾರಿಯು ಬರುವ ಮುನ್ನ ನಾವು ಜಿಂಕೆಯನ್ನು ಬಲೆಯಿಂದ ಬಿಡಿಸಬೇಕು. ಆದ್ದರಿಂದ ನಿನ್ನ ಹಲ್ಲು ಹರಿತವಾಗಿ ಮತ್ತು ಗಟ್ಟಿಯಾಗಿದೆ. ನೀನು ಈ ಬಲೆಯನ್ನು ಕತ್ತರಿಸು. ನಾನು ಹಾರಿ ಹೋಗಿ ಶಿಕಾರಿಯ ಮನೆಯ ಮುಂದೆ ಕೂರುತ್ತೇನೆ. ಆತ ಮುಂಜಾನೆ ಮನೆಯಿಂದ ಹೊರಗೆ ಹೊರಡದಂತೆ ತಡೆಯುತ್ತೇನೆ" ಎನ್ನಲು, ಅದು "ಮಿತ್ರ, ಹಾಗೆಯೇ ಹಾಗಲಿ!" ಎಂದಿತು

ಬಗೆದು ನಿಧಾನವಾಗಿ ಬಾಗಿಲನ್ನು ತೆಗೆದು ಅತ್ತಿತ್ತ ಕಣ್ಣಾಡಿಸಿ ಹೊರ ಬಂದ. ಆತ ಈ ಬಾರಿ ಹಿಂಬಾಗಿಲಿನಿಂದ ಬರುತ್ತಾನೆಂದು ಮೊದಲೆ ಅಂದಾಜು ಮಾಡಿದ ಮರ ಕುಟಿಕ ಹಕ್ಕಿಯು ಮತ್ತೆ ಬರ್ರನೆ ಬಂದು ಅವನ ಮುಖಕ್ಕೆ ಬಡಿಯಿತು. ಆತ ತತ್ತರಿಸಿ ನೆಲಕ್ಕೆ ಉರುಳಿದ. ಮತ್ತೆ ಹಿಂದಿನಂತೆಯೆ;

"ಅಪಶಕುನ ... ಇಂದು ನಾನು ಎದ್ದ ಗಳಿಗೆ ಸರಿ ಇದ್ದಂತಿಲ್ಲ!" ಎಂದು ತನಗೆ ತಾನೇ ಎಂಬಂತೆ ಹೇಳಿಕೊಂಡ ಅವನು ಮತ್ತೆ ಸಾವಧಾನವಾಗಿ ಮೇಲೆದ್ದ ಅವನು ಭಂಡ ಧೈರ್ಯವನ್ನು ತಂದುಕೊಂಡು ಮರ ಕುಟಿಗ ಹಕ್ಕಿಯತ್ತ ಕೋಪದಿಂದ ನೋಡುತ್ತಾ; "ಎಲೈ ಯಕಃಶ್ಚಿತ್ ಹಕ್ಕಿಯೇ, ನಾನ್ಯಾರು ಬಲ್ಲೇಯಾ? ನಾನು ಗುರಿ ತಪ್ಪದ ಶಿಕಾರಿ. ನಿನ್ನಂತಹ ಅದೆಷ್ಟು ಹಕ್ಕಿಗಳನ್ನು ನನ್ನ ಬಾಣದಿಂದ ಹೊಡೆದು ಉರುಳಿಸಿಲ್ಲ! ನನ್ನ ಮೇಲೆಯೇ ಹಲ್ಲೆ ಮಾಡಲು ಯತ್ನಿಸುವೆಯಾ? ನಿಲ್ಲು ನಿನ್ನನ್ನು ಈ ಬಾಣ ದಿಂದ ಛಿದ್ರಗೊಳಿಸುವೆನು" ಎಂದ ಅವನು ಬಾಣವನ್ನು ಪ್ರಯೋಗಿಸಿದ. ಅದನ್ನು ಗಮನಿಸಿದ ಮರಕುಟಿಗ ಹಕ್ಕಿಯು ಕುಳಿತಲ್ಲಿಂದ ಪುರ್ರನೆ ಆಕಾಶಕ್ಕೆ ಹಾರಿ ತಪ್ಪಿಸಿ ಕೊಂಡಿತು. ಇದರಿಂದ ಮತ್ತೂ ವ್ಯಾಕುಲ ನಾದ ಶಿಕಾರಿಯು;

"ಇಂದೆಕೋ, ನನ್ನ ಗುರಿ ಕೂಡ ತಪ್ಪುತ್ತಿದೆ !" ಎಂದ ಅವನು ಕಾಡಿನತ್ತ ಬಿರುಸಾಗಿ ಹೆಜ್ಜೆ ಹಾಕ ತೊಡಗಿದ. ಅದನ್ನು ಗಮನಿಸಿದ ಮರಕುಟಿಗ ಹಕ್ಕಿಯು ಶರವೇಗದಲ್ಲಿ ಹಾರಿ ಜಿಂಕೆಯು ಬಲೆಯಲ್ಲಿ ಸಿಕ್ಕಿಕೊಂಡ ಸ್ಥಳಕ್ಕೆ ಬಂದಿತು. ಅಷ್ಟರಲ್ಲಿ ಆಮೆಯು ಬಹುತೇಕ ಹಗ್ಗವನ್ನು ಕಡಿದು ತುಂಡು ಮಾಡಿತ್ತು. ಅದರ ಬಾಯಲ್ಲಿ ರಕ್ತವು ಹೊರ ಸೂಸುತ್ತಿತ್ತು. ಆದರೂ ಅದನ್ನು ಗಮನಿಸದೆ ತನ್ನ ಮಿತ್ರನ ಪ್ರಾಣವನ್ನು ಕಾಪಾಡುವ ಸಲುವಾಗಿ ಹೋರಾಟ ಮಾಡುತ್ತಿತ್ತು . ಇದನ್ನು ಕಂಡ ಮರಕುಟಿಕ ಹಕ್ಕಿಯು;

"ಮಿತ್ರ ಆಮೆಯೇ, ಆ ಶಿಕಾರಿಯು ಬಿರುಸಾಗಿ ಇತ್ತಲೇ ಬರುತ್ತಿದ್ದಾನೆ. ಬೇಗ ಬೇಗ ನಿನ್ನ ಕಾರ್ಯವನ್ನು ಮುಗಿಸು" ಎನ್ನಲು; "ಈಗೋ, ನನ್ನ ಕೆಲಸವು ಮುಗಿಯಿತು!" ಎನ್ನುತ್ತಾ ಕೊನೆಯ ಹಗ್ಗದ ಗಂಟನ್ನು ಕತ್ತರಿಸಿ, ಜಿಂಕೆಯನ್ನು ಉದ್ದೇಶಿಸಿ;

"ಮಿತ್ರ , ನೀನೀಗ ಬಂಧ ಮುಕ್ತ. ಎದ್ದೇಳು! ಬೇಗ ಎದ್ದು ಕಾಡಿನಲ್ಲಿ ತಪ್ಪಿಸಿಕೊ!" ಎನ್ನುವಷ್ಟರಲ್ಲಿ ಶಿಕಾರಿಯು ಪ್ರತ್ಯಕ್ಷವಾದ. ಅವನನ್ನು ಕಂಡ ಜಿಂಕೆಯು ತಡವರಿಸಿಕೊಂಡು ಮೇಲೆದ್ದು ತಟ್ಟಾಡುತ್ತಾ ಮುನ್ನೆಡೆಯಿತು. ಅದನ್ನು ಕಂಡ ಶಿಕಾರಿಯು;

"ಎಲೈ ಅವಿವೇಕಿ ಆಮೆಯೇ, ನೀನೇನು ಮಾಡಿದೆ? ನನ್ನ ಶಿಕಾರಿಯನ್ನು ತಪ್ಪಿಸಿ ಬಿಟ್ಟೆಯಲ್ಲ. ತಡಿ ನಿನಗೊಂದು ಗತಿಯನ್ನು ಕಾಣಿಸುತ್ತೇನೆ" ಎನ್ನುತ್ತಾ ಬಳಲಿ ಬೆಂಡಾದ ಆಮೆಯನ್ನು ಹಿಡಿದು ತನ್ನ ಚೀಲಕ್ಕೆ ಹಾಕಿಕೊಂಡ. ಅದನ್ನು ಒಂದು ಮರದ ಮೊಟಿನ ಮೇಲಿಟ್ಟ. ನಂತರ ಅವನ ದೃಷ್ಟಿಯು ಜಿಂಕೆಯ ಮೇಲೆ ಬೀಳಲು, ಅದು ಸ್ವಲ್ಪ ದೂರ ಓಡಿ ಹೋಗಿ ಸುಸ್ತಾದಂತೆ ನಟಿಸುತ್ತಾ ಮಲಗಿಕೊಂಡಿತು. ಅದರಿಂದ ಹರ್ಷಗೊಂಡ ಶಿಕಾರಿಯು ಅದರತ್ತ ಬಂದು ಬಲೆ ಬೀಸಿದ. ಅದು ಚಂಗನೆ ಮೇಲೆದ್ದು ಮೆಲ್ಲಗೆ ಓಡತೊಡಗಿತು. ಜಿಂಕೆಯ ಮೇಲಿನ ಆಸೆಗಾಗಿ ಆತ ಅದನ್ನು ಹಿಂಬಾಲಿಸಿದ. ಅದು ನಿಧಾನವಾಗಿ ತನ್ನ ವೇಗವನ್ನು ಹೆಚ್ಚಿಸಿಕೊಂಡಿತು. ಬರಬ



"ಎಲೈ ಅವಿವೇಕಿ ಆಮೆಯೇ, ನೀನೇನು ಮಾಡಿದೆ? ನನ್ನ ಶಿಕಾರಿಯನ್ನು ತಪ್ಪಿಸಿ ಬಿಟ್ಟೆಯಲ್ಲ. ತಡಿ ನಿನಗೊಂದು ಗತಿಯನ್ನು ಕಾಣಿಸುತ್ತೇನೆ" ಎನ್ನುತ್ತಾ ಬಳಲಿ ಬೆಂಡಾದ ಆಮೆಯನ್ನು ಹಿಡಿದು ತನ್ನ ಚೀಲಕ್ಕೆ ಹಾಕಿಕೊಂಡ. ಅದನ್ನು ಒಂದು ಮರದ ಮೊಟಿನ ಮೇಲಿಟ್ಟ. ನಂತರ ಅವನ ದೃಷ್ಟಿಯು ಜಿಂಕೆಯ ಮೇಲೆ ಬೀಳಲು, ಅದು ಸ್ವಲ್ಪ ದೂರ ಓಡಿ ಹೋಗಿ ಸುಸ್ತಾದಂತೆ ನಟಿಸುತ್ತಾ ಮಲಗಿಕೊಂಡಿತು. ಅದರಿಂದ ಹರ್ಷಗೊಂಡ ಶಿಕಾರಿಯು ಅದರತ್ತ ಬಂದು ಬಲೆ ಬೀಸಿದ. ಅದು ಚಂಗನೆ ಮೇಲೆದ್ದು ಮೆಲ್ಲಗೆ ಓಡತೊಡಗಿತು. ಜಿಂಕೆಯ ಮೇಲಿನ ಆಸೆಗಾಗಿ ಆತ ಅದನ್ನು ಹಿಂಬಾಲಿಸಿದ. ಅದು ನಿಧಾನವಾಗಿ ತನ್ನ ವೇಗವನ್ನು ಹೆಚ್ಚಿಸಿಕೊಂಡಿತು. ಬರಬರುತ್ತಾ ಶರವೇಗದಿಂದ ಮಿಂಚಿನಂತೆ ಓಡಿ ಕೊನೆಗೆ ಆ ಶಿಕಾರಿಯನ್ನು ಒಂದು ಆಳವಾದ ಗುಂಡಿಗೆ ಬೀಳಿಸಿತು.

ರುತ್ತಾ ಶರವೇಗದಿಂದ ಮಿಂಚಿನಂತೆ ಓಡಿ ಕೊನೆಗೆ ಆ ಶಿಕಾರಿಯನ್ನು ಒಂದು ಆಳವಾದ ಗುಂಡಿಗೆ ಬೀಳಿಸಿತು. ಆತ ಆ ಗುಂಡಿಯಲ್ಲಿ ಬಿದ್ದು ಒದ್ದಾಡುವುದನ್ನು ಕಂಡ ಜಿಂಕೆಯು ಮತ್ತೆ ಅದೇ ಶರವೇಗದಲ್ಲಿ ಹಿಂದಿರುಗಿ ಆಮೆಯತ್ತ ಬಂದಿತು. ಅದು ಶಿಕಾರಿಯ ಚೀಲದಲ್ಲಿ ಬಂಧಿಯಾಗಿ ಒದ್ದಾಡುತ್ತಿದ್ದುದ್ದನ್ನು ಗಮನಿಸಿತು. ತಕ್ಷಣವೆ ತನ್ನ ಕೊಂಬಿನಿಂದ ಮರದ ಮೊಟ್ಟಿನ ಮೇಲಿದ್ದ ಚೀಲವನ್ನು ಕೆಳಕ್ಕೆ ಬೀಳಿಸಿತು. ನಂತರ ತನ್ನ ಹಲ್ಲಿನಿಂದ ಕಚ್ಚಿ ಚೀಲದ ಬಾಯನ್ನು ತೆರೆಯಲು ಆಮೆಯು ಉಸಿರು ಕಟ್ಟಿದ ವಾತಾವರಣದಿಂದ ಹೊರ ಬಂದಿತು. ಅದಕ್ಕೆ ತನ್ನ ಕೃತಜ್ಞತೆಯನ್ನು ಸೂಚಿಸಿ;

"ಮಿತ್ರ, ನಿನ್ನ ಉಪಕಾರವನ್ನು ಮರೆಯಲಾರೆ. ಬೇಗ ನೀರಿಗೆ ಹೋಗಿ ನಿನ್ನ ಪೊಟ್ಟರೆಯಲ್ಲಿ ಅವಿತುಕೋ!" ಎಂದಿತು. ಅದೇ ರೀತಿ ಮರದ ಮೇಲಿದ್ದ ಮರಕುಟಿಕ ವನ್ನು ಉದ್ದೇಶಿಸಿ;

"ಮಿತ್ರ, ನಿನಗೂ ಕೂಡ ವಂದನೆ. ನೀನೂ ಕೂಡ ನಿನ್ನ ನಿವಾಸಕ್ಕೆ ಹಾರಿ ಹೋಗಿ ನಿನ್ನ ಮರಿಗಳನ್ನು ಕರೆದುಕೊಂಡು ಬೇರೆ ಕಾಡಿಗೆ ವಲಸೆ ಹೋಗು. ಇಲ್ಲವೆಂದರೆ ಇಂದಲ್ಲ ನಾಳೆಯಾದರೂ ನಿನ್ನ ಮತ್ತು ನಿನ್ನ ಮಕ್ಕಳನ್ನು ಬೇಟೆಯಾಡದೆ ಆ ವ್ಯಾಘ್ರನಾದ ಶಿಕಾರಿ ಬಿಡುವುದಿಲ್ಲ. ಹಾಗಾಗಿ ನಿನ್ನ – ನಿನ್ನ ಮಕ್ಕಳ ಪ್ರಾಣವನ್ನು ಮೊದಲು ಉಳಿಸಿಕೊ. ಇನ್ನು ನಾನು ಆ ಬೇಟೆಗಾರನನ್ನು ಹೇಗೆ ವಿಚಾರಿಸಿಕೊಳ್ಳಬೇಕೋ ಹಾಗೆ ವಿಚಾರಿಸಿಕೊಳ್ಳುತ್ತೇನೆ!" ಎನ್ನಲು ಅದು ಆಕಾಶಕ್ಕೆ ಹಾರಿತು. ಅಷ್ಟರಲ್ಲಿ ಬಳಲಿ ಬೆಂಡಾದ ಶಿಕಾರಿಯು ಅಲ್ಲಿಗೆ ಬಂದ. ಜಿಂಕೆ – ಶಿಕಾರಿ ಪರಸ್ಪರ ಎದುರಾದರು. ಸಹಜವಾಗಿ ಶಿಕಾರಿಯು ಹೀಗೆ ಯೋಚಿಸಿದ; ನಾನೇಕೆ ಸುಲಭವಾಗಿ ಸಿಕ್ಕಿರುವ ಜಿಂಕೆಯನ್ನು ಬೇಟೆಯಾಡಬಾರದು ? ತಕ್ಷಣವೆ ಆತನ ಮನಸ್ಸು ಹೀಗೆ ಚಿಂತಿಸಿತು, ಮರಳಿ ಬೇಟೆಯಾಡಲು ಪ್ರಯತ್ನಿಸಿದರೆ ಹಿಂದಿಗಿಂತ ದಾರುಣ ಸ್ಥಿತಿಯನ್ನು ಅನುಭವಿಸಬೇಕು. ಏಕೆಂದರೆ, ಈ ಜಿಂಕೆಯು ಸಾಮಾನ್ಯ ಜಿಂಕೆಯಲ್ಲ. ಇದು ಎಚ್ಚೆತ್ತ ಜಿಂಕೆ. ಇದು ಏಕಾಂಗಿಯಲ್ಲ. ಇದು ತನ್ನದೇ ಆದ ತ್ಯಾಗಮಯಿ ಸ್ನೇಹಿತರ ಗುಂಪನ್ನು ಹೊಂದಿದೆ. ನಾವು ಬೇಟೆಯಾಡ ಬಹುದಾದ್ದದ್ದು ಕೇವಲ ಅಪ್ರಜ್ಞಾವಂತರು ಮತ್ತು ಏಕಾಂಗಿಗಳನ್ನು ಮಾತ್ರ ಎನ್ನಿಸಲು ಜಿಂಕೆಯನ್ನು ಉದ್ದೇಶಿಸಿ;

"ಮಿತ್ರ, ಹೊರಟು ಹೋಗು ನಾನು ನಿನ್ನನ್ನು ಬೇಟೆಯಾಡಲಾರೆ. ಈ ಬೇಟೆಯಲ್ಲಿ ನಾನು ಸೋತೆ ನೀನು ಗೆದ್ದೆ. ಇಂದು ನನಗೆ ಅರಿವಾಯಿತು; ನಾವು ಬೇಟೆಯಾಡ ಬಹುದಾದ್ದದ್ದು ಕೇವಲ ಅಪ್ರಜ್ಞಾಪೂರ್ವಕರನ್ನು ಮತ್ತು ಏಕಾಂಗಿಗಳನ್ನು ಮಾತ್ರ ಎಂದು. ಏಕೆಂದರೆ, ಪ್ರಜ್ಞಾವಂತರನ್ನು ಮತ್ತು ಒಗ್ಗಟಿನ ಸ್ನೇಹಜೀವಿಗಳನ್ನು ಬೇಟೆಯಾಡಲು ಹೊರಟರೆ ಬೇಟೆಗಾರನೇ ಬೇಟೆಗೆ ಆಹುತಿಯಾಗುತ್ತಾನೆಂಬ ಸತ್ಯವನ್ನು ನಾನು ನಿನ್ನಿಂದ ಕಲಿತೆ. ಇಗೋ ನನ್ನ ಬಿಲ್ಲು ಬಾಣ ಮತ್ತು ಬಲೆಯನ್ನು ನಿನ್ನ ಪಾದದ ತಳಕ್ಕೆ ಅರ್ಪಿಸುತ್ತಿದ್ದೇನೆ. ಇಂದಿನಿಂದ ನಿನ್ನ ಸತ್ಯದ ಬೆಳಕಿನಲ್ಲಿ ಮುಂದೆ ಸಾಗುತ್ತೇನೆ!!" ಎನ್ನಲು ಬೋಧಿಸತ್ವ ಜಿಂಕೆಯು;

"ಹೌದು ಮಿತ್ರ, ನೀನು ಸತ್ಯವನ್ನು ಸರಿಯಾಗಿ ಅರಿತಿರುವೆ. ನಿನಗೆ ಶುಭವಾಗಲೀ...!!!" ಎಂದಿತು. □

'SAMVADA' Kannada Monthly, SEPTEMBER 2010 RNI-KAR KAN/2002/9246 CPMG/KA/BGW-706/2009-11
Office of Posting: Mail Business Center, Bangalore GPO, Date of Posting: 1st & 7th of Every Month





ಶ್ರೀ ಬಿ.ಎಸ್. ಯಡಿಯೂರಪ್ಪ
ಸನ್ಮಾನ್ಯ ಮುಖ್ಯಮಂತ್ರಿಗಳು

ಶ್ರೀ ವೆಂಕಟರಮಣಪ್ಪ
ಸನ್ಮಾನ್ಯ ಸಣ್ಣ ಕೈಗಾರಿಕೆ ಮತ್ತು ರೇಷ್ಮೆ ಸಚಿವರು

ಕರ್ನಾಟಕ ರೇಷ್ಮೆ ಉದ್ಯಮಕ್ಕೆ ಪ್ರಶಸ್ತವಾದ ತಾಣ. ಸರ್ಕಾರವು ರೇಷ್ಮೆ ಕೃಷಿ ಅಭಿವೃದ್ಧಿಗೆ ಎಲ್ಲಾ ರೀತಿಯ ನೆರವು ಪ್ರೋತ್ಸಾಹ ನೀಡುತ್ತಿದೆ. ಕೃಷಿ ಬೆಳೆಗಾರರು ಮತ್ತು ಉದ್ಯಮದಲ್ಲಿ ತೊಡಗಿರುವ ರೀಲರ್‌ಗಳ ಹಿತರಕ್ಷಣೆಗೆ ಪೂರಕವಾದ ನೀತಿ ನಿಯಮಗಳನ್ನು ರೂಪಿಸಿ ಜಾರಿಗೊಳಿಸಿದೆ.

- ರೇಷ್ಮೆವರದಾನ ಯೋಜನೆಯಡಿ 1200 ಹೆಕ್ಟೇರ್ ಪ್ರದೇಶದಲ್ಲಿ ಹೊಸದಾಗಿ ಹಿಪ್ಪುನೇರಳೆ ನಾಟಿಗೆ ರೂ.140.50 ಲಕ್ಷಗಳನ್ನು ಪ್ರೋತ್ಸಾಹ ಧನವಾಗಿ ನೀಡಲಾಗಿದೆ.
- ಕೇಂದ್ರ ಪುರಸ್ಕೃತ ಕೆಟಲಿಟಿಕ್ ಅಭಿವೃದ್ಧಿ ಯೋಜನೆಯಡಿ 1900 ಹೆಕ್ಟೇರ್ ಹಿಪ್ಪುನೇರಳೆ ಪ್ರದೇಶದಲ್ಲಿ ಹನಿ ನೀರಾವರಿ ಘಟಕಗಳ ಅಳವಡಿಕೆಗೆ ರೂ.697.00 ಲಕ್ಷಗಳ ಸಹಾಯಧನ ನೀಡಲಾಗಿದೆ.
- ಕೇಂದ್ರ ಪುರಸ್ಕೃತ ಕೆಟಲಿಟಿಕ್ ಅಭಿವೃದ್ಧಿ ಯೋಜನೆಯಡಿ 2510 ಪ್ರತ್ಯೇಕ ಹುಳು ಸಾಕಾಣಿಕೆ ಮನೆ ನಿರ್ಮಾಣಕ್ಕೆ ರೂ.1632.00 ಲಕ್ಷಗಳ ಸಹಾಯಧನ ನೀಡಲಾಗಿದೆ.
- ರೇಷ್ಮೆವರದಾನ ಯೋಜನೆಯಡಿ 375 ಹಣ್ಣು ಹುಳುವಿನ ಮನೆ (ಮೌಂಟಿಂಗ್ ಹಾಲ್) ಗಳ ನಿರ್ಮಾಣಕ್ಕೆ ರೂ.140.45 ಲಕ್ಷಗಳ ಸಹಾಯಧನವನ್ನು ನೀಡಲಾಗಿದೆ.
- ಕೇಂದ್ರ ಪುರಸ್ಕೃತ ಕೆಟಲಿಟಿಕ್ ಅಭಿವೃದ್ಧಿ ಯೋಜನೆಯಡಿ 773 ಫಲಾನುಭವಿಗಳಿಗೆ ಚಾಕಿ ಸಾಕಾಣಿಕೆ ಕಟ್ಟಡ ನಿರ್ಮಾಣ ಹಾಗೂ ರೇಷ್ಮೆ ಹುಳು ಸಾಕುವ ಸಲಕರಣೆಗಳ ಖರೀದಿಗೆ ರೂ.127.68 ಲಕ್ಷಗಳ ಸಹಾಯಧನವನ್ನು ನೀಡಲಾಗಿದೆ.
- ಕೇಂದ್ರ ಪುರಸ್ಕೃತ ಕೆಟಲಿಟಿಕ್ ಅಭಿವೃದ್ಧಿ ಯೋಜನೆಯಡಿ ಇಬ್ಬರು ರೇಷ್ಮೆ ನೂಲು ಬಿಚ್ಚಾಣಿಕೆದಾರರಿಗೆ ಸ್ವಯಂಚಾಲಿತ ರೀಲಿಂಗ್ ಯಂತ್ರಗಳನ್ನು ಅಳವಡಿಸಲು ರೂ.150 ಲಕ್ಷಗಳ ಸಹಾಯ ಧನವನ್ನು ನೀಡಲಾಗಿದೆ.
- ಆರೋಗ್ಯ ವಿಮೆ ಯೋಜನೆಯಡಿ 10,000 ರೇಷ್ಮೆ ಬೆಳೆಗಾರರು ಹಾಗೂ ರೀಲರ್‌ಗಳಿಗೆ ರೂ.72.60 ಲಕ್ಷಗಳನ್ನು ವಿಮಾ ಕಂತಾಗಿ ಸಂದಾಯ ಮಾಡಲಾಗಿದೆ.
- ವಿವಿಧ ಯೋಜನೆಗಳಡಿ ರೇಷ್ಮೆ ನೂಲು ಬಿಚ್ಚಾಣಿಕೆದಾರರಿಗೆ ರೂ.590.00 ಲಕ್ಷಗಳ ಪ್ರೋತ್ಸಾಹ / ಸಹಾಯಧನ ನೀಡಲಾಗಿದೆ.
- ಮೈಸೂರು ಬಿತ್ತನೆ ಪ್ರದೇಶದ ರೇಷ್ಮೆ ಬೆಳೆಗಾರರ ಹಿತರಕ್ಷಣೆಗಾಗಿ ರೂ.107.40 ಲಕ್ಷಗಳನ್ನು ಬೋನಸ್ / ಸಹಾಯಧನವಾಗಿ ನೀಡಲಾಗಿದೆ.
- ಪರಿಶಿಷ್ಟಜಾತಿ / ಪಂಗಡದ ರೇಷ್ಮೆ ಬೆಳೆಗಾರರು / ರೀಲರುಗಳಿಗೆ ಪ್ರತ್ಯೇಕ ಯೋಜನೆಗಳಿದ್ದು ರೂ.315.00 ಲಕ್ಷಗಳ ಸೌಲಭ್ಯಗಳನ್ನು ಒದಗಿಸಲಾಗಿದೆ.
- ಸಾಲ ಯೋಜನೆಯಡಿ ರೇಷ್ಮೆ ಕೃಷಿ ಚಟುವಟಿಕೆಗಳಿಗೆ 3120 ಫಲಾನುಭವಿಗಳಿಗೆ ವಾಣಿಜ್ಯ ಸಂಸ್ಥೆಗಳ ಮೂಲಕ ರೂ.2547.10 ಲಕ್ಷಗಳ ಸಾಲವನ್ನು ಒದಗಿಸಲಾಗಿದೆ.
- ರಾಜ್ಯ / ಜಿಲ್ಲಾಮಟ್ಟದ ಪ್ರಗತಿಪರ ರೇಷ್ಮೆ ಕೃಷಿಕರ / ರೀಲರುಗಳ ಪ್ರಗತಿಯನ್ನು ಆಧರಿಸಿ ಇಲಾಖೆಯಿಂದ ನಗದು ಬಹುಮಾನ ನೀಡಿ ಪ್ರೋತ್ಸಾಹಿಸಲಾಗುತ್ತಿದೆ.

2009-10ನೇ ಸಾಲಿನಲ್ಲೂ ಮೇಲ್ಕಂಡ ಯೋಜನೆಗಳು ಅನುಷ್ಠಾನದಲ್ಲಿದ್ದು ಇವುಗಳ ಪ್ರಯೋಜನವನ್ನು ಪಡೆಯಲು ರೇಷ್ಮೆ ಇಲಾಖೆಯ ಸ್ಥಳೀಯ ಅಧಿಕಾರಿಗಳನ್ನು ಸಂಪರ್ಕಿಸಿ.

ಕರ್ನಾಟಕ ವಾರ್ತೆ